ಸಂವಾದ

ಏಪ್ರಿಲ್ ೨೦೧೦ ರೂ. ೨೦

ಮೂಲಭೂತವಾದಿಗಳೂ...

ಹುಸೇನ್ ತಸ್ಲೀಮಾಗಳೂ...

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೬

ಏಪ್ರಿಲ್ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಡಾ|| ಕೆ. ಪುಟ್ಟಸ್ವಾಮಿ

ಡಾ|| ಡಿ. ಡೊಮಿನಿಕ್

ಡಾ|| ಬಿ.ಯು. ಸುಮಾ

ಡಾ|| ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,

ಅಂಜನಾನಗರ, ಮಾಗಡಿ ರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು-೫೬೦ ೦೯೧

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANA NAGAR, MAGADI ROAD

VISHWANEEDAM POST

BANGALORE - 560 091

✆ **Editorial: 9448048306**

✆ **Circulation: 080-23480278, 9945264687**

e-mail : **samvaada@hotmail.com**

honnapura@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩

❑ ಹೊಸ ಪುಸ್ತಕ ೦೪

❑ ಸಂಪಾದಕರೊಂದಿಗೆ ಸಂವಾದ:

❍ ಶಿವಸುಂದರ್ ೦೬

❑ ಭಾರತ ಸಂವಿಧಾನಕ್ಕೆ ಭೂತ ಚೇಷ್ಟೆ

❍ ದೇವನೂರ ಮಹಾದೇವ ೦೮

❑ ಕಥೆ:

ಲಕ್ಷ್ಮಕ್ಕನ ರೇಶನ್ ಕಾರ್ಡು

❍ ಪ್ರಶಾಂತ್ ಹುಲ್ಕೋಡ್ ೧೦

❑ ಮೂಲಭೂತವಾದಿಗಳೂ...

ಹುಸೇನ್-ತಸ್ಲಿಮಾಗಳೂ...

❍ ನಾ ದಿವಾಕರ ೧೨

❑ ಗುರಿ – ಗುರುವಿಲ್ಲದ ಅನೇಕಲವ್ಯರು

❍ ಬಿ. ಜಯದೇವಪ್ಪ ೧೬









❑ ಚಂದಮಾಮನ ಮಾತು

❍ ಡಾ. ಲಕ್ಷ್ಮೀಪತಿ ಸಿ.ಜಿ ೨೦

❑ ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಕೊರಗರು

❍ ಜಯಪ್ರಕಾಶ್ ಶೆಟ್ಟಿ. ಎಚ್ ೨೬

❑ ಪುಸ್ತಕ ಅವಲೋಕನ:

ಖಚಿತ ನಿಲುವು, ಜನಪರ ಒಳನೋಟಗಳ ಚಿಂತನಶೀಲ ಬರಹಗಳು

❍ ಡಾ. ಬಂಜಗೆರೆ ಜಯಪ್ರಕಾಶ ೩೪

❑ ಕಾಲಮಾನ... ೫

ಫತ್ವ, ಪಡಿಯಚ್ಚುಗಳು ಹಾಗೂ ರಾಜಕಾರಣ

❍ ಡಾ. ಮುಜಾಫ್ಫರ್ ಅಸ್ಸಾದಿ ೩೮

❑ ಧರೆ ಹತ್ತಿ ಉರಿದರೆ... ೨೦

ದಲಿತ ಸಂವೇದಿ ಬಜೆಟ್ಟು

❍ ಡಾ. ಟಿ. ಆರ್ ಚಂದ್ರಶೇಖರ್ ೪೨

❑ ದಲಿತ್ ಡೈರಿ

❍ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬

❑ ಬುದ್ಧಾಯಣ ೫೦

❍ ಸಿ. ಎಚ್. ರಾಜಶೇಖರ್

ಕವನಗಳು : ❑ ನಮ್ಮವರ ಬಣ್ಣ ೦೫ ❑ ಬೆಕ್ಕು ಮತ್ತು ಬೋನು ೪೯

❑ ಸಮಯ ಸಂದರ್ಭ ಬಂದಾಗ ನಾನೇ ಹೇಳುತ್ತೇನೆ ೪೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಪತ್ರಾಗಾರ

ನೋಡಬೇಕಾದ ದೃಷ್ಟಿ ಬೇರೆಯದಾಗಿರಬೇಕು

ಮಾನ್ಯರೇ,

'ಕುವೆಂಪು ದೃಷ್ಟಿಯಲ್ಲಿ ಗೋಹತ್ಯೆ' ಲೇಖನ ಓದಿದೆ. ಹಿಂದುಗಳು ಗೋವಿನಲ್ಲಿ 33ಲಕ್ಷ ದೇವತೆಗಳನ್ನು ಕಾಣುವುದು ಗೋರಕ್ಷಣೆ ಕಾರ್ಯದಲ್ಲಿ ಅಸಡ್ಡೆ ತೋರುವುದು, ವಯಸ್ಸಾದ ಆಕಳನ್ನು ಬೀದಿಪಾಲು ಮಾಡುವುದು ಇವೆಲ್ಲ ಸತ್ಯಸಂಗತಿಗಳು. ಇವೆಲ್ಲ ಖಂಡನೀಯವೂ ಹೌದು. ಗೋಸಂರಕ್ಷಣೆ-ಗೋಹತ್ಯೆ ವಿಚಾರ ಮಾಡುವಾಗ ನಾವು ಅದನ್ನು ನೋಡಬೇಕಾದ ದೃಷ್ಟಿಯೇ ಬೇರೆಯದಾಗಿರಬೇಕು.

ಗೋವು ಭಾರತದ ವಿಶಿಷ್ಟ ಪ್ರಾಣಿ. ಅದು ಭಾರತೀಯ ಪರಿವಾರದವರೆಲ್ಲರ ಅವಿಭಾಜ್ಯ ಅಂಗ. ಉಳಿದ ಪ್ರಾಣಿಗಳನ್ನೆಲ್ಲ ಕೊಂದೇ ಆಹಾರ ಪಡೆಯಬೇಕು. ಗೋವು ಹಾಗಲ್ಲ. ಅದನ್ನು ಕೊಲ್ಲದೆಯೂ ಅತ್ಯುತ್ತಮ ಆಹಾರವನ್ನು ಒದಗಿಸುವ ವಿಶಿಷ್ಟ ಪ್ರಾಣಿ ಹಸು. ಹಸುವಿನ ಹಾಲು ಸಮತೂಕದ ಆಹಾರ. ಈ ವೈಶಿಷ್ಟ್ಯತೆಗಾಗಿಯೇ ಗೋಹತ್ಯೆ ಬೇಡವೆನ್ನುವುದು.

ಮುಸ್ಲಿಮರು ಗೋವನ್ನು ತಿನ್ನುವುದು ನಿಜ. ಅಬ್ದುಲ್ಲಾ ಕಾಶ್ಮೀರದ ಪ್ರಧಾನ ಮಂತ್ರಿ(ಮುಖ್ಯ ಮಂತ್ರಿ) ಆಗಿದ್ದಾಗ ಗೋಹತ್ಯಾ ನಿರೋಧ ಶಾಸನವನ್ನು ಜಾರಿಗೆ ತಂದ. ಕರ್ನಾಟಕ ಸರ್ಕಾರದ ಗೋಹತ್ಯಾ ನಿಷೇಧ ಕಾಯದೆಯಲ್ಲಿ ಹಸು, ಎಮ್ಮೆ, ಹಸುವಿನ ಕರು, ಎಮ್ಮೆಯ ಕರುವನ್ನು ಕೊಲ್ಲಬಾರದೆಂದು ಹೇಳಿದೆ. ಹಾಗೆ ಕೊಂದವರಿಗೆ 3ವರ್ಷ ಕಠಿಣ ಸಜಾ ಎಂದು ಘೋಷಿಸಲಾಗಿದೆ. ಆದರೆ ಮುಸ್ಲಿಮರು ಅಧಿಕವಾಗಿರುವ ಕಾಶ್ಮೀರದಲ್ಲಿ ಗೋಹತ್ಯೆ ಮಾಡಿದವರಿಗೆ 10 ವರ್ಷಗಳ ಸಶ್ರಮ ಶಿಕ್ಷೆ ವಿಧಿಸಲಾಗುತ್ತದೆ. ಹಸುವಿನ ಮಹತ್ವವನ್ನು ಮುಸ್ಲಿಮರು ಅರಿತಿರುವಷ್ಟು ಹಿಂದುಗಳು ಅರಿತಿಲ್ಲವೆಂದು ಹೇಳಬೇಕು.



ಪುಟ್ಟಪ್ಪನವರ ಜಾಗಕ್ಕೆ ಈಗ ಬರುವ ಪುಟ್ಟಪ್ಪನವರ ನಿಕಟವರ್ತಿಗಳಾದ ಡಿ.ಜವರೇಗೌಡರು ಪುಟ್ಟಪ್ಪನವರ ಕೆಲವು ವೈಶಿಷ್ಟ್ಯ ಪೂರ್ಣ ವಿಚಾರಗಳನ್ನು ಒಂದು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅವುಗಳ ಪೈಕಿ ಒಂದು ಮಾಂಸಾಹಾರಕ್ಕೆ ಸಂಬಂಧಪಟ್ಟ ವಿಚಾರ, ಪುಟ್ಟಪ್ಪನವರು ರಾಮಕೃಷ್ಣಾಶ್ರಮದಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಇದ್ದಾಗ ಮಾಂಸ ತಿನ್ನುತ್ತಿರಲಿಲ್ಲ. (ರಾಮಕೃಷ್ಣ ಆಶ್ರಮದ ಕೆಲಸ್ವಾಮಿಜಿಗಳು ಮಾಂಶಭಕ್ಷಕರೂ ಆಗಿದ್ದರು ಎಂದು ನಾನು ಕೇಳಿದ್ದೇನೆ).

ಪುಟ್ಟಪ್ಪನವರು ಒಂದು ದಸರಾ ಕಾಲಕ್ಕೆ ತಮ್ಮೂರಿಗೆ ಹೋಗಿದ್ದರು. ಮನೆಯಲ್ಲಿ ಅಂದು ಪಿತೃಪಕ್ಷ ಆಚರಣೆ ನಡೆಯಿತು. ದಾಸಯ್ಯನನ್ನು ಕರೆತಂದು ಎಲ್ಲರಿಗೂ ನಾಮಧಾರಣೆ ಸೂಚಿಸಲಾಯಿತು. ಪಿತೃಗಳ ಪೂಜೆ ನಡೆಯಿತು. ಎಡೆ ಇಟ್ಟಿದರು. ಎಡೆಗೆ ಮಾಂಸದ ಅಡುಗೆಯಲ್ಲದೆ, ಕಜ್ಜಾಯ, ಉದ್ದಿನ ವಡೆ, ಪಾಯಸ ಇತ್ಯಾದಿಗಳನ್ನು ಇಡಲಾಗಿತ್ತು. ಪೂಜೆ ನಡೆದ ಮೇಲೆ ಎಡೆಯನ್ನು ದಾಸಯ್ಯನಿಗೆ ನೀಡಲಾಯಿತು. ಆ ನಂತರ ಎಲ್ಲರೂ ಊಟಕ್ಕೆ ಕೂತರು. ಪುಟ್ಟಪ್ಪನವರು ಮಾಂಸದಿಂದ ಮಾಡಿದ ತಿನಿಸನ್ನು ಎಲೆಗೆ ಹಾಕಿಸಿಕೊಳ್ಳಲಿಲ್ಲ. ಉಳಿದವರು ಮಾಂಸವನ್ನೂ ಇತರ ಭಕ್ಷ್ಯಗಳನ್ನೂ ಹಾಕಿಸಿಕೊಂಡು ತಿಂದರು.

ಅಂದರೆ ವಿದ್ಯಾರ್ಥಿ ದೆಸೆಯಲ್ಲಿ ಪುಟ್ಟಪ್ಪನವರು ಮಾಂಸಾಹಾರವನ್ನು ತ್ಯಜಿಸಿದ್ದರು. ಮುಂದೆ ಅವರು ಪ್ರವರ್ಧರಾದ ಮೇಲೆ, ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ಬರೆದ ಪುಸ್ತಕಗಳನ್ನೆಲ್ಲ ಓದಿದರು. ಅದರಂತೆಯೇ ಗ್ರೀಕ್ ವಿದ್ವಾಂಸರು ದಾರ್ಶನಿಕರು ಬರೆದ ಗ್ರಂಥಗಳನ್ನೂ ಅಧ್ಯಯನ ಮಾಡಿದರು. ಪಾಶ್ಚಾತ್ಯ ದಾರ್ಶನಿಕರೆಲ್ಲ ಮಾಂಸಾಹಾರಿಗಳಾಗಿದ್ದರೆಂಬುದನ್ನೂ ಕೇಳಿ ತಿಳಿದರು. ಮಾಂಸಾಹಾರ ಆಧ್ಯಾತ್ಮ ಚಿಂತನೆಗೆ ಅಡ್ಡಿ ಬರುವುದಿಲ್ಲವೆಂದು ತಿಳಿದುಕೊಂಡ ಮೇಲೆ ಕುವೆಂಪು ಅವರು ಮಾಂಸಾಹಾರ ಸೇವನೆಗೆ ತೊಡಗಿದರು ಎಂದು ದೇಜಗೌ ತಮ್ಮ ಲೇಖನದಲ್ಲಿ ಬರೆದಿದ್ದಾರೆ.

ಆಹಾರದಲ್ಲಿ ಮೂರು ಗುಣಗಳು ಇರುತ್ತವೆಂದು ಭಾರತೀಯ ದಾರ್ಶನಿಕರು ಹೇಳಿದ್ದಾರೆ. ಮೊದಲನೆಯದು ಸಾತ್ವಿಕ ಗುಣ. ಎರಡನೆಯದು ರಾಜಸಗುಣ, ಮೂರನೆಯದು ತಾಮಸ ಗುಣ, ಮಾಂಸಾಹಾರ ಮಾಡುವವರು, ಈರುಳ್ಳಿ, ಬೆಳ್ಳುಳ್ಳಿ, ಖಾರದಾ ಖಾದ್ಯಗಳನ್ನು ತಿನ್ನುವವರು/ಸುರಾ ಪಾನಮಾಡುವವರು ತಾಮಸ ಗುಣದವರಾಗುತ್ತಾರೆ. ಭೋಗದ ಊಟ ಮಾಡುವವರು, ಸಂಯಮ ಇಲ್ಲದವರು/ರಾಜಸ ಗುಣದವರಾಗುತ್ತಾರೆ. ಆಹಾರ ಪಾನೀಯಗಳಲ್ಲಿ ಸಂಯಮ ಉಳ್ಳವರು, ದಿನನಿತ್ಯದ ವ್ಯವಹಾರದಲ್ಲಿ ನೈತಿಕತೆಯನ್ನೂ ಕಾಪಾಡಿಕೊಳ್ಳುವವರು, ಶಿಸ್ತಿನ ಜೀವನ ನಡೆಸುವವರು, ಪರಪೀಡನೆ ಮಾಡದವರು ಸಾತ್ವಿಕರಾಗುತ್ತಾರೆ ಎಂದು ಹೇಳುತ್ತಾರೆ. ಆತ್ಮ ಸಾಕ್ಷಾತ್ಕಾರಕ್ಕೆ ತಾಮಸ-ರಾಜಸ ಪ್ರವೃತ್ತಿಗಳು ಅಡ್ಡಿಅಡಚಣೆ ಉಂಟುಮಾಡುವುದೆಂದು ಸಾಧಾಕರು ಅಭಿಪ್ರಾಯಪಡುತ್ತಾರೆ.

ಇದೆಲ್ಲ ಸ್ವಾನುಭವದ ಮಾತಲ್ಲವಾದರೂ ಈ ಪ್ರಯೋಗವನ್ನೂ ಮಾಡಿ ಯಶಸ್ವಿಯಾದವರ ಮಾತುಗಳು. ಲಂಡನ್ನಿಗೆ ಹೋದ್ದವರು ಟೆಸ್ಟ್ ಮಿನಿಸ್ಟರ್ ಅಬ್ಬೆ ನೋಡಿ ಬಂದಿದ್ದೇನೆ ಎನ್ನುತಾರೆ. ನಾನು ಲಂಡನ್ನೇ ನೋಡಿಲ್ಲ ಹಾಗಿದ್ದೂ ವೆಸ್ಟ್ ಮಿನಿಸ್ಟರ್ ಅಬ್ಬೆ ಲಂಡನ್ನಿನಲ್ಲಿ ಇಲ್ಲ ಎಂದು ನಾನು ಹೇಳುವುದು ಸರಿಯೆ?

ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ ಗೋವನ್ನು ವಿಶಿಷ್ಟವಾಗಿ ತಿನ್ನುವುದಕ್ಕಾಗಿಯೇ ಬೆಳೆಸುತ್ತಾರೆ. ಅದು ಅವರ ಸಂಸ್ಕೃತಿ. ನಮ್ಮಲ್ಲಿ ಗೋವನ್ನು ನೋಡುವ ದೃಷ್ಟಿಯೇ ಭಿನ್ನವಾದದ್ದು, ಗೋರಕ್ಷಣೆ ವಿಚಾರ ಮಾಡುವಾಗ ನಾವು ಈ ಭಿನ್ನತೆಯನ್ನೂ ನೆನಪಿನಲ್ಲಿಟ್ಟುಕೊಂಡು, ಗೋವಿಗೆ ನಮ್ಮ ಸಮಾಜದಲ್ಲಿ ವಿಶಿಷ್ಟ ಸ್ಥಾನವನ್ನು ಕಲ್ಪಿಸಬೇಕು. ಗೋವಧೆ ನಿಲ್ಲಿಸಬೇಕು.

ಎಚ್. ಎಸ್. ದೊರೆಸ್ವಾಮಿ,
ಬೆಂಗಳೂರು

ನನ್ನ ಪ್ರೀತಿಯ ಪತ್ರಿಕೆ

ಮಾನ್ಯರೇ,

'ಸಂವಾದ' ನಾನು ಪ್ರತಿ ತಿಂಗಳು ಪ್ರೀತಿಯಿಂದ ಬರಮಾಡುಕೊಳ್ಳುವ ಪತ್ರಿಕೆ. ಇದರ ಸಂಪಾದಕರಾದ ಇಂದೂಧರ ಹೊನ್ನಾಪುರ ಅವರಿಗೆ ನನ್ನ ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ಸಂವಾದ ಪತ್ರಿಕೆ ಆರ್ಥಿಕವಾಗಿ ಲಾಭದಲಿಲ್ಲವೆಂಬುದನ್ನು ಅರಿತಿದ್ದೇನೆ. ಓದುಗರಾಗಿ ನಾವು ಬೆಂಬಲಕ್ಕೆ ನಿಲ್ಲುತ್ತೇವೆ. ಹೊಸ ಸೈದ್ಧಾಂತಿಕ ಇತಿಹಾಸವನ್ನೇ ನಿರ್ಮಿಸುತ್ತಿರುವ 'ಸಂವಾದ' ನೂರಾರು ವರುಷಗಳ ಕಾಲ ನಿರಾತಂಕವಾಗಿ, ನಿರಂತರವಾಗಿ ಮುಂದುವರಿಯುತ್ತದೆಂಬ ನಂಬಿಕೆ ನನಗಿದೆ.

ಇಂದು ಪತ್ರಿಕಾ ರಂಗವೇ ತನ್ನ ತಾತ್ವಿಕ ಸಿದ್ಧಾಂತಗಳನ್ನು ಕೈ ಬಿಟ್ಟು ಬಲಿಷ್ಟವಾದಿಗಳ ಕೈ ಗೊಂಬೆಯಾಗುತ್ತಿರುವ ಈ ಸಂದರ್ಭದಲ್ಲಿ, ಯರ ಮರ್ಜಿಗೂ ಮಣೆ ಹಾಕದೆ ಸಂವಾದದಂತಹ ಏಕೈಕ ಪತ್ರಿಕೆ ಸಮಾಜದ ನೈತಿಕತೆಯ ಹೊಣೆ ಹೊತ್ತಿರುವುದು ನಿಜಕ್ಕೂ ಶ್ಲಾಘನಿಯ.

ಸಂವಾದ ಪ್ರಕಟಿಸುವ ಕಥೆ, ಕವನ, ವೈಚಾರಿಕ ಲೇಖನಗಳು ತಮ್ಮ ಗಟ್ಟಿ ಧ್ವನಿಯೊಂದಿಗೆ ಸಾಮಾಜಿಕ ಚಿಕಿತ್ಸಕ ಗುಣವನ್ನು ಹೊಂದಿದೆ. ಪ್ರತಿ ತಿಂಗಳು ಪ್ರಕಟವಾಗುವ 'ಧರೆಹತ್ತಿ ಉರಿದರೆ'. 'ದಲಿತ್ ಡೈರಿ', 'ಬುದ್ಧಾಯಣ' ಅಂಕಣಗಳು ಮನುಷ್ಯತ್ವವನ್ನು ಪ್ರತಿ ಬಿಂಬಿಸಿ ಮಾನವೀಯತೆಯನ್ನು ಮೇಲೆತ್ತುವ ಔದಾರ್ಯತೆಯನ್ನು ಪಡೆದಿವೆ.

ಫೆಬ್ರವರಿ (2010) ಸಂವಾದ ಪತ್ರಿಕೆಯಲ್ಲಿ ಪ್ರಕಟವಾದ ಸಂಪಾದಕರೊಡನೆ ಸಂವಾದ(ದ) ಮೂರು ಲೇಖನಗಳು ಪ್ರಸ್ತುತ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಳತ್ತಲೇ ಬೆಳಕು ಚೆಲ್ಲುತ್ತವೆ. ಆದರೆ ಕಿರಣ ಅವರ ಲೇಖನ 'ರಾಮ ಮಂದಿರ ಚಳುವಳಿ ಭಾರತದ ಬುದ್ಧಿಜೀವಿ' ಸತ್ಯದ ವಿವೇಚನೆಯ ಬದಲಾಗಿ RELIGIOUSನ ವಿಶ್ಲೇಷಣೆಯೇ ಬರಹದಲ್ಲಿ ಲೇಖನದ ಪಾರದರ್ಶಕತೆಯನ್ನು ಮರೆಮಾಚಿದ್ದಾರೆ.

ವೆಂಕಟೇಶ್ ಜಿ.ಆರ್,
ಹಾಸನ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.



ಬಾಧೆಯ ವೃಕ್ಷದಲ್ಲಿ ಬೋಧಿಯ ಪರಿಮಳ ಗಜಲುಗಳ ಸಂಕಲನ
ಲೇ: ಜಂಬಣ್ಣ ಅಮರಚಿಂತ
ಬೆಲೆ: ರೂ.100/-

ಗಜಲ್ ಕನ್ನಡ ಕಾವ್ಯ ಪರಂಪರೆಗೆ ತುಂಬಾಪರಿಚಿತವಲ್ಲದಿದ್ದರೂ ಅಪರೂಪದ ಕಾವ್ಯಪ್ರಾಕಾರವೇನೂ ಅಲ್ಲ. ಭಾಷೆಯನ್ನು ಕೋಮಲಗೊಳಿಸುವ ಶಕ್ತಿಯನ್ನು ಹೊಂದಿರುವ ಗಜಲ್ ಲೌಕಿಕದಲ್ಲಿ ಪ್ರೇಮಿಗಳ ಸಲ್ಲಾಪವಾಗಿದ್ದರೆ, ಅಲೌಕಿಕದಲ್ಲಿ ಜೀವಾತ್ಮನು ಪರಮಾತ್ಮನ ಜೊತೆ ಮಾಡುವ ಪ್ರೇಮ ಸಲ್ಲಾಪ. ಆದರೆ ಜಂಬಣ್ಣ ಅಮರಚಿಂತ ಅವರ ಗಜಲ್‌ಗಳು ಸಾಮಾಜಿಕವಾಗಿವೆ. ಜೀವಾತ್ಮ, ಜೀವಾತ್ಮರನ್ನು ಪ್ರೀತಿಸುವುದು ಹೇಗೆ ಎಂಬುದನ್ನು ಅವರು ತಮ್ಮ ಗಜಲ್‌ಗಳಲ್ಲಿ ತೋರಿಸಿಕೊಟ್ಟಿದ್ದಾರೆ. ಜೀವನ್ಮುಖಿ ಗಜಲ್‌ಗೆ ಸಾಮಾಜಿಕ ನ್ಯಾಯ ಒದಗಿಸಿದ್ದಾರೆ.

ಪ್ರಕಾಶನ: ಪ್ರಗತಿ ಗ್ರಾಫಿಕ್ ಬೆಂಗಳೂರು –560 104



ಜಂಗಮ ಫಕೀರನ ಜೋಳಿಗೆ
ಲೇ : ಆರಿಫ್ ರಾಜಾ
ಬೆಲೆ : ರೂ. ೪೦/-

ಇಲ್ಲಿನ ಹಲವಾರು ಕವಿತೆಗಳು ಮಹಾ ಪ್ರೇಮಿಯೊಬ್ಬನ ಬಿರುಸು ದನಿಯಲ್ಲಿ ಮಾತಾಡುವ ಗುಣವನ್ನು ರೂಡಿಸಿಕೊಂಡಿವೆ. ಹರೆಯದ ಪ್ರೇಮಿಯೊಬ್ಬನ ಅವಸರ, ಹಿಂದೆ ಮುಂದೆ ನೋಡದೆ ಎಲ್ಲವನ್ನು ಪಕ್ಕಕ್ಕೆ ದೂಡಿಬಿಡುವ ಬೇವಾರಸೀ ಧೈರ್ಯ, ಪ್ರೇಮದ ಮತ್ತಿನಲ್ಲೇ ಎಲ್ಲವನ್ನು ಗಳಿಸಿಕೊಳ್ಳುವ ನಂಬಿಕೆ ಮತ್ತು ಅದರ ನೆರವಿನಿಂದಲೇ ಧರ್ಮದ ಸಮಾಜದ ತಡೆಗೋಡೆಗಳನ್ನು ದಾಟಿಬಿಡುವ ಉತ್ಕಟತೆಗಳು ಆರಿಫರ ಕಾವ್ಯದಲ್ಲಿ ದಂಡಿಯಾಗಿ ದೊರೆಯುತ್ತವೆ.

ಪ್ರಕಾಶಕರು: ಲಡಾಯಿ ಪ್ರಕಾಶನ #೨೧, ಪ್ರಸಾದ್ ಹೋಟೆಲ್ ಗದಗ-೫೮೨ ೧೦೧



ಚೆಕ್‌ಪೋಸ್ಟ್ ಮತ್ತು SOME ಪದ
ಲೇ: ಪಾರ್ವತೀಶ
ಬೆಲೆ: ರೂ. 100/- ಮತ್ತು 80/-

ಕರ್ನಾಟಕದ ಆಗುಹೋಗುಗಳು ಮತ್ತು ಸಮಕಾಲೀನರ ಬದುಕು ಕುರಿತ ಚರ್ಚೆ, ಓದು ಹಾಗೂ ಬರವಣಿಗೆಗಳು ಲೇಖಕರಿಗೆ ಯಾವಾಗಲೂ ಆಪ್ತವೆನಿಸಿವೆ. ಈಗ ಕನ್ನಡ ನೆಲದಿಂದ ನಿರ್ಗಮಿಸಿರುವ ಮತ್ತು ಈಗಲೂ ನಮ್ಮೊಂದಿಗಿರುವ ಅನೇಕರ ಕುರಿತಾದ ಬರಹಗಳು ಇದರಲ್ಲಿವೆ. ಜೊತೆಗೆ ಕರ್ನಾಟಕದ ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರಗಳೂ ಇವೆ. ಇದೆಲ್ಲದರ ಕುರಿತಾದ ರೂಢಿಗತ ನಂಬಿಕೆಗಳನ್ನು ಪ್ರಶ್ನಿಸುವ, ಪುನರ್ ಮೌಲ್ಯಮಾಪನ ಮಾಡುವ ಪ್ರಯತ್ನ ಈ ಕೃತಿಯಲ್ಲಿದೆ.

"Some ಪದ" ಇದು ಕನ್ನಡ ಭಾಷಾ ಲೋಕಕ್ಕೆ ಸಂಬಂಧಿಸಿದ ಕಿರು ಬರಹಗಳ ಒಂದು ಪುಟ್ಟ ಪುಸ್ತಕ. 'ಪದ'ಗಳೆಂಬ ಹಾರುಗುದುರೆಯ ಬೆನ್ನೇರಿ ಸಾಗುವುದೆಂದರೆ ಒಂದು ಶಬ್ದ ನಿಮ್ಮನ್ನು ವಿಶ್ವದ ಯಾವುದೋ ಮೂಲೆಗೆ ತಲುಪಿಸಿ, ಅಲ್ಲಿನ ಜನಸಮುದಾಯದ ಜೊತೆಗೆ ಒಂದು ಗೂಡಿಸಬಹುದು. ನಮ್ಮಲ್ಲೀಗ ಬಳಕೆಯಲ್ಲಿರುವ ಕನ್ನಡ ಪದಗಳೇ ಅನ್ನಿಸುವಷ್ಟು ಒಡನಾಟವಿರುವ ಅನೇಕ ಅನ್ಯಭಾಷಾ ಪದಗಳ ಇತಿಹಾಸ, ಮೂಲ ಹಾಗೂ ಅವು ಕನ್ನಡ ಭಾಷಾ ಲೋಕಕ್ಕೆ ಹೇಗೆ ಪ್ರವೇಶ ಪಡೆದವೆಂಬುದನ್ನು ಇಲ್ಲಿ ದಾಖಲಿಸಿದ್ದಾರೆ. ಪತ್ರಕರ್ತರೂ ಆಗಿರುವ ಲೇಖಕರ ಈ ಪ್ರಯತ್ನ ಭಾಷಾ ವಿದ್ವಾಂಸರೂ ಆಶ್ಚರ್ಯ ಪಡುವಷ್ಟು ಅದ್ಭುತವಾಗಿದೆ.

ಪ್ರಕಾಶನ: ಚಾರು ಪ್ರಕಾಶನ ರಸ್ತೆ, ನಂ.9, ನೆಲಮಹಡಿ, ಇ.ಎ.ಟಿ. ರಸ್ತೆ, ಬಸನವಗುಡಿ, ಬೆಂಗಳೂರು-4

ಡಾ.ರಾಮಮನೋಹರ ಲೋಹಿಯಾ ಜೀವನ ಪರಿಚಯ
ಲೇ: ಮಂಗ್ಳೂರ ವಿಜಯ

ಸ್ವಾತಂತ್ರ್ಯ ಪೂರ್ವ ಮತ್ತು ನಂತರ ಭಾರತದ ಉದ್ದಗಲಕ್ಕೂ ಸಂಚರಿಸಿಯುವ ಜನರನ್ನು ಜಾಗೃತರನ್ನಾಗಿಸಿದ ಸಮಾಜವಾದಿ ನಾಯಕ ಲೋಹಿಯಾ ಅವರ ಪರಿಚಯ ಈ ಕೃತಿಯಲ್ಲಿದೆ. ಲೋಹಿಯಾ ಶತಮಾನೋತ್ಸವ ಸಂದರ್ಭದಲ್ಲಿ ಈ ಕೃತಿಯನ್ನು ಹೊರತಂದು ಹೊಸ ಪೀಳಿಗೆಯ ಜನರಿಗೆ ಪರಿಚಯಿಸುತ್ತಿರುವುದು ಶ್ಲಾಘನೀಯ.

ಪ್ರಕಾಶಕರು: ಲೋಹಿಯಾ ಜನ್ಮ ಶತಮಾನೋತ್ಸವ ಸಮಿತಿ, ಬೆಂಗಳೂರು

ಹೊಸ ಪುಸ್ತಕ





ಅಕಾವ್ಯಕ್ಕೆ ಅರ್ಥ ಗೊತ್ತಿಲ್ಲ ನನಗೆ....
ಲೇ : ಆರ್ ಸುಧೀಂದ್ರಕುಮಾರ್
ಬೆಲೆ : ರೂ.೫೦/-

ಬಂಡಾಯದ ವಿಸ್ತರಣೆಯಾಗಿ ಜಯಪ್ರಕಾಶರ ಕಾವ್ಯದ ಈ ಬಗೆಯ ಅನುಸಂಧಾನ ಯಾವುದೇ ತತ್ವ ಪಂಥಗಳಿರದ ಈ ಕಾಲದಲ್ಲಿ ಹೊಸ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ನಮ್ಮನ್ನು ಹಚ್ಚುವಂತಿದೆ. ಹಾಗೆಯೇ, ಕನ್ನಡಕ್ಕೆ ಕನ್ನಡದ್ದೇ ಆದ ಸಾಹಿತ್ಯಮೀಮಾಂಸೆಯನ್ನು ಕಟ್ಟುವ, ನಿರ್ವಚಿಸುವ ನಿಟ್ಟಿನಲ್ಲಿ ಹೇಗೆ ಒಂದು ಕೃತಿಯೇ ಅದನ್ನು ನೋಡಬೇಕಾದ ಬಗೆಯನ್ನು ಹೇಳುತ್ತದೆಂಬುದನ್ನು ಗ್ರಹಿಸುವ ಸೂಕ್ಷ್ಮತೆಯೂ ಇಲ್ಲಿದೆ. ವಿಮರ್ಶೆಯೇ ಪ್ರಧಾನವಾಗದೇ ತಮ್ಮ ಹಿಂದಿನ ತಲೆಮಾರಿನ ಕವಿಯಕಾವ್ಯದೊಂದಿಗೆ ಆಪ್ತಸಂವಾದ ಬೆಳೆಸುವ ರಸಗ್ರಹಣದ ಮಾದರಿಯನ್ನು ಇಲ್ಲಿ ಕಾಣಬಹುದು.

ಪ್ರಕಾಶಕರು: ಪ್ರಕೀರ್ಣ ಪ್ರಕಾಶನ, ಡಿ.ಡಿ.ರಾಮಕೃಷ್ಣ ನಂ. ೫೯, ೩ನೇಯ ಅಡ್ಡರಸ್ತೆ, ೫ನೇಯ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು-೦೯



ನಮ್ಮವರ ಬಣ್ಣ

ನಮ್ಮವರ ಬಣ್ಣ
ರೊಕ್ಕ ಇದ್ದ ಧಣಿಗಳ ತಾಕ
ಜೀತಕ್ಕಿಟ್ಟೈತಿ

ನಮ್ಮವರ ಬಣ್ಣ
ಮಹಡಿ ಮನೆಗಳ ಮಂದಿಗೆ
ಮೆಟ್ಟಿಲಾಗೈತಿ

ನಮ್ಮವರ ಬಣ್ಣ
ದೊಡ್ಡದೊಡ್ಡ ಅಧಿಕಾರಸ್ಥರ
ಕಾಲ ಕಸವಾಗೈತಿ

ನಮ್ಮವರ ಬಣ್ಣ
ಸೋಗಲಾಡಿ ರಾಜಕಾರಣಿಗಳ
ಲಂಗೋಟಿ ಬಟ್ಟೆಯಾಗೈತಿ

ನಮ್ಮವರ ಬಣ್ಣ
ನೀತಿ ಹೇಳೋ-ಜಾತ್ಯಸ್ತರತಾಕ
ಸುತ್ತಿಕೊಂಡು ಬಿದ್ದೈತಿ

ನಮ್ಮವರ ಬಣ್ಣ
ಸೊಳೆ ಬಜಾರದಾಗ
ಮಾರಾಟಕಿಟ್ಟೈತಿ

ನಮ್ಮವರ ಬಣ್ಣ
ಹುಡುಕಬ್ಯಾಡ್ರೋ$$$$
ಹುಟ್ಟಿದಾಗಿಂದ
ಜಾತಿ ಒಲಿಯಾಗ
ಬಡತನದ ಬೆಂಕ್ಯಾಗ
ಸುಟ್ಟು ಕರಕಲಾಗೈತಿ
ಸಾಯೋಗಂಟ
ಅದೇ ನಿಜ ಆಗೈತಿ



ನಮ್ಮವರ ಬಣ್ಣ
ಬಾಲಸೊರ್ಯನಂಗ
ಕೆಂಪಗ
ಪೂರ್ಣ ಚಂದ್ರನಂಗ
ಬೆಳ್ಳಗ
ಹೊಳ್ಳಿ ಬರೋದ್ಯಾವಾಗ???

○ ವಿ.ಹರಿನಾಥ ಬಾಬು, ಸಿರುಗುಪ್ಪ

ಜಾತಿ, ಧರ್ಮ ಮತ್ತು ಮುಸ್ಲಿಂ ಮೀಸಲಾತಿ

ಸಂಪಾದಕರೊಡನೆ ಸಂವಾದ

ಶಿವಸುಂದರ್

ಸಾಚಾರ್ ಸಮಿತಿ ವರದಿ ಪ್ರಕಟವಾದ ನಂತರ ಮುಸ್ಲಿಮರ ತುಷ್ಟೀಕರಣ ನಡೆಯುತ್ತಿದೆ ಎಂದು ಸಂಘಪರಿವಾರ ಎಷ್ಟೇ ಬೊಬ್ಬೆಹೊಡೆದರೂ ಈ ದೇಶದಲ್ಲಿ ದಲಿತರ ನಂತರ ಅತಿಹೆಚ್ಚು ಅವಕಾಶ ವಂಚಿತರೆಂದರೆ ಈ ದೇಶದ ಮುಸ್ಲಿಮರೇ ಎಂದು ಹಗಲಿನಷ್ಟು ಸ್ಪಷ್ಟವಾಗಿ ಸಾಬೀತಾದ ನಂತರ ಕೋಮುವಾದಿಗಳು ಮತ್ತು ಪಟ್ಟಭದ್ರರು ತಮ್ಮ ಮುಸ್ಲಿಂ ವಿರೋಧಿ ಅಭಿಯಾನವನ್ನು ಮತ್ತಷ್ಟು ತೀವ್ರಗೊಳಿಸಿವೆ. ಸಾಚಾರ್ ಸಮಿತಿಯ ಹಿನ್ನೆಲೆಯಲ್ಲಿ ಕೆಲವು ಸರ್ಕಾರಗಳು ಇದ್ದಕ್ಕಿದಂತೆ ಕಣ್ಣು ತೆರೆದು ಮುಸ್ಲಿಮರಿಗೂ ಸಾಮಾಜಿಕ ನ್ಯಾಯ ಒದಗಿಸಲು ಅರೆ ಮನಸ್ಸಿನಲ್ಲೇ ಮೀಸಲಾತಿ ಕ್ರಮಗಳಿಗೆ ಮುಂದಾಗಿವೆ.

ಮಾನ್ಯ ಸಂಪಾದಕರಿಗೆ,

ಐತಿಹಾಸಿಕವಾಗಿ ದಮನಕ್ಕೆ ಒಳಗಾದ ಸಮುದಾಯಗಳಿಗೆ ವರ್ತಮಾನದಲ್ಲಿಯಾದರೂ ಒಂದಷ್ಟು ನ್ಯಾಯ ಸಲ್ಲುವ ಸೂಚನೆ ಕಂಡರೂ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಕಸಿಯಲು ಏನೆಲ್ಲಾ ಪ್ರಯತ್ನಿಸುತ್ತವೆ ಎನ್ನುವುದಕ್ಕೆ ಈ ದೇಶದ ಮೀಸಲಾತಿಯ ಚರಿತ್ರೆಯಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಈ ದೇಶದಲ್ಲಿ ಶತಮಾನಗಳಿಂದ ನಡೆಯುತ್ತಾ ಬಂದ ಸಾಮಾಜಿಕ, ಆರ್ಥಿಕ ಶೋಷಣೆಯು ಸ್ವಾತಂತ್ರ್ಯಾ ನಂತರವೂ ಮುಂದುವರೆಯದಂತೆ ತಡೆಯಲು ಅಂಬೇಡ್ಕರ್ ನೇತೃತ್ವದಲ್ಲಿ ಪ್ರಗತಿಪರಶಕ್ತಿಗಳು ನಡೆಸಿದ ಹೋರಾಟಕ್ಕೆ ಪ್ರತಿಫಲವಾಗಿ ಸಿಕ್ಕ ಅತಿ ಚಿಕ್ಕ ಪರಿಹಾರ ಈ ಮೀಸಲಾತಿ. ಆದರೆ ಕಳೆದ ಅರವತ್ತು ವರ್ಷಗಳಲ್ಲಿ ಈ ದೇಶದ ಮೇಲ್ಜಾತಿ, ಮೇಲ್ವರ್ಗದ ಬ್ರಾಹ್ಮಣೀಯ ಶಕ್ತಿಗಳು ಮೀಸಲಾತಿಯ ಹಿಂದಿನ ಸಾಮಾಜಿಕ ನ್ಯಾಯ ಪ್ರಜ್ಞೆಯ ವಿರುದ್ಧ ಸತತ ಸಮರ ಸಾರುತ್ತಲೇ ಬರುತ್ತಿವೆ.

ಅದರಲ್ಲೂ ಸಾಚಾರ್ ಸಮಿತಿ ವರದಿ ಪ್ರಕಟವಾದ ನಂತರ ಮುಸ್ಲಿಮರ ತುಷ್ಟೀಕರಣ ನಡೆಯುತ್ತಿದೆ ಎಂದು ಸಂಘಪರಿವಾರ ಎಷ್ಟೇ ಬೊಬ್ಬೆಹೊಡೆದರೂ ಈ ದೇಶದಲ್ಲಿ ದಲಿತರ ನಂತರ ಅತಿಹೆಚ್ಚು ಅವಕಾಶ ವಂಚಿತರೆಂದರೆ ಈ ದೇಶದ ಮುಸ್ಲಿಮರೇ ಎಂದು ಹಗಲಿನಷ್ಟು ಸ್ಪಷ್ಟವಾಗಿ ಸಾಬೀತಾದ ನಂತರ ಕೋಮುವಾದಿಗಳು ಮತ್ತು ಪಟ್ಟಭದ್ರರು ತಮ್ಮ ಮುಸ್ಲಿಂ ವಿರೋಧಿ ಅಭಿಯಾನವನ್ನು ಮತ್ತಷ್ಟು ತೀವ್ರಗೊಳಿಸಿವೆ. ಸಾಚಾರ್ ಸಮಿತಿಯ ಹಿನ್ನೆಲೆಯಲ್ಲಿ ಕೆಲವು ಸರ್ಕಾರಗಳು ಇದ್ದಕ್ಕಿದಂತೆ ಕಣ್ಣು ತೆರೆದು ಮುಸ್ಲಿಮರಿಗೂ ಸಾಮಾಜಿಕ ನ್ಯಾಯ ಒದಗಿಸಲು ಅರೆ ಮನಸ್ಸಿನಲ್ಲೇ ಮೀಸಲಾತಿ ಕ್ರಮಗಳಿಗೆ ಮುಂದಾಗಿವೆ. ಆದರೆ ಈ ದೇಶದಲ್ಲಿ ಮುಸ್ಲಿಮರನ್ನು, ದಲಿತ ಮತ್ತು ಹಿಂದುಳಿದ ಸಮುದಾಯವನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ಉಳಿಸಬಯಸುವ ಮೇಲ್ಜಾತಿ ಮತ್ತು ಮೇಲ್ವರ್ಗದ ಪಟ್ಟಭದ್ರರು ಮತ್ತು ಕೋಮುವಾದಿಗಳು ಇಂಥಾ ಧರ್ಮಾಧಾರಿತ ಮೀಸಲಾತಿ ಸಂವಿಧಾನ ಬಾಹಿರವೆಂದು ಈಗಾಗಲೇ ಹುಯಿಲೆಬ್ಬಿಸಿವೆ. ಇಂಥಾ ವಾದಗಳ ಪ್ರಭಾವದಿಂದಲೇ ಆಂಧ್ರದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ.4 ರಷ್ಟು ಮೀಸಲಾತಿ ಸಂವಿಧಾನ ಬಾಹಿರ ಎಂದು ಆಂಧ್ರ ಹೈಕೋರ್ಟು ರದ್ದುಪಡಿಸಿದೆ.

ಈ ಸಂಘಪರಿವಾರ ಮತ್ತು ಮೀಸಲಾತಿ ವಿರೋಧಿಗಳು ಮುಸ್ಲಿಂ ಮೀಸಲಾತಿಯ ವಿರುದ್ಧವಾಗಿ ಮುಂದಿಡುತ್ತಿರುವ ವಾದಗಳು ವಾಸ್ತವವಾಗಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೇ ವಿರೋಧಿಸುತ್ತವೆ. ಮತ್ತು ಈ ದೇಶದ ಸಂವಿಧಾನವನ್ನೇ ವಿರೋಧಿಸುತ್ತವೆ. ಇವರು ಮುಂದಿಡುತ್ತಿರುವ ವಾದಗಳು ಮೂಲಭೂತವಾಗಿ ಮೂರು.

1) ಸಾಮಾಜಿಕ ಹಿಂದುಳಿದವರಿಗೆ ಮೀಸಲಾತಿ ನೀಡಬೇಕು. ಆದರೆ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಅಳೆಯಲು ಜಾತಿಯನ್ನು ಮಾನದಂಡವಾ ಬಳಸಬಾರದು.

2) ಮುಸ್ಲಿಂ ಸಮುದಾಯ ಒಂದು ಧಾರ್ಮಿಕ ಸಮುದಾಯ. ಅಲ್ಲಿ ಸಾಮಾಜಿಕ ಶ್ರೇಣೀಕರಣ ಇಲ್ಲವಾದ್ದರಿಂದ ಈ ಮೀಸಲಾತಿಯನ್ನು ಮುಸ್ಲಿಂ ಸಮುದಾಯಕ್ಕೆ ವಿಸ್ತರಿಸಬಾರದು.

3) ಮತ್ತು ಮುಸ್ಲಿಂ ಸಮುದಾಯಕ್ಕೆ ಮುಸ್ಲಿಮರೆಂದು ಮೀಸಲಾತಿ ಕೊಟ್ಟರೆ ಅದು ಧರ್ಮಾಧಾರಿತ ಮೀಸಲಾತಿ ಆಗುತ್ತದೆ. ನಮ್ಮ ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲಾತಿಗೆ ಅವಕಾಶವಿಲ್ಲ.

ವಾಸ್ತವವಾಗಿ ಸಂವಿಧಾನ ರಚನಾ ಸಭೆಯಿಂದಲೂ ಮೊದಲು ಗೊಂಡು ಸ್ವಾತಂತ್ರ್ಯಾ ನಂತರ ರಚಿತವಾದ ಹಲವಾರು ಹಿಂದುಳಿದ ವರ್ಗಗಳ ಆಯೋಗಗಳು, ಸುಪ್ರೀಂ ಕೋರ್ಟ್ ತೀರ್ಮಾನಗಳು ಈ ಮೂರು ಪ್ರಶ್ನೆಗಳನ್ನು ಸಂವಿಧಾನದ ಹಿನ್ನೆಲೆಯಲ್ಲಿ ಕೂಲಂಕಷವಾಗಿ ವಿಶ್ಲೇಷಿಸಿ ತೀರ್ಮಾನಗಳನ್ನು ಕೊಟ್ಟಿವೆ.

ನಮ್ಮ ಸಂವಿಧಾನದ 16(4)ನೇ ಕಲಮು "ಸಾಮಾಜಿಕವಾಗಿ ಹಿಂದುಳಿದ" ವರ್ಗಗಳಿಗೆ ಏಳಿಗೆಗೆ ಮೀಸಲಾತಿಯನ್ನೂ ಒಳಗೊಂಡಂತೆ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ನಿರ್ದೇಶನ ನೀಡುತ್ತದೆ. ಸಂವಿಧಾನದ 15 (1), 16 (1)ನೇ ಕಲಮುಗಳು ಯಾವುದೇ ವ್ಯಕ್ತಿ ಅಥವಾ ಸಮುದಾಯಗಳನ್ನು ಜಾತಿ, ವರ್ಗ, ಧರ್ಮ, ವರ್ಣ ಅಥವಾ ಲಿಂಗದ ಆಧಾರದಲ್ಲಿ ತಾರತಮ್ಯ ಮಾಡಬಾರದೆಂದು ನಿರ್ದೇಶಿಸುತ್ತದೆ. ಆದರೆ ಅವಕಾಶಗಳಲ್ಲಿ ಸಮಾನತೆ ಒದಗಿಸುವುದು ನಮ್ಮ ಸಂವಿಧಾನದ ಮೂಲಭೂತ ಉದ್ದೇಶವೂ ಆಗಿರುವುದರಿಂದ ಒಂದು ವೇಳೆ ಐತಿಹಾಸಿಕವಾಗಿ ಜಾತಿ, ಧರ್ಮ ಇನ್ನಿತ್ಯಾದಿ ಕಾರಣಗಳಿಂದ ಅವಕಾಶಗಳಲ್ಲಿ ಸಮಾನತೆಯನ್ನು ಕಲ್ಪಿಸಲು ಸಮಾಜ ವಿಫಲವಾಗುತ್ತಿದ್ದರೆ ಸರ್ಕಾರ ಮೀಸಲಾತಿಯ ಮೂಲಕ ಆ ಅಸಮಾನತೆಯನ್ನು ನಿವಾರಿಸಬೇಕೆಂಬುದೇ ಸಂವಿಧಾನದಲ್ಲಿ ಅಡಕವಾಗಿರುವ ಮೀಸಲಾತಿ–Postive Discrimination–ನ ತತ್ವದ ಸಾರಾಂಶವಾಗಿದೆ.

ಹೀಗಾಗಿ ಮುಸ್ಲಿಂ ಸಮುದಾಯವು ಸಾಮಾಜಿಕವಾಗಿ ಹಿಂದುಳಿದಿದ್ದರೆ ಸಂವಿಧಾನದ 16 (4) ನೇ ಕಲಮಿನ ಪ್ರಕಾರವೂ, ಮುಸ್ಲಿಂ ಧರ್ಮಕ್ಕೆ ಸೇರಿದವರು ಎಂಬ ಕಾರಣಕ್ಕೆ ಸಮಾಜ ಅವಕಾಶಗಳನ್ನು ಕೊಡುವುದರಲ್ಲಿ ತಾರತಮ್ಯ ಮಾಡುತ್ತಿದ್ದರೆ ಸಂವಿಧಾನದ 15 (1), 16 (1)ನೇ ಕಲಮುಗಳ ಅನ್ವಯದಲ್ಲೂ ಮುಸ್ಲಿಮರಿಗೆ ಮೀಸಲಾತಿ ನೀಡಬಹುದಾಗಿದೆ.

ಸಾಮಾಜಿಕ ಹಿಂದುಳಿದಿರುವಿಕೆಯ ಅತಿ ಮುಖ್ಯ ಸೂಚ್ಯಂಕವೆಂದರೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಮಾನ ಅವಕಾಶವನ್ನು ಪಡೆಯಲಾಗದ ಅಸಮರ್ಥತೆ. ಈ ಅಸಮರ್ಥತೆಗೆ ಕಾರಣ ಅವರ ಪ್ರತಿಭೆಯ ಕೊರತೆಯಲ್ಲ, ಬದಲಿಗೆ ಐತಿಹಾಸಿಕ ಸಾಮಾಜಿಕ ಪೂರ್ವಗ್ರಹಗಳ ಕಾರಣದಿಂದ ಸಮಾಜ ಅವರಿಗೆ ಸಮಾನ ಅವಕಾಶವನ್ನು ನಿರಾಕರಿಸುತ್ತಿದೆ. ಭಾರತೀಯ ಸಮಾಜದಲ್ಲಿ ಈ ಬಗೆಯಲ್ಲಿ ಅವಕಾಶ ನಿರಾಕರಣೆ ಇತಿಹಾಸದಲ್ಲೂ ಮತ್ತು ವರ್ತಮಾನದಲ್ಲೂ ನಡೆಯುತ್ತಾ ಬಂದಿರುವುದು ಜಾತಿಯ ಆಧಾರದಲ್ಲೇ. ಹೀಗಾಗಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಅಳೆಯಲು ಜಾತಿ ಏಕಮಾತ್ರವಲ್ಲದಿದ್ದರೂ ಒಂದು ಅತಿಮುಖ್ಯ ಮಾನದಂಡವೆಂಬುದನ್ನು ಮೇಲ್ಜಾತಿ ಮೇಲ್ವರ್ಗದ ಮತ್ತು ಬ್ರಾಹ್ಮಣೀಕರಣಗೊಂಡಿರುವ ನವ ಬ್ರಾಹ್ಮಣರಾದ ಶೂದ್ರ ಮೇಲ್ವರ್ಗಗಳನ್ನು ಬಿಟ್ಟರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸುಪ್ರೀಕೋರ್ಟು ಹಾಗೂ ಹಲವಾರು ಆಯೋಗಗಳೂ ಇದನ್ನೇ ಸ್ಪಷ್ಟವಾಗಿ ಹಲವಾರುಬಾರಿ ಪುನರುಚ್ಚರಿಸಿವೆ. ಹೀಗಾಗಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಅಳೆಯಲು ಜಾತಿಯನ್ನು ಒಂದು ಮಾನದಂಡವಾಗಿ ಬಳಸಬಾರದು ಎನ್ನುವವಾದದಲ್ಲಿ ಏನೂ ಹುರುಳಿಲ್ಲ.

ಇನ್ನು ಸ್ವಾತಂತ್ರ್ಯಾ ನಂತರದ ಇತಿಹಾಸವನ್ನು ನೋಡಿದರೆ ಮುಸ್ಲಿಂ ಸಮುದಾಯವು ಮುಸ್ಲಿಮರೆಂಬ ಕಾರಣಕ್ಕಾಗಿಯೇ ಹಿಂದುಳಿದಿದ್ದಾರೆಂದು ಸಾಚಾರ್ ಸಮಿತಿಗೂ ಮುನ್ನವೇ ಹಲವಾರು ವರದಿಗಳು ಸ್ಪಷ್ಟಪಡಿಸಿವೆ. ಅದಕ್ಕೆ ಸ್ಪಷ್ಟವಾದ ಕಾರಣಗಳೂ ಇವೆ. ಇಂದು ಭಾರತದಲ್ಲಿರುವ ಮುಸ್ಲಿಮರಲ್ಲೂ ಅಶ್ರಫ್, ಅಜ್ಲಫ್ ಮತ್ತು ಅರ್ಜಾಲ್‌ಗಳೆಂಬ ಮೂರು ಬಗೆಯ ಶ್ರೇಣೀಕರಣಗಳು ಉಂಟಾಗಿವೆ. ಅಶ್ರಫ್‌ಗಳು ತ್ಮನು ತಾವು ಕುಲೀನರೆಂದು

ಭಾವಿಸುವ ಹೊರದೇಶಗಳಿಂದ ಬಂದ ಶೇಖ್, ಸಯ್ಯದ್, ಪಠಾಣ್, ಮುಘಲ್ ಇನ್ನಿತ್ಯಾದಿ ಅಲ್ಪಸಂಖ್ಯಾತರು. ಆದರೆ ಇಂದು ಭಾರತದಲ್ಲಿರುವ ಹೆಚ್ಚು ಮುಸ್ಲಿಮರು ಅಜ್ಲಫ್ ಮತ್ತು ಅಸ್ಪೃಶ್ಯ ಅರ್ಜಾಲ್ ಸಮುದಾಯಗಳಿಗೆ ಸೇರಿದವರೇ ಆಗಿದ್ದಾರೆ. ಏಕೆಂದರೆ ಭಾರತದಲ್ಲಿ ಇಸ್ಲಾಂಗೆ ಮತಾಂತರವಾದ ಬಹುಸಂಖ್ಯಾತರು ಶೂದ್ರ ಮತ್ತು ದಲಿತ ಸಮುದಾಯಗಳಿಗೆ ಸೇರಿದವರೇ ಆಗಿದ್ದಾರೆ. ಆದರೆ ಮನುಷ್ಯರೆಲ್ಲರೂ ಒಂದೇ ಎನ್ನುವ ಉದಾತ್ತಧ್ಯೆಯದೊಂದಿಗೆ ಭಾರತಕ್ಕೆ ಕಾಲಿಟ್ಟ ಇಸ್ಲಾಂ ಭಾರತವನು ಪ್ರವೇಶಿಸಿದ ಇಲ್ಲಿ ಆಳವಾಗಿ ಬೇರುಬಿಟ್ಟಿದ್ದ ಜಾತಿ ಪದ್ಧತಿಯನ್ನು ಮೈಗೂಡಿಸಿಕೊಂಡಿತು.

ಹೀಗಾಗಿ ಅಜ್ಲಫ್‌ಗಳೂ ಸಹ ಮುಸ್ಲಿಮರಾದರೂ ಸಮಾಜದ ಶ್ರೇಣೀಖರಣದಲ್ಲಿ ಅವರ ಸ್ಥಾನದಲ್ಲಿ ಯಾವ ಬದಲಾವಣೆಯೂ ಆಗದೆ ವಂಚಿತರಾಗಿಯೇ ಮುಂದುವರೆದರು. ಉತ್ತರಭಾರತದಲ್ಲಿ ಈ ರೀತಿ ಶೂದ್ರ ಜಾತಿಗಳಿಂದ ಮುಸ್ಲಿಂ ಅಜ್ಲಫ್ ಶ್ರೇಣಿಗೆ ಸೇರಿಕೊಂಡ ಆ ಸಮುದಾಯ ತಮ್ಮ ಹಳೆಯ ವೃತ್ತಿಗಳನ್ನೇ ಮುಂದುವರೆಸಿದ್ದರಿಂದಲೂ ಸಾಮಾಜಿಕ ಶ್ರೇಣಿಕರಣದಲ್ಲಿ ಅವರ ಸ್ಥಾನ ಹಾಗೇ ಮುಂದುವರೆಯಿತು. ಮತ್ತು ಇವರಲ್ಲಿ ಬಹುಪಾಲು ಕರಕುಶಲ ವೃತ್ತಿಯವರೇ ಆಗಿದ್ದರು. ಆದರೆ ದಕ್ಷಿಣದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಕುಶಲಕರ್ಮಿ ದಲಿತರು ಎಡ ಪಂಗಡವಾಗಿಯೂ ಮತ್ತು ಸೇವಾ ಕೇಲಸಗಳಲ್ಲಿದ್ದ ದಲಿತರು ಬಲ ಪಂಗಡವಾಗಿಯೂ ರೂಪುಗೊಂಡಿದ್ದರಿಂದ ಕುಶಲಕರ್ಮಿ ವೃತ್ತಿಗಳು ಇತರ ದಲಿತರಷ್ಟು ಸಾಮಾಜಿಕ ಅಸ್ಪೃಷ್ಯತೆಯನ್ನು ಅನುಭವಿಸಲಿಲ್ಲ.

ಉದಾಹರಣೆಗೆ ನೇಕಾರಿಕೆ ಕೆಲಸದವರು ಉತ್ತರದಲ್ಲಿ ದಲಿತರೆಂದೇ ಪರಿಗಣಿಸಲ್ಪಟ್ಟರೆ ಕರ್ನಾಟಕದಲ್ಲಿ ದೇವಾಂಗದವರು ದಲಿತರಲ್ಲ. ಈ ಕಾರಣಗಳಿಂದಾಗಿ ಕರ್ನಾಟಕದೆಲ್ಲಿ ಇಸ್ಲಾಂಗೆ ಮತಾಂತರಗೊಂಡ ಶೇ.90ಕ್ಕೂ ಹೆಚ್ಚು ಮಂದಿ ಅಸ್ಪೃಷ್ಯ ದಲಿತರೇ ಆಗಿದ್ದರು. ಹೀಗಾಗಿಯೇ ಮುಸ್ಲಿಮರಲ್ಲಿ ಹಿಂದುಳಿದವರನ್ನು ಗುರುತಿಸಲು ಮುಸ್ಲಿಮರಾದ ನಂತರವಾದ ನಂತರವೂ ವೃತ್ತಿ ಸೂಚಕವಾದ ಅವರ ಸರ್‌ನೇಮ್‌ಗಳು ಸಹಾಯ ಮಾಡಿದರೆ ಕರ್ನಾಟಕ ಮತ್ತು ಕೇರಳದಲ್ಲಿ ಇಡೀ ಮುಸ್ಲಿಂ ಸಮುದಾಯಕ್ಕೆ ದಲಿತ ಹಿನ್ನೆಲೆ ಇದ್ದದ್ದರಿಂದ ಇಡೀ ಮುಸ್ಲಿಂ ಸಮುದಾಯವನ್ನೇ ಹಿಂದುಳಿದ ವರ್ಗಗಳನ್ನಾಗಿ ಪರಿಗಣಿಸಬೇಕಾಯಿತೆಂದು ಹಲವಾರು ಅಯೋಗಗಳು ಅಭಿಪ್ರಾಯ ಪಟ್ಟಿವೆ. ಹೀಗಾಗಿ ಮುಸ್ಲೀಮರಲ್ಲಿ ಸಾಮಾಜಿಕ ಶ್ರೇಣಿಕರಣವಿಲ್ಲವೆಂಬ ವಾದದಲ್ಲೂ ಹುರುಳಿಲ್ಲ.

ಆದ್ದರಿಂದಲೇ ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವುಗಳ ಏಳಿಗೆಗೆ ಕ್ರಮಗಳನ್ನು ಶಿಫಾರಸ್ಸು ಮಾಡಲು 1953ರಲ್ಲಿ ಸ್ಥಾಪಿಸಿದ ಪ್ರಪ್ರಥಮ ಹಿಂದುಳಿದ ವರ್ಗಗಳ ಅಯೋಗವಾದ ಕಾಕಾ ಕಾಲೇಲ್ಕರ್ ಅಯೋಗದಿಂದ ಮೊದಲುಗೊಂಡು ನಂತರದ ಮಂಡಲ್ ಅಯೋಗ, ಇತ್ತೀಚಿನ ಸಾಚಾರ್ ಮತ್ತು ರಂಗನಾಥ ಮಿಶ್ರಾ ಅಯೋಗ ಎಲ್ಲವೂ ಮುಸ್ಲಿಮರೊಳಗಿನ ಬಹುಪಾಲು ಜಾತಿಗಳನ್ನು ಹಿಂದುಳಿದ ವರ್ಗಗಳೆಂದು ತೀರ್ಮಾನಿಸಿವೆ.

ಕರ್ನಾಟಕದಲ್ಲೂ ಹಿಂದುಳಿದ ವರ್ಗಗಳನ್ನು ಗುರುತಿಸಲು 1961ರಲಿ ನೇಮಿಸಲಾದ ನಾಗನಗೌಡ ಸಮಿತಿ ಮುಸ್ಲಿಮರನ್ನು ಒಟ್ಟಾಗಿ ಮತ್ತು ಮುಸ್ಲಿಮರೊಳಗಿನ ಚಪ್ಪರ್ ಬಂಡ್. ದುಡೇಕುಲ, ಹಜಾಮ್, ಲಬ್ಬೆ (ಲದಾಫ್),

ಮಾಪಿಳ್ಳ (ಮೋಪ್ಲಾ), ಕಸಾಬ್ (ಕಸಾಯಿ, ಖುರೇಷಿ, ಕತರ್ಗ), ಪಿಂಜಾರ, ಸಂಗತರ್ಶ್, ಮತ್ತು ಜುಲಾಹಿ ಜಾತಿಗಳನ್ನು ವಿಶೆಷವಾಗಿ ಹಿಂದುಳಿದ ಜಾತಿಗಳೆಂದು ಪರಿಗಣಿಸಿತ್ತು. 1975ರಲ್ಲಿ ರಚಿತವಾದ ಖ್ಯಾತ ಹಾವನೂರ್ ಅಯೋಗವೂ ಸಹ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳ ದೃಷ್ಟಿಯಿಂದ ಇಡೀ ಮುಸ್ಲೀಮ್ ಸಮುದಾಯವನ್ನು ಆರ್ಟಿಕಲ್ 14 ರ ಕೆಳಗೆ ವಿಶೇಷ ಸಮುದಾಯವೆಂದು ಪರಿಗಣಿಸಬಹುದೆಂದೂ ಹಿಂದುಳಿದವರ್ಗಗಳಿಗೆ ನೀಡುತ್ತಿರುವ ಎಲ್ಲಾ ಸೌಲಭ್ಯಗಳನ್ನು ಅವರಿಗೂ ನೀಡಬಹುದೆಂದು ಸಲಹೆ ನೀಡಿತ್ತು. ಅದರಂತೆ 1977ರಲ್ಲಿ ಕರ್ನಾಟಕ ಸರ್ಕಾರ ಇಡೀ ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳ ಕೆಳಗೆ ಸೇರಿಸಿತ್ತು. 1990ರಲ್ಲಿ ರಚನೆಯಾದ ಚಿನ್ನಪ್ಪರೆಡ್ಡಿ ಅಯೋಗವೂ ಸಹ ಇಡೀ ಮುಸ್ಲಿಂ ಸಮುದಾಯವನ್ನು ಅತಿ ಹಿಂದುಳಿದ ವರ್ಗದ 2ನೇ ಪ್ರವರ್ಗಕ್ಕೆ ಸೇರಿಸಿತ್ತು. ಹೀಗಾಗಿ ಈಗಲು ಕರ್ನಾಟಕದಲ್ಲಿ ಮತ್ತು ಕೇರಳದಲ್ಲಿ ಇಡೀ ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳೆಂದೇ ಪರಿಗಣಿಸುತ್ತಾ ಬರಲಾಗಿದೆ.

ಇಷ್ಟೆಲ್ಲಾ ಆದರೂ ಸಾಚಾರ್ ಸಮಿತಿ ಸ್ಪಷ್ಟಪಡಿಸುವಂತೆ ಇದರ ಲಾಭ ಮುಸ್ಲಿಂ ಸಮುದಾಯಕ್ಕೆ ದೊರೆತೇ ಇಲ್ಲ. ಒಂದು ಸಮಾಜ ಇನ್ನೂ ಮುಸ್ಲಿಮರಿಗೆ ಮುಸ್ಲಿಮರೆನ್ನುವ ಕಾರಣಕ್ಕೆ ಅವಕಾಶಗಳನ್ನು ನಿರಾಕರಿಸುತ್ತಿದೆ. ಅದರಲ್ಲೂ ಹಿಂದೂತ್ವವಾದಿಗಳ ಆಟಾಟೋಪ ಹೆಚ್ಚಾದ ಮೇಲೆ, ಸಮಾಜದ ಹಾಗೂ ಪ್ರಭುತ್ವದ ಎಲ್ಲಾ ಅಧಿಕಾರ ಸ್ಥಾನಗಳಲ್ಲೂ ಹಿಂದೂತ್ವವಾದಿಗಳೇ ಆಕ್ರಮಿಸಿ ಗುಜರಾತಿನಂತೆ ಮುಸ್ಲಿಮರಿಗೆ ಮುಸ್ಲಿಮರೆನ್ನುವ ಕಾರಣಕ್ಕೆ ಧರ್ಮದ ಆಧಾರದ ಮೇಲೆ ತಾರತಮ್ಯ ತೋರುತ್ತಿದ್ದಾರೆ. ಮತ್ತೊಂದು ಕಡೆ ಇದರಿಂದ ದೊರೆತ ಅಲ್ಪಸ್ವಲ್ಪ ಅವಕಾಶಗಳನ್ನು ಮುಸ್ಲಿಂ ಸಮುದಾಯದಲ್ಲಿನ ಕುಲೀನರು-ಅಶ್ರಫ್‌ಗಳು ಲಪಟಾಯಿಸಿದ್ದಾರೆ.

ಹೀಗಾಗಿ ಇಂದು ಸಾಮಾಜಿಕ ನ್ಯಾಯದಲ್ಲಿ ವಿಶ್ವಾಸವಿಟ್ಟಿರುವವರೆಲ್ಲರೂ ಮುಸ್ಲೀಮ್ ಮೀಸಲಾತಿಯನ್ನು ಧಾರ್ಮಿಕ ತಾರತಮ್ಯ ಮತ್ತು ಸಾಮಾಜಿಕ ಹಿಂದುಳಿದಿರುವಿಕೆ ಎರಡರ ಆಧಾರದಲ್ಲೂ ಪ್ರತಿಪಾದಿಸಲೇ ಬೇಕು. ಹಾಗೂ ಅದೇ ಸಮಯದಲ್ಲಿ ಮುಸ್ಲಿಮ್ ಸಮುದಾಯದೊಳಗೆ ಈ ಮೀಸಲಾತಿಯು ಅಶ್ರಫ್‌ಗಳ ಬದಲು ಅಜ್ಲಫ್ ಮತ್ತು ಅರ್ಜಾಲ್‌ಗಳಿಗೆ ತಲುಪುವಂತೆ ಅಂತರಿಕ ಹೋರಾಟವನ್ನು ನಡೆಸಬೇಕು.

ಇವೆಲ್ಲ ಆದ ನಂತರವೂ ಒಂದು ಪ್ರಶ್ನೆ ಹಾಗೆ ಉಳಿಯುತ್ತದೆ. ಸಾಮಾಜಿಕ ನ್ಯಾಯದ ಪ್ರಶ್ನೆ ಕೇವಲ ಸರ್ಕಾರೀ ಕ್ಷೇತ್ರದ ಉದ್ಯೋಗ ಮತ್ತು ಶಿಕ್ಷಣಕ್ಕೆ ಮಾತ್ರ ಮೀಸಲಾಗಿ ಬಿಟ್ಟಿದೆ. ಆದರೆ ಜಾಗತೀಕರಣದ ಈ ಸಂದರ್ಭದಲ್ಲಿ ಸರ್ಕಾರದ ಎಲ್ಲಾ ಕ್ಷೇತ್ರಗಳನ್ನು ಖಾಸಗೀ ವಲಯವೇ ಆಕ್ರಮಿಸುತ್ತಿದೆ. ಅಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯೇ ಇಲ್ಲ. ಬಲವಿದ್ದವನು ಮಾತ್ರ ಬದುಕಬೇಕೆಂಬ ಕಾಡಿನ ನ್ಯಾಯ ಅಲಿಯದ್ದು. ಹೀಗಾಗಿ ಸಾಮಾಜಿಕ ಅನ್ಯಾಯದ ಹೋರಾಟ ಎಲ್ಲಿಯ ತನಕ ಇಡೀ ಸಮಾಜದ ಎಲ್ಲಾ ಸಂಪನ್ಮೂಲಗಳ ಮತ್ತು ಅಧಿಕಾರದ ಸಮಾನ ಹಂಚಿಕೆಗಾಗಿ ನಡೆಯುವ ಹೋರಾಟದ ಭಾಗವಾಗುವುದಿಲ್ಲವೋ ಅಲ್ಲಿಯತನಕ ಅದು ಸಾಬಿಯೇ ಮುಳುಗುತ್ತಿರುವಾಗ ಗಡ್ಡಕ್ಕೆ ಅತ್ತಂತೆ ಆಗಿಬಿಡುತ್ತದೆ. ಅಲ್ಲವೇ? □

ಸಾಮಾಜಿಕ ಹಿಂದುಳಿದಿರುವಿಕೆಯ ಅತಿ ಮುಖ್ಯ ಸೂಚ್ಯಂಕವೆಂದರೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಸಮಾನ ಅವಕಾಶವನ್ನು ಪಡೆಯಲಾಗದ ಅಸಮರ್ಥತೆ. ಈ ಅಸಮರ್ಥತೆಗೆ ಕಾರಣ ಅವರ ಪ್ರತಿಭೆಯ ಕೊರತೆಯಲ್ಲ. ಬದಲಿಗೆ ಐತಿಹಾಸಿಕ ಸಾಮಾಜಿಕ ಪೂರ್ವಗ್ರಹಗಳ ಕಾರಣದಿಂದ ಸಮಾಜ ಅವರಿಗೆ ಸಮಾನ ಅವಕಾಶವನ್ನು ನಿರಾಕರಿಸುತ್ತಿದೆ. ಭಾರತೀಯ ಸಮಾಜದಲ್ಲಿ ಈ ಬಗೆಯಲ್ಲಿ ಅವಕಾಶ ನಿರಾಕರಣೆ ಇತಿಹಾಸದಲ್ಲೂ – ವರ್ತಮಾನದಲ್ಲೂ ನಡೆಯುತ್ತಾ ಬಂದಿರುವುದು ಜಾತಿಯ ಆಧಾರದಲ್ಲೇ. ಹೀಗಾಗಿ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಅಳೆಯಲು ಜಾತಿ ಏಕಮಾತ್ರವಲ್ಲದಿದ್ದರೂ ಒಂದು ಅತಿಮುಖ್ಯ ಮಾನದಂಡವೆಂಬುದನ್ನು ಮೇಲ್ಜಾತಿ ಮೇಲ್ವರ್ಗದ ಮತ್ತು ಬ್ರಾಹ್ಮಣೀಕರಣ ಗೊಂಡಿರುವ ನವ ಬ್ರಾಹ್ಮಣರಾದ ಶೂದ್ರ ಮೇಲ್ವರ್ಗಗಳನ್ನು ಬಿಟ್ಟರೆ ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಭಾರತ ಸಂವಿಧಾನಕ್ಕೆ ಭೂತದ ಚೇಷ್ಟೆ!

ದೇವನೂರ ಮಹಾದೇವ

ನಮ್ಮ ಸಂವಿಧಾನಕ್ಕೆ 60 ವರ್ಷಗಳ ಇತಿಹಾಸ. ಆದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಇಂದೂ ಕೂಡ ಅಗೋಚರವಾಗಿ ಆಳ್ವಿಕೆ ನಡೆಸುತ್ತಿರುವ ಅಲಿಖಿತ ಸಂವಿಧಾನವೂ ಒಂದಿದೆ. ಇದು ಭಾರತದ ಮನೋಭೂಮಿಕೆಯಲ್ಲಿದೆ. ಇದು ಭೂತಕಾಲದ ಸಂವಿಧಾನ. ಇದು ಭಾರತದ ಸುಪ್ತಪ್ರಜ್ಞೆಯ ಆಳದಲ್ಲಿದೆ. ಈ ಎರಡರ ನಡುವೆ ಯುದ್ಧ ಜರುಗುತ್ತಿದೆ. ಭೂತಕಾಲದ ಸಂವಿಧಾನವೂ ಇಲ್ಲಿ ಬಲವಾಗಿದೆ. ಹಾಗಾಗಿ ನಮ್ಮ ವರ್ತಮಾನ ಸಂವಿಧಾನದ ಆಸೆಗಳು ತೆವಳುತ್ತಿವೆ.

ಈ ನನ್ನ ಮಾತುಗಳಲ್ಲಿ ಹೊಸತೇನೂ ಇಲ್ಲ. ನಿಮ್ಮ ನಡುವೆ ನಾನೇ ಸ್ಪಷ್ಟ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವೆ. ಈ ಚಿಂತೆ ಮತ್ತು ಚಿಂತನೆಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟ ಮಾಡಿಕೊಳ್ಳಲು ಪ್ರಯತ್ನಿಸುವೆ.

ಬಹಳ ಹಿಂದೆ, ಡಾ.ಯು.ಆರ್.ಅನಂತಮೂರ್ತಿಯವರು ಇಂಗ್ಲಿಷ್ ವಿಭಾಗದಲ್ಲಿದ್ದಾಗ, ಅವರನ್ನು ಭೇಟಿ ಮಾಡಲು ಹಿರಿಯರೊಬ್ಬರು ಬಂದಿದ್ದರು. ತುಂಬಾ ಶುಭ್ರವಾಗಿದ್ದರು. ಮೈತುಂಬಾ ಬಿಳಿ ಬಟ್ಟೆ, ಜುಟ್ಟು ನಾಮ ಇತ್ತು. ಅವರು ಮಾತಾಡಿ ಹೋದ ಮೇಲೆ ಅನಂತಮೂರ್ತಿಯವರು "ಈಗ ಬಂದಿದ್ದವರು ವೇದ ಉಪನಿಷತ್ ಪುರಾಣ ಪಾರಂಗತರು" ಎಂದರು. ಜೊತೆಗೆ – "ಇವರು ತಾವೇ ತಮ್ಮ ಅಡಿಗೆ ಮಾಡಿಕೊಂಡು ಊಟ ಮಾಡುವುದು" ಎಂದೂ ಹೇಳಿದರು. ಇದು ಯಾಕೋ ನನ್ನ ಮನಸ್ಸಲ್ಲಿ ಉಳಿದುಬಿಟ್ಟಿತು. ತನ್ನ ಕೈಯಾರ ಮಾಡಿದ್ದನ್ನು ಮಾತ್ರ ಊಟ ಮಾಡುವ ಇವರಿಗೆ ವೇದ ಉಪನಿಷತ್‌ಗಳು ಹೇಳಿಕೊಟ್ಟಿದ್ದೇನು ಎಂಬ ಪ್ರಶ್ನೆ ನನ್ನೊಳಗೆ ಉಳಿದುಬಿಟ್ಟಿತು. ಈಗ ಅನ್ನಿಸುತ್ತಿದೆ – ಇವರ ಕಠೋರ ಮಡಿಯ ಅಸ್ತಿತ್ವದಲ್ಲೆ ಅಸ್ಪೃಶ್ಯತೆಯ ಪ್ರಚಾರ ಕಾರ್ಯವೂ ಅಂತರ್ಗತವಾಗಿದೆ ಅಂತ. ಇವರನ್ನು ಅರ್ಥಮಾಡಿಕೊಳ್ಳೋಣ. ಅಂದರೆ ಇವರನ್ನು ಪಳೆಯುಳಿಕೆ ಎಂದು ಭಾವಿಸಿದರೆ ಸಮಸ್ಯೆ ಇಲ್ಲ. ಆದರೆ ಅವರ ಮಡಿಯನ್ನು ಪಾರಂಪರಿಕ ಮೌಲ್ಯ ಎಂದು ಗೌರವಿಸಿದರೆ– ನಾವು ಎಚ್ಚರದಲ್ಲಿ ಇಲ್ಲ ಎಂದೇ ಅರ್ಥ – ಅನ್ನಿಸುತ್ತದೆ.

ಇನ್ನೊಂದು ಭೀಕರ ಉದಾಹರಣೆ ಕೊಡುತ್ತೇನೆ. ಪುರಿ ಜಗದ್ಗುರು ಅಸ್ಪೃಶ್ಯತೆಯನ್ನು ಎತ್ತಿ ಹಿಡಿದಾಗ ಭಾರತ ತಲ್ಲಣಿಸಲಿಲ್ಲ. ಭೀಕರ ಉದಾಹರಣೆ ಎಂದು ನನ್ನ ಸಮಾಧಾನಕ್ಕಾಗಿ ಹೇಳಿಕೊಂಡೆ ಅಷ್ಟೆ. ಆದರೆ ಅದು ಭೀಕರವಾಗಿ ಸಮಾಜಕ್ಕೆ ತಟ್ಟಲೇ ಇಲ್ಲ. ಪುರಿ ಜಗದ್ಗುರು ಅಸಹ್ಯವಾಗಿ ನಮಗೆ ಕಾಣಲೇ ಇಲ್ಲ. ಯಾಕೆಂದರೆ ನಮ್ಮ ವರ್ತಮಾನದ ಪ್ರಜ್ಞೆಯ ಸಂವಿಧಾನವು ಸಮಾನತೆಯನ್ನು ಮೌಲ್ಯ ಮಾಡಿದರೆ, ಭೂತಕಾಲದ ಸುಪ್ತಪ್ರಜ್ಞೆಯ ಸಂವಿಧಾನಕ್ಕೆ ಶ್ರೇಣೀಕೃತ ಸಮಾಜದ ಅಸ್ಪೃಶ್ಯತೆ, ಜಾತಿತಾರತಮ್ಯಗಳೇ ಮೌಲ್ಯವಾಗಿದೆ. ಭೂತದ ಕಪ್ಪುಹಣ ಇಂದೂ ಚಲಾವಣೆಯಲ್ಲಿದೆ. ಹೀಗಿರುವಾಗ ಸಮಾಜ ಯಾಕಾಗಿ ತಲ್ಲಣಿಸಬೇಕು? ಹೀಗಿದ್ದಾಗ ವರ್ತಮಾನದ ಸಂವಿಧಾನದ ಆಸೆಗಳು ತೆವಳದೆ ಮತ್ತೇನು ಮಾಡಲು ಸಾಧ್ಯ?

ಹಾಗೆ ಇಂದು ಚರ್ಚಿತವಾಗುತ್ತಿರುವ ಮತಾಂತರ ನಿಷೇಧದ ಪ್ರಸ್ತಾಪಕ್ಕೆ ಬಂದರೂ ಇಲ್ಲೂ ಕಾಣುವುದು ಇದನ್ನೇ. ಹಾಲಿ ಬಿಜೆಪಿ ಕರ್ನಾಟಕ ಸರ್ಕಾರ ಹಾಗೂ ಪೇಜಾವಾರ ಮಠಾಧೀಶರಾದಿಗಳು ಈ ಮತಾಂತರ ನಿಷೇಧಕ್ಕಾಗಿ ಹಾತೊರೆಯುತ್ತಿದೆ. ಶೂದ್ರನೊಬ್ಬ ನಿಮ್ಮ ಬ್ರಾಹ್ಮಣ ಜಾತಿಗೆ ಸೇರುತ್ತೇನೆಂದರೆ ಆಕಾಶ ನೋಡುವ ಮಠಾಧಿಪತಿಗಳು ಹಾಗೆ ಬ್ರಾಹ್ಮಣ ಜಾತಿಗೆ ನನ್ನನು ವರ್ಗಾವಣೆ ಮಾಡಿ ಎಂದು ಶೂದ್ರ ಕೇಳಿದರೆ ಇದು ತನ್ನ ವ್ಯಾಪ್ತಿಗೆ ಬರುವುದಿಲ್ಲವೆನ್ನುವ ಸರ್ಕಾರ ಮತಾಂತರ ನಿಷೇಧಕ್ಕೆ ಚಿಂತಿಸುತ್ತಿರುವ ಕ್ರೌರ್ಯವು ಗಾಬರಿ ಹುಟ್ಟಿಸುತ್ತದೆ, ಇರಲಿ, ಭಾರತದ ಪರಂಪರೆಯಲ್ಲಿ ನಾಲ್ಕಾರು ಧರ್ಮಗಳಿರುವುದು ಮತಾಂತರದ ಚಲನೆಯು ಭಾರತದಲ್ಲಿ ಇದ್ದುದರಿಂದಲೇ. ಈಗ ಹಾಲಿ ಭಾರತದಲ್ಲಿ ಜೈನ, ಬೌದ್ಧ, ಸಿಖ್ ಹಾಗೂ ಮತಾಂತರದ ಅವಕಾಶವಿರುವ ಕೆಲವಾದರೂ ಲಿಂಗಾಯತ ಪರಂಪರೆಯ ಧರ್ಮಗಳಿವೆ. ಲಿಂಗಾಯತ ತನ್ನ ಜಾತಿ ಬಿಟ್ಟರೆ ಭಾರತದ ದುಡಿಯುವ ವರ್ಗದ ಅಂದರೆ ಶೂದ್ರರ ಅಸ್ಪೃಶ್ಯರ ಧರ್ಮವಾಗಬಹುದಾದ ಸತ್ವವು ಅದರೊಳಗೆ ಇನ್ನೂ ಗುಟುಕುಜೀವದಂತೆ ಹುದುಗಿದೆ. ಇವುಗಳಲ್ಲಿ ನಿಧಾನವಾಗಿಯಾದರೂ ಮತಾಂತರ ಜರಗುತ್ತಲೇ ಇದೆ. ನಮ್ಮ ಕಣ್ಣೆದುರೇ ಉಪನಿಷದ್‌ದ್ರವ್ಯದಿಂದ ಧರ್ಮವಾಗಿ ಹುಟ್ಟು ಪಡೆಯಬಹುದಾಗಿದ್ದ 'ಪರಮಹಂಸ'ಧರ್ಮವೊಂದು ಗತಿಸಿ ಬಿಟ್ಟಿತು. ಆ ಎಳೆಧರ್ಮದ ಕುತ್ತಿಗೆಗೆ ಜನಿವಾರ ಬಿಗಿದುಬಿಟ್ಟರು. ಇಂದು ರಾಮಕೃಷ್ಣಾಶ್ರಮಗಳು ಭೋಜನಶಾಲೆ ಮತ್ತು ವೇದಾಂತ ಕಥಾಕಾಲಕ್ಷೇಪ ತಾಣಗಳಾಗಿಬಿಟ್ಟಿವೆ. ಇದು ಈ ಸ್ಥಿತಿಯಿಂದ ಜಿಗಿದು ಎದ್ದರೆ ಇಂದೂ ಧರ್ಮವಾಗಬಹುದು.

ಇದರ ನಡುವೆ ಹಿಂದೂ ಎಂಬ ಧರ್ಮದ ಹೆಸರನ್ನು ಪಡೆದುಕೊಂಡು ಸ್ಥಗಿತಗೊಂಡ ಸಾಮಾಜಿಕ ಪದ್ಧತಿಯೇ ಧರ್ಮವಾಗಿ ಇದು ಎಲ್ಲಾ ಧರ್ಮಗಳಿಗಿಂತಲೂ ಪ್ರಬಲವಾಗಿದೆ. ಶ್ರೇಣಿಯ ಸಮಾಜಕ್ಕಾಗಿ ಇರುವ ಕಾನುನು ಕಟ್ಟಳೆಗಳೇ – ಹಿಂದು ಎಂದಾಗಿದೆ, ಈ ಶ್ರೇಣಿಯ ಕಾನೂನು ಕಟ್ಟಳೆಗಳೇ ಇಲ್ಲಿ ಧರ್ಮವಾಗಿದೆ. ಇದು ಸಾವಿರಾರು ವರ್ಷಗಳಿಂದಲೂ ಧರ್ಮದ ವೇಷ ಹಾಕಿಕೊಂಡು ವಂಚಿಸಿ ವಂಚಿಸಿ ತನ್ನನ್ನು ಧರ್ಮವೆಂದೇ ಭಾವಿಸುವಂತೆ ಮಾಡಿಬಿಟ್ಟಿದೆ. ತನ್ನ ವಂಚನೆಗಳಿಗೆ ಭಾರತದ ಮಹೋನ್ನತ ಜ್ಞಾನಶಾಖೆಗಳಾದ ದರ್ಶನಗಳನ್ನೂ ಬೌದ್ಧ ಜೈನ ಧರ್ಮಗಳನ್ನೂ ಮಾತಾಡುವ ವಸ್ತುವಾಗಿ ಬಳಸಿಕೊಂಡಿದೆ. ದೇವರನ್ನೂ ಅವತಾರ ಎತ್ತಿಸಿದೆ – ಇದೆಲ್ಲಾ ಯಾತಕ್ಕಾಗಿ

ಪುರಿ ಜಗದ್ಗುರು ಅಸ್ಪೃಶ್ಯತೆಯನ್ನು ಎತ್ತಿ ಹಿಡಿದಾಗ ಭಾರತ ತಲ್ಲಣಿಸಲಿಲ್ಲ. ಭೀಕರ ಉದಾಹರಣೆ ಎಂದು ನನ್ನ ಸಮಾಧಾನಕ್ಕಾಗಿ ಹೇಳಿಕೊಂಡೆ ಅಷ್ಟೆ. ಆದರೆ ಅದು ಭೀಕರವಾಗಿ ಸಮಾಜಕ್ಕೆ ತಟ್ಟಲೇ ಇಲ್ಲ. ಪುರಿ ಜಗದ್ಗುರು ಅಸಹ್ಯವಾಗಿ ನಮಗೆ ಕಾಣಲೇ ಇಲ್ಲ. ಯಾಕೆಂದರೆ ನಮ್ಮ ವರ್ತಮಾನದ ಪ್ರಜ್ಞೆಯ ಸಂವಿಧಾನವು ಸಮಾನತೆಯನ್ನು ಮೌಲ್ಯ ಮಾಡಿದರೆ, ಭೂತಕಾಲದ ಸುಪ್ತ ಪ್ರಜ್ಞೆಯ ಸಂವಿಧಾನಕ್ಕೆ ಶ್ರೇಣೀಕೃತ ಸಮಾಜದ ಅಸ್ಪೃಶ್ಯತೆ, ಜಾತಿತಾರತಮ್ಯಗಳೇ ಮೌಲ್ಯವಾಗಿದೆ. ಭೂತದ ಕಪ್ಪುಹಣ ಇಂದೂ ಚಲಾವಣೆಯಲ್ಲಿದೆ. ಹೀಗಿರುವಾಗ ಸಮಾಜ ಯಾಕಾಗಿ ತಲ್ಲಣಿಸಬೇಕು? ಹೀಗಿದ್ದಾಗ ವರ್ತಮಾನದ ಸಂವಿಧಾನದ ಆಸೆಗಳು ತೆವಳದೆ ಮತ್ತೇನು ಮಾಡಲು ಸಾಧ್ಯ?

ಅಂದರೆ– ಶ್ರೇಣೀಕೃತ ಜಾತಿ ವರ್ಣ ಕಟ್ಟುಪಾಡುಗಳನ್ನು ಸುಪ್ತಪ್ರಜ್ಞೆಯಲ್ಲಿ ಸ್ಥಾಪಿಸುವುದಕ್ಕಾಗಿ. ಅದಕ್ಕಾಗೇ ಯಾವ ರಾಜ ಬಂದರೂ ರಾಜಧರ್ಮ ಅಂದರೆ ವರ್ಣವ್ಯವಸ್ಥೆಯನ್ನು ಕಾಪಾಡುವುದೇ ಆಗಿತ್ತು. ಹಿಂದುವಾಗಿ ಇರುವುದು ಅಂದರೆ–ಇದ್ದ ಕಡೆ ಇರುವ ಶ್ರೇಣಿಯಲ್ಲಿ ಬಿದ್ದಿರು– ಎಂದೇ ಅರ್ಥ. ಇಲ್ಲಿರಬೇಕೆ? ಇಲ್ಲಿ ಅಸಮಾನತೆ ಕಟ್ಟಳೆಗಳ ವ್ಯಾಘ್ರನು ಧರ್ಮದ ಗೋಮುಖ ವೇಷದಲ್ಲಿದ್ದಾನೆ. ಹಿಂದೂ ಗೋಮುಖ ವ್ಯಾಘ್ರನಲ್ಲಿ ವ್ಯಾಘ್ರನ ಸಾಯಿಸಿದರೆ –ಅಂದರೆ ಶ್ರೇಣೀಕೃತ ಜಾತಿ ಕಟ್ಟಳೆ, ಅಸ್ಪೃಶ್ಯತೆಗಳ ಸಾಯಿಸಿದರೆ– ಇದೂ ಒಂದು ಧರ್ಮವಾಗಬಹುದು. ಇದು ಸಾಧ್ಯವೆ? ಸಾಧ್ಯವಾಗುವುದಾದರೆ ಮಾತ್ರ ಸಂವಿಧಾನದ ಆಶಯಗಳು ನಡೆಯಬಹುದು.

ಆದರೆ ಇದು ಸಾಧ್ಯವೇ ಎಂದು ಶ್ರೀ ಪೇಜಾವರರನ್ನು ಪ್ರಾತಿನಿಧಿಕ ಮಾಡಿಕೊಂಡು ಕೇಳುತ್ತಿದ್ದೇನೆ. ಅವತಾರ ಎತ್ತಿಸಿಯಾದರೂ ಜಾತಿಯ ಶ್ರೇಣಿಯ ಇಲ್ಲದಂತೆ ಹಿಂದೂ ಸಮಾಜ ರೂಪಿಸಿ ಅದನ್ನು ಧರ್ಮ ಮಾಡಲು ಸಾಧ್ಯವಿದೆಯೆ? ಇದಾಗದಿದ್ದರೆ, ಹಿಂದೂ ಸಮಾಜದ ದೇವಸ್ಥಾನ, ಮಠ, ಇತ್ಯಾದಿಗಳಲ್ಲಿ ಮಠಾಧೀಶ ಸ್ಥಾನ ಪೂಜೆ ಕಾರ್ಯ ಇತ್ಯಾದಿ ನಿರ್ವಹಣೆಗಳಲ್ಲಿ ಸಕಲೆಂಟು ಜಾತಿಗೂ ಪರ್ಯಾಯ ವ್ಯವಸ್ಥೆ ತರಲಾದರೂ ಸಾಧ್ಯವಿದೆಯೆ? ಉಡುಪಿಯಲ್ಲಿ ಅಷ್ಟಮಠಗಳ ಬದಲು ನವ ಮಠಗಳ ಪರ್ಯಾಯಕ್ಕಾಗಿ, ಡಿಮ್ಯಾಂಡ್ ಇಟ್ಟು ಕಾಯುತ್ತಿರುವವನಂತೆ ಇರುವ ಕನಕ ಇನ್ನೆಷ್ಟು ದಿನ ಕಾಯಬೇಕು? ಅಥವಾ ಅವನು ಹೊರಗಿರುವುದೇ ಧರ್ಮವೆ? ನೀವು ದಲಿತ ಕೇರಿಗೆ ಪಾದ ವಿಟ್ಟರೆ ಅದನ್ನೆ ಧನ್ಯ ಎಂದುಕೊಳ್ಳುವ ಆ ದಲಿತ ಕೇರಿಯ ಮಗುವೊಂದು ನಿಮ್ಮನ್ನು ಪ್ರೀತಿಸಿ 'ನಾನೂ ನಿಮ್ಮೊಡನೆ ಬರುತ್ತೇನೆ, ನನಗೂ ನೀವಾಗುವ ಆಸೆ' ಎಂದರೆ ನೀವೇನು ಮಾಡುತ್ತೀರಿ? ಇಲ್ಲಿ ನೀವು ಅಂದರೆ ನೀವೇ ಅಲ್ಲ. ನಿಮ್ಮಂತೆ ಇರುವ ಎಲ್ಲರಿಗೂ ಇದು ಎದುರಾಗುತ್ತಿಲ್ಲ ಯಾಕೆ? ನಿಮ್ಮದೂ ಪತನದ ಸ್ಥಿತಿಯಲ್ಲವೇ? ನಿಮ್ಮಂಥವರಿಗೆ ಇಂಥವುಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಯಾಕೆಂದರೆ ಇಂಥವರ ದೇಹದೊಳಗಿನ ಆತ್ಮಸಾಕ್ಷಿ ಅಥವಾ ಸಾಕ್ಷಿ ಪ್ರಜ್ಞೆಯು ನೇಣಿಗೆ ಹಾಕಲ್ಪಟ್ಟಿರುತ್ತದೆ.

ಏಕೆಂದರೆ ಭಾರತದ ಸಮಾಜದ ಸುಪ್ತ ಮನಸ್ಸು ಅಸ್ಪೃಶ್ಯತೆ, ಶ್ರೇಣಿಕೃತ ಜಾತಿ ಪದ್ಧತಿ, ತಾರತಮ್ಯಗಳ ಅಪಮೌಲ್ಯಗಳನ್ನೆ ಮೌಲ್ಯ ಮಾಡಿಬಿಟ್ಟಿದೆ. ಇದನ್ನು ಬಿತ್ತುವವರನ್ನು ಪೂಜ್ಯರು, ಶ್ರೀಶ್ರೀಶ್ರೀ, ಮಾತಾಡಿದರೆ ಆಶೀರ್ವಚನ, ಆಧ್ಯಾತ್ಮಿಕ ಚಿಂತಕರು, ಪರಮ ಪೂಜ್ಯರು ಇತ್ಯಾದಿ ಪಟ್ಟ ಕಟ್ಟಿದೆ. ಈ ಪ್ರಭಾವಕ್ಕೆ ಒಳಗಾದವರೇ ಭಾರತದ ಸಂವಿಧಾನದ ಆಶಯಗಳನ್ನು ನಿರ್ಧರಿಸುವ ನಿರ್ವಹಿಸುವ ನಿರ್ಣಾಯಕ ಸ್ಥಾನಗಳಲ್ಲಿ ಹೆಚ್ಚಾಗಿ ಇರುವಾಗ, ಕಳೆದ ವರ್ಷದ ರಾಜ್ಯ ಬಜೆಟ್‌ನಲ್ಲಿ ದಲಿತರಿಗೆ ಮೀಸಲಿಟ್ಟ 4 ಸಾವಿರ ಕೋಟಿಗಳಲ್ಲಿ ಅರ್ಧದಷ್ಟನ್ನು ಕಾಟಾಚಾರಕ್ಕೆ ಖರ್ಚುಮಾಡಿ ಉಳಿಕೆ ಅರ್ಧವನ್ನು ಲ್ಯಾಪ್ಸ್ ಮಾಡಿರುವ ಕ್ರಿಯೆ ಇಲ್ಲಿ ಸಹಜವಲ್ಲವೆ? ದಲಿತರ ಮೀಸಲಾತಿ ಉದ್ಯೋಗದಲ್ಲಿ ದಲಿತೇತರು ನುಸುಳಿ ಪಡಯುತ್ತಿರುವುದು ಇಲ್ಲಿ ಸಹಜ ಕ್ರಿಯೆ ತಾನೆ? ನಮಗೆ ಅನ್ಯಾಯಗಳು, ಅನ್ಯಾಯಗಳಾಗಿ ಬಂದು ಮುಟ್ಟುತ್ತಿಲ್ಲ.

ಕನ್ನಡದಲ್ಲಿ ಒಂದು ಪದ ಇದೆ – 'ಪಾಪ' ಅಂತ. ಇದನ್ನು ಪಾಪ (Sin)ಕ್ಕೂ ಬಳಸುತ್ತಾರೆ, ಹಾಗೇ ಕರುಣೆ (pity)ಗೂ ಬಳಸುತ್ತಾರೆ. ಪಾಪಕ್ಕೆ ಬಳಸಿದರೆ ಪಾಪಿಷ್ಟ ಆಗುತ್ತಾನೆ. ಕರುಣೆಗೆ ಬಳಸಿದರೆ ಪಾಪದವನು ಆಗುತ್ತಾನೆ. ಪಾಪದವನು ಒಂದು ಪಟ್ಟು ಪತನಗೊಂಡವನಾಗಿದ್ದರೆ ಪಾಪಿಷ್ಟನು ನೂರು ಪಟ್ಟು ಪತನಗೊಂಡವನಾಗಿರುತ್ತಾನೆ. ಅಸ್ಪೃಶ್ಯತೆಗೆ ಅಥವಾ ತಾರತಮ್ಯಕ್ಕೆ ಒಳಗಾದವರು ಪಾಪದವರು ಆಗುತ್ತಾರೆ. ಯಾಕೆಂದರೆ ಇವರ ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯ ಇರುವುದಿಲ್ಲ. ಆದರೆ ಯಾರು ಅಸ್ಪೃಶ್ಯತೆ, ತಾರತಮ್ಯ ಆಚರಿಸುತ್ತಾರೋ ಅವರ ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯಗಳೇ ತುಂಬಿರುತ್ತವೆ. ಈ ನಿಜದ ಎದುರು ಅಸ್ಪೃಶ್ಯತೆ ತಾರತಮ್ಯ ಆಚರಿಸುವವರು ಪಾಪಿಷ್ಟರಾಗುತ್ತಾರೆ. "ಗುಲಾಮನನ್ನು ಪಳಗಿಸಲು ಹೆಣಗುವ ಮಾಲೀಕನ ಮನಸ್ಸಿನ ತುಂಬಾ ಗುಲಾಮತನ ತುಂಬಿರುತ್ತದೆ"– ಎಂಬ ಹೆಗಲ್‌ನ ನುಡಿಯ ನಿಜದಂತೆ. ನಾವು ನಮ್ಮ ಸಮಾಜವನ್ನು ನೋಡುವ ನೋಟಕ್ಕೆ ಈ ನಿಜದ ದರ್ಶನವಾದರೆ ಇದು ಸಂವಿಧಾನದ ಆಶಯಗಳತ್ತ ನಾವಿಟ್ಟ ಮೊದಲ ಹೆಜ್ಜೆಯಾಗುತ್ತದೆ.

ಆದರೆ ಈ ಪಾಪದವರೂ ಎಚ್ಚರದ ಸ್ಥಿತಿಯಲ್ಲಿ ಇಲ್ಲ. ಮಧ್ಯಮ ಜಾತಿಗೆ ಸೇರಿದ ನನ್ನ ಗೆಳೆಯನೊಬ್ಬ – "ಒಂದು ಚೋಟುದ್ದ ಬ್ರಾಹ್ಮಣ ಹುಡುಗ ಅವನು. ನಮ್ಮ ವಯಸ್ಸಾದ ಅಪ್ಪನಿಗೇನೆ 'ಏನಯ್ಯ ಗೌಡ, ಚೆನ್ನಾಗಿದ್ದೀಯಾ?' ಅಂತ ಏಕವಚನದಲ್ಲಿ ಕೇಳ್ತಾನಲ್ಲಯ್ಯ!" ಎಂದು ಕುಪಿತನಾಗಿ ಹೇಳಿದ. ನಾನು ಅವನಿಗೆ ಅಂದೆ – "ಸರಿಯಪ್ಪ, ನೀನು ಚಿಕ್ಕವನಾಗಿದ್ದಾಗ ನಮ್ಮ ಜಾತಿಯ ವಯಸ್ಸಾದವರಿಗೆ ಯಾವ ವಚನದಲ್ಲಿ ಕರೆಯುತ್ತಿದ್ದೆ?" ಎಂದು ಕೇಳಿದೆ. ಇಂಥವರಲ್ಲಿ ಸ್ವಾಭಿಮಾನದ ಎಚ್ಚರ ಅಂದರೆ ತನ್ನದು ಮಾತ್ರ ಆಗಿರುತ್ತದೆ, ಇನ್ನೊಂದರ ಪರಿವೆ ಇರುವುದಿಲ್ಲ. ಹಾಗೇ ದಲಿತರ ಮನಸ್ಥಿತಿಗೆ ಬಂದರೂ – ಉದಾಹರಣೆಗೆ ಮರಿಸ್ವಾಮಿಯವರು ಅಂತ, ಇವರು ಹಿಂದಿ ಅಧ್ಯಾಪಕರಾಗಿ ಕೊನೆಗೆ ಬೌದ್ಧಭಿಕ್ಕುವಾಗಿ ಇತ್ತೀಚೆಗೆ ನಿಧನರಾದರು. ಇವರು ಒಂದು ಕಡೆ ಬರೆಯುತ್ತಾರೆ – "ಚಿಕ್ಕವನಿದ್ದಾಗ ನಾನು ಅನುಭವಿಸುತ್ತಿದ್ದ ಅಸ್ಪೃಶ್ಯತೆಯ ಅವಮಾನಕ್ಕೆ ಜಗತ್ತು ಇರುವುದೇ ಹೀಗೆ ಅಂದುಕೊಂಡಿದ್ದೆ. ಯಾವಾಗ ಅಂಬೇಡ್ಕರ್ ಓದಿದೆನೊ ಆವಾಗಲೇ ನನಗೆ ಅಸ್ಪೃಶ್ಯತೆಯು ಅಸ್ಪೃಶ್ಯತೆ ಅನ್ನಿಸಿದ್ದು. ಆಗಲೇ ನನಗೆ ಅಸ್ಪೃಶ್ಯತೆಯ ಗಾಯವು ಗಾಯ ಅನ್ನಿಸಿದ್ದು" – ಎನ್ನುತ್ತಾರೆ. ಭಾರತದ ಬಹುತೇಕ ಸಮುದಾಯಗಳು ಹೀಗೇ ಇವೆ. ರಸಾಯನ ಶಾಸ್ತ್ರದಲ್ಲಿ ಬರುವ ಪರ್ಯಾಪ್ತ ದ್ರಾವಣ (Saturated solution)ದಂತೆ ಎಲ್ಲಾ ಜಾತಿಗಳು ತಂತಮ್ಮ ಕೊನೆ ಸ್ಥಿತಿ ತಲುಪಿ ಅಸ್ಪೃಶ್ಯತೆ ತಾರತಮ್ಯಗಳು ನಡೆದು ಬಂದ ಪದ್ಧತಿಗಳಾಗಿ ಎಚ್ಚರವಿಲ್ಲದೆ ತಮಗೆ ತಾವೇ ನಡೆದುಕೊಂಡು ಬರುತ್ತಿವೆ. ನಾವು ಅದೊರಳಗೇ ಸಂಪೂರ್ಣ ಮುಳುಗಿಹೋಗಿರುವುದರಿಂದ ಅದರ ಐಬನ್ನು ಅರಿವಿಗೆ ತಂದುಕೊಳ್ಳುವುದಕ್ಕೆ ಹರಸಾಹಸ ಪಡಬೇಕಿದೆ.

ಭಾರತದಲ್ಲಿ ರಾಜಕೀಯ ಆಡಳಿತದ ಕಾನೂನು ಕಟ್ಟಳೆಗಳೇ ಪರ್ಯಾಪ್ತ ಸ್ಥಿತಿ ಮುಟ್ಟಿದ ಪರಿಣಾಮವಾಗಿ ಆ ಕಾನೂನು ಕಟ್ಟಳೆಗಳೇ ಸಾಮಾಜಿಕವೂ ಧಾರ್ಮಿಕವೂ ಆರ್ಥಿಕವೂ ಸಾಂಸ್ಕೃತಿಕವೂ ಆಗಿ ಏಕೀಭವಿಸಿತು. ಅಸಮಾನತೆ ತಾರತಮ್ಯಗಳ ಬುನಾದಿಯ ಮೇಲೆ ಈ ಪರ್ಯಾಪ್ತ ಸ್ಥಿತಿಯನ್ನು ತಲಪಿರುವುದರಿಂದ ಇದು ನರಕವಾಗಿ ಬಿಟ್ಟಿದೆ. ಬದಲಾಗಿ ಈ ಪರ್ಯಾಪ್ತ ಸ್ಥಿತಿಗೆ ಪ್ರೀತಿ ಮತ್ತು ಸಮಾನತೆ ಬುನಾದಿಯಾಗಿದ್ದರೆ ಇದೇ ಭೂಮಿಯ ಮೇಲಿನ ಸ್ವರ್ಗವಾಗುತ್ತಿತ್ತು. ಪ್ರೀತಿ ಎಂಬ ಮಾತು ಗೊತ್ತಿಲ್ಲದೆ ಪ್ರೀತಿಯನ್ನೇ ಜೀವಿಸುತ್ತಿದ್ದರು.

ಈಗ ಭಾರತದಲ್ಲಿ ವರ್ತಮಾನದ ಸಂವಿಧಾನವೇನೊ ಪಾಪದವರನ್ನು ಮೇಲೆತ್ತಲು ಕೈಚಾಚಿದೆ. ಆದರೆ ಭೂತಕಾಲದ ಸಂವಿಧಾನ ಕಾಲೆಳೆಯುತ್ತಿದೆ. ಈ ಪಾಪದವರೂ ಎಚ್ಚರದಲ್ಲಿಲ್ಲ. ಸಂವಿಧಾನದ ಆಶಯಗಳ ಕಾಲೆಳೆಯುವ ಪಾಪಿಷ್ಟರಾದರೋ ಸಮಾಜದಲ್ಲಿ ಗಣ್ಯರೆನ್ನಿಸಿಕೊಂಡಿದ್ದಾರೆ. ಇವರ ವಂಶಸ್ಥರೇ ಇವರ ಪ್ರಭಾವದಲ್ಲಿರುವವರೇ ನಿರ್ಧರಿಸುವವರು ನಿರ್ವಹಿಸುವವರು ಆಗಿದ್ದಾರೆ. ಸಂವಿಧಾನದ ಆಸೆಗಳು ಈಡೇರುವುದಾದರೂ ಹೇಗೆ? ಬಸ್ಸು ರೈಲು ಕಾರಣಕ್ಕಾಗಿ ಅಕ್ಕಪಕ್ಕ ಕೂತಿದ್ದೇವೆ. ಹೊಟೇಲ್ ಕಾರಣಕ್ಕಾಗಿ ಸಹಪಂಕ್ತಿ ಭೋಜನ ಮಾಡಿದ್ದೇವೆ. ನೌಕರಿ ಕಾರಣಕ್ಕಾಗಿ ಒಟ್ಟಾಗಿ ಓಡಾಡಿದ್ದೇವೆ, ಅಲ್ಲಿ ಇಲ್ಲಿ ಮದುವೆಗಳೂ ಆಗಿವೆ. ಇಲ್ಲಿ ಆಗುತ್ತಿರುವ ಬದಲಾವಣೆಗಳು ಹೆಚ್ಚಾಗಿ ಬಹಿರಂಗ ಒತ್ತಡದವು. ಅಂತರಂಗ ಕತ್ತಲಲ್ಲೆ ಇದೆ.

ಏನೇನು ಮಾಡಬಹುದಿತ್ತು? ಮೊದಲ ಹೆಜ್ಜೆ

(44ನೇ ಪುಟಕ್ಕೆ)

ಕನ್ನಡದಲ್ಲಿ ಒಂದು ಪದ ಇದೆ – 'ಪಾಪ' ಅಂತ. ಇದನ್ನು ಪಾಪಕ್ಕೂ ಬಳಸುತ್ತಾರೆ, ಹಾಗೇ ಕರುಣೆಗೂ ಬಳಸುತ್ತಾರೆ. ಪಾಪಕ್ಕೆ ಬಳಸಿದರೆ ಪಾಪಿಷ್ಟ ಆಗುತ್ತಾನೆ. ಕರುಣೆಗೆ ಬಳಸಿದರೆ ಪಾಪದವನು ಆಗುತ್ತಾನೆ. ಪಾಪದವನು ಒಂದು ಪಟ್ಟು ಪತನಗೊಂಡವನಾಗಿದ್ದರೆ ಪಾಪಿಷ್ಟನು ನೂರು ಪಟ್ಟು ಪತನಗೊಂಡವನಾಗಿರುತ್ತಾನೆ. ಅಸ್ಪೃಶ್ಯತೆಗೆ ಅಥವಾ ತಾರತಮ್ಯಕ್ಕೆ ಒಳಗಾದವರು ಪಾಪದ ವರು ಆಗುತ್ತಾರೆ. ಯಾಕೆಂದರೆ ಇವರ ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯ ಇರುವುದಿಲ್ಲ. ಆದರೆ ಯಾರು ಅಸ್ಪೃಶ್ಯತೆ, ತಾರತಮ್ಯ ಆಚರಿಸುತ್ತಾರೋ ಅವರ ಮನೋಭೂಮಿಕೆಯಲ್ಲಿ ಅಸ್ಪೃಶ್ಯತೆ ತಾರತಮ್ಯಗಳೇ ತುಂಬಿರುತ್ತವೆ. ಈ ನಿಜದ ಎದುರು ಅಸ್ಪೃಶ್ಯತೆ ತಾರತಮ್ಯ ಆಚರಿಸುವವರು ಪಾಪಿಷ್ಟರಾಗುತ್ತಾರೆ. "ಗುಲಾಮನನ್ನು ಪಳಗಿಸಲು ಹೆಣಗುವ ಮಾಲೀಕನ ಮನಸ್ಸಿನ ತುಂಬಾ ಗುಲಾಮತನ ತುಂಬಿರುತ್ತದೆ" – ಎಂಬ ಹೆಗಲ್‌ನ ನುಡಿಯ ನಿಜದಂತೆ. ನಾವು ನಮ್ಮ ಸಮಾಜವನ್ನು ನೋಡುವ ನೋಟಕ್ಕೆ ಈ ನಿಜದ ದರ್ಶನವಾದರೆ ಇದು ಸಂವಿಧಾನದ ಆಶಯಗಳತ್ತ ನಾವಿಟ್ಟ ಮೊದಲ ಹೆಜ್ಜೆಯಾಗುತ್ತದೆ.

ಲಕ್ಕಿ ಕಸ್ಟಮರ್ ಕಾರ್ಡ್

○ ಪ್ರಶಾಂತ್ ಹುಲ್ಕೋಡ್

ಕಥೆ



ಏಕತಾನತೆಯ ಮುಂಜಾವೊಂದು ಆಗಷ್ಟೆ ತೆರೆದುಕೊಳ್ಳುತ್ತಿತ್ತು. ನೆನ್ನೆ ಬಿದ್ದ ಮಳೆಗೆ ಶಿವಮೊಗ್ಗೆಯ ಬಿ.ಹೆಚ್ ರಸ್ತೆಯ ಧೂಳು ಕೊಚ್ಚಿ ಹೋಗಿ ಸಪಾಟಾಗಿರುವಂತೆ ಕಾಣುತ್ತಿತ್ತು. ಕೈ ಗಡಿಯಾರ ನೋಡಿಕೊಂಡ ಆಕಾಶ್, 'ಇನ್ನೊಂದು ಗಂಟೆಯ ಒಳಗೆ ಅಲ್ಲಿರಬೇಕು' ಅಂದುಕೊಂಡು ಸರಸರನೆ ಬಸ್ ಸ್ಟ್ಯಾಂಡ್ ಕಡೆ ಹೆಜ್ಜೆ ಹಾಕಿದನು.

ಜೇನುಗೂಡಿನಂತೆ ನಿಲ್ದಾಣದ ಒಳಗೂ ಹೊರಗೂ ಓಡಾಡುತ್ತಿದ್ದ ಬಸ್ಸುಗಳ ಫಲಕವನ್ನೆ ನೋಡುತ್ತಿದ್ದ ಅವನು 'ಕೊಂಚ ಬೇಗ ಏಳಬೇಕಿತ್ತು' ಎಂದಕೊಂಡನು. ಅಲ್ಲಿಯೆ ಪಕ್ಕದಲ್ಲಿದ್ದ ಟೀ ಅಂಗಡಿಗೆ ಹೋಗಿ ಒಂದು ಬನ್ನು, ಟೀ ಹೇಳಿ ಹರಿದಾಡುತ್ತಿದ್ದ ಬಸ್ಸುಗಳ ಫಲಕವನ್ನೆ ನೋಡುತ್ತ ನಿಂತನು. 'ಶಿವಮೊಗ್ಗದಿಂದ ಶಿಕಾರಿಪುರದ ಬಸ್ಸು, ನಲವತ್ತೆ ನಿಮಿಷದ ಹಾದಿ, ಬಲಭಾಗಕ್ಕೆ ನಿಲ್ದಾಣ. ಸಿ ಮಾಡಿ ಅಂದರೆ ಆರೇಳು ರೂಪಾಯಿ ತೆಗೆದು ಕೊಳ್ಳಬಹುದು' ಎಂದು ಹೋರಾಟದ ಗೆಳೆಯನೊಬ್ಬ ಹೇಳಿ ಹೊಗಿದ್ದು ನಿನ್ನೆ. ಆಗ ಆಕಾಶನ ಜೇಬಲ್ಲಿದ್ದದ್ದು ಕೇವಲ ಹತ್ತು ರೂಪಾಯಿ. ಆದರೂ 'ಅವರು' ಸಿಗುತ್ತರಾದ್ದರಿಂದ ತಪ್ಪಿಸುವಂತಿಲ್ಲ. ದುಡ್ಡಿಗೇನು ಮಾಡುವುದು, ಆಗ ಗೆಳೆಯ ಶಿವು ನೆನಪಾದ.

ಆಕಾಶ್ ಮನೆಬಿಟ್ಟು, ಓದು ಬಿಟ್ಟು ಚಳುವಳಿಯ ಗೀಳು ಹತ್ತಿಸಿಕೊಂಡು ಬದುಕು ಎದುರಾದಾಗ ಬೆಂಗಳೂರು ಸೇರಿಕೊಂಡಿದ್ದ. ಮಲೆನಾಡಿನಲ್ಲಿ, ಅದರಲ್ಲೂ ತನ್ನ ಊರಿನ ಸರಹದ್ದುಗಳಲ್ಲಿ ನಕ್ಸಲೀಯರ ಇರುವಿಕೆ ಬಹಿರಂಗವಾದ ನಂತರ ಬೆಂಗಳೂರಿನ ಬದುಕು ಯಾಂತ್ರಿಕವೆನಿಸಿ, ಶಿವಮೊಗ್ಗ ಕರೆದಂತಾಗಿ, ಇಲ್ಲಿಗೆ ಬಂದು ಸ್ಥಳೀಯ ಪತ್ರಿಕೆಯೊಂದನ್ನು ಸೇರಿಕೊಂಡಿದ್ದನು. ಆಗ ಪರಿಚಯವಾದವರಲ್ಲಿ ಶಿವು ಕೂಡ ಒಬ್ಬ. ಬೆಳಗ್ಗೆಯೆಲ್ಲ ಸೈಕಲ್ಲು ತುಳಿದು ಪತ್ರಿಕಾಗೊಷ್ಠಿ, ಕಾರ್ಯಕ್ರಮ ಅಂತ ಓಡಾಡಿ ಸಂಜೆ ಪತ್ರಿಕೆ ಪ್ರಿಂಟಿಗೆ ಹೋಗಿತ್ತಲೆ ಹೊಟ್ಟೆಗೆ ಊಟ ಬೀಳುತ್ತಿದ್ದ ದಿನಗಳು. ರಾತ್ರಿ ಆಫೀಸಿನಲ್ಲಿ ಉಳಿಯುತಿದ್ದ ಆಕಾಶ್ ಜೊತೆ ಶಿವು ಬಂದು ಸೇರಿಕೊಳ್ಳುವ ಹೊತ್ತಿಗೆ ರಾತ್ರಿಯಾಗಿರುತ್ತಿತ್ತು. ಇಬ್ಬರೂ ಸಾಹಿತ್ಯ ಅದೂ ಇದೂ ಹರಟಿ, ಪತ್ರಿಕೆಯ ಕಚೇರಿಯಲ್ಲಿದ್ದ ಹಳೆಯ ಪತ್ರಿಕೆಗಳ ಬಂಡಲ್ ಬಿಚ್ಚಿ ಹಳೆಯ ದಿನಪತ್ರಿಕೆಗಳನ್ನು ಇತಿಹಾಸದಂತೆ ಓದುತ್ತಿದ್ದರು. ಅಪರಾತ್ರಿಯಲ್ಲಿ ಎದಿರಿನ ಬಸ್‌ನಿಲ್ದಾಣದಲ್ಲಿ ಬೈಟೂ ಟೀ ಕುಡಿದು ಎರಡೇ ಎರಡು ಧಂ ಸಿಗರೇಟು ಎಳೆಯುವ ಹೊತ್ತಿಗೆ ಜಾವ ಕಾಲಿಡುತ್ತಲಿದ್ದ ಸಮಯ.

ಅಂದು ಶಿವು ಸಿಗುತ್ತಲೆ ಆಕಾಶ 'ನಾನು ನಾಳೆ ಒಬ್ಬರನ್ನು ಬೇಟಿಯಾಗಬೇಕು. ಹತ್ತು ರೂಪಾಯಿದ್ದರೆ ಕೊಟ್ಟಿರು. ಈ ತಿಂಗಳಾದರೂ ಸಂಬಳ ಕೊಟ್ಟರೆ ವಾಪಸ್ಸು ಕೊಡುತ್ತೇನೆ' ಅಂದಿದ್ದ. ಅವನಿಗೂ ಇದು ಮಾಮುಲಾಗಿರುವುದರಿಂದ ಎದುರು ಮಾತನಾಡದೆ ದುಡ್ಡು ತೆಗೆದು ಕೊಟ್ಟಿದ್ದ. ಶಿಕಾರಿಪುರದ ಬಸ್ಸಿನ ಬಲಭಾಗದ ಸೀಟು ಹಿಡಿದು ಕುಳಿತ ಆಕಾಶನಿಗೆ ಇವೆಲ್ಲ

ನೆನಪಾದವು.

ಆಕಾಶ ಸ್ಥಳ ತಲುಪುವ್ವ ಹೊತ್ತಿಗೆ ಹತ್ತೇ ಹತ್ತು ನಿಮಿಷ ತಡವಾಗಿತ್ತು. ಬಸ್ಸು ಹೊಂಡಗಳನ್ನು ಹಾದು, ಮಾರಿಗೊಂದು ಸ್ಟಾಪು ಕೊಡದಿದ್ದರೆ ಬೇಗನೆ ತಲುಪುತ್ತಿದ್ದನೇನೊ?, ಅವತ್ತು ಆ ಊರಲ್ಲಿ ಸಂತೆ. ಬಸ್ ನಿಲ್ದಾಣದ ಎರಡೂ ಬದಿಗೆ ವ್ಯಾಪಾರಸ್ಥರು, ರೈತರು ತಾವು ತಂದಿದ್ದ ತರಕಾರಿ ದವಸ ಧಾನ್ಯಗಳನ್ನು ಹರಡಿಕೊಂಡು 'ಸಂತೆ ಮಾಡುವವರಿಗಾಗಿ' ಕಾಯುತ್ತಿದ್ದರು. ಅಲ್ಲಿದ್ದ ತರಹೇವಾರಿ ಜನರಲ್ಲಿ 'ಅವರನ್ನು' ಹುಡುಕುವುದು ಆಕಾಶನಿಗೆ –ಹೇಗೆಂಬುದು ಗೊತ್ತಾಗಲಿಲ್ಲ.

ಒಮ್ಮೆ 'ನಕ್ಸಲೀಯರು ಅಂದರೆ ಯಾರು? ಎಂದು ಹಿರಿಯರೊಬ್ಬರನ್ನು ಕೇಳಿದ್ದ. ಸಮಾಜವಾದ, ಲೋಹಿಯ, ಸಪ್ತಕ್ರಾಂತಿ ಅಂತೆಲ್ಲ ಹೊಸ ಪ್ರಪಂಚವನ್ನು ಇವನಿಗೆ ಪರಿಚಯಿಸಿದವರು ಅವರೆ. 'ಸಮಾಜದ ಬದಲಾವಣೆ ಹಿಂಸೆ ಇಂದಲೆ ಮಾತ್ರ ಸಾಧ್ಯವೆಂದು ನಂಬಿದವರು' ಎಂದು ಉತ್ತರಿಸಿದ್ದರು. ಆಕಾಶನಿಗೆ ಅವತ್ತು ಹಿಂಸೆ–ಪ್ರತಿಹಿಂಸೆ ಅನ್ನುವ ವಿಚಾರಗಳು ತಲೆಗೆ ಹೋಗದಿದ್ದರು ತರ್ಕಕ್ಕೆ ನಿಲುಕದ ಆಸಕ್ತಿಯೊಂದು ಬೆಳೆದಿತ್ತು. ನಕ್ಸಲೀಯರ ತರಹ ಕಾಡಲ್ಲಿ ಜೀವನ ಸಾಗಿಸುವುದು ಮಾತ್ರ ನನ್ನಿಂದ ಸಾಧ್ಯವಿಲ್ಲ ಅಂದುಕೊಂಡಿದ್ದರೂ ಒಮ್ಮೆಯಾದರು ಅವರನ್ನು ಬೇಟಿಯಾಗಬೇಕೆಂಬ ವಿಚಾರ ಮಾತ್ರ ತಲೆಯಿಂದ ಹೋಗಿರಲಿಲ್ಲ.

ಬೆಂಗಳೂರು ಬಿಟ್ಟು ಹೊರಟಾಗ ಅವನಲ್ಲಿ ಇಷ್ಟುಮಾತ್ರದ ಪರಿಕಲ್ಪನೆ. ಇದೇ ಸಂದರ್ಭದಲ್ಲಿ ರಾಯಚೂರಿನ ನಕ್ಸಲೀಯ ಹೋರಾಟಗಳಲ್ಲಿ ಭಾಗವಹಿಸಿ ಆಂಧ್ರ ಜೈಲಿನಲ್ಲಿ ನಾಲ್ಕಾರು ವರ್ಷಗಳಿದ್ದು ಹೊರಬಂದಿದ್ದ ಮನು ಬಿಡುಗಡೆಯಾಗಿದ್ದರು. ಬಂಧನದಲ್ಲಿರುವಾಗಲೇ ಕೇಸೊಂದರ ಮೇಲೆ ಶಿವಮೊಗ್ಗದ ನ್ಯಾಯಾಲಯಕ್ಕೆ ಬಂದಿದ್ದ ಮನು ಪೊಲೀಸರ ಪಹರೆಯಿರುವಾಗಲೆ 'ನಕ್ಸಲ್‌ಬರಿ ಜಿಂದಾಬಾದ್' ಎಂದು ಘೋಷಣೆ ಹಾಕಿ ದೊಡ್ಡ ಸುದ್ಧಿಯಾಗಿದ್ದರು. ಆದರೆ ಅವತ್ತು ರಜೆಯಲ್ಲಿದ್ದ ಆಕಾಶನಿಗೆ ಅವರ ಫೋಟೊ ತೆಗೆಯುವ ಅವಕಾಶ ಕೈತಪ್ಪಿತ್ತು.

ಹಾಗಾಗಿ ಮನು ಎಂಬ ವ್ಯಕ್ತಿಯನ್ನು ಬೇಟಿಯಾಗಬೇಕೆಂದು ಎಲ್ಲರ ಬಳಿಯಲ್ಲೂ ಹೇಳಿಕೊಂಡಿದ್ದನು. ಅದರೆ ಫಲವೆಂಬಂತೆ ಇವತ್ತಿನ ಬೇಟಿ ನಿಗಧಿಯಾಗಿತ್ತು. ಬಹುದಿನಗಳ ಕನಸೊಂದು ಈಡೇರುವ ಕೊನೆಯ ಕ್ಷಣದಾಗುವ ಭಾವವೇಶಕ್ಕೆ ಆಕಾಶ್ ಒಳಗಾದದ್ದು ಹೊರನೋಟಕ್ಕೆ ಕಾಣುತ್ತಿತ್ತು. ನೆನಪುಗಳ ಪದರದಲ್ಲಿ ಹೊರಳಾಡುತ್ತಿದ್ದ ಅವನ ಹೆಗಲ ಮೇಲೆ ಯಾರೊ ಕೈ ಇಟ್ಟಂತಾಗಿಯಿತು. ಪತ್ರಿಕೆಯಲ್ಲಿ ನೋಡಿದ ಮಾಸಲು ಮುಖ ಕಣ್ಣೆದುರಿಗೆ ನಿಂತಿತ್ತು. ಕೈ ಚಾಚಿ ಪರಿಚಯಿಸಿಕೊಳ್ಳುವ ಮುಂಚೆ ಅವರೆ 'ಹೇಗಿದ್ದೀರ ಆಕಾಶ್, ಕೆಲಸ ಹೇಗಿದೆ, ಮನೆಗೆ ಹೋಗಲಿಲ್ಲವ' ಎಂದು ಪೂರ್ಣ ಮಾಹಿತಿ ಇದ್ದವರಂತೆ ಮಾತನಾಡಿದ್ದರು.

ಹಾಗೆ ಆರಂಭವಾದ ಮನುವಿನ ಗೆಳೆತನ, ನಂತರ ಅವರು ಶಿವಮೊಗ್ಗದ ಸಂಜೆ ಪತ್ರಿಕೆಯೊಂದರಲ್ಲಿ ಪೂರ್ಣವಧಿ ಪತ್ರಕರ್ತರಾಗಿ ಸೇರಿಕೊಂಡ ಮೇಲೆ ಇನ್ನೂ ಗಾಢವಾಯಿತು. ಮನು ಅವರ ಪತ್ರಿಕೆಯಲ್ಲಿ ತಮ್ಮ ಜೈಲಿನ ದಿನಗಳ ಕುರಿತು ಬರೆಯಲಾರಂಭಿಸಿದರು. ಆ ಕುರಿತು ದಿನ ಚರ್ಚೆ ಮಾಡುತ್ತಾ ಮನು ಒಳಗಿದ್ದ ಒಬ್ಬ ಉತ್ತಮ ಬರಹಗಾರನ ಕುರಿತು ಆಕಾಶ್ ಬೆರಗುಗೊಳ್ಳುತ್ತಿದ್ದ. ಇಷ್ಟಾದರೂ ಯಾವತ್ತೂ ಮನು ನಕ್ಸಲೀಯರ ಕುರಿತು ನೇರವಾಗಿ ಮಾತನಾಡಿರಲಿಲ್ಲ.

ಒಮ್ಮೆ ಮನು ಅಣ್ಣನ ಮಗಳ ನಾಮಕರಣಕ್ಕೆ ಹೋಗಲು ಆಕಾಶನಿಗೂ ಕರೆ ಬಂತು. ನಕ್ಸಲೀಯರಿಗೂ ಮನೆ, ಸಂಬಂಧಗಳು ಇರುತ್ತವಾ ಅಂತ ಮನಸ್ಸಿನಲ್ಲೇ ಆಕಾಶ ನಕ್ಕಿದ್ದನು. ನಾಮಕರಣ ಮುಗಿಸಿ ಬರುವಾಗ ಮನುವಿನ ಬಳಿಯಲ್ಲೇ ವಿಷಯ ಪ್ರಸ್ಥಾಪಿಸಿದನು. ಆದರೆ ಅತ್ಯಂತ ಸಹಜವೆಂದಂತೆ ಪ್ರತಿಕ್ರಿಯಿಸಿದ ಮನು "ಸಮಾಜದಲ್ಲಿ ನಿರಂತರ ಶೋಷಣೆ ನಡೆಯಿತ್ತಿದೆ. ಇದನ್ನು ಬದಲಾಯಿಸಲು ಕೇವಲ ಕಾನೂನುಬದ್ಧ ಹೋರಾಟಗಳಿಂದ ಸಾಧ್ಯವಿಲ್ಲ. ಬಂದೂಕು ಆತ್ಮರಕ್ಷಣೆಗಾದರೂ ಹಿಡಿಯಲೆ ಬೇಕು" ಎಂದಿದ್ದರೂ. ಆಕಾಶನಿಗೆ ಬರಗೂರರ 'ಶಬರಿ' ನೆನಪಾಗಿದ್ದಳು. ತನ್ನ ಗುರುಗಳು ಹೇಳಿಕೊಟ್ಟಿದ್ದ ಸಮಾಜವಾದದ ನೆನಪೂ ಆಗಿ ಮತ್ತೊಂದು ಪ್ರಶ್ನೆ ಹಾಕಿದ್ದನು ಆಕಾಶ್, 'ಹಿಂಸೆ ಸರಿನಾ?' ಅಂತ. ಮನು ನಕ್ಕು 'ಇಲ್ಲಿ ಹಿಂಸೆ ಪ್ರತಿ–ಹಿಂಸೆ ಎಂಬುದು ಬುದ್ಧಿಜೀವಿಗಳ ಬೂಟಾಟಿಕೆ. ಪ್ರತಿದಿನ ಸರ್ಕಾರ ಜನರ ಮೇಲೆ ನಡೆಸುತ್ತಿರುವುದು ಹೇಗೆ ಹಿಂಸೆ ಅಲ್ಲವೊ ಹಾಗೆ ಇದು ಕೂಡ' ಎಂದು ಸುಮ್ಮನಾಗಿದ್ದರೂ. ಬಸ್ಸು ಇಳಿಯುವ ಮುನ್ನ 'ಹಾಗಾದರೆ! ಯಾವತ್ತು ಕ್ರಾಂತಿ? ಎಂದು ಕೇಳಿ, ಕೊನೆಗೆ ಕೇಳಬಾರದಾಗಿತ್ತೇನೊ ಅಂತ ಹಲ್ಲುಕಚ್ಚಿಕೊಂಡನು. ಮನು 'ನಾಳೆಯಂತೂ ಸಾಧ್ಯವಿಲ್ಲ' ಅಂತ ನಕ್ಕು ಹೊರಟು ಹೋಗಿದ್ದರು.

ಮನು ಬದುಕುತ್ತಿದ್ದ ರೀತಿಯೆ ಹಾಗಿತ್ತು, ಇನ್ನಷ್ಟು ಸರಳ ಸಾಧ್ಯವಿಲ್ಲವೆಂಬಷ್ಟು, ಇತರೆ ಹೋರಾಟಗಾರಂತೆ ತಮಗೊಂದು ಪ್ರತ್ಯೇಕ ಮನೆ, ಬದುಕು ಇರಬೇಕೆಂದು

ಒಮ್ಮೆ ಮನು ಅಣ್ಣನ ಮಗಳ ನಾಮಕರಣಕ್ಕೆ ಹೋಗಲು ಆಕಾಶನಿಗೂ ಕರೆ ಬಂತು. ನಕ್ಸಲೀಯರಿಗೂ ಮನೆ, ಸಂಬಂಧಗಳು ಇರುತ್ತವಾ ಅಂತ ಮನಸ್ಸಿನಲ್ಲೇ ಆಕಾಶ ನಕ್ಕಿದ್ದನು. ನಾಮಕರಣ ಮುಗಿಸಿ ಬರುವಾಗ ಮನುವಿನ ಬಳಿಯಲ್ಲೇ ವಿಷಯ ಪ್ರಸ್ಥಾಪಿಸಿದನು. ಆದರೆ ಅತ್ಯಂತ ಸಹಜವೆಂದಂತೆ ಪ್ರತಿಕ್ರಿಯಿಸಿದ ಮನು "ಸಮಾಜದಲ್ಲಿ ನಿರಂತರ ಶೋಷಣೆ ನಡೆಯಿತ್ತಿದೆ. ಇದನ್ನು ಬದಲಾಯಿಸಲು ಕೇವಲ ಕಾನೂನುಬದ್ದ ಹೋರಾಟಗ ಳಿಂದ ಸಾಧ್ಯವಿಲ್ಲ. ಬಂದೂಕು ಆತ್ಮರಕ್ಷಣೆಗಾದರೂ ಹಿಡಿಯಲೆ ಬೇಕು" ಎಂದಿದ್ದರೂ. ಆಕಾಶನಿಗೆ ಬರಗೂರರ 'ಶಬರಿ' ನೆನಪಾಗಿದ್ದಳು. ತನ್ನ ಗುರುಗಳು ಹೇಳಿಕೊಟ್ಟಿದ್ದ ಸಮಾಜವಾದದ ನೆನಪೂ ಆಗಿ ಮತ್ತೊಂದು ಪ್ರಶ್ನೆ ಹಾಕಿದ್ದನು ಆಕಾಶ್, 'ಹಿಂಸೆ ಸರಿನಾ?' ಅಂತ. ಮನು ನಕ್ಕು 'ಇಲ್ಲಿ ಹಿಂಸೆ ಪ್ರತಿ–ಹಿಂಸೆ ಎಂಬುದು ಬುದ್ಧಿಜೀವಿಗಳ ಬೂಟಾಟಿಕೆ.

ಅಂತರಾಳದಲ್ಲೂ ಬಯಸುತ್ತಿರಲಿಲ್ಲ. ಒಮ್ಮೆ ಸಂಜೆ ಪತ್ರಿಕೆ ಪ್ರಿಂಟಿಗೆ ಹೋದ ನಂತರ ಮನು ಆಕಾಶನಿಗೆ 'ಪಕ್ಕದ ಹಳ್ಳಿಗೆ ಹೋಗಿ ಬರೋಣವಾ' ಎಂದರು. ಸರಿ ಎಂದ ಕೂಡಲೇ ಇಬ್ಬರೂ ಸೈಕಲ್ಲು ಏರಿ ರೈಲ್ವೇ ಗೇಟು ಹಾದು ಪಕ್ಕದ ರಸ್ತೆಯ ಮೇಲಿದ್ದರು. ಮೂರು ಕಿಲೊಮೀಟರ್ ದೂರ ಸೈಕಲ್ಲು ತುಳಿದ ಮೇಲೆ ಸಾಲು ಮನೆಗಳ ಹಳ್ಳಿಯೊಂದು ಎದುರಾಯಿತು. ಬೀದಿಯ ಕೊನೆಯಲ್ಲಿ ಬೀಗ ಹಾಕಿಕೊಂಡಿದ್ದ ಮನೆಯ ಎದುರಿಗೆ ಮನು ಸೈಕಲ್ಲು ನಿಲ್ಲಿಸಿ 'ಲಕ್ಷ್ಮಕ್ಕ ಕೆಲಸಕ್ಕೆ ಹೋಗಿರಬೇಕು' ಎಂದು ಮನೆ ಎದುರಿನ ಕಟ್ಟೆಯ ಮೇಲಿನ ಧೂಳು ಹೊಡೆದುಕೊಂಡು ಕುಳಿತರು. ಆಕಾಶನಿಗೆ ಆಶ್ಚರ್ಯ. 'ಲಕ್ಷ್ಮಕ್ಕ ಯಾವಾಗಿಂದ ಪರಿಚಯ' ಎಂದ. ನಕ್ಸಲೀಯರಾಗಿ ಐದಾರು ವರ್ಷ ಜೈಲಲ್ಲಿ ಕಳೆದ ಮೇಲೂ ಮನುವಿಗೆ ಲಕ್ಷಮಕ್ಕನಂತವರೊಡನೆ ಒಡನಾಟವಿರುವ ಸಾಧ್ಯತೆಯೆ ಅವನಿಗೆ ಸೋಜಿಗವೆನಿಸಿತ್ತು.

'ಈ ಹಳ್ಳಿಯಲ್ಲಿಯ ಜನ ಅಭಿವೃದ್ಧಿ ಯೋಜನೆಗಳಿಗೆ ತಮ್ಮ ಒಕ್ಕಲುತನವನ್ನೆ ತ್ಯಾಗ ಮಾಡಿ ಇಂತಹ ಮನೆಗಳಲ್ಲಿ ಬದುಕು ನೀಗಿಕೊಳ್ಳುತ್ತಿದ್ದಾರೆ. ಕೆಲವೆ ಜನರ ಐಶಾರಾಮಿ ಜೀವನವನ್ನು ಬಡ ಜನರ ಸಮಾಧಿಯ ಮೇಲೆ ನಿರ್ಮಿಸುತ್ತಿರುವ ದೇಶ ನಮ್ಮದು' ಎನ್ನುವಾಗ ಮನು ಭಾವುಕರಾಗಿರುವುದು ಅವರ ಮುಖದಲ್ಲಿ ಕಾಣುತಿತ್ತು. ಪಕ್ಕದಲ್ಲಿ ಕುಳಿತಿದ್ದ ಆಕಾಶ ಎದುರಿಗೆ ಮುಳುಗುತಿದ್ದ ಸೂರ್ಯನ ಕೆಂಬಣ್ಣ ಕಣ್ತುಂಬಿಕೊಳ್ಳುತಿದ್ದ.

ಮಾಸಲು ಸೀರೆ, ದಣಿದ ದೇಹವನ್ನು ಹೊತ್ತು ಬಂಧ ಲಕ್ಷ್ಮಕ್ಕ ಮನುವಿನ ಕಂಡೊಡನೆ ಉತ್ಸಾಹದ ಚಿಲುಮೆಯಾದರು. ಐವತ್ತರ ಆಸುಪಾಸಿನ ಲಕ್ಷ್ಮಕ್ಕನ ಮಕ್ಕಳು ಇಳಿವಯಸ್ಸಿನಲ್ಲಿ ದೂರ ಸರಿದಿದ್ದರು. 'ಮನು ಯಾವಾಗ ಬಂದೆ ಮಗನೆ' ಎಂದು ಕಣ್ಣೀರು ಹಾಕಿದರು. ಪಕ್ಕದಲ್ಲಿದ್ದ ಆಕಾಶನನ್ನು ನೋಡಿ 'ಹೊಸದಾಗಿ ಸಂಘಟನೆ ಸೇರಿದವರ' ಎಂದರು. 'ಇಲ್ಲ ನನ್ನ ಜೊತೆ ಪತ್ರಿಕೆಯಲ್ಲಿ ಕೆಲಸ ಮಾಡುತ್ತಾರೆ' ಎಂದ ಮನು ಲಕ್ಷ್ಮಕ್ಕರಿಂದ ಬೀಗದ ಕೈ ತೆಗೆದುಕೊಂಡು ತಮ್ಮದೆ ಮನೆ ಎನ್ನುವಂತೆ ಮನೆಯ ಬಾಗಿಲು ತೆರೆದರು.

ಅವತ್ತಿಂದ ಆಕಾಶನಿಗೆ ಮನು ಮತ್ತಷ್ಟು ಒಗಟಾಗಿ ಕಾಣಲಾರಂಬಿಸಿದರು. ಒಂದೆಡೆ ಬದಲಾವಣೆಗೆ ತುಡಿಯುವ ಅವರ ಮನ, ಬದುಕಿನ ಸರಳತೆ, ಒಡನಾಟಗಳು ಇವನಲ್ಲು ಬದಲಾವಣೆಗೆ ಕಾರಣವಾಗಿದ್ದವು. 'ಸಂಬಧಗಳು ಕೇವಲ ಭಾವನಾತ್ಮಕ ನೆಲೆಯಲ್ಲಿ ಇರಲು ಸಾಧ್ಯವಿಲ್ಲ. ಆಳದಲ್ಲಿ ರಾಜಕೀಯವಾದ ಬಾಂಧವ್ಯ ಬೆಳೆಯದಿದ್ದರೆ ಯಾವ ಸಂಬಧಗಳು ಹೆಚ್ಚು ದಿನ ಉಳಿಯುವುದಿಲ್ಲ' ಎಂದು ಮನು ಆಗಾಗ ಹೇಳುತಿದ್ದ ಮಾತುಗಳು ಆಕಾಶನಿಗೆ ಅರ್ಥವಾಗಿರಲಿಲ್ಲ. ಅವತ್ತು ರಾತ್ರಿ ಇಡೀ ಲಕ್ಷ್ಮಕ್ಕರ ಮನೆಯಲ್ಲಿ ಕಳೆದು ಬೆಳಗ್ಗೆ ಹೊರಟಾಗ ಹತ್ತಿರದವರೊಬ್ಬರನ್ನು ಅಗಲುವ ದುಃಖ ಎಲ್ಲರಲ್ಲೂ

(41ನೇ ಪುಟಕ್ಕೆ)

ಮೂಲಭೂತವಾದಿಗಳೂ... ಹುಸೇನ್–ತಸ್ಲಿಮಾಗಳೂ...

ನಾ ದಿವಾಕರ

ಮಂಗಳೂರು, ಮೈಸೂರು, ಕರಾವಳಿ ಪ್ರದೇಶಗಳಲ್ಲಿ ಸಂಭವಿಸಿದ ಕೋಮು ಸಂಘರ್ಷಗಳ ಕಾವು ಆರುವ ಮುನ್ನವೇ ಕರ್ನಾಟಕದಲ್ಲಿ ಮತ್ತೊಮ್ಮೆ ಕೋಮು ದಳ್ಳುರಿ ಹೊತ್ತಿಕೊಂಡಿದೆ. ಆದರೆ ಈ ಪ್ರಕ್ಷುಬ್ಧತೆಗೆ ಕಾರಣ ಚರ್ಚುಗಳ ಧ್ವಂಸವಲ್ಲ, ಹಂದಿಯ ತಲೆಯೂ ಅಲ್ಲ. ನೆರೆ ರಾಷ್ಟ್ರ ಬಾಂಗ್ಲಾದೇಶದ ಲೇಖಕಿ ತಸ್ಲಿಮ ನಜರೀನ್ ಎಂದೋ ಬರೆದಿದ್ದ ಲೇಖನವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಕಟಿಸಿದ ಕನ್ನಡದ ಪ್ರಸಿದ್ಧ ಪತ್ರಿಕೆಯ ಪ್ರಮಾದವೇ(?) ಪ್ರಸ್ತುತ ಪ್ರಕ್ಷುಬ್ಧತೆಗೆ ಕಾರಣ ಎಂದು ಹೇಳಲಾಗುತ್ತಿದೆ. ಪತ್ರಿಕೆಯ ಪ್ರಮಾದವಾದರೂ ಏನು? ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ವಿಷಯವನ್ನು ಪ್ರಕಟಿಸಿದ್ದೇ? ಈ ಪ್ರಶ್ನೆಗಳಿಗೇ ಉತ್ತರ ಹುಡುಕುತ್ತಾ ಹೋದರೆ ಸಮಸ್ಯೆ ಬಗೆಹರಿಯುವುದೇ ಇಲ್ಲ.

ಭಾರತದಿಂದ ಹೊರದೂಡಲ್ಪಟ್ಟ ಬಾಂಗ್ಲಾ ದೇಶದ ಒಬ್ಬ ಲೇಖಕಿ ತಂಗಲು ಸೂರಿಲ್ಲದೆ ಆಸರೆಯನ್ನು ಬೇಡುತ್ತಾ ದೇಶವಿದೇಶಗಳನ್ನು ಅಲೆಯುತ್ತಾಳೆ. ಭಾರತೀಯ ಸಂಜಾತ ಪ್ರಸಿದ್ಧ ಕಾದಂಬರಿಕಾರ ವಿಶ್ವದ ಯಾವ ದೇಶದಲ್ಲೂ ಸ್ಥಿರವಾಗಿ ನೆಲೆಸಲಾಗದೆ ಅಂಡಲೆಯುತ್ತಿದ್ದಾನೆ. ಕಳೆದ ಶತಮಾನದಲ್ಲಿ ಮನುಕುಲ ಕಂಡಿರುವ ಅತ್ಯದ್ಭುತ ಚಿತ್ರಕಾರ, ಭಾರತೀಯ ಕಲಾವಿದನೊಬ್ಬ ತನ್ನ ಸ್ವದೇಶದಲ್ಲಿ ನೆಲೆಸಲಾಗದೆ ಬೇರೊಂದು ದೇಶದ ಪೌರತ್ವ ಪಡೆಯುತ್ತಾನೆ. ತನ್ನ ರಾಷ್ಟ್ರೀಯ ಅಸ್ಮಿತೆಯನ್ನು ಪ್ರದರ್ಶಿಸಿದರೆ ಓರ್ವ ಕ್ರಿಕೆಟ್ ಪಟು, ಸಿನಿಮಾ ತಾರೆ ದೇಶದ್ರೋಹಿಗಳಾಗುತ್ತಾರೆ, ಆಕ್ರಮಣ ಎದುರಿಸುತ್ತಾರೆ. ವಿದ್ಯಾರ್ಥಿ ದೆಸೆಯಲ್ಲೇ ಉತ್ತಮ ಕಲಾಕಾರನಾಗುವ ಕನಸುಗಳನ್ನು ಹೊತ್ತ ತರುಣನೊಬ್ಬನ ಚಿತ್ರಕಲೆಯನ್ನು ಪ್ರದರ್ಶಿಸಿದ್ದಕ್ಕೆ ವಿಶ್ವವಿದ್ಯಾಲಯದ ಡೀನ್ ಒಬ್ಬರನ್ನು ಅಮಾನತು ಮಾಡಲಾಗುತ್ತದೆ. ಒಂದು ಸಮುದಾಯದ ಜನತೆಯ ಭಾವನೆಗಳನ್ನು ಘಾಸಿಗೊಳಿಸುತ್ತದೆ ಎಂಬ ಕಾರಣಕ್ಕೆ ಕೃತಿಗಳನ್ನು ಬಹಿಷ್ಕರಿಸಲಾಗುತ್ತದೆ. ಈ ಘಟನೆಗಳನ್ನು ಮೆಲುಕು ಹಾಕಿದರೆ ಯಾವುದೋ ನಿರಂಕುಶ ಪ್ರಭುತ್ವದ ರಾಷ್ಟ್ರವೊಂದರಲ್ಲಿ ಅಥವಾ ಪ್ರಜಾತಂತ್ರದ ಅರಿವೇ ಇಲ್ಲದ ಸಮಾಜದಲ್ಲಿ ಸಂಭವಿಸುತ್ತಿದೆಯೇನೋ ಎನಿಸುತ್ತದೆ. ಅಥವಾ ವಸಾಹತು ಕಾಲದ ಘಟನೆಗಳೇನೋ ಎನಿಸುವುದೂ ಸಹಜ.

ಆದರೆ ಈ ಘಟನೆಗಳು ಸಂಭವಿಸಿರುವುದು ಸ್ವತಂತ್ರ ಭಾರತದಲ್ಲಿ, ಅರವತ್ತು ವರ್ಷಗಳ ಗಣತಂತ್ರದ ಆಚರಣೆಯ ಸಂದರ್ಭದಲ್ಲಿ. ಭಾರತದ ಸಂವಿಧಾನ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ಎಂದು ಪ್ರಸಿದ್ಧಿ ಪಡೆದಿದ್ದರೆ, ಸಂವಿಧಾನದಲ್ಲಿ ಭಾರತೀಯ ಜನತೆಗೆ ಒದಗಿಸಲಾಗಿರುವ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಸಾಮಾಜಿಕ ಅವಕಾಶಗಳೇ ಕಾರಣ. ಸಂವಹನ ಮಾಧ್ಯಮಗಳನ್ನು ಸಂವಿಧಾನದ ನಾಲ್ಕನೆಯ ಸ್ತಂಭ ಎಂದು ಪರಿಗಣಿಸಲ್ಪಡುವ ಭಾರತದಲ್ಲಿ ಮಾಧ್ಯಮಗಳಿಗಿರುವಷ್ಟು ಸ್ವಾತಂತ್ರ್ಯ ಮತ್ತಾವ ದೇಶದಲ್ಲೂ ಇಲ್ಲ. ಆದರೂ ಆಧುನಿಕ ಸಮಾಜದ ಮತ್ತು ಯುವ ಪೀಳಿಗೆಯ ಸೂಕ್ಷ್ಮತೆಯನ್ನು, ಸಂವೇದನೆಯನ್ನು ಸೂಕ್ತವಾಗಿ ಗ್ರಹಿಸುವಲ್ಲಿ ಮಾಧ್ಯಮಗಳು ವಿಫಲವಾಗಿರುವುದರಿಂದ ಕೆಲವೊಮ್ಮೆ ಅಪಭ್ರಂಶಗಳೂ ಸಂಭವಿಸುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ದೃಶ್ಯ ಮಾಧ್ಯಮಗಳು ರಂಜನೀಯತೆಗಾಗಿ ಅತಿರೇಕ ಸೃಷ್ಟಿಸುತ್ತಿರುವುದು ದಿಟವೇ ಆದರೂ, ಉದಾಹರಣೆಗೆ ನಿತ್ಯಾನಂದ ಪ್ರಕರಣ, ಮಾಧ್ಯಮಗಳ ಪರಿಶ್ರಮದಿಂದಲೇ ಕೆಲವು ಘಟನೆಗಳ ಸತ್ಯಾಂಶಗಳು ಹೊರಬಿದ್ದಿರುವುದೂ ಅಷ್ಟೇ ಸತ್ಯ. ಮಾಧ್ಯಮ ಸ್ವಾತಂತ್ರ್ಯದ ಪರಾಮರ್ಶೆ ಮಾಡುವ ನಿಟ್ಟಿನಲ್ಲಿ ಜೊಳ್ಳು-ಗಟ್ಟಿಯ ತುಲನೆ ಮಾಡುವ ಅಗತ್ಯತೆಯನ್ನೂ ಪ್ರಸ್ತುತ ಸಂದರ್ಭದಲ್ಲಿ ಮನಗಾಣಬೇಕಿದೆ.

ಬಾಂಗ್ಲಾದಿಂದ ಶಿವಮೊಗ್ಗದವರೆಗೆ

ಮಂಗಳೂರು, ಮೈಸೂರು, ಕರಾವಳಿ ಪ್ರದೇಶಗಳಲ್ಲಿ ಸಂಭವಿಸಿದ ಕೋಮು ಸಂಘರ್ಷಗಳ ಕಾವು ಆರುವ ಮುನ್ನವೇ ಕರ್ನಾಟಕದಲ್ಲಿ ಮತ್ತೊಮ್ಮೆ ಕೋಮು ದಳ್ಳುರಿ ಹೊತ್ತಿಕೊಂಡಿದೆ. ಆದರೆ ಈ ಪ್ರಕ್ಷುಬ್ಧತೆಗೆ ಕಾರಣ ಚರ್ಚುಗಳ ಧ್ವಂಸವಲ್ಲ, ಹಂದಿಯ ತಲೆಯೂ ಅಲ್ಲ, ಗಣೇಶೋತ್ಸವವೂ ಅಲ್ಲ. ನೆರೆ ರಾಷ್ಟ್ರ ಬಾಂಗ್ಲಾದೇಶದ ಲೇಖಕಿ ತಸ್ಲಿಮ ನಜರೀನ್ ಎಂದೋ ಬರೆದಿದ್ದ ಲೇಖನವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಕಟಿಸಿದ ಕನ್ನಡದ ಪ್ರಸಿದ್ಧ ಪತ್ರಿಕೆಯ ಪ್ರಮಾದವೇ(?) ಪ್ರಸ್ತುತ ಪ್ರಕ್ಷುಬ್ಧತೆಗೆ ಕಾರಣ ಎಂದು ಹೇಳಲಾಗುತ್ತಿದೆ. ಪತ್ರಿಕೆಯ ಪ್ರಮಾದವಾದರೂ ಏನು? ಮೂಲ ಲೇಖಕಿಯ ಅನುಮತಿ ಪಡೆಯದೆ ಅನುವಾದಿತ ಲೇಖನವನ್ನು ಪ್ರಕಟಿಸಿದ್ದೇ? ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ವಿಷಯವನ್ನು ಪ್ರಕಟಿಸಿದ್ದೇ? ಈ ಪ್ರಶ್ನೆಗಳಿಗೇ ಉತ್ತರ ಹುಡುಕುತ್ತಾ ಹೋದರೆ ಸಮಸ್ಯೆ ಬಗೆಹರಿಯುವುದೇ ಇಲ್ಲ. ಶಿವಮೊಗ್ಗದಲ್ಲಿ ವ್ಯಕ್ತವಾಗಿರುವುದು, ದೇಶದ ಎಲ್ಲಾ ಧರ್ಮನಿಷ್ಠರಲ್ಲೂ ಹೆಚ್ಚಾಗುತ್ತಿರುವ ಅಸಹಿಷ್ಣುತೆ ಮತ್ತು ಹಿಂಸಾತ್ಮಕ ಪ್ರವೃತ್ತಿ. ಭಿನ್ನಮತವನ್ನು ಸಹಿಸಿಕೊಳ್ಳಲಾಗದ ಮನೋಭಾವ. ಪ್ರಶ್ನಿಸುವ ಪ್ರವೃತ್ತಿಗೆ ಹಿಂಸಾತ್ಮಕ ಸ್ವರೂಪ ನೀಡುವ ನೇತ್ಯಾತ್ಮಕ ಪ್ರವೃತ್ತಿ.

ತಸ್ಲಿಮಾ ಅವರ ಲೇಖನದಲ್ಲಿ ಏನಿದೆ ಎನ್ನುವುದು ಇಲ್ಲಿ ಅಸಂಗತ. ಆಕೆ ಓರ್ವ ಲೇಖಕಿಯಾಗಿ, ಮಹಿಳೆಯಾಗಿ ತನ್ನ ಸ್ವದೇಶದಲ್ಲಿ ನಡೆಯುತ್ತಿರುವ ಅಮಾನವೀಯ ಘಟನೆಗಳನ್ನು, ಸಂವೇದನಾರಹಿತ ಬೆಳವಣಿಗೆಗಳನ್ನು ತನ್ನ ಕೃತಿಗಳಲ್ಲಿ ಸ್ಪಷ್ಟವಾಗಿ ಗುರುತಿಸುತ್ತಿದ್ದಾರೆ. 1993ರಲ್ಲಿ ಪ್ರಕಟಗೊಂಡ ತಸ್ಲಿಮಾ ಅವರ ಪ್ರಪ್ರಥಮ ಕೃತಿ ಲಜ್ಜಾ ಒಂದು ಶ್ರೇಷ್ಠ ಸಾಹಿತ್ಯ ಕೃತಿಯೇನೂ ಅಲ್ಲ. ಇಡಿಯಾಗಿ ಓದಿದಾಗ





ಲಜ್ಜಾ ಒಂದು ವರದಿಗಳ ಸಂಗ್ರಹ ಎನಿಸುವುದು ಸಹಜ. ಆದರೆ ಕಲ್ಪಿತ ಕಥಾಹಂದರಕ್ಕಿಂತಲೂ ವಾಸ್ತವಗಳನ್ನೇ ಪ್ರತಿಬಿಂಬಿಸುವ ತಸ್ಲೀಮಾ ಅವರ ಉದ್ದೇಶ ಮತ್ತು ಮಾನವೀಯ ಕಾಳಜಿಗಳು ಕೃತಿಯ ಉದ್ದಕ್ಕೂ ವ್ಯಕ್ತವಾಗುತ್ತವೆ. 1992ರ ಬಾಬ್ರಿ ಮಸೀದಿ ಧ್ವಂಸದ ನಂತರ ಬಾಂಗ್ಲಾ ದೇಶದಲ್ಲಿ ಹಿಂದೂ ಮತೀಯರ ವಿರುದ್ಧ ನಡೆದ ಆಕ್ರಮಣವನ್ನು ತಮ್ಮ ಕೃತಿಯಲ್ಲಿ ವಿಶ್ಲೇಷಿಸುವ ತಸ್ಲೀಮಾ ಏನು ನಡೆಯುತ್ತಿದೆ ಎಂಬುದನ್ನಷ್ಟೇ ವಿಶ್ಲೇಷಿಸುತ್ತಾರೆ. ಏಕೆ ಎಂದು ಎಲ್ಲಿಯೂ ಹೇಳುವುದಿಲ್ಲ. ಇದು ಅವರ ಸಾಮಾಜಿಕ ಅಧ್ಯಯನ ಶೀಲತೆ ಮತ್ತು ಸಂಶೋಧನಾ ಕೌಶಲ್ಯದ ನ್ಯೂನತೆಯನ್ನು ತೋರುತ್ತದೆ. ಆದರೂ ತಸ್ಲಿಮಾ ಅವರ ಕೃತಿ ವಿಶ್ವದಾದ್ಯಂತ ಮುಸ್ಲಿಂ ಸಮುದಾಯಗಳ ಪ್ರತಿರೋಧ ಎದುರಿಸಿರುವುದಂತೂ ಸತ್ಯ.

ಆದರೆ ತಸ್ಲಿಮಾ ಅವರ ಲೇಖನಗಳಲ್ಲಿ ಪ್ರವಾದಿಗಳನ್ನು ಖಂಡಿಸುವ ಅಥವಾ ಹೀಗಳೆಯುವ ಅಂಶಗಳಿಗಿಂತಲೂ, ಮುಸ್ಲಿಂ ಸಮುದಾಯದಲ್ಲಿ ಬೇರೂರಿರುವ ಕೆಲವು ಮೂಢನಂಬಿಕೆಗಳು ಮತ್ತು ಮತಾಂಧ ಶಕ್ತಿಗಳು ಸೃಷ್ಟಿಸುತ್ತಿರುವ ಚೌಕಟ್ಟುಗಳು ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಬುರ್ಖ ಧರಿಸುವ ಬಗ್ಗೆಯೂ ತಸ್ಲಿಮ ಅವರ ಅಭಿಪ್ರಾಯಗಳು ಈ ನಿಟ್ಟಿನಲ್ಲೇ ಸಾಗುತ್ತವೆ. ಹಲವು ಸಂದರ್ಭಗಳಲ್ಲಿ, ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ತಸ್ಲಿಮ ಇಸ್ಲಾಮಿಕ್ ಶರಿಯತ್‌ನ ಪ್ರಸ್ತುತತೆಯನ್ನೂ ವಿರೋಧಿಸಿರುವುದುಂಟು. ಈ ನಿಟ್ಟಿನಲ್ಲೇ ತಮ್ಮ ಲೇಖನವೊಂದರಲ್ಲಿ ತಸ್ಲಿಮ ಮುಸ್ಲಿಂ ಮಹಿಳೆಯರು ಬುರ್ಖ ಧರಿಸುವ ಬಗ್ಗೆ ತಮ್ಮದೇ ಆದ ವೈಯ್ಯಕ್ತಿಕ ನಿಲುವು ತಾಳಬಹುದೆಂದೂ ಪ್ರತಿಪಾದಿಸುತ್ತಾರೆ. ಇಲ್ಲಿ ತಸ್ಲಿಮ ಅವರ ವಾದವನ್ನು ಧಾರ್ಮಿಕ ದೃಷ್ಟಿಕೋನದಿಂದ ನೋಡದೆ ಮಹಿಳಾ ಸಂವೇದನೆಯ ದೃಷ್ಟಿಯಿಂದ ನೋಡಿದಾಗ, ಪ್ರಸ್ತುತ ಸಮಾಜದ ಅನೇಕ ವೈರುಧ್ಯತೆಗಳಿಗೆ ಓರ್ವ ಮಹಿಳೆ ಸವಾಲೆಸೆಯುವ ಪ್ರವೃತ್ತಿ ಕಂಡುಬರುತ್ತದೆ.

ವಾಸ್ತವಾಂಶವೇನೆಂದರೆ ಬುರ್ಖ ಧರಿಸುವ ಬಗ್ಗೆ ಮುಸ್ಲಿಂ ಸಮುದಾಯದಲ್ಲೇ ವಿಭಿನ್ನ ಅಭಿಪ್ರಾಯಗಳಿವೆ. ಎಲ್ಲ ಧೋರಣೆಗಳ ವಕ್ತಾರರರೂ ಏಕಾಭಿಪ್ರಾಯ ತಾಳುವುದಿಲ್ಲ ಎಂಬುದನ್ನು ಗಮನಿಸಬೇಕು. ಅಥವಾ ಇಸ್ಲಾಮಿಕ್ ರಾಷ್ಟ್ರಗಳೆಂದು ಹೇಳಿಕೊಳ್ಳುವ ಹಲವು ರಾಷ್ಟ್ರಗಳಲ್ಲಿ ಬುರ್ಖ ಧರಿಸುವುದು ಕಡ್ಡಾಯವಾಗಿಲ್ಲ ಎನ್ನುವುದನ್ನೂ ಗಮನಿಸಬೇಕು. ಒಂದು ಉಡುಗೆಯ ರೂಪದಲ್ಲಿ ಮುಸ್ಲಿಂ ಮಹಿಳೆಯರು ಸ್ವ-ಇಚ್ಛೆಯಿಂದ ಬುರ್ಖ ಧರಿಸುವುದಾದರೆ ಅದನ್ನು ವಿರೋಧಿಸುವ ಹಕ್ಕು ಯಾರಿಗೂ ಇರುವುದಿಲ್ಲ. ಹಾಗೆಯೇ ಇಚ್ಛೆ ಇಲ್ಲದವರ ಮೇಲೆ ವಸ್ತ್ರ ಸಂಹಿತೆಯನ್ನು ಹೇರುವ ಹಕ್ಕೂ ಇರುವುದಿಲ್ಲ. ತಸ್ಲಿಮಾ ಈ ನಿಟ್ಟಿನಲ್ಲಿ ತಮ್ಮ ವಾದ ಮಂಡಿಸುತ್ತಾರೆ. ಆದರೆ ತಮ್ಮ ವಾದವನ್ನು ಸಮರ್ಥಿಸಲು ತಸ್ಲಿಮ ಉಪಯೋಗಿಸುವ ಆಕರಗಳಾಗಲೀ, ಅವರ ವ್ಯಾಖ್ಯಾನಗಳಾಗಲೀ ಸಮರ್ಥನೀಯವಾಗಿರುವುದಿಲ್ಲ. ಇಸ್ಲಾಂ ಧರ್ಮದ ಅನೇಕ ವಿಭಿನ್ನ ವ್ಯಾಖ್ಯಾನಗಳನ್ನು ತಸ್ಲಿಮ ಪರಾಮರ್ಶಿಸುವುದೂ ಇಲ್ಲ. ಹಾಗಾಗಿ ಅವರ ಲೇಖನಗಳು ಮುಸ್ಲಿಂ ಸಂಪ್ರದಾಯಸ್ಥರನ್ನು ಕೆರಳಿಸುತ್ತವೆ. ಅಲ್ಲದೆ ಧರ್ಮ ಗ್ರಂಥಗಳನ್ನು ಪ್ರಶ್ನಿಸುವುದೇ ಮಹಾಪರಾಧ ಎಂದು ಪರಿಭಾವಿಸುವ ಧರ್ಮಗಳಲ್ಲಿ ಈ ರೀತಿಯ ಪ್ರತಿಪಾದನೆಗಳು ಪ್ರಶ್ನಾರ್ಹವೂ, ಖಂಡನೀಯವೂ ಆಗುತ್ತದೆ. ಇದರ ನೇರ ಪರಿಣಾಮವನ್ನು ಶಿವಮೊಗ್ಗದಲ್ಲಿ ಕಾಣಬಹುದಾಗಿದೆ.

ತಸ್ಲಿಮಾ ಅವರ ಲೇಖನಗಳಲ್ಲಿ ಪ್ರವಾದಿಗಳನ್ನು ಖಂಡಿಸುವ ಅಥವಾ ಹೀಗಳೆಯುವ ಅಂಶಗಳಿಗಿಂತಲೂ, ಮುಸ್ಲಿಂ ಸಮುದಾಯದಲ್ಲಿ ಬೇರೂರಿರುವ ಕೆಲವು ಮೂಢನಂಬಿಕೆಗಳು ಮತ್ತು ಮತಾಂಧ ಶಕ್ತಿಗಳು ಸೃಷ್ಟಿಸುತ್ತಿರುವ ಚೌಕಟ್ಟುಗಳು ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿದೆ. ಬುರ್ಖ ಧರಿಸುವ ಬಗ್ಗೆಯೂ ತಸ್ಲಿಮ ಅವರ ಅಭಿಪ್ರಾಯಗಳು ಈ ನಿಟ್ಟಿನಲ್ಲೇ ಸಾಗುತ್ತವೆ. ಹಲವು ಸಂದರ್ಭಗಳಲ್ಲಿ, ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ ತಸ್ಲಿಮ ಇಸ್ಲಾಮಿಕ್ ಶರಿಯತ್‌ನ ಪ್ರಸ್ತುತತೆಯನ್ನೂ ವಿರೋಧಿಸಿರುವುದುಂಟು.

ಇಲ್ಲಿ ತಸ್ಲಿಮ ಅಥವಾ ಇತರ ಯಾವುದೇ ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾಗುತ್ತದೆ. ತಸ್ಲಿಮ ಅವರ ಬರಹದಿಂದ ಒಂದು ಸಮುದಾಯದವರಿಗೆ ನೋವಾಗಿದ್ದರೆ ಅದನ್ನು ಪ್ರಶ್ನಿಸುವ ಹಕ್ಕು ಜನತೆಗೆ ಇದ್ದೇ ಇರುತ್ತದೆ. ಆದರೆ ಹಿಂಸೆಯ ಮೂಲಕ, ಬಹಿಷ್ಕಾರದ ಮೂಲಕ ಪ್ರಶ್ನಿಸುವುದು ಪ್ರಶ್ನಾರ್ಹವಾಗುತ್ತದೆ. ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ, ಸೆಕ್ಯುಲರ್ ಸಂವಿಧಾನದ ಪರಿಧಿಯಲ್ಲಿ ಪ್ರಜಾತಾಂತ್ರಿಕ ರೀತಿಯಲ್ಲೇ ಪ್ರತಿರೋಧ ವ್ಯಕ್ತಪಡಿಸುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವಾಗಿರುತ್ತದೆ. ಶಿವಮೊಗ್ಗದಲ್ಲಿ ಸಂಭವಿಸಿದ ಘಟನೆ ರಾಜಕೀಯ ಉದ್ದೇಶದಿಂದ ಕೂಡಿದ್ದರೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಕುಚೋದ್ಯವನ್ನು ಇಡೀ ಘಟನೆಯಲ್ಲಿ ಕಾಣಬಹುದು.

ಕಲಾಕಾರನ ವಿಚಿತ್ರ ವಿಶ್ವ

ಒಂದೆಡೆ ಅನ್ಯ ದೇಶದ ಲೇಖಕಿ ಭಾರತದಲ್ಲಿ ಮತಾಂಧರ ಆಕ್ರಮಣ ಎದುರಿಸುತ್ತಿದ್ದರೆ ಮತ್ತೊಂದೆಡೆ ಭಾರತೀಯ ಸಂಜಾತ ಕಲಾವಿದನೊಬ್ಬ ತನ್ನ ಜನ್ಮಭೂಮಿಯಲ್ಲಿ ಕಲಾಕುಂಚವನ್ನು ಅರಳಿಸಲಾಗದೆ ಅನ್ಯ ದೇಶದ ಪೌರತ್ವವನ್ನು ಪಡೆದಿದ್ದಾರೆ. 95ವರ್ಷಗಳ ಕಾಲ ಭಾರತೀಯತೆಯನ್ನು ತನ್ನ ಉಸಿರಿನಲ್ಲಿ ತುಂಬಿಕೊಂಡು, 40 ಸಾವಿರಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿ, ಆಧುನಿಕ ಕಲೆಗೆ ಹೊಸ ವ್ಯಾಖ್ಯಾನ ಬರೆದ ವಯೋವೃದ್ಧ ಕಲಾವಿದ ಎಂ.ಎಫ್ ಹುಸೇನ್ ಇಂದು ಪ್ರಜಾತಾಂತ್ರಿಕ ಭಾರತೀಯ ಪೌರತ್ವವನ್ನು ತ್ಯಜಿಸಿ ನಿರಂಕುಶ ಆಳ್ವಿಕೆಯಲ್ಲಿರುವ ಅನ್ಯ ದೇಶದ ಪೌರತ್ವ ಪಡೆದಿರುವುದು ಭಾರತೀಯ ಸಂವಿಧಾನಕ್ಕೇ ಕಳಂಕ ತರುವಂತಹ ವಿಷಯವಾಗಿದೆ. ಹುಸೇನ್ ಭಾರತೀಯ ಪೌರತ್ವವನ್ನು ತ್ಯಜಿಸಿಲ್ಲ ಕತಾರ್‌ನ ಪೌರತ್ವಕ್ಕೆ ಅರ್ಜಿಯನ್ನೂ ಹಾಕಿಲ್ಲ. ಆದರೆ ತಮ್ಮ ಅದ್ಭುತ ಕಲಾಕೃತಿಗಳನ್ನು, ಬೃಹತ್ ಯೋಜನೆಗಳನ್ನು ಪೂರ್ಣಗೊಳಿಸಲು ಭಾರತದಲ್ಲಿರುವ ಅಡ್ಡಿ ಆತಂಕಗಳಿಂದ ನೊಂದು ಅನ್ಯ ದೇಶದ ಪೌರತ್ವ ಬಯಸಿದ್ದಾರೆ. ಭಾರತೀಯ ಪೌರತ್ವ ಕಾಯ್ದೆಯ ಸೆಕ್ಷನ್ 9ರ ಅನ್ವಯ ದೇಶದ ಯಾವುದೇ ಪ್ರಜೆ ಸ್ವ-ಇಚ್ಛೆಯಿಂದ ಅನ್ಯದೇಶದ ಪೌರತ್ವವನ್ನು ಪಡೆದಲ್ಲಿ, ಅಂತಹವರು ಭಾರತೀಯ ಪೌರತ್ವವನ್ನು ಕಳೆದುಕೊಳ್ಳುತ್ತಾರೆ. ಆದರೆ ಹುಸೇನ್ ತಮ್ಮ ಸ್ವ-ಇಚ್ಛೆಯಿಂದ ಕತಾರ್ ಪೌರತ್ವ ಪಡೆದಿಲ್ಲ. ಅಲ್ಲಿನ ಸರ್ಕಾರವೇ ಅವರಿಗೆ ಪೌರತ್ವ ದಯಪಾಲಿಸಿದೆ.

ಮಹಾರಾಷ್ಟ್ರದ ಪಂಡರಾಪುರದಲ್ಲಿ ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಮಖ್ಬೂಲ್ ಫಿದಾ ಹುಸೇನ್ ತಮ್ಮ ಹದಿನೇಳನೆಯ ವಯಸ್ಸಿನಲ್ಲೇ ಹೊಲಿಗೆ ಕಲಿತಿದ್ದರು. 1937ರಲ್ಲಿ ಮುಂಬೈಗೆ ಬಂದು ಸ್ಲಂ ಒಂದರಲ್ಲಿ ಜೀವನ ನಡೆಸುತ್ತಿದ್ದ ಹುಸೇನ್‌ಗೆ ಬಿಲ್‌ಬೋರ್ಡ್ ಬರೆಯುವ ಚಿತ್ರಕಾರನಿಗೆ ಸಹಾಯಕನಾಗಿ ದುಡಿಯುವ ಅವಕಾಶ ಒದಗಿಬಂದಿತ್ತು. ಸಹವೃತ್ತಿಯಾಗಿ ಬೊಂಬೆಗಳನ್ನು, ಪೀಠೋಪಕರಣಗಳನ್ನು ತಯಾರಿಸುವಲ್ಲೂ ಹುಸೇನ್ ನಿಪುಣರಾಗಿದ್ದರು. ಈ ಹಂತದಲ್ಲೇ ಚಿತ್ರಕಲೆಯನ್ನೂ ಒಗ್ಗೂಡಿಸಿಕೊಂಡ ಹುಸೇನ್ ತಮ್ಮ ಮುಂದಿನ ಹಾದಿಯನ್ನು ಆಧುನಿಕ ಕಲೆಯಲ್ಲಿ ಕಂಡುಕೊಂಡಿದ್ದು ಅವರ ಜೀವನ ಪಥವನ್ನೇ ಬದಲಾಯಿಸಿತ್ತು. ಹುಸೇನ್ ಭಾರತದಲ್ಲಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲೂ ಆಧುನಿಕ ಚಿತ್ರಕಲೆಗೆ ಹೊಸ ವ್ಯಾಖ್ಯಾನ ಬರೆದರು. ಅವರ ಕಲಾಕುಂಚದಿಂದ ಮೂಡಿದ 40ಸಾವಿರಕ್ಕೂ ಹೆಚ್ಚು ಕಲಾಕೃತಿಗಳು ಈ ಅದ್ಭುತ ಕಲೆಗಾರನ ಪ್ರತಿಭೆಗೆ ದ್ಯೋತಕ.

ಆದರೆ ಹುಸೇನ್ ಅವರ ಬಾಳಿನ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಏಳು ದಶಕಗಳ ಕಾಲ ತಮ್ಮ ಅಪೂರ್ವ ಕಲಾಕೃತಿಗಳಿಂದ ಜನತೆಯ ಮನಸೂರೆಗೊಂಡ ಕಲಾವಿದನಿಗೆ 1996ರಿಂದಲೇ ಮತಾಂಧರ ಕಾಟ ಶುರುವಾಗಿತ್ತು. 1989ರ ರಥಯಾತ್ರೆ, 1992ರ ಬಾಬ್ರಿ ಮಸೀದಿ ಧ್ವಂಸ ಮತ್ತು 1996ರ ಚುನಾವಣೆಗಳಲ್ಲಿನ ಯಶಸ್ಸು ಹಿಂದುತ್ವವಾದಿಗಳಲ್ಲಿ ಉತ್ಸಾಹದೊಂದಿಗೆ ಮತೀಯ ಉನ್ಮಾದವನ್ನೂ ಹೆಚ್ಚಿಸಿತ್ತು. ಈ ಹಿನ್ನೆಲೆಯಲ್ಲೇ 1996ರ ಸೆಪ್ಟೆಂಬರ್‌ನಲ್ಲಿ ಮಧ್ಯಪ್ರದೇಶದ ವಿಚಾರ ಮೀಮಾಂಸ ಎಂಬ ಹಿಂದಿ ಪತ್ರಿಕೆಯಲ್ಲಿ "ಹುಸೇನ್ ಕಲಾವಿದನೋ ಕಟುಕನೋ" ಎಂಬ ಲೇಖನ ಪ್ರಕಟಗೊಂಡಿತ್ತು. ಡಿ. ನಾಡಕರ್ಣಿಯವರ ಹುಸೇನ್ ರೈಡಿಂಗ್ ದ ಲೈಟ್ನಿಂಗ್ ಎಂಬ ಕೃತಿಯಿಂದ ಆಯ್ದ ಹುಸೇನ್ ವಿರಚಿತ ಸರಸ್ವತಿ ದೇವಿಯ ನಗ್ನ ಚಿತ್ರವನ್ನು ಪ್ರಕಟಿಸಲಾಗಿತ್ತು. ಈ ಕಲಾಕೃತಿಯೇ ವಿವಾದದ ಕೇಂದ್ರ ಬಿಂದುವಾಗಿತ್ತು. ಮಹಾರಾಷ್ಟ್ರದ ಸಂಸ್ಕೃತಿ ಮಂತ್ರಿ ಮತ್ತು ಶಿವಸೇನೆಯ ನಾಯಕ ಪ್ರಮೋದ್ ನವಲ್‌ಕರ್ ಈ ಲೇಖನವನ್ನಾಧರಿಸಿ ಹುಸೇನ್ ವಿರುದ್ಧ ದೂರು ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಹುಸೇನ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಹುಸೇನ್ ವಿರುದ್ಧ ಕತ್ತಿ ಮಸೆಯುತ್ತಿದ್ದ ಭಜರಂಗದಳ ಕಾರ್ಯಕರ್ತರಿಗೆ ಈ ಪ್ರಕರಣವೇ ವರದಾನವಾಗಿತ್ತು. ಅಹಮದಾಬಾದ್‌ನಲ್ಲಿರುವ ಹರ್ವಿಟ್ಜ್ ಕಲಾ ಗ್ಯಾಲರಿಯಲ್ಲಿ ಸಂಗ್ರಹಿಸಲಾಗಿದ್ದ ಹುಸೇನ್ ಅಸಂಖ್ಯಾತ ಕಲಾಕೃತಿಗಳನ್ನು ಭಜರಂಗದಳ ಕಾರ್ಯಕರ್ತರು ಧ್ವಂಸಗೊಳಿಸಿದ್ದರು. ಹುಸೇನ್ ಕಲಾಕುಂಚದಲ್ಲಿ ಅರಳಿದ್ದ ಬುದ್ಧ, ಗಣೇಶ, ಹನುಮಾನ್ ಕೃತಿಗಳು ಧ್ವಂಸವಾಗಿದ್ದವು. ಒಂದೂವರೆ ಕೋಟಿಗೂ ಹೆಚ್ಚು ನಷ್ಟವಾಗಿತ್ತು. ಇದು ಹುಸೇನ್ ಅವರ ವಿರುದ್ಧದ ವ್ಯವಸ್ಥಿತ ಆಕ್ರಮಣಕ್ಕೆ ನಾಂದಿ ಹಾಡಿತ್ತು.

ಈ ಸಂದರ್ಭದಲ್ಲಿ ಅನಾವಶ್ಯಕವಾಗಿ ಪ್ರಚೋದನಕಾರಿ ಲೇಖನ ಪ್ರಕಟಿಸಿದ ವಿಚಾರ ಮೀಮಾಂಸ ಪತ್ರಿಕೆಯ

ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದಲ್ಲಿ, ಪತ್ರಿಕೆಯ ಸಂಪಾದಕರಿಗೆ ಶಿಕ್ಷೆಯಾಗಬಹುದಿತ್ತು. ಆದರೆ ಮಧ್ಯಪ್ರದೇಶದಲ್ಲಿ ಪ್ರಕಟವಾಗುವ ಪತ್ರಿಕೆಯನ್ನು ಮಹಾರಾಷ್ಟ್ರದಲ್ಲಿ ವಿಚಾರಣೆಗೆ ಒಳಪಡಿಸುವ ಮೂಲಕ ಮತಾಂಧರನ್ನು ರಕ್ಷಿಸುವ ಹುನ್ನಾರವನ್ನು ಭಾಜಪ-ಶಿವಸೇನೆ ನೇತೃತ್ವದ ಸರ್ಕಾರ ಯಶಸ್ವಿಯಾಗಿ ನಿರ್ವಹಿಸಿತ್ತು. ತತ್ಪರಿಣಾಮವಾಗಿ ಹಿಂದುತ್ವವಾದಿ ಸಂಘಟನೆಗಳು ಹುಸೇನ್ ವಿರುದ್ಧ ವ್ಯವಸ್ಥಿತ ಪ್ರತಿರೋಧವನ್ನು ಸಂಘಟಿಸುವುದು ಸುಲಭ ಸಾಧ್ಯವಾಗಿತ್ತು. ಇದರ ನೇರ ಫಲವನ್ನು 1998ರ ಮೇ 1ರಂದು ಮುಂಬೈನಲ್ಲಿರುವ ಹುಸೇನ್ ಮನೆಯ ಮೇಲಿನ ದಾಳಿಯಲ್ಲಿ ಕಾಣುವಂತಾಯಿತು. ದೆಹಲಿಯ ಪ್ರದರ್ಶನವೊಂದರಲ್ಲಿ ಹುಸೇನ್ ರಚಿಸಿದ್ದ ಕಲಾಕೃತಿಯಲ್ಲಿ, ಸೀತೆ ಹಾರುತ್ತಿರುವ ಆಂಜನೇಯನ ಬಾಲದ ಮೇಲೆ ಕುಳಿತಂತೆ ಕಂಡಿದ್ದು, ಎರಡೂ ಆಕೃತಿಗಳು ನಗ್ನವಾಗಿದ್ದುದು ಭಜರಂಗಿಗಳ ಆಕ್ರೋಶಕ್ಕೆ ಕಾರಣವಾಗಿತ್ತು.

ಆದರೆ ವಾಸ್ತವವಾಗಿ ಸರಸ್ವತಿಯ ನಗ್ನ ಚಿತ್ರವೆಂದು ಆರೋಪಿಸಲಾದ ಕೃತಿಯಲ್ಲಿ ಹುಸೇನ್ ಧ್ಯಾನಮಗ್ನಳಾದ ಓರ್ವ ಮಹಿಳೆಯ ರೇಖಾಕೃತಿಯನ್ನು ಚಿತ್ರಿಸಿದ್ದರಷ್ಟೆ. ಅದನ್ನು ಸರಸ್ವತಿ ಎಂದು ಹುಸೇನ್ ಉಲ್ಲೇಖಿಸಿರಲೇ ಇಲ್ಲ. ಆದರೆ ವಿಚಾರ ಮೀಮಾಂಸ ಪತ್ರಿಕೆಗೆ ಈ ಕೃತಿಯಲ್ಲಿ ಸರಸ್ವತಿಯ ನಗ್ನ ಚಿತ್ರಣ ಕಂಡುಬಂದಿದ್ದು ಅನೇಕ ಕಲಾರಸಿಕರಲ್ಲಿ ಅಚ್ಚರಿ ಮೂಡಿಸಿತ್ತು. ಇದೇ ರೀತಿ ಸೀತಾ ಹನುಮಾನ್ ಕೃತಿಯಲ್ಲೂ ಹುಸೇನ್ ತಮ್ಮ ಕೃತಿಗೆ ಯಾವುದೇ ಶೀರ್ಷಿಕೆ ನೀಡಿರಲಿಲ್ಲ. ಚಿತ್ರದಲ್ಲಿರುವ ಮಹಿಳೆಯನ್ನು ಸೀತೆ ಎಂದು ಪರಿಭಾವಿಸಿದ್ದೂ ಸಂಘಪರಿವಾರದ ಕಲ್ಪನಾ ಸಾಮರ್ಥ್ಯವೇ. ಈ ಹಂತದಲ್ಲಿ ಹುಸೇನ್ ಸಂಯಮದಿಂದಲೇ ವರ್ತಿಸಿ, ತಮ್ಮ ಇಡೀ ಕಲಾಕೃತಿಗಳನ್ನು ಪರಾಮರ್ಶಿಸಲು ತ್ರಿಸದಸ್ಯ ಸಮಿತಿಯನ್ನು ರಚಿಸಲು ಸಲಹೆಯನ್ನೂ ನೀಡಿದ್ದರು. ಕಲಾ ವಿಮರ್ಶಕ, ವಿಶ್ವ ಹಿಂದೂ ಪರಿಷತ್ತಿನ ಸದಸ್ಯ ಮತ್ತು ವಕೀಲರನ್ನೊಳಗೊಂಡ ಈ ಸಮಿತಿ ತಮ್ಮ ಯಾವುದೇ ಕೃತಿಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದಲ್ಲಿ ತಾವು ಅದನ್ನು ಧ್ವಂಸ ಮಾಡುವುದಾಗಿ ಹುಸೇನ್ ಆಶ್ವಾಸನೆ ನೀಡಿದ್ದರು. ಆದರೆ ಹುಸೇನ್ ತೋರಿದ ಔದಾರ್ಯವನ್ನು ಸಂಘಪರಿವಾರ ತಿರಸ್ಕರಿಸಿತ್ತು. 2006ರಲ್ಲಿ ಪುನಃ ಹುಸೇನ್ ಭಾರತಮಾತೆಯನ್ನು ನಗ್ನಳಾಗಿ ಚಿತ್ರಿಸಿದ್ದಾರೆ ಎಂದು ಹುಯಿಲೆಬ್ಬಿಸಲಾಯಿತು. ಚೆನ್ನೈನ ಅಪ್ಪಾರಾವ್ ಗ್ಯಾಲರಿಯಲ್ಲಿ ಹರಾಜಿಗೆ ಇಟ್ಟಿದ್ದ ಈ ಕೃತಿಗೆ ಭಾರತಮಾತೆ ಎಂದು ಶೀರ್ಷಿಕೆ ನೀಡಿದವರು ಗ್ಯಾಲರಿಯ ಒಡೆಯರೇ ಹೊರತು ಹುಸೇನರಲ್ಲ. ಶೀರ್ಷಿಕೆಯನ್ನಿಡಲು ಹುಸೇನ್ ಅನುಮತಿಯನ್ನೂ ಪಡೆದಿರಲಿಲ್ಲ. ಆದಾಗ್ಯೂ ಹುಸೇನ್ ತಮ್ಮ ಕೃತಿಯಿಂದ ಯಾವುದೇ ಸಮುದಾಯದ ಜನತೆಗೆ ನೋವುಂಟಾದರೂ ತಾವು ಕ್ಷಮೆ ಯಾಚಿಸುವುದಾಗಿ ಹೇಳಿ ಆ ಕೃತಿಯನ್ನು ಹಿಂದೆಗೆದುಕೊಂಡಿದ್ದರು.

ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರದ ನಿಲುವು ಪ್ರಶ್ನಾರ್ಹವಾಗಿತ್ತು. ಹುಸೇನ್ ಅವರ ಕೃತಿಗಳು ಕೋಮು ಸಂಘರ್ಷ ಉಂಟು ಮಾಡುತ್ತವೆ ಎಂಬ ಬೇಹುಗಾರಿಕೆ ವರದಿಯನ್ನಾಧರಿಸಿ, ಗೃಹಮಂತ್ರಿ ಶಿವರಾಜ್ ಪಾಟೀಲ್ ಹುಸೇನ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾದರು. ಹಿಂದುತ್ವವಾದಿಗಳಿಗೆ ಸರ್ಕಾರದ ಈ ಕ್ರಮ ವರದಾನವಾಗಿತ್ತು. ಹುಸೇನ್ ಅವರ ವಿರುದ್ಧ ಫತ್ವಾಗಳನ್ನು ಹೊರಡಿಸಲಾಯಿತು. ಹಿಂದೂ ಲಾ ಬೋರ್ಡ್‌ನ ಅಧ್ಯಕ್ಷ ಅಶೋಕ್ ಪಾಂಡೆ ಹುಸೇನ್ ಅವರನ್ನು ಕೊಂದವರಿಗೆ 101 ಕೋಟಿ ರೂ ಬಹುಮಾನ ಘೋಷಿಸಿದ್ದರು. ಗುಜರಾತಿನಲ್ಲಿ ಮಾಜಿ ಭಾಜಪ ಅಧ್ಯಕ್ಷ ಜಾಶುಭಾಯಿ ಪಟೇಲ್ ಹುಸೇನ್ ಅವರ ಕಣ್ಣುಗಳನ್ನು ಕಿತ್ತು, ಕೈಗಳನ್ನು ಕಡಿಯುವವರಿಗೆ ಒಂದು ಕಿಲೋ ಬಂಗಾರ ನೀಡುವುದಾಗಿ ಘೋಷಿಸಿದರು. ಮಧ್ಯಪ್ರದೇಶದ ಕಾಂಗ್ರೆಸ್ ಅಲ್ಪಸಂಖ್ಯಾತ ಸಮಿತಿ ಹುಸೇನ್‌ರ ಕೈಗಳನ್ನು ಕತ್ತರಿಸಿದವರಿಗೆ 11 ಲಕ್ಷ ಬಹುಮಾನ ಘೋಷಿಸಿತು. ಈ ಎಲ್ಲಾ ಬೆದರಿಕೆಗಳನ್ನು ಅಧಿಕೃತವಾಗಿ, ಸಾರ್ವಜನಿಕವಾಗಿ ನೀಡಲಾಯಿತಾದರೂ ಇವರುಗಳ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದಿದ್ದುದು ಸೋಜಿಗವೇ.

ಭಾರತಮಾತೆಯ ಕಲಾಕೃತಿಯ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಯಿತು. ಸಮಾಜ ಕಾರ್ಯಕರ್ತನೊಬ್ಬ ಹುಸೇನ್ ವಿರುದ್ಧ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರ ಬಳಿ ದೂರು ದಾಖಲಿಸಿದ್ದೂ ಆಯಿತು. ಈ ದೂರಿನ ಆಧಾರದ ಮೇಲೆ ಹುಸೇನ್ ಅವರ ವಿರುದ್ಧ ಜಾಮೀನು ಸಹಿತ ವಾರಂಟ್ ಹೊರಡಿಸಲಾಯಿತು. ವಿಡಂಬನೆ ಎಂದರೆ ಈ ಯಾವುದೇ ಕ್ರಮಗಳಿಗೂ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 196ರ ಪ್ರಕಾರ ಅಗತ್ಯ ವಾಗಿದ್ದ ರಾಜ್ಯ ಅಥವಾ ಕೇಂದ್ರ ಸರ್ಕಾರದ ಅನುಮತಿ ದೊರೆತಿರಲಿಲ್ಲ. ಆದರೂ ಮೊಕದ್ದಮೆಯನ್ನು ಮುಂದುವರೆಸಲಾಯಿತು. ದೇಶಾದ್ಯಂತ ವಿವಿಧ ನ್ಯಾಯಾಲಯಗಳಲ್ಲಿ ಹುಸೇನರ ವಿರುದ್ಧ 900 ಮೊಕದ್ದಮೆಗಳನ್ನು ಹೂಡಲಾಯಿತು. ಏತನ್ಮಧ್ಯೆ ಪಂಡರಪುರದ ನ್ಯಾಯಾಲಯವು ಹುಸೇನ್ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಿ, ಕೇರಳದಲ್ಲಿ ರವಿವರ್ಮ ಪ್ರಶಸ್ತಿ ಸ್ವೀಕರಿಸಲಿದ್ದ ಹುಸೇನ್ ಅವರನ್ನು ಬಂಧಿಸಲು ಕೇರಳ ಸರ್ಕಾರಕ್ಕೆ ಆದೇಶ ನೀಡಿತ್ತು. ಈ ಎಲ್ಲಾ ಪ್ರಕರಣಗಳಿಂದ ಆಘಾತಕ್ಕೊಳಗಾದ ಹುಸೇನ್ ಒಂದು ರೀತಿಯಲ್ಲಿ ರಕ್ಷಣೆ ಇಲ್ಲದೆ ಪರದಾಡುವಂತಾಗಿದ್ದೇ ಅವರನ್ನು ವಿದೇಶದಲ್ಲಿ ನೆಲೆಸುವಂತೆ ಮಾಡಿತ್ತು.

ವಾಸ್ತವವಾಗಿ ಸರಸ್ವತಿಯ ನಗ್ನ ಚಿತ್ರವೆಂದು ಆರೋಪಿಸಲಾದ ಕೃತಿಯಲ್ಲಿ ಹುಸೇನ್ ಧ್ಯಾನಮಗ್ನಳಾದ ಓರ್ವ ಮಹಿಳೆಯ ರೇಖಾಕೃತಿಯನ್ನು ಚಿತ್ರಿಸಿದ್ದರಷ್ಟೆ. ಅದನ್ನು ಸರಸ್ವತಿ ಎಂದು ಹುಸೇನ್ ಉಲ್ಲೇಖಿಸಿರಲೇ ಇಲ್ಲ. ಆದರೆ ವಿಚಾರ ಮೀಮಾಂಸ ಪತ್ರಿಕೆಗೆ ಈ ಕೃತಿಯಲ್ಲಿ ಸರಸ್ವತಿಯ ನಗ್ನ ಚಿತ್ರಣ ಕಂಡು ಬಂದಿದ್ದು ಅನೇಕ ಕಲಾರಸಿಕರಲ್ಲಿ ಅಚ್ಚರಿ ಮೂಡಿಸಿತ್ತು. ಇದೇ ರೀತಿ ಸೀತಾ ಹನುಮಾನ್ ಕೃತಿಯಲ್ಲೂ ಹುಸೇನ್ ತಮ್ಮ ಕೃತಿಗೆ ಯಾವುದೇ ಶೀರ್ಷಿಕೆ ನೀಡಿರಲಿಲ್ಲ. ಚಿತ್ರದಲ್ಲಿರುವ ಮಹಿಳೆಯನ್ನು ಸೀತೆ ಎಂದು ಪರಿಭಾವಿಸಿದ್ದೂ ಸಂಘಪರಿವಾರದ ಕಲ್ಪನಾ ಸಾಮರ್ಥ್ಯವೇ

ಆದರೆ ಸರ್ವೋಚ್ಚ ನ್ಯಾಯಾಲಯವು 2006ರ ಆದೇಶದ ಮೂಲಕ ಹುಸೇನ್ ವಿರುದ್ಧ ವಿವಿಧ ರಾಜ್ಯಗಳಲ್ಲಿ ಹೂಡಲಾಗಿದ್ದ ಎಲ್ಲಾ ಮೊಕದ್ದಮೆಗಳನ್ನೂ ದೆಹಲಿಯ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ವರ್ಗಾಯಿಸಿತ್ತು. ದೆಹಲಿಯ ನ್ಯಾಯಾಲಯ ಹುಸೇನ್‌ಗೆ ಸಮನ್ಸ್ ಜಾರಿಗೊಳಿಸಿದಾಗ ಅದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿ ಅರ್ಜಿ ಸಲ್ಲಿಸಿದ ಹುಸೇನ್ ಅವರಿಗೆ ದೆಹಲಿ ಉಚ್ಚ ನ್ಯಾಯಾಲಯದ ತೀರ್ಪು ಆಶಾದಾಯಕವಾಗಿತ್ತು. ತಮ್ಮ ತೀರ್ಪಿನಲ್ಲಿ ನ್ಯಾಯಾಧೀಶರು ಹುಸೇನ್ ಅವರ ಭಾರತ ಮಾತೆಯ ಚಿತ್ರಣದಲ್ಲಿ ಯಾವುದೇ ಅಶ್ಲೀಲತೆ ಇಲ್ಲವೆಂದೂ, ಪ್ರಚೋದನಕಾರಿ ಅಂಶ ಇಲ್ಲವೆಂದೂ ಹೇಳಿದ್ದರು. ಭಾರತವನ್ನು ಮಾನವನ ರೂಪದಲ್ಲಿ ಕಲ್ಪಿಸಿಕೊಂಡು ರಚಿಸಲಾದ ಕಲಾಕೃತಿಯಲ್ಲಿ ಯಾವುದೇ ರೀತಿಯ ಅಶ್ಲೀಲತೆ ಇರಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ರಾಷ್ಟ್ರದ ಕಲ್ಪನೆಯನ್ನು ವ್ಯಥೆಯಿಂದ ಬಳಲಿದ ಮಹಿಳೆಯ ರೂಪದಲ್ಲಿ ಚಿತ್ರಿಸಿರುವ ಹುಸೇನ್ ಅವರ ಅದ್ಭುತ ಕಲಾ ಪ್ರೌಢಿಮೆಯನ್ನು ನ್ಯಾಯಾಲಯ ಶ್ಲಾಘಿಸಿತ್ತು. ಈ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದ ಮನವಿ ತಿರಸ್ಕೃತವಾಗಿದ್ದರೂ, ಹುಸೇನ್ ಅವರ ವಿರುದ್ಧ ಅನೇಕ ಪ್ರಕರಣಗಳು ಇನ್ನೂ ಜೀವಂತವಾಗಿವೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾತಂತ್ರ

ಇಷ್ಟಕ್ಕೂ ಹುಸೇನ್ ಅವರ ಕಲಾಕೃತಿಗಳ ವಿರುದ್ಧ ದನಿ ಎತ್ತಿದವರಾದರೂ ಯಾರು? ಜನಸಾಮಾನ್ಯರೇ, ಹಿಂದೂ ಧರ್ಮವನ್ನು ನಾಲ್ಕು ಗೋಡೆಗಳ ನಡುವೆ ಖಾಸಗಿ ಜೀವನದಲ್ಲಿ ಅಳವಡಿಸಿಕೊಂಡಿರುವ ಸಾತ್ವಿಕ ಸಮುದಾಯವೇ, ಹಿಂದೂ ಧರ್ಮ ಗ್ರಂಥಗಳನ್ನು ವ್ಯಾಖ್ಯಾನಿಸಿ ಶ್ರದ್ಧಾ ಭಕ್ತಿಗಳಿಂದ ಧರ್ಮವನ್ನು ಪಾಲಿಸುತ್ತಿರುವ ಸಮುದಾಯವೇ? ಬಲಪಂಥೀಯ ಫ್ಯಾಸಿಸ್ಟ್ ಮನೋಭಾವದ ಹಿಂದುತ್ವವಾದಿ ಪಡೆಗಳ ಪ್ರತಿರೋಧವನ್ನೇ ಪ್ರಧಾನವಾಗಿ ಪರಿಗಣಿಸಿ, ಅವರ ವ್ಯಾಖ್ಯಾನಗಳನ್ನೇ ಆಧರಿಸಿ ಹುಸೇನ್ ಅವರ ಕಲಾಕೃತಿಗಳನ್ನು ಪರಾಮರ್ಶಿಸುವುದು ಎಷ್ಟು ಸರಿ ಎಂಬ ಮೌಲಿಕ ಪ್ರಶ್ನೆಗೆ ಪ್ರಜ್ಞಾವಂತ ಸಮುದಾಯ ಉತ್ತರಿಸಬೇಕಿದೆ. ಸಾಹಿತ್ಯ ಕ್ಷೇತ್ರದಲ್ಲಿ ಸಲ್ಮಾನ್ ರಷ್ದಿ, ತಸ್ಲಿಮ ಅನುಭವಿಸುತ್ತಿರುವುದನ್ನೇ ಕಲಾ ಕ್ಷೇತ್ರದಲ್ಲಿ ಎಂ.ಎಫ್. ಹುಸೇನ್ ಅನುಭವಿಸುತ್ತಿದ್ದಾರೆ. ಇತಿಹಾಸದಲ್ಲಿ ವಿಜ್ಞಾನಿ ಗೆಲಿಲಿಯೋ ಅನುಭವಿಸಿದ್ದಾನೆ.

ಒಬ್ಬ ಕಲಾವಿದನಾಗಿ ಹುಸೇನ್ ವಿಶ್ವಮಾನವರಾಗುತ್ತಾರೆ. ಅವರ ಕಲಾಕೃತಿಗಳಿಗೆ ಭಾಷೆಯ ಪರಿಧಿ ಇಲ್ಲ. ಆದರೆ ಭಾವನೆಗಳ ವಿಶಾಲ ತಳಹದಿ ಇದೆ. ವಿಶ್ವದ ಎಲ್ಲ ಮೂಲೆಗಳಲ್ಲೂ ಹುಸೇನ್ ಅವರ ಕಲಾಕೃತಿಗಳು ಮಾತನಾಡುತ್ತವೆ. ಎಲ್ಲ ಭಾಷೆಗಳಲ್ಲೂ ಸಂಭಾಷಿಸುತ್ತವೆ. ಎಲ್ಲ ವರ್ಗಗಳಿಗೂ ತಲುಪುತ್ತವೆ. ಇಂತಹ ಅದ್ಭುತ ಕಲಾವಿದನಿಗೆ ಒಂದು ನಿರ್ದಿಷ್ಟ ರಾಷ್ಟ್ರದ ಪೌರತ್ವ ಅತ್ಯಗತ್ಯವೇನೂ ಅಲ್ಲ. ಆದಾಗ್ಯೂ ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ಹುಸೇನ್ ತಮ್ಮ ಭಾರತೀಯತೆಯನ್ನು ಹೆಮ್ಮೆಯಿಂದ ನೆನೆಯುತ್ತಾರೆ. ಭೌಗೋಳಿಕ ಎಲ್ಲೆಗಳು ಯಾವುದೇ ಕಲಾವಿದನನ್ನೂ ಕಟ್ಟಿಹಾಕಲು ಸಾಧ್ಯವಿಲ್ಲ ಎಂದು ಹೇಳುವ ಹುಸೇನ್ ತಮ್ಮ ಕಲಾಕೃತಿಗಳಲ್ಲಿ ಅಡಗಿರುವ ಸಾರ್ವತ್ರಿಕ ಭಾಷೆಯನ್ನು ಅಪ್ರತಿಮ ಎಂದು ಪರಿಗಣಿಸುತ್ತಾರೆ. ಆದರೆ 40ಸಾವಿರಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿರುವ ಅಭೂತಪೂರ್ವ ಕಲಾವಿದನೊಬ್ಬ ತನ್ನ ಅಸ್ತಿತ್ವವನ್ನು ಉಳಿಸಿಕೊ

ಕೂಡ ಓದುಗರಿಗೆ ಆಕರ್ಷವೆನಿಸುವ ಹಾಗೆ ಬರೆಯುವು ದುಕ್ಕಾಗಿ ತೇಲಿಸಿ ಬರೆಯುತ್ತಿದ್ದರು ಎಂದು ಟೀಕಿಸಿದ್ದಾರೆ. (ಪು. 262)

ಆದರೆ ಈ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲ ಎನ್ನ ಲಿಕ್ಕೆ ಬರುವುದಿಲ್ಲವಾದರೂ ಈ ಅಭಿಪ್ರಾಯವನ್ನು ಪೂರ್ಣ ವಾಗಿ ಅನುಮೋದಿಸುವುದು ಕಷ್ಟ. ಲಂಕೇಶ್ ಮುಖ್ಯವಾಗಿ ಚಿಂತಿಸಿದ್ದು ರಾಜಕೀಯದ ಬಗ್ಗೆ. ಬರೆದಿದ್ದು ಕೂಡ ವರ್ತ ಮಾನದ ಹಲವು ಸಾರ್ವಜನಿಕ ವಿದ್ಯಮಾನಗಳ ಬಗ್ಗೆ ಎಂಬುದು ಬಹಳ ಜನರಿಗೆ ಗೊತ್ತು. ಅದನ್ನು ಮಂಡಿ ಸುವ ಹಾಗೂ ಓದುಗರಿಗೆ ಮನಗಾಣಿಸುವ ವಿಧಾನದಲ್ಲಿ ಲಂಕೇಶರು ತಮ್ಮದೇ ಶೈಲಿಯನ್ನು ರೂಢಿಸಿಕೊಂಡಿದ್ದರು. ಲಹರಿಯ ಹಾಗೆ ಕಾಣುತ್ತಿದ್ದರೂ ಅದರಲ್ಲಿದ್ದ ಚಿಂತನ ಶೀಲತೆ ಸಾಮಾನ್ಯ ಓದುಗರಿಗೂ ತಲುಪುವಂತಿತ್ತು ಎಂಬು ದನ್ನು ಡಿ.ಎಸ್.ಎನ್ ಪರಿಗಣಿಸಿದಂತಿಲ್ಲ. ಲಂಕೇಶ್ ಅವರು ರಾಜಕಾರಣದ ವಿದ್ಯಮಾನವೊಂದನ್ನು ಎದುರಿಗಿ ಟ್ಟುಕೊಂಡು ಚಿಂತಿಸುತ್ತಾ, ಅದರಿಂದ ನಾವು ಕೇಳಿಸಿಕೊಳ್ಳ ಬೇಕಾಗಿರುವ 'ಧ್ವನಿತಾರ್ಥದ' ಬಗ್ಗೆ ಸೂಚನೆಗಳನ್ನು ಮಂಡಿಸುತ್ತಿದ್ದ ಚಿಂತಕ. ಕಥೆ,ಕಾವ್ಯಗಳನ್ನು ಬರೆಯುತ್ತಾ ಬಂದಿದ್ದ ಲಂಕೇಶರಿಗೆ ರೂಪಕಾರ್ಥಗಳ ಒಲವಿದ್ದು ಅದನ್ನು ಅಂಕಣಗಳಲ್ಲೂ ಬಳಸಿಕೊಂಡರು.

ಡಿ.ಎಸ್.ಎನ್ ಅವರಿಗೆ ಕಥನ ಕಲೆ ಗೊತ್ತಿಲ್ಲ ವೆಂದಲ್ಲ. 'ಜೀವ ಕಾಯುವುದೇತಕೆ' ಲೇಖನವನ್ನು ನೋಡಿದರೆ ಡಿ.ಎಸ್.ಎನ್ ಅವರೊಳಗೆ ಸುಪ್ತ ಕಥನ ಕಲೆಯಿರುವುದು ಗೊತ್ತಾಗುತ್ತದೆ. ಇದೇ ಮಾತನ್ನು 'ಶಾರದಾ ಪ್ರಸಾದ್ ಮೂರು ಭೇಟಿಗಳು ಮತ್ತು ಒಂದು ಪ್ರಶ್ನೆ' ಲೇಖನದ ಬಗ್ಗೆಯೂ ಹೇಳಬಹುದು. ಆದರೆ ಅವರು ಆ ವಿಧಾನವನ್ನು ನಮ್ಮ ಬರವಣಿಗೆಯ ಮುಖ್ಯ ಧಾರೆಯಾಗಿ ಬಳಸಲು ಬಯಸಿದಂತಿಲ್ಲ. ಡಿ.ಎಸ್.ಎನ್ ಅವರು ಮುಖ್ಯವಾಗಿ ವಿಶ್ಲೇಷಣೆ ಮಾಡುವ ಅಂಕಣಕಾರ. ಅವರು ಬರೆದಿರುವುದು ಗಂಭೀರ ಶೈಲಿಯಲ್ಲಿ. ಅವರ ಬರವಣಿಗೆಯಲ್ಲಿ ತರ್ಕಸರಣಿ, ವಿವರಣೆ ಹಾಗೂ ವಾದಾಂಶ ಮಂಡನೆ ಹಾಗೂ ಖಂಡನೆ ಇವುಗಳು ಪ್ರಧಾ ನವಾಗಿರುವುದನ್ನು ಈ ಲೇಖನಗಳು ಪ್ರಸ್ತುತಪಡಿಸುತ್ತವೆ. ಕಾಲಹರಣದ ಬರವಣಿಗೆ, ಕಾಲಕ್ಷೇಪದ ಮಾತುಕತೆ ಎರ ಡರ ಬಗ್ಗೆಯೂ ಅವರಿಗೆ ಆಕ್ಷೇಪಗಳಿವೆ. ಅದು ಸರಿಯಾ ದುದಾಗಿದೆ. ಅದರಿಂದಾಗಿಯೇ ಈ ಅಂಕಣ ಬರಹಗಳು ಹಲವಾರು ಕಡೆ ವಿಚಾರ ಸಂಕಿರಣದ ಪ್ರಬಂಧಗಳ ಸ್ವರೂ ಪವನ್ನೂ ಪಡೆದುಕೊಂಡುಬಿಟ್ಟಿವೆ.

ಡಿ.ಎಸ್.ಎನ್ ಅವರು ಈ ಬರವಣಿಗೆಯ ಮೂಲಕ ಕನ್ನಡ ಓದುಗರಿಗೆ ಗಂಭೀರವಾದ ಹಲವು ಸಮಸ್ಯೆಗಳ ಬಗ್ಗೆ ತಮಗಿರುವ ಚಿಂತನೆಗಳನ್ನು ಮಂಡಿಸಿ ದ್ದಾರೆ. ಸಾರ್ವತ್ರಿಕ ಜೀವನಕ್ಕೆ ಸಂಬಂಧಪಟ್ಟ ವಿಷಯ ಯಾವುದೇ ಆಗಿರಲಿ ಆ ಬಗ್ಗೆ ತಮ್ಮದೊಂದು ಖಚಿತ ನಿಲುವನ್ನು ಪ್ರತಿಪಾದಿಸುವ ಉದ್ದೇಶವಿಟ್ಟುಕೊಂಡು ರೂಪು ಗೊಂಡಿರುವ ಈ ಲೇಖನಗಳು ಸಕಾಲಿಕವಾಗಿರುವುದು ಮಾತ್ರವಲ್ಲದೆ ಅರ್ಥಪೂರ್ಣ ಒಳನೋಟಗಳನ್ನೂ ಒದಗಿ ಸುತ್ತಿವೆ.

ಲೇಖನನೊಬ್ಬ ಎಷ್ಟೋ ಸಾರ್ವತ್ರಿಕ ಆಶಯಗಳ ನ್ನಿಟ್ಟುಕೊಂಡು ಚಿಂತಿಸಿ ಬರೆದಾಗಲೂ, ತನ್ನ ವ್ಯಕ್ತಿತ್ವದ ವಿಭಿನ್ನತೆಯಾನುಸಾರ ಅವುಗಳಿಗೊಂದು ಚರ್ಚೆಯ ಆಯಾಮ ಕಲ್ಪಿಸಿರುತ್ತಾನೆ. 'ವಸಿಷ್ಠರು ಮತ್ತು ವಾಲ್ಮೀಕಿ ಯರು' ಕೃತಿಯಲ್ಲಿರುವ ಬಹುಪಾಲು ಲೇಖನಗಳು ಈ ಬಗೆಯ ಚರ್ಚೆಯನ್ನು ಆಹ್ವಾನಿಸುತ್ತವೆ. ತಮ್ಮ ಆಶಯ ಗಳನ್ನು ಬರವಣಿಗೆಯಲ್ಲಿ ತರುವಾಗ 'ಸಾರ್ವಜನಿಕ ಶೀಲ' ನಿರ್ಮಾಣದ ಮಹತ್ತರ ಗುರಿಯೊಂದನ್ನು ಡಿ ಎಸ್ ಎನ್ ಇಟ್ಟುಕೊಂಡಿದ್ದಾರೆ.

ಹಾಗಾಗಿ ಇಲ್ಲಿನ ಬಹುಪಾಲು ಲೇಖನಗಳಲ್ಲಿ ಆಗ್ರ ಹಪೂರ್ವಕ ಧ್ವನಿ, ವಿಷಯಗಳನ್ನು ಮಂಡಿಸುವಾಗ ವಾದ ಮಂಡನೆ ಆವೇಶ ಹಾಗೂ ನಿರ್ದಾಕ್ಷಿಣ್ಯ ಖಂಡನೆ ಇವು ಅಲ್ಲಲ್ಲಿ ಕಂಡುಬರುತ್ತವೆ. ಇದು ಡಿ.ಎಸ್.ಎನ್ ಬರವಣಿ ಗೆಯ ಒಂದು ಲಕ್ಷಣ. ತಾವು ಪ್ರಾಸಂಗಿಕವಾದ ಘಟನಾವ ಳಿಯನ್ನು ವಿವರಿಸುತ್ತಿರಲಿ, ಅಥವಾ ತಾತ್ವಿಕ ಪ್ರಮೇಯಗಳ ಚರ್ಚೆ ನಡೆಸುತ್ತಿರಲಿ ಈ ಆಗ್ರಹಪೂರ್ವಕ ನಿಲುವಿನ ಪ್ರತಿ ಪಾದನೆಯನ್ನು ಡಿಎಸ್ಎನ್ ಇಲ್ಲಿನ ಲೇಖನಗಳಲ್ಲಿ ಮಾಡಿ ದ್ದಾರೆ. ರಾಜಕೀಯ ಕ್ಷೇತ್ರ ಅಥವಾ ಸಾಂಸ್ಕೃತಿಕ ಕ್ಷೇತ್ರಗಳ ಲ್ಲಿರುವ ವ್ಯಕ್ತಿಗಳ ವರ್ತನೆಗಳು, ಧೋರಣೆಗಳು ಇವುಗಳ ಬಗ್ಗೆ ಒಂದು ನಿಗಾ ಇಟ್ಟಿದ್ದು ಅದರಲ್ಲಿ ಕಂಡು ಬರುವ ಲೋಪಗಳ ಬಗ್ಗೆ ಅಥವಾ ಗುಣಗಳ ಬಗ್ಗೆ ತಮ್ಮ ಅಭಿಪ್ರಾ ಯವನ್ನು ಮಂಡಿಸುವುದನ್ನು ಇಲ್ಲಿನ ಹಲವಾರು ಲೇಖನ ಗಳಲ್ಲಿ ಕಾಣಬಹುದಾಗಿದೆ.

ಡಿಎಸ್ಎನ್ ಇಲ್ಲಿನ ಕೆಲವು ಲೇಖನಗಳಲ್ಲಿ ವ್ಯಕ್ತಪ ಡಿಸುವ ನೈತಿಕ ಸಿಟ್ಟು ಕೆಲವರಿಗೆ ಸಿನಿಕತನವೆಂಬಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಆದರೆ ಈ ಬಗೆಯ ಸಿಟ್ಟಿನ ಹಿಂದಿರುವುದು ಜನಹಿತ ಕಾಳಜಿ ಎತ್ತಿ ಹಿಡಿಯುವ ರಚನಾತ್ಮಕ ಗುಣದ್ದು ಎನ್ನುವುದನ್ನು ಇಲ್ಲಿನ ಲೇಖನಗಳು ಹೇಳುತ್ತವೆ. ಕೃತಿಗೆ ಬೆನ್ನುಡಿ ಬರೆದಿರುವ ಖ್ಯಾತ ಅಂಕಣ ಕಾರ ದಿನೇಶ್ ಅಮೀನ್‌ಮಟ್ಟು ಕೂಡ ಈ ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. "ಅವುಗಳನ್ನು ಓದಿದಾಗಲೆಲ್ಲ ನನ್ನನ್ನು ಸೆಳೆಯುವುದು ಅವರ ಬರಹಗಳಲ್ಲಿ ಸದಾ ಪ್ರಜ್ವ ಲಿಸುತ್ತಿರುವ ಸಿಟ್ಟು, ಆ ಸಿಟ್ಟಿನಲ್ಲಿ ಅನ್ಯಾಯವನ್ನು ಸುಟ್ಟು ಹಾಕಬೇಕೆನ್ನುವ ಬೆಂಕಿಯ ಜೊತೆಯಲ್ಲಿ, ಸಮಾಜದ ಹಿತ ಕ್ಕಾಗಿ ತುಡಿಯುವ ಅಂತಃಕರಣದ ಬೆಳಕೂ ಇದೆ. ಹಾಗಾ ಗಿಯೇ ಈ 'ಸಿಟ್ಟಿನ ಅಪರಾವತಾರಿ' ಒಂದು ಪುಟ್ಟ ಬೆಕ್ಕಿನ ಸಾವಿಗೂ ಕರಗಿಹೋಗುತ್ತಾರೆ. ಈ ಅಪ್ಪಟ ಮನುಷ್ಯ ಗುಣವೇ ಅವರ ಬರವಣಿಗೆಗಳತ್ತ ನಮ್ಮನ್ನು ಸೆಳೆಯು ವುದು".

ಡಿ.ಎಸ್.ಎನ್ ಅವರು ಈ ಬರವಣಿಗೆಯ ಮೂಲಕ ಕನ್ನಡ ಓದುಗರಿಗೆ ಗಂಭೀರವಾದ ಹಲವು ಸಮಸ್ಯೆಗಳ ಬಗ್ಗೆ ತಮಗಿರುವ ಚಿಂತನೆಗಳನ್ನು ಮಂಡಿಸಿದ್ದಾರೆ. ಸಾರ್ವತ್ರಿಕ ಜೀವನಕ್ಕೆ ಸಂಬಂಧಪಟ್ಟ ವಿಷಯ ಯಾವುದೇ ಆಗಿರಲಿ ಆ ಬಗ್ಗೆ ತಮ್ಮದೊಂದು ಖಚಿತ ನಿಲುವನ್ನು ಪ್ರತಿಪಾದಿಸುವ ಉದ್ದೇಶವಿಟ್ಟುಕೊಂಡು ರೂಪುಗೊಂಡಿರುವ ಈ ಲೇಖನಗಳು ಸಕಾಲಿಕವಾಗಿರುವುದು ಮಾತ್ರವಲ್ಲದೆ ಅರ್ಥಪೂರ್ಣ ಒಳನೋಟಗಳನ್ನೂ ಒದಗಿಸುತ್ತಿವೆ. ಲೇಖನನೊಬ್ಬ ಎಷ್ಟೋ ಸಾರ್ವತ್ರಿಕ ಆಶಯಗಳನ್ನಿಟ್ಟುಕೊಂಡು ಚಿಂತಿಸಿ ಬರೆದಾಗಲೂ, ತನ್ನ ವ್ಯಕ್ತಿತ್ವದ ವಿಭಿನ್ನತೆಯಾನುಸಾರ ಅವುಗಳಿಗೊಂದು ಚರ್ಚೆಯ ಆಯಾಮ ಕಲ್ಪಿಸಿರುತ್ತಾನೆ. 'ವಸಿಷ್ಠರು ಮತ್ತು ವಾಲ್ಮೀಕಿಯರು' ಕೃತಿಯಲ್ಲಿರುವ ಬಹುಪಾಲು ಲೇಖನಗಳು ಈ ಬಗೆಯ ಚರ್ಚೆಯನ್ನು ಆಹ್ವಾನಿಸುತ್ತವೆ.

ಮಾಹಿತಿ, ವಿಷಯ ನಿರ್ದಿಷ್ಟತೆ ಮತ್ತು ಅವುಗಳ ಮಂಡನೆಯ ಹಿಂದೆ ಗಟ್ಟಿ ನಂಬುಗೆಯಿಂದ ಹೊರಟಿರುವ ನಿಲುವುಗಳು ಹಾಗೂ ಸಂಗತಿಗಳಿಗೆ ಎದುರಾಗುವಾಗ ಅವುಗಳ ಆಂತರ್ಯವನ್ನು ಸೂಚಿಸುವ ಒಳನೋಟಗಳು 'ವಸಿಷ್ಠರು ಮತ್ತು ವಾಲ್ಮೀಕಿಯರು' ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ.

"ಮುಖ್ಯಮಂತ್ರಿ ಚಂದ್ರು ಅವರಿಗೆ, ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸಂದರ್ಭದಲ್ಲಿ ಬರೆದ ಬಹಿರಂಗ ಪತ್ರದ ಬಗ್ಗೆ ನನಗೀಗ ವಿಷಾದವೆನಿಸುತ್ತಿದೆ. ಬೆಂಗಳೂರಿನ ಸಮಾರಂಭವೊಂದರಲ್ಲಿ ಭೇಟಿಯಾಗಿದ್ದಾಗ, ಚಲನಚಿತ್ರಗಳಲ್ಲಿ ಅವರ ವಿಚಿತ್ರ ಅವತಾರಗಳನ್ನು ನೋಡಿಯೂ, ಈ ಮನುಷ್ಯನಿಗೆ ನಾಡು-ನುಡಿಗಳ ಬಗ್ಗೆ ಆಳವಾದ ಬದ್ಧತೆಯಿದೆ, ತಿಳುವಳಿಕೆಯೂ ಇದ್ದಂತಿದೆ ಎಂದು ನಾನು ಮಾಡಿಕೊಂಡ ಕಲ್ಪನೆ ಎಷ್ಟು ಹುಸಿಯಾ ಗಿದೆ! ಇದು ಅಧಿಕಾರ ಸ್ಥಾನ ಸಿಗುವವರೆಗೂ ಕನ್ನಡದ ಬಗ್ಗೆ ಇನ್ನಿಲ್ಲದ ಆರ್ಭಟ ನಡೆಸಿದ ಈ ವ್ಯಕ್ತಿ, ಈಗ ಅಧಿ ಕಾರದ ಸುಖದಲ್ಲಿ ಬೆಂಗಳೂರಿನ ಕನ್ನಡ ಬೋರ್ಡುಗಳ ಮೇಲ್ವಿಚಾರಕನ ಮಟ್ಟಕ್ಕಿಂತ ಮೇಲೇರಲು ಸಾಧ್ಯವಾಗದಿರು ವುದರ ಬಗೆಗಿನ ವಿಷಾದವಿದಷ್ಟೆ!"

ಈ ಬಗೆಯ ನಿಲುವುಗಳನ್ನು ವ್ಯಕ್ತಪಡಿಸುವಾಗ ಡಿ ಎಸ್ಎನ್ ಸಮರ್ಥನೆಗಳನ್ನು ಮುಂದೊಡ್ಡುವ ವಿಧಾನ ಬಳಸುವುದಿಲ್ಲ ಎಂಬ ಕಾರಣಕ್ಕೆ, ಯಾವುದು ಸರಿ ಕಂಡರೂ ಮುಕ್ತವಾಗಿ ಮೆಚ್ಚುವ, ಹಾಗೆಯೇ ಅದರೊಳಗೆ ಹುಳುಕು ಕಂಡೊಡನೆ ಮುಲಾಜಿಲ್ಲದೆ ಖಂಡಿಸುವ ತಾಜಾ ತನದ ಕಾರಣಕ್ಕೆ ಮೆಚ್ಚುಗೆ ಮೂಡುತ್ತದೆ. ಆದರೆ ಮೆಚ್ಚು ಗೆಯ ನಿಲುವನ್ನು ಬಹಿರಂಗವಾಗಿ ಹೇಳುವ ಮೊದಲು ಮತ್ತಷ್ಟು ಸಾವಧಾನದ ಪರಿಶೀಲನೆಯನ್ನು ನಡೆಸುವುದು ಅಪೇಕ್ಷಣೀಯವಾಗಿತ್ತು ಎಂದು ಅನಿಸುತ್ತದೆ. ಹಾಗೆಯೇ ಅವಸರವಾಗಿ ಮೆಚ್ಚುವ ಅದೇ ವೇಗದಲ್ಲಿ ಖಂಡಿಸುವ ರೀತಿಗಳು ತಮ್ಮ ವ್ಯಕ್ತಿತ್ವದೊಳಗಿನ ನಿಷ್ಠುರತೆಯನ್ನು ಬಿಂಬಿ ಸುವ ಸಾಧನವೆಂಬಂತೆ ಬಳಕೆಯಾದಂತಾಗು ವುದಿಲ್ಲವೇ ಎಂಬ ಆಕ್ಷೇಪಣೆಯೂ ಹುಟ್ಟುತ್ತದೆ.

ಡಿಎಸ್ಎನ್ ಬರವಣಿಗೆಯಲ್ಲಿ ಆವೇಶದ ಒಂದು ಗುಣ ಇರುವುದನ್ನು ನಾವು ಹಲವೆಡೆಗಳಲ್ಲಿ ಗುರುತಿಸಬ ಹುದಾಗಿರುವಂತೆ ತಮ್ಮ ನಂಬುಗೆಯ ವಿಚಾರಗಳನ್ನು ಕೇವಲ ಹಟಮಾರಿತನದಿಂದ ಮಾತ್ರ ಅವರು ಪ್ರತಿಪಾದಿಸು ವವರಲ್ಲ-ಸಾರ್ವಜನಿಕಗೊಳ್ಳುವ ಪ್ರತಿಯೊಂದು ಅಭಿಪ್ರಾ ಯದ ಬಗ್ಗೆ ಅವರು ಆವೇಶ ಮೀರಿದ ಜಿಜ್ಞಾಸೆ ನಡೆಸು ತ್ತಾರೆ ಎಂಬುದಕ್ಕೂ ಉದಾಹರಣೆಗಳನ್ನು ಈ ಕೃತಿಯೊ ಳಗೆ ಕಾಣಬಹುದು. 'ವಿ.ಪಿ.ಸಿಂಗ್ ಮಾದರಿ' ಎಂಬ ಲೇಖನ ಇದಕ್ಕೊಂದು ಉದಾಹರಣೆಯಾಗಿದೆ. ಸಮಾ ರಂಭವೊಂದರಲ್ಲಿ ಸಂಘಟಕರು ವಿ.ಪಿ.ಸಿಂಗ್ ಭಾವಚಿತ್ರ

ವನ್ನು ಕೊಡುಗೆಯಾಗಿ ನೀಡಿದ ಬಗ್ಗೆ ವಿವರಿಸುತ್ತಾ ಶುರುವಾಗುವ ಲೇಖನ, ಲೋಹಿಯಾ, ಜೆಪಿ ಮುಂತಾದ ಆದರ್ಶ ಮಾದರಿ ವ್ಯಕ್ತಿಗಳ ಸಾಲಿನಲ್ಲಿ ವಿ. ಪಿ. ಸಿಂಗ್‌ರನ್ನು ಪರಿಗಣಿಸಲು ಸಾಧ್ಯವೇ ಎಂದು ಚಿಂತಿಸುತ್ತಾ, ಆ ಭಾವ ಚಿತ್ರ ಬಿಸಾಡಲೂ ಮನಸ್ಸಿಲ್ಲದೆ, ಸಿಂಗ್ ಅವರ ರಾಜಕೀಯ ಜೀವನದ ತತ್ವಾದರ್ಶಗಳನ್ನು ಪರಿಶೀಲಿಸಿದ್ದನ್ನು ವಿವರಿಸಿದ್ದಾರೆ. ಅವಕಾಶವಾದವನ್ನು ಮೀರಿದ ಸಾಮಾಜಿಕ ನ್ಯಾಯದ ಬದ್ಧತೆಯೊಂದು ಅವರಲ್ಲಿತ್ತು ಎಂಬುದನ್ನು ಮನಗಂಡ ಮೇಲೆ ಅವರು ಬರೆಯುತ್ತಾರೆ–

"ಇಷ್ಟು ವ್ಯಾಪಕವಾದದ್ದು, ಆವೃತವಾದದ್ದು, ತತ್ವ ಬದ್ಧವಾದದ್ದು, ಪ್ರಾಮಾಣಿಕವಾದದ್ದು, ನಿಸ್ವಾರ್ಥಮಯವಾದದ್ದು ವಿ. ಪಿ.ಸಿಂಗ್ ಅವರ ಸಾಮಾಜಿಕ ನ್ಯಾಯದ ರಾಜಕಾರಣ. ಇವರ ಆದರ್ಶದ ಹೆಸರು ಹೇಳಿಕೊಂಡು ಸಾಮಾಜಿಕ ನ್ಯಾಯದ ಕೂಗು ಹಾಕುವವರು ಇಂತಹ ರಾಜಕಾರಣದ ಶೇಕಡಾ ಒಂದರಷ್ಟನ್ನಾದರೂ ಅನುಸರಿಸಿದರೆ ಅವರ ರಾಜಕಾರಣಕ್ಕೆ ಮತ್ತು ಸಾಮಾಜಿಕ ನ್ಯಾಯ ಕಲ್ಪನೆಗೆ ಒಂದು ಘನತೆ ಒದಗೀತು" ಎಂದು ಮುಂದುವರಿಯುವ ಲೇಖನ ಪ್ರಾದೇಶಿಕ ರಾಜಕಾರಣ ಹೇಗೆ ಕೌಟುಂಬಿಕ ನ್ಯಾಯದ ರಾಜಕಾರಣವಾಗಿದೆ ಎಂದು ವಿವರಿಸುತ್ತದೆ. ಈ ಲೇಖನದಲ್ಲಿ ಅಹಿಂದ ನಾಯಕ ಸಿದ್ದರಾಮಯ್ಯನವರ ಬಗ್ಗೆ ಡಿಎಸ್‌ಎನ್ ಅವರಿಗಿರುವ ಗ್ರಹಿಕೆ ಕೂಡ ಬಂದಿದೆ.(ಪುಟ 213) ಲೇಖನದ ಅಂತ್ಯದಲ್ಲಿ ಡಿಎಸ್‌ಎನ್ ವಿ.ಪಿ.ಸಿಂಗ್ ಬಗ್ಗೆ ತಳೆಯುವ ನಿಲುವು ಕುತೂಹಲಕಾರಿಯಾಗಿದೆ–"ಇಷ್ಟೆಲ್ಲ ಯೋಚಿಸಿದ ನಾನು ಕೊನೆಗೆ, ವಿ.ಪಿ. ಸಿಂಗ್ ಅವರ ಭಾವಚಿತ್ರವನ್ನು ನನ್ನ ಗ್ರಂಥ ಭಂಡಾರದ ಕೋಣೆಯಲ್ಲಿರಿಸಲು ನಿರ್ಧರಿಸಿದೆ. ಅದಿನ್ನೂ ಮನೆಯ ಹಜಾರಕ್ಕೆ ಬರಲು ಕಾಲವಿದೆ ಎಂದೆನ್ನಿಸಿದ್ದರಿಂದ!"

ಈ ಲೇಖನದಲ್ಲಿರುವ ಮರುಮೌಲ್ಯಮಾಪನ ಸ್ವರೂಪದ ಚಿಂತನೆ ಅನುಸರಿಸಿ ಹೇಳುವುದಾದರೆ ವಿ. ಪಿ.ಸಿಂಗ್ ಅವರ ರಾಜಕೀಯ ಬದ್ಧತೆಯನ್ನು ಗಮನಿಸಿ ಆಧುನಿಕ ಕಾಲಘಟ್ಟದ 'ಸಾಮಾಜಿಕ ನ್ಯಾಯ' ಸಾಧನೆಯ ಹಾದಿಯಲ್ಲಿ ಅವರನ್ನೂ ಒಂದು ಮಾದರಿಯಾಗಿ ಸ್ವೀಕರಿಸಲು ಸಾಧ್ಯವಾಗುವುದಾದರೆ, ಕರ್ನಾಟಕದ ರಾಜಕಾರಣದ ಹಿನ್ನೆಲೆಯಲ್ಲಿ ಬೇರೆ ಬೇರೆ ಮಿತಿಗಳ ನಡುವೆಯೂ ದೇವರಾಜ ಅರಸುರವರನ್ನು ಸಮಾಜವಾದಿ ಚಿಂತಕರು ಅದೇ ರೀತಿಯಲ್ಲಿ ಪರಿಗಣಿಸಲು ಸಾಧ್ಯವಾಗಬಹುದಲ್ಲದೇ ಎಂಬ ಚರ್ಚೆಯನ್ನು ಹುಟ್ಟುಹಾಕುವಂತಿದೆ.

ಕೋಮುವಾದ, ಧರ್ಮ ಮತ್ತು ಸಂಬಂಧಪಟ್ಟ ಸಮಕಾಲೀನ ಸಂದಿಗ್ಧಗಳ ಬಗ್ಗೆ ಬೆಳಕು ಚೆಲ್ಲುವ ಲೇಖನಗಳು ಈ ಕೃತಿಯಲ್ಲಿ ಗಮನಾರ್ಹವಾಗಿದ್ದು ಹೆಚ್ಚಿನ ಚರ್ಚೆ ಮತ್ತು ಸಂವಾದಕ್ಕೆ ಕಾರಣವಾಗುವಂತಿವೆ. 'ಬುದ್ಧನ ನೆನಪಲ್ಲಿ ಕೆಲವು ಸತ್ಯಗಳನ್ನು ಧ್ಯಾನಿಸುತ್ತಾ' ಲೇಖನದಲ್ಲಿ ಇಂತಹುದೊಂದು ಮರು ಅವಲೋಕನದ ಪ್ರಯತ್ನವಿದೆ. ಬೌದ್ಧ ಧರ್ಮದ ನಾಶಕ್ಕೆ ಯಾರು ಕಾರಣ ಮತ್ತು ಬೌದ್ಧರಾಗಿ ಮತಾಂತರಗೊಳ್ಳುವುದಕ್ಕಿಂತ ಬೇರೆ ಮಾರ್ಗಗಳು ಏನಿವೆ ಎಂಬ ಜಿಜ್ಞಾಸೆ ಈ ಲೇಖನದಲ್ಲಿದೆ. ನಮ್ಮ "ಬದುಕಿನ ದಾಹವನ್ನು ವಿವಿಧ ನೆಲೆಗಳಲ್ಲಿ ಹೆಚ್ಚಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನು ಪಡೆದು ನಿರಾಳವಾಗುತ್ತೇವೆ! ಇಂತಹ ಆತ್ಮ ದ್ರೋಹದ ಆವೇಶದಲ್ಲಿ ನಮ್ಮಲ್ಲಿ ಕೆಲವರು ಬುದ್ಧನನ್ನು ಭಾರತೀಯ ಧರ್ಮ ಪರಂಪರೆಯ ಪ್ರತಿನಾಯಕನಂತೆ ಪ್ರಸ್ತುತಪಡಿಸುತ್ತಾ, ಆತನ ಮತ್ತು ಆತನ ಧರ್ಮದ ಸ್ವಾಯತ್ತತೆಯನ್ನು ಅಲ್ಲಗಳೆಯುವ ಮೂರ್ಖ



ವಿ. ಪಿ. ಸಿಂಗ್

'ಇಂದಿನ ರಾಜಕಾರಣ ಮತ್ತು ಹಿಂದ್ ಸ್ವರಾಜ್' ಲೇಖನ ಅತ್ಯಂತ ಚಿಂತನಾರ್ಹವಾಗಿದ್ದು ಈ ಸಂಕಲನದ ಮುಖ್ಯ ಲೇಖನಗಳಲ್ಲೊಂದಾಗಿದೆ. ಕೈಗಾರಿಕೀಕರಣಕ್ಕೆ ಗಾಂಧೀಜಿಯವರಿಗಿದ್ದ ವಿರೋಧಕ್ಕೆ ಅರ್ಥವೇನು? ಇಂದಿನ "ತಂತ್ರಜ್ಞಾನದ ಸುಖ ಫಲಗಳ ಪರಿಭಾಷೆಯಲ್ಲಿ ಮಾತನಾಡುತ್ತಾ ಎಲ್ಲರನ್ನೂ ನಿರಂತರ ದಾಹಿಗಳನ್ನಾಗಿಯೂ, ಶಾಶ್ವತ ಅತೃಪ್ತರನ್ನಾಗಿಯೂ ಮಾಡತೊಡಗಿದ್ದ ಆಧುನಿಕ ನಾಗರೀಕತೆಯನ್ನು ಅವರು ತಿರಸ್ಕರಿಸಿದ್ದು, ಅಪಾಯಕಾರಿ ಎಂದು ಎಚ್ಚರಿಸಿದ್ದು" (ಪುಟ 280) ಎಂದು ಅರ್ಥೈಸುವ ಮೂಲಕ 'ಹಿಂದ್ ಸ್ವರಾಜ್' ಕೃತಿಯ ನಿಲುವುಗಳು ಈಗಲೂ ಅರ್ಥಪೂರ್ಣ ಎಂದು ಪ್ರತಿಪಾದಿಸಿದ್ದಾರೆ.

ತನಕ್ಕೂ ಕೈಹಾಕುತ್ತಿದ್ದೇವೆ" (ಪು. 17–18) ಎಂಬ ಡಿಎಸ್‌ಎನ್ ಅಭಿಪ್ರಾಯ ಚಿಂತನಾರ್ಹವಾಗಿದೆ. ಜೊತೆಗೆ ಚರ್ಚಾಸ್ಪದ ಅಂಶಗಳನ್ನೂ ಒಳಗೊಂಡಿದೆ.

"ಆದರೆ ತನ್ನ ಜೀವನ ದರ್ಶನಕ್ಕೆ ವಿರುದ್ಧವಾದ ಇದನ್ನು ಸಹಿಸಲಾಗದ ಹೊಸ ವೈದಿಕ ಪುರೋಹಿತಶಾಹಿಯು ಇಂದು ವಿಭಿನ್ನ ತಾತ್ವಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪುನರ್‌ಸಂಘಟಿತಗೊಂಡು ಹಿಂದುತ್ವವೆಂಬ ಹೊಸ ಹೆಸರಲ್ಲಿ ಹಿಂದೂ ಧರ್ಮದ ಈ ಬೌದ್ಧ ಹೃದಯ ಕೇಂದ್ರವನ್ನು ನಾಶಪಡಿಸುವ ಪ್ರಯತ್ನದಲ್ಲಿ ತೊಡಗಿದೆ. ಇದನ್ನು ಇಂದಿನ ಪರಿಸ್ಥಿತಿಯಲ್ಲಿ ನಾವು 'ಹಿಂದೂ'ವಾಗಿ ಇದ್ದುಕೊಂಡೇ ಬುದ್ಧನಿಗೆ ನಮಸ್ಕರಿಸುವ ಮೂಲಕ ಮಾತ್ರ ಪರಿಣಾಮಕಾರಿಯಾಗಿ ಎದುರಿಸಬಹುದು. ಆ ಮೂಲಕ ಮಾತ್ರ ಹಿಂದೂ ಧರ್ಮ ತನ್ನ ಬಹುಮುಖಿ ಸಂಸ್ಕೃತಿಯನ್ನು ಉಳಿಸಿಕೊಂಡು ಬುದ್ಧನಿಂದ ಸ್ಫೂರ್ತಿಯನ್ನು ಪಡೆಯಬಹುದು ಎಂಬುದು ನನ್ನ ನಮ್ರ ಅಭಿಪ್ರಾಯವಾಗಿದೆ".

'ಹಿಂದೂ' ಎಂಬ ಹೆಸರಿನಲ್ಲಿ ನಿರ್ದೇಶಿಸಲ್ಪಡುತ್ತಿರುವ ಧರ್ಮವೊಂದರಲ್ಲಿ ಹಲವು ಪದರುಗಳಿದ್ದು, ಅದರ ತಳ ಪದರಗಳಲ್ಲಿ ಅಥವಾ ಕೇಂದ್ರ ಲಾಂಛನವಾಗಿ ಬಿಂಬಿತವಾಗಿರುವ ವೈದಿಕ ಧರ್ಮಕ್ಕೆ ಪರ್ಯಾಯ ಪರಿಧಿಗಳಲ್ಲಿರುವವುಗಳಲ್ಲಿ ಬೌದ್ಧ ಹೃದಯ ಕೇಂದ್ರವೊಂದು ಜೀವಂತವಾಗಿದೆ ಎಂಬ ಅಂಶವನ್ನು ಒಪ್ಪಬಹುದಾಗಿದೆ. ಜನಪದರ ಲೋಕದೃಷ್ಟಿ ಮತ್ತು ಜೀವನ ದರ್ಶನಗಳಲ್ಲು ಇದು ಕಂಡು ಬರುತ್ತಿರಬಹುದು. ಹಾಗಿದ್ದರೂ 'ಹಿಂದೂ' ಎಂಬುದಕ್ಕೆ ಈ ಸನ್ನಿವೇಶದಲ್ಲಿ ಪ್ರಾಪ್ತವಾಗಿರುವ ಢಾಳಾದ ಬಣ್ಣ ಯಾವುದಾಗಿದೆ? ಮೇಲ್ಜಾತಿ ಸಾಂಸ್ಕೃತಿಕ ನೀತಿಗಳ ಅನುಸಾರವಾಗಿ ನವಪುರೋಹಿತ ಶಾಹಿಯ ನೇತೃತ್ವ ಮತ್ತು ನಿಯಂತ್ರಣದಲ್ಲಿ ಅದು ಸೇರಿ ಹೋಗಿರುವುದೇ ನಮ್ಮೆದುರಿಗಿರುವ ವಾಸ್ತವವಾಗಿದೆ. 'ಹಿಂದೂತ್ವ'ವು ಮರೆಸುತ್ತಿರುವ ಧರ್ಮಕ್ಕೆ ಭಿನ್ನವಾಗಿ ಜನರಲ್ಲಿರುವ ಸಾಂಸ್ಕೃತಿಕತೆಗೆ ಹಾಗೂ ಧಾರ್ಮಿಕತೆಗೆ ಸ್ಪಷ್ಟ ಚಹರೆಗಳನ್ನು ನಿರ್ವಚಿಸಿ ಅದರ ಹೃದಯವಂತ ಗುಣಗಳನ್ನು ಕ್ರೋಡೀಕೃತ ರೂಪದಲ್ಲಿ ಬಿಂಬಿಸುವ ಜವಾಬ್ದಾರಿಯನ್ನು ನಿರ್ವಹಿಸದೆ, ನಮ್ಮನ್ನು ನಾವು 'ಹಿಂದೂ' ಎಂದು ಕರೆದುಕೊಂಡರೆ ಗೊಂದಲವುಂಟಾಗುವ ಸಾಧ್ಯತೆ ಇಲ್ಲವೆ ಎಂಬ ಚರ್ಚೆಯನ್ನು ಈ ನಿಲುವಿನ ಹಿನ್ನೆಲೆಯಲ್ಲಿ ಮಾಡಬೇಕಾಗುತ್ತದೆ.

'ವಸಿಷ್ಠರು ಮತ್ತು ವಾಲ್ಮೀಕಿಯರು' ಕೃತಿಯಲ್ಲಿ ವರ್ತಮಾನದ ವಿದ್ಯಮಾನಗಳ ಬಗ್ಗೆ ಸೂಕ್ಷ್ಮವಾದ ವಿಶ್ಲೇಷಣಾತ್ಮಕ ಅಂಶಗಳಿದ್ದು ಅವು ಮೌಲಿಕವಾಗಿವೆ. "ಶಾಸನ ಸರ್ವಾಧಿಕಾರದ ಆತಂಕವಾಯಿತು. ಅಧಿಕಾರ ಸರ್ವಾಧಿಕಾರದ ಆತಂಕವಾಯಿತು. ನಂತರ ನ್ಯಾಯಾಂಗ ಸರ್ವಾಧಿಕಾರದ ಆತಂಕವಾಯಿತು. ಈಗ ಮಾಧ್ಯಮಗಳ ಸರ್ವಾಧಿಕಾರದ ಆತಂಕ ಕಾಣಬರುತ್ತಿದೆ. ಈ ಎಲ್ಲ ಆತಂಕಗಳೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವೇ" ಎಂಬುದು ಡಿ.ಎಸ್.ಎನ್ ಅವರ ಆತಂಕ. ಖಾಸಗಿ ಮಾಲೀಕತ್ವದಡಿಯಲ್ಲಿ ನಡೆಯುತ್ತಾ, ತಮ್ಮ ವೀಕ್ಷಕ ಜಾಲವನ್ನು ವಿಸ್ತರಿಸಿಕೊಳ್ಳುವ ಆಕಾಂಕ್ಷೆಯಿಂದ ಪ್ರಚೋದನಾಕಾರಿ ಸುದ್ದಿ, ಮಾಹಿತಿ, ಗಾಳಿಸುದ್ದಿಗಳನ್ನು ಅವು ಹರಡುತ್ತಿರುವುದಕ್ಕೆ ಅಂಕುಶಗಳಿಲ್ಲದಂತಾಗಿದೆ. ಸಾಮಾಜಿಕ ಸನ್ನಿವೇಶದ ಸ್ವಾಸ್ಥ್ಯವನ್ನು ತಮ್ಮ ಜಾಹೀರಾತು ಮಾರಾಟದ ಆಕಾಂಕ್ಷೆಗೋಸ್ಕರ ಬಲಿ ಕೊಡಲು ಸಿದ್ಧವಾಗಿರುವ ಮಾಧ್ಯಮಗಳ ಹೊಣೆಗೇಡಿತನವನ್ನು ಈ ಲೇಖನ ಸಕಾರಣವಾಗಿ ಟೀಕಿಸಿದೆ.

'ಇಂದಿನ ರಾಜಕಾರಣ ಮತ್ತು ಹಿಂದ್ ಸ್ವರಾಜ್' ಲೇಖನ ಅತ್ಯಂತ ಚಿಂತನಾರ್ಹವಾಗಿದ್ದು ಈ ಸಂಕಲನದ ಮುಖ್ಯ ಲೇಖನಗಳಲ್ಲೊಂದಾಗಿದೆ. ಕೈಗಾರಿಕೀಕರಣಕ್ಕೆ ಗಾಂಧೀಜಿಯವರಿಗಿದ್ದ ವಿರೋಧಕ್ಕೆ ಅರ್ಥವೇನು? ಇಂದಿನ "ತಂತ್ರಜ್ಞಾನದ ಸುಖ ಫಲಗಳ ಪರಿಭಾಷೆಯಲ್ಲಿ ಮಾತನಾಡುತ್ತಾ ಎಲ್ಲರನ್ನೂ ನಿರಂತರ ದಾಹಿಗಳನ್ನಾಗಿಯೂ, ಶಾಶ್ವತ ಅತೃಪ್ತರನ್ನಾಗಿಯೂ ಮಾಡತೊಡಗಿದ್ದ ಆಧುನಿಕ ನಾಗರೀಕತೆಯನ್ನು ಅವರು ತಿರಸ್ಕರಿಸಿದ್ದು, ಅಪಾಯಕಾರಿ ಎಂದು ಎಚ್ಚರಿಸಿದ್ದು"(ಪುಟ 280) ಎಂದು ಅರ್ಥೈಸುವ ಮೂಲಕ 'ಹಿಂದ್ ಸ್ವರಾಜ್' ಕೃತಿಯ ನಿಲುವುಗಳು ಈಗಲೂ ಅರ್ಥಪೂರ್ಣ ಎಂದು ಪ್ರತಿಪಾದಿಸಿದ್ದಾರೆ. ಈ ಬಗೆಯ ತಾತ್ವಿಕ ನಿಲುವಿನ ಹಿನ್ನೆಲೆಯಲ್ಲಿ ಸ್ವಾರ್ಥಕೇಂದ್ರಿತ ಆಧುನಿಕ ನಾಗರೀಕತೆಯ ಬಗ್ಗೆ ಗಾಂಧಿ

ಯವರಿಗಿದ್ದ ವಿರೋಧವನ್ನು ನಾವು ಸಕಾರಾತ್ಮಕವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

"ಅವರ ಯಂತ್ರ, ರೈಲು, ವಕೀಲ, ಆಸ್ಪತ್ರೆಗಳ ವಿರೋಧವನ್ನೂ ನಾವು ಈ ನೆಲೆಯಲ್ಲೇ ಅರ್ಥಮಾಡಿಕೊಳ್ಳಬೇಕು. ಇವೆಲ್ಲ ಕೂಡಿಕೊಂಡ ನಗರಗಳು ಹಾವಿನ ಹುತ್ತಗಳಂತೆ ಎಂದಿದ್ದರು ಗಾಂಧಿ. ಇಂದಿನ ನಗರಗಳನ್ನು ನೋಡಿದರೆ ನಮಗಾದರೂ ಏನನ್ನಿಸುತ್ತದೆ?" (ಪುಟ 281) ಎಂಬಂತಹ ಡಿ.ಎಸ್.ಎನ್ ನಿಲುವುಗಳು ಮಾತ್ರ ಗಾಂಧಿಯವರ ಬಗ್ಗೆ ಸಮರ್ಥನಾ ವಾದಗಳಾಗಿಬಿಡುವ ಅಪಾಯ ಹೊಂದಿರುವುದನ್ನೂ ಈ ಸಮಯದಲ್ಲಿ ನಾವು ಗಮನಿಸಬೇಕಾಗುತ್ತದೆ.

ಹಿಂದ್ ಸ್ವರಾಜ್ ಕೃತಿಯ ಹಿಂದೆ ಕೆಲಸ ಮಾಡಿರುವ ತಾತ್ವಿಕ ಮನೋಭೂಮಿಕೆ ಇಂದಿನ ಜಾಗತೀಕರಣದ ಪಾಶವೀ ಪ್ರವೃತ್ತಿಯೆದುರು ಸ್ವೀಕಾರಾರ್ಹವಾಗಿ ಕಾಣಬಹುದು. ಆದರೆ ಅದನ್ನು ಪ್ರತಿ ವಿವರಗಳ ಸಮೇತ ಅಕ್ಷರಶಃ ಸ್ವೀಕಾರಾರ್ಹ ಎನ್ನಲು ಸಾಧ್ಯವೇ ಅಥವಾ ಅದರಲ್ಲಿ ಕೈಬಿಡಬಹುದಾದ ಅಂಶಗಳು ಇವೆಯೇ ಎಂದು ವಿಂಗಡಿಸಿ ಪರಿಶೀಲನೆ ಮಾಡಿದ್ದರೆ ಮತ್ತಷ್ಟು ಅರ್ಥಪೂರ್ಣತೆ ಬರುತ್ತಿತ್ತು. ಚಿಂತಕ, ತತ್ವಜ್ಞಾನಿ ತನ್ನ ಕಾಲಘಟ್ಟದ ಹಿನ್ನೆಲೆಯಲ್ಲಿ, ತನ್ನ ಅನುಭವಗಳ ನೆಲೆಯಲ್ಲಿ ಸಾರ್ವತ್ರಿಕ ಒಳಿತಿಗಾಗಿ ಚಿಂತಿಸಿ ಬರೆದ ಕೃತಿಯ ಆಶಯವನ್ನು ಜನಪರ ಅಥವಾ ಜನವಿರೋಧಿ ಎಂದು ಲಾಕ್ಷಣೀಕರಿಸಲು ಅವಕಾಶವಿದೆ. ಆದರೆ 'ಜನಪರ' ಎಂಬ ವಿಂಗಡೀಕರಣಕ್ಕೆ ಸೇರಿದ ಕೃತಿಯೊಂದರಲ್ಲಿ ಪರಿಷ್ಕಾರಗೊಳ್ಳಬೇಕಾದ ಅಂಶಗಳೂ ಇರುತ್ತವೆ. ಆ ಬಗೆಯ ಜಿಜ್ಞಾಸೆಗಿಂತ ಈ ಲೇಖನದಲ್ಲಿ ಓದುಗರಿಗೆ 'ಹಿಂದ್ ಸ್ವರಾಜ್' ಪರವಾಗಿ ಮನವರಿಕೆ ಮಾಡುವ ಧೋರಣೆಯೇ ಎದ್ದು ಕಾಣುತ್ತಿದೆ.

ಇದೇ ಲೇಖನದಲ್ಲಿ ಅವರು ಗಾಂಧೀಜಿಯವರ 'ಸನಾತನಿ' ಎಂಬ ಮಾತನ್ನು ಅರ್ಥೈಸಿದ್ದಾರೆ. "ಇದಕ್ಕಾಗಿ ಅವರು ದೇವರ ಮತ್ತು ಧರ್ಮಗಳ ಕಲ್ಪನೆಯನ್ನು ಪುನರ್ ನಿರೂಪಿಸಿದರು. ಈ ಪುನರ್‌ನಿರೂಪಣೆಗಾಗಿ ಅವರು ತಮ್ಮನ್ನು ಸನಾತನಿ ಎಂದು ಕರೆದುಕೊಂಡರು. ಸನಾತನಿ ಎಂದರೆ ನಮ್ಮ ವಿಚಾರವಾದಿಗಳ ಅರ್ಥದಲ್ಲಲ್ಲ; ಆದಿ ಅಂತ್ಯಗಳಿಲ್ಲದ ನಿತ್ಯ ಧರ್ಮ ಎಂದು. ಅದರ ಪ್ರಕಾರ ಈ ಹಿಂದೂ, ಬೌದ್ಧ, ಕ್ರಿಶ್ಚಿಯನ್, ಇಸ್ಲಾಂ ಇತ್ಯಾದಿಗಳೆಲ್ಲವೂ ಈ ಸನಾತನ ಧರ್ಮದ ಕಾಲ-ದೇಶ ರೂಪಗಳಷ್ಟೆ. ಈ ಅರ್ಥದಲ್ಲಿ ಗಾಂಧಿ ಮೂಲ ಅದ್ವೈತಿ. ಈ ಜಗತ್ತನ್ನು ಧಾರಣೆ ಮಾಡಿರುವ ಸತ್ವವನ್ನು ಅಂದರೆ ಆ ಸತ್ಯವನ್ನು ಅವರು ದೇವರು ಎಂದು ಗುರುತಿಸಿದರು. ಅವರು 'ದೇವರು ಸತ್ಯ' ಎನ್ನುವ ಮತೀಯ ವಾದಿಗಳ ವಸ್ತುನಿಷ್ಠ ನಂಬಿಕೆಯನ್ನು ತಿರುಗುಮುರುಗಾಗಿಸಿ, 'ಸತ್ಯವೇ ದೇವರು' ಎಂದು ವ್ಯಕ್ತಿನಿಷ್ಠ ಮಾಡಿ ಅನ್ವೇಷಣಾತ್ಮಕಗೊಳಿಸಿದರು" (ಪು. 278)

ಈ ಗ್ರಹಿಕೆಯ ಕ್ರಮ ಹೊಸ ಬಗೆಯಲ್ಲಿದ್ದು ಗಾಂಧಿಯವರ ಬಗ್ಗೆ ಇದ್ದ ಕೆಲವು ಪೂರ್ವಗ್ರಹಗಳನ್ನು ತೊಡೆಯಲು ನೆರವಾಗುವಂತಿದೆ. ತಮ್ಮನ್ನು ಸನಾತನಿ ಎಂದು ಕರೆದುಕೊಂಡಿದ್ದ ಗಾಂಧಿ ಆ ಕಾರಣದಿಂದಾಗಿಯೇ ಸಮಾಜವಾದಿಗಳ ಟೀಕೆಗೆ, ಅಪನಂಬಿಕೆಗೆ ಪಾತ್ರರಾಗಿದ್ದರು. ಆದರೆ ಗಾಂಧೀಜಿಯವರು ನಂತರದ ದಿನಗಳಲ್ಲಿ ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳ ನೆಲೆಗಟ್ಟು, ಹಿಂದೂ ಧರ್ಮದೊಳಗಿರುವ ಜಾತಿಪದ್ಧತಿ, ಅಸ್ಪೃಶ್ಯತೆ ಇವುಗಳನ್ನು ನಿರ್ಮೂಲಿಸಬೇಕೆಂಬ ಧೋರಣೆಗಳು ಅವರನ್ನು ಕಂದಾಚಾರಿ 'ಹಿಂದೂ'ಗಳಿಗಿಂತ ಬೇರೆಯಾಗಿಸಿತು.

ನಾನು 'ಸನಾತನಿ' ಎಂದು ಗಾಂಧಿ ಘೋಷಿಸಿದ ಕಾಲಘಟ್ಟ ಅವರು ಭಾರತದ ರಾಜಕಾರಣಕ್ಕೆ ಪ್ರವೇಶಿಸಿ, ಇಲ್ಲಿನ ಜನಸಮೂಹಗಳೊಂದಿಗೆ ಏಕೀಭವಿಸಬೇಕೆಂದು ಪ್ರಯತ್ನಿಸುತ್ತಿದ್ದ ಅವಧಿಯದಾಗಿತ್ತು. ಹಿಂದೂ ಧರ್ಮದೊಳಗಿನ ಅನಿಷ್ಟಗಳನ್ನು ನಿವಾರಿಸುವುದಕ್ಕೆ ಅವರು ಕಾರ್ಯಕ್ರಮ ರಚಿಸುವ ಹೊತ್ತಿಗೆ ಅವರು 'ಮಹಾತ್ಮಾ ಗಾಂಧಿ' ಎಂದು ಕೀರ್ತಿತರಾಗತೊಡಗಿದ್ದರು. ಹಾಗಾಗಿ ಅವರು 'ಸನಾತನಿ' ಎಂದು ತಮ್ಮನ್ನು ಕರೆದುಕೊಂಡ ಕಾಲದಲ್ಲೇ ಗಾಂಧೀಜಿಯವರಿಗೆ 'ಮೂಲ ಅದ್ವೈತ'ದ ನಿಲುವುಗಳಿದ್ದವೇ ಅಥವಾ ಅವರ ನಂತರದ ಜೀವನಾವಧಿಯ ಧೋರಣೆಗಳನ್ನು ಗಮನಿಸಿ 'ಸನಾತನಿ' ಎಂದುಕೊಂಡ ಅವರ ನಿಲುವನ್ನು ಈಗ ನಾವು ಹೊಸ ಬಗೆಯಲ್ಲಿ ಅರ್ಥೈಸಲು ಸಾಧ್ಯವಾಯಿತೇ ಎಂಬುದನ್ನು ನಾವು ಮತ್ತಷ್ಟು ಚರ್ಚೆಗೊಳಪಡಿಸಬೇಕಿದೆ. ತಮ್ಮ ಮೊದಲು ಜಾತಿ ಪದ್ಧತಿ ಅಪೇಕ್ಷಣೀಯ ಎಂದಿದ್ದವರು ನಂತರದಲ್ಲಿ ಅಸ್ಪೃಶ್ಯತೆ ನಿವಾರಣೆ, ಸರ್ವಧರ್ಮ ಐಕ್ಯತೆ, ದೇವಾಲಯದ ಹೊರಗೇ ದೇವರನ್ನು ಕಾಣುವ ನಿಷ್ಠೆ ಮುಂತಾದವುಗಳನ್ನು ಪ್ರತಿಪಾದಿಸಿದರು. ಇಂದಿಗೂ ಆ ಮಾದರಿಯಲ್ಲಿ ಅವರದೊಂದು ಅನುಕರಣೀಯ 'ಧಾರ್ಮಿಕತೆ'. ಆದರೆ ಈ ಕಾರಣದಿಂದಾಗಿ ಅವರು ಆರಂಭದಿಂದಲೇ ಆ ಬಗೆಯ ಚಿಂತನೆ ಹೊಂದಿದ್ದರು ಎನ್ನಲು ಸಾಧ್ಯವಿದೆಯೇ? ಅದು ಸನ್ನಿವೇಶದ ಹೊರಗಿನಿಂದ ನಾವು ಮಾಡಿದ ಅರ್ಥಾರೋಪಣೆಯಾಗುವುದಿಲ್ಲವೇ ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಹಿಂದ್ ಸ್ವರಾಜ್ ಕೃತಿಯ ಹಿಂದೆ ಕೆಲಸ ಮಾಡಿರುವ ತಾತ್ವಿಕ ಮನೋಭೂಮಿಕೆ ಇಂದಿನ ಜಾಗತೀಕರಣದ ಪಾಶವೀ ಪ್ರವೃತ್ತಿಯೆದುರು ಸ್ವೀಕಾರಾರ್ಹವಾಗಿ ಕಾಣಬಹುದು. ಆದರೆ ಅದನ್ನು ಪ್ರತಿ ವಿವರಗಳ ಸಮೇತ ಅಕ್ಷರಶಃ ಸ್ವೀಕಾರಾರ್ಹ ಎನ್ನಲು ಸಾಧ್ಯವೇ/ಅದರಲ್ಲಿ ಕೈಬಿಡಬಹುದಾದ ಅಂಶಗಳು ಇವೆಯೇ ಎಂದು ವಿಂಗಡಿಸಿ ಪರಿಶೀಲನೆ ಮಾಡಿದ್ದರೆ ಮತ್ತಷ್ಟು ಅರ್ಥಪೂರ್ಣತೆ ಬರುತ್ತಿತ್ತು. ಚಿಂತಕ, ತತ್ವಜ್ಞಾನಿ ತನ್ನ ಕಾಲ ಘಟ್ಟದ ಹಿನ್ನೆಲೆಯಲ್ಲಿ, ತನ್ನ ಅನುಭವಗಳ ನೆಲೆಯಲ್ಲಿ ಸಾರ್ವತ್ರಿಕ ಒಳಿತಿಗಾಗಿ ಚಿಂತಿಸಿ ಬರೆದ ಕೃತಿಯ ಆಶಯವನ್ನು ಜನಪರ ಅಥವಾ ಜನ ವಿರೋಧಿ ಎಂದು ಲಾಕ್ಷಣೀಕರಿಸಲು ಅವಕಾಶವಿದೆ. ಆದರೆ 'ಜನಪರ' ಎಂಬ ವಿಂಗಡೀಕರಣಕ್ಕೆ ಸೇರಿದ ಕೃತಿಯೊಂದರಲ್ಲಿ ಪರಿಷ್ಕಾರಗೊಳ್ಳಬೇಕಾದ ಅಂಶಗಳೂ ಇರುತ್ತವೆ. ಆ ಬಗೆಯ ಜಿಜ್ಞಾಸೆಗಿಂತ ಈ ಲೇಖನದಲ್ಲಿ ಓದುಗರಿಗೆ 'ಹಿಂದ್ ಸ್ವರಾಜ್' ಪರವಾಗಿ ಮನವರಿಕೆ ಮಾಡುವ ಧೋರಣೆಯೇ ಎದ್ದು ಕಾಣುತ್ತಿದೆ.

ಇದೇ ಬಗೆಯ ಕೆಲವು ಆಕ್ಷೇಪಣೆಗಳನ್ನು ಅವರು 'ಜೀವ ಕಾಯುವುದೇತಕೆ' ಲೇಖನದಲ್ಲಿ ಸೂಕ್ಷ್ಮವಾಗಿ ವ್ಯಕ್ತಪಡಿಸಿರುವ ಅತೀಂದ್ರಿಯ ಶಕ್ತಿಯಂತಹ ವಿಷಯಗಳ ಬಗ್ಗೆಯೂ ಹೇಳಬಹುದಾಗಿದೆ. ಪ್ರವಾಸದ ನಡುವೆಯೇ, ಅವರ ತಾಯಿಯನ್ನು ಕಾಣಲು ಇದ್ದಕ್ಕಿದ್ದಂತೆ ಹೋಗಬೇಕೆನ್ನಿಸುವುದು, ಹಾಗೆ ಕಂಡು ಹಿಂತಿರುಗಿದ ಮಾರನೆ ದಿನಕ್ಕೆ ಅವರ ತಾಯಿ ತೀರಿ ಹೋಗುವುದು ಮುಂತಾದ ಘಟನಾವಳಿ ಬಗ್ಗೆ ಲೇಖಕರಿಗೆ ಈ ಅಭಿಪ್ರಾಯ ಇದ್ದಂತಿದೆ. ಇದು ಸುಲಭ ವಿವರಣೆಗೆ ಸಿಕ್ಕುವ ಘಟನಾವಳಿ ಅಲ್ಲವಾದರೂ ಅದನ್ನು ಹಾಗೆ ವೈಭವೀಕರಿಸಿ ಸಾರ್ವಜನಿಕವಾಗಿ ಹೇಳುವುದು ಸರಿಯೇ?

ಚುನಾವಣಾ ಫಲಿತಾಂಶಗಳ ಬಗ್ಗೆ ಲೇಖಕರಿಗೆ ಹೊಳೆದ ಸಂಖ್ಯೆ ನಂತರದಲ್ಲಿ ಪಕ್ಷಗಳ ಅದಲು ಬದಲಾದರೂ ಸಂಖ್ಯೆ ಅದೇ ಆಗಿತ್ತು ಎಂಬ ಬಗ್ಗೆ ಅದು 'ಅಂತರ್‌ವಾಣಿ' ಎಂಬಂತೆ ಭಾವಿಸುವುದು ಹಾಗೂ ಅದನ್ನು ವಿಶೇಷ ಉಲ್ಲೇಖದೊಂದಿಗೆ ಬರೆಯುವುದು ಸರಿಯೇ? ವಿಚಾರವಾದಿಗಳು ನಾಸ್ತಿಕರಾಗಿರಬೇಕು ಎಂಬುದೀಗ ಕಡ್ಡಾಯವೇನಲ್ಲ. ಹಾಗೆಂದೊಡನೆ ವಿಭೂತಿ ಶಕ್ತಿಗಳನ್ನು ಪ್ರತಿಪಾದಿಸತೊಡಗುವುದು ಬರಡು ವಿಚಾರವಾದದ 'ಸಂಗತಿ'ಗೆ ವ್ಯಕ್ತಗೊಳಿಸುವ ಅತ್ಯುತ್ಸಾಹದ 'ವಿಸಂಗತಿ' ಎಂಬಂತಾಗಲಾರದೇ ಎಂಬ ಬಗ್ಗೆ ಅವರು ಮತ್ತಷ್ಟು ಆಲೋಚಿಸಬೇಕಿತ್ತು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ಈ ಬಗೆಯಲ್ಲಿ 'ವಸಿಷ್ಠರು ಮತ್ತು ವಾಲ್ಮೀಕಿಯರು' ಕೃತಿಯಲ್ಲಿ ಹಲವು ಒಳನೋಟಗಳ, ವಸ್ತುನಿಷ್ಠ ಮಾಹಿತಿ ಮತ್ತು ವಿಶ್ಲೇಷಣೆಗಳ, ಚಿಂತನಾಶೀಲ ಲೇಖನಗಳಿವೆ. ಅಂಕಣ ಬರಹಗಳನ್ನು ಕೇವಲ ಓದಿನ ರುಚಿಗಾಗಿ ತೆಳುವಾಗಿಸದೆ ತಾತ್ವಿಕ ಹುಡುಗಾಟಕ್ಕಾಗಿ ಬರೆಯುವ ಮಾದರಿಯನ್ನು ಇದರಲ್ಲಿ ಡಿ ಎಸ್ ಎನ್ ಹಿಡಿದಿದ್ದಾರೆ.

"ಹೊಸ ಸಮಾಜವನ್ನು ರೂಪಿಸಬಹುದು. ತುಂಬಾ ದೂರದ ಗುರಿ ಇದು. ಹಾಗೇ ಬಹಳ ಕಷ್ಟದ ಗುರಿ ಕೂಡಾ. ಆದರೆ ಮನುಷ್ಯ ಖಂಡಿತಾ ಆ ಗುರಿಯ ಕಡೆ ಸಾಗುತ್ತಾನೆ ಅಂತ ನಂಬುತ್ತೇನೆ ನಾನು. ಏಕೇಂದ್ರೆ ಇಷ್ಟು ಕಡು ಭ್ರಷ್ಟತೆಯನ್ನು, ಅಸಮಾನತೆಯನ್ನು, ಹಿಂಸೆಯನ್ನು, ಅನೈತಿಕತೆಯನ್ನು ಮನುಷ್ಯ ಯಾವತ್ತೂ ಬಹಳ ದಿವಸ ಸಹಿಸುವುದಿಲ್ಲ. ಕಾಯಬೇಕು ಅಷ್ಟೇ ನಾವು. ಕಾಯುತ್ತಾ ಇದ್ದೀನಿ ನಾನಂತೂ. ಕಾಯುವುದೆಂದರೆ ಸುಮ್ಮನೆ ಕಾಯುವುದಲ್ಲ. ನಮ್ಮ ಕೆಲಸವನ್ನು ನಾವು ಮಾಡ್ತಾನೆ ಕಾಯಬೇಕು. ಅದಕ್ಕೆ ನಾವು ನಂಬಿದ್ದರಲ್ಲಿ ಅಚಲ ನಂಬಿಕೆ ಬಹಳ ಮುಖ್ಯ" (ಪು. 342).

ಸಾಮಾಜಿಕ ಕ್ರಿಯಾಶೀಲತೆಯ ಒಂದು ಅಂಗವಾಗಿ ತಮ್ಮ ಚಿಂತನೆ ಹಾಗೂ ಬರವಣಿಗೆಯನ್ನು ಮಾಡುತ್ತಿರುವ ಗಟ್ಟಿ ನಂಬುಗೆಯ, ತಾತ್ವಿಕ ತಿಳಿವಳಿಕೆಯ ಲೇಖಕರಾಗಿರುವುದರಿಂದಲೇ ಡಿ ಎಸ್ ಎನ್ ಅವರ ಈ ಲೇಖನಗಳು ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳ ಬಗ್ಗೆ ಹೊಸ ಬೆಳಕು ಚೆಲ್ಲುತ್ತಿವೆ ಮಾತ್ರವಲ್ಲದೆ ಹೊಸ ಚರ್ಚೆ ಮತ್ತು ಬೌದ್ಧಿಕ ಸೆಣಸಾಟಕ್ಕೂ ಆಹ್ವಾನ ನೀಡುತ್ತಿರುವಂತಿವೆ. □

ಫತ್ವ, ಪಡಿಯಚ್ಚುಗಳು ಹಾಗೂ ರಾಜಕಾರಣ

ಇತ್ತೀಚೆಗೆ ಬಂದಿರುವ ಒಂದು ವಿಚಿತ್ರ ಹಾಗೂ ವಿಶಿಷ್ಟ ಫತ್ವಗಳಲ್ಲಿ ಚಿತ್ರನಟ ಶಾರುಖ್ ಖಾನ್ ನಟಿಸಿರುವ "ಮೈ ನೇಮ್ಸ್ ಈಸ್ ಖಾನ್" ಚಿತ್ರದ ಬಹಿಷ್ಕಾರದ ಫತ್ವ ಮಹತ್ವವೆನಿಸುತ್ತದೆ. ಕಲ್ಕತ್ತಾದ ಟಿಪ್ಪು ಮಸೀದಿಯ ಮೌಲ್ವಿಯೊಬ್ಬರು ಹೊರಡಿಸಿದ ಫತ್ವವನ್ನು ಯಾರೂ ಗಂಭೀರವಾಗಿ ಪರಿಗಣಿಸದಿದ್ದರೂ, ಅದರ ಪರಿಣಾಮಗಳನ್ನು ತಳ್ಳಿಹಾಕುವಂತಿಲ್ಲ. ಫತ್ವ ಅಲ್ಪ ಸಂಖ್ಯಾಕ ಸಮುದಾಯದ ಕುರಿತಾದ ಪಡಿಯಚ್ಚುಗಳನ್ನು ಗಟ್ಟಿಗೊಳಿಸುತ್ತದೆಯಲ್ಲದೇ, ಅದು ಧರ್ಮದ ಹೆಸರಿನಲ್ಲಿ ಇಡೀ ಸಮುದಾಯವನ್ನೇ ಅಪರಾಧಿ ಸ್ಥಾನದಲ್ಲಿ ತಂದಿರಿಸುತ್ತದೆ. ಅಲ್ಲದೇ ಸಮುದಾಯದ ಕುರಿತಾದ ಪೂರ್ವಾಗ್ರಹಿಕೆಗಳನ್ನು ಪುನಃ ಪುನಃ ನಿರ್ಮಿಸುತ್ತಾ ಹೋಗುತ್ತದೆ. ಸಮುದಾಯವೇಕೆ ಈ ರೀತಿಯ ಫತ್ವಗಳನ್ನು ಪ್ರಶ್ನಿಸುವುದಿಲ್ಲ? ಫತ್ವಗಳಲ್ಲಿರುವ ವೈರುದ್ಯಗಳೇನು? ಭಾರತದ ಇತಿಹಾಸದಲ್ಲಿನ ಪ್ರಗತಿಪರ ಫತ್ವಗಳೇಕೆ ಕಾಣೆಯಾಗಿವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುವುದು ಅನಿವಾರ್ಯವಾಗುತ್ತದೆ.

ವಾಸ್ತವವಾಗಿ ಟಿಪ್ಪು ಮಸೀದಿಯ ಮೌಲ್ವಿಯ ಫತ್ವ ಸಿನೆಮಾದ ಕುರಿತಂತೆ ಬರಲಿಲ್ಲ ಸಿನೆಮಾ ಮೂಲ:ತವಾಗಿ ಅಲ್ಪ ಸಂಖ್ಯಾಕರ ಕುರಿತಂತೆ ಇರುವ "ಭಯೋತ್ಪಾದಕರೆಂಬ" ಪಡಿಯಚ್ಚನ್ನ ಅಥವಾ ಹಣೆಪಟ್ಟಿಯನ್ನು ನಾಶ ಅಥವಾ ಬದಲಾಯಿಸುವ ಒಂದು ಯತ್ನವೆನ್ನಬೇಕು. ಇಲ್ಲಿ ಹೊಸ ಸಂಕಥನವನ್ನು ನಿರ್ಮಿಸುವ ಯತ್ನವೂ ಅಡಗಿದೆ. ಶಾರುಖ್ ಖಾನ್ ಪಶ್ಚಿಮ ಬಂಗಾಳದ ಟೋಡಿಯ ಕಂಪೆನಿ ವಸ್ತುಗಳಿಗೆ ಸಿನೆಮಾದಲ್ಲಿ ಪುಕ್ಕಟೆ ಪ್ರಚಾರವನ್ನು ನೀಡುತ್ತಿದ್ದ ಎಂಬ ಕಾರಣ ಇಲ್ಲಿ ಅಡಕವಾಗಿತ್ತು. ಇಲ್ಲಿರುವ ರಾಜಕಾರಣವೇ ಬೇರೆ: ಕಂಪೆನಿಯ ಮಾಲೀಕನಾದ ಟೋಡಿ ತನ್ನ ಮಗಳನ್ನು ಮದುವೆಯಾದ ಮುಸ್ಲಿಂ ಯುವಕನನ್ನು ಕೊಲೆಗೈದನೆಂಬ ಆರೋಪ ಹೊಂದಿರುವುದೇ ಈ ಫತ್ವಕ್ಕೆ ಕಾರಣ. ಇಲ್ಲಿ ಧರ್ಮ, ವ್ಯಾಪಾರ ಹಾಗೂ ಸಮುದಾಯ ಮುಖಾಮುಖಿಯಾಗಿರುವುದು ವಾಸ್ತವ.

ವಾಸ್ತವವಾಗಿ ಟಿಪ್ಪು ಮಸೀದಿಯ ಮೌಲ್ವಿಯ ಫತ್ವ ಸಿನೆಮಾದ ಕುರಿತಂತೆ ಬರಲಿಲ್ಲ ಸಿನೆಮಾ ಮೂಲ:ತವಾಗಿ ಅಲ್ಪ ಸಂಖ್ಯಾಕರ ಕುರಿತಂತೆ ಇರುವ "ಭಯೋತ್ಪಾದಕರೆಂಬ" ಪಡಿಯಚ್ಚನ್ನ ಅಥವಾ ಹಣೆಪಟ್ಟಿಯನ್ನು ನಾಶ ಅಥವಾ ಬದಲಾಯಿಸುವ ಒಂದು ಯತ್ನವೆನ್ನಬೇಕು. ಇಲ್ಲಿ ಹೊಸ ಸಂಕಥನವನ್ನು ನಿರ್ಮಿಸುವ ಯತ್ನವೂ ಅಡಗಿದೆ. ಶಾರುಖ್ ಖಾನ್ ಪಶ್ಚಿಮ ಬಂಗಾಳದ ಟೋಡಿಯ ಕಂಪೆನಿ ವಸ್ತುಗಳಿಗೆ ಸಿನೆಮಾದಲ್ಲಿ ಪುಕ್ಕಟೆ ಪ್ರಚಾರವನ್ನು ನೀಡುತ್ತಿದ್ದ ಎಂಬ ಕಾರಣ ಇಲ್ಲಿ ಅಡಕವಾಗಿತ್ತು. ಇಲ್ಲಿರುವ ರಾಜಕಾರಣವೇ ಬೇರೆ: ಕಂಪೆನಿಯ ಮಾಲೀಕನಾದ ಟೋಡಿ ತನ್ನ ಮಗಳನ್ನು ಮದುವೆಯಾದ ಮುಸ್ಲಿಂ ಯುವಕನನ್ನು ಕೊಲೆಗೈದನೆಂಬ ಆರೋಪ ಹೊಂದಿರುವುದೇ ಈ ಫತ್ವಕ್ಕೆ ಕಾರಣ.

ಈ ರೀತಿಯ ಫತ್ವ ಶಾರುಖ್ ಖಾನ್‌ಗೆ ಹೊಸತೇನಲ್ಲ. ಕಳೆದ ವರುಷ ಇಸ್ಲಾಮಿಕ್ ಸೆಮಿನಾರಿ ದಾರುಲ್ ಉಲಮ್ ಮಜರೇ ಇಸ್ಲಾಮೀಯದ ಇಬ್ಬರು ಮುಫ್ತಿಗಳು ಶಾರುಖ್ ಖಾನ್ ವಿರುದ್ಧ ಫತ್ವವನ್ನು ಹೊರಡಿಸಿದ್ದರು. ಅವರ ಪ್ರಕಾರ ಶಾರುಖ್ ಒಬ್ಬ "ಕಾಫೀರ್", ಅವನ ಮದುವೆ "ಕಾನೂನು ಬಾಹಿರ", ಅವನನ್ನು ಯಾವುದೇ ಮುಸ್ಲಿಂ ಸ್ಮಶಾನದಲ್ಲಿ ಹೂಳಲು ಅವಕಾಶ ನೀಡಬಾರದು, ಅಲ್ಲದೇ ಅವನನ್ನು ಸಮುದಾಯದಿಂದ ಬಹಿಷ್ಕರಿಸಬೇಕು. ಇದಕ್ಕೆ ಶಾರುಖ್ ಪ್ರವಾದಿ ಕುರಿತು ನೀಡಿದ ಹೇಳಿಕೆ ಕಾರಣವಾಗಿತ್ತು. ಆಸಕ್ತಿಯ ವಿಷಯವೇನೆಂದರೆ ಈ ಫತ್ವವನ್ನು ಉತ್ತರ ಪ್ರದೇಶದ ಬರೇಲಿಯಲ್ಲಿರುವ ಇನ್ನೊಂದು ಪ್ರಖ್ಯಾತ ಇಸ್ಲಾಮಿಕ್ ಸೆಮಿನಾರಿ ಮರ್ಕಾಜಿ ದಾರುಲ್ ಇಫ್ತ ತಳ್ಳಿ ಹಾಕಿತ್ತಲ್ಲದೇ, ತಿರಸ್ಕರಿಸಿತ್ತು.

ಚಿತ್ರ ನಟರ ಮೇಲಿನ ಫತ್ವ ಹೊಸತೇನಲ್ಲ. ಬರೇಲಿಯ ಇಫ್ತ ಮನ್ಸೂರು ಇಸ್ಲಾಮಿಯಾ ಕೆಲವು ವರುಷದ ಹಿಂದೆ ಚಿತ್ರನಟ ಸಲ್ಮಾನ್ ಖಾನ್ ಗಣೇಶ ಹಬ್ಬವನ್ನು ಆಚರಿಸದ್ದಕ್ಕೆ ಹಾಗೂ ಮೆರವಣಿಗೆಯಲ್ಲಿ ಡ್ಯಾನ್ಸ್ ಮಾಡಿದ್ದಕ್ಕಾಗಿ ಫತ್ವವನ್ನು ಹೊರಡಿಸಿತ್ತು. ಈ ಎಲ್ಲಾ ಫತ್ವಗಳು ಕೆಲವು ಪಡಿಯಚ್ಚುಗಳಿಗೆ ದಾರಿ ಮಾಡಿಕೊಡುತ್ತದೆ: ಮುಸ್ಲಿಂಮರ ಫತ್ವ ಒಂದು "ಯುದ್ಧ"ಕ್ಕೆ ದಾರಿ ಮಾಡಿಕೊಡುತ್ತದೆ, ಇಡೀ ಸಮುದಾಯವನ್ನು, ಸಾಮಾಜಿಕ ನ್ಯಾಯವನ್ನು ಈ ಫತ್ವಗಳು ನಿರ್ಧರಿಸುತ್ತವೆ; ಸಮುದಾಯ ಹಿಂದುಳಿಯಲು ವಿವಿಧ ಪತ್ವಗಳು ಕಾರಣ, ಹಾಗೂ ಫತ್ವಗಳು ಯಾವತ್ತೂ ಪ್ರಗತಿಪರ ಹೋರಾಟಗಳಿಗೆ ಅಥವಾ ಚಿಂತನೆಗಳಿಗೆ ದಾರಿ ಮಾಡಿಕೊಡಲಾರದು.



ವಾಸ್ತವವಾಗಿ ಫತ್ವವೆಂದರೆ "ಯುದ್ಧ"ವಲ್ಲ, "ಜೆಹಾದ್ ಕೂಡ ಅಲ್ಲ", ಅಥವಾ ಮರಣ ದಂಡನೆಯೂ ಅಲ್ಲ. ಅದನ್ನು ಯುದ್ಧದ ಸಂದರ್ಭದಲ್ಲಿ ಉಪಯೋಗಿಸಬಹುದು, ಆದರೆ ಅದೇ "ಯುದ್ಧ"ವಲ್ಲ. ಅದು ಮುಖ್ಯವಾಗಿ ನಿರ್ಧಿಷ್ಟ ವಿಷಯದ ಕುರಿತಾದ ಇಸ್ಲಾಮಿಕ್ "ಡಿಕ್ರಿ" ಅಥವಾ ಶಾಸ್ತ್ರ ಪಂಡಿತರ "ಅಭಿಪ್ರಾಯ", ಆದ ಕಾರಣ ಫತ್ವ ಎತ್ತುಕೊಳ್ಳುವ ವಿಷಯದಲ್ಲಿ ನಿರ್ಧಿಷ್ಟತೆ ಇಲ್ಲ: ಅದು ವಯಕ್ತಿಕ ವಿಷಯವಾಗಿರಬಹುದು, ಸಾಮಾಜಿಕ ಮೌಲ್ಯವಾಗಿರಬಹುದು, ಧರ್ಮ, ಯುದ್ಧವಾಗಿರಬಹುದು. ಮದುವೆಯ ವಿಷಯವಾಗಿರಬಹುದು, ರಾಜಕೀಯ ವಿಷಯವಾಗಿರಬಹುದು. ಇದರರ್ಥ ಎಲ್ಲರಿಗೂ ಫತ್ವ ಹೊರಡಿಸುವ ಅಧಿಕಾರ ಇದೆ ಎಂದರ್ಥವಲ್ಲ. ಈ ಹಕ್ಕು ಕೆಲವು ಶಾಸ್ತ್ರ ಪಂಡಿತರಿಗೆ ಮಾತ್ರ ಇದೆ. ಅದಕ್ಕೂ ಕೆಲವು ನಿಯಮಗಳಿವೆ. ಫತ್ವ ಇಸ್ಲಾಂನ ಕಾನೂನಿನ ಮೂರನೇ ಮೂಲವೆಂದು ಒಪ್ಪಿಕೊಳ್ಳಲಾಗುತ್ತದೆ. ಕುರಾನ್ ಹಾಗೂ ಹದೀಸ್ ಪ್ರಥಮ ಹಾಗೂ ಎರಡನೇ ಕಾನೂನಿನ ಮೂಲವಾದರೆ ಫತ್ವ ಮೂರನೇ ಮೂಲ. ಆದರೆ ಅದೇ ಕಾನೂನನಲ್ಲ. ಅದು ಬರೇ ಮೂಲವಷ್ಟೇ. ಆದಕಾರಣ ಅದನ್ನು ಹೊರಡಿಸುವವರನ್ನು "ಮುಫ್ತಿ" ಅಥವಾ "ಉಲೇಮಾ"ಗಳೆಂದು ಕರೆಯುತ್ತಾರೆ. ಫತ್ವವನ್ನು ಹೊರಡಿಸುವವನು ಕೆಲವು ನಿಯಮಗಳನ್ನು ಪಾಲಿಸಬೇಕು– ಬಹಳಷ್ಟು ಸಂದರ್ಭದಲ್ಲಿ ಈ ರೀತಿಯ ನಿಯಮಗಳನ್ನು ಪಾಲಿಸುವುದಿಲ್ಲ. ಈ ನಿಯಮಗಳೆಂದರೆ: ಫತ್ವ ಮೂಲತ:ವಾಗಿ ನ್ಯಾಯ ಬದ್ಧವಾಗಿರಬೇಕು– ಅದು ಅಂತಿಮವಾಗಿ ಕುರಾನ್ ಹಾಗೂ ಹದೀಸ್‌ನ ಕ್ರಮದಲ್ಲಿಯೇ ಇರಬೇಕು, "ಮುಫ್ತಿ"ಗೆ ಧರ್ಮದ ಕುರಿತು ಆಳವಾದ ಜ್ಞಾನವಿರಬೇಕು. ಅದು ವೈಯಕ್ತಿಕ ಲಾಭಗಳಿಂದ ಹಾಗೂ ಮೋಹಗಳಿಂದ ಸ್ವತಂತ್ರವಾಗಿರಬೇಕು.

ಫತ್ವಗಳು ಭಾರತದ ಇತಿಹಾಸದಲ್ಲಿ ಕೆಲವೊಮ್ಮೆ ಅತ್ಯಂತ ನಿರ್ಣಾಯಕ ಪಾತ್ರ ವಹಿಸಿದ್ದನ್ನು ನಾವು ನೋಡಬಹುದು. ಇಲ್ಲಿರುವ ದುರಂತವೆಂದರೆ ಫತ್ವ ಇತಿಹಾಸದಲ್ಲಿ ಕೆಲವೊಮ್ಮೆ ಆಳುವ ರಾಜರ ಅಥವಾ ವರ್ಗಗಳ ಯಜಮಾನಿಕೆಯ ಭಾಗವಾಯಿತು. ಉಲೇಮಗಳನ್ನು ಆಂದಿನ ಆಳುವ ವರ್ಗ ತನ್ನ ಆಳ್ವಿಕೆಯನ್ನು ಗಟ್ಟಿಗೊಳಿಸಲು ಉಪಯೋಗಿಸಿತು. ಈ ಸಂದರ್ಭದಲ್ಲಿ ಔರಂಗಜೇಬನ ಫತ್ವಗಳು ಇಲ್ಲಿ ಉಲ್ಲೇಖನೀಯ. ಔರಂಗಜೇಬ ದೆಹಲಿಯ ಗದ್ದುಗೆಯನ್ನು ಏರಿದ್ದು ನೇರ ದಾರಿಯಿಂದಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ತನ್ನ ಸಹೋದರ ದಾರಾಶಿಕೋವನ್ನು ಹತ್ಯೆ ಮಾಡಿ ಗದ್ದುಗೆಯನ್ನು ಏರಿದ ನಂತರ ತನ್ನ ಕರ್ತೃವನ್ನು ಎಲ್ಲರೂ ಒಪ್ಪಲಿಕ್ಕಾಗಿ ಉಲೇಮಗಳನ್ನು ಅವನು ಉಪಯೋಗಿಸುತ್ತಾನೆ. ಅಲ್ಲದೇ ಅದಕ್ಕಾಗಿ ಒಂದು ಫತ್ವವನ್ನೇ ಹೊರಡಿಸುತ್ತಾನೆ. ತನ್ನ ಆಳ್ವಿಕೆಯನ್ನು ಗಟ್ಟಿಗೊಳಿಸಲು "ಫತ್ವ –ಇ–ಹಿಂದಿಯಾ" ಎಂಬ ಹೆಸರಿನಲ್ಲಿ ಉಲೇಮಾಗಳ ಒಂದು ಸಂಘ

ರ್ಥಿಗಳೊಂದಿಗೆ ತುಲನ ಮಾಡುವ, ಹೊಲಿಕೆಯ ನಿಕಷಕ್ಕೆ ಒಡ್ಡಿ ಅಂಕಗಳನ್ನು ನೀಡುವ ಜಟಿಲ ಹಾಗೂ ಸಂಕೀರ್ಣವಾದ ಕಾರ್ಯವಿದು. ನ್ಯಾಯನಿರ್ಣಯಕ್ಕೆ ಒಳಗಾಗುವುದು ಒಂದು ಪತ್ರಿಕೆಯಲ್ಲ; ಒಬ್ಬ ವಿದ್ಯಾರ್ಥಿ, ಆತನ ಭವಿಷ್ಯವೇ ಅಲ್ಲಿರುತ್ತದೆ. ಇದರ ಪಾವಿತ್ರ್ಯವನ್ನು ಅರಿಯದೆ ಆರು ಗಂಟೆಗಳ ಕೆಲಸವನ್ನು ಎರಡು ಗಂಟೆಗಳಲ್ಲಿ ಮುಗಿಸುವ ಮೌಲ್ಯಮಾಪಕರು "ಎರಾಟಿಕ್ ವ್ಯಾಲ್ಯುಯರ್ಸ್" ಎಂದೇ ಗುರುತಿಸಲ್ಪಡುತ್ತಾರೆ. ಮರುಮೌಲ್ಯ ಮಾಪನ ವ್ಯವಸ್ಥೆಯಿಂದಾಗಿ ಇವರು ಆಗಾಗ್ಗೆ ಪತ್ರಿಕೆಗಳಲ್ಲಿ ಸುದ್ದಿಯಾಗುತ್ತಿದ್ದಾರೆ.

ಕೆಲವು ಕಸ್ಟೋಡಿಯನ್ ಮಹಾಶಯರು ನಿರ್ದಿಷ್ಟ ವಿದ್ಯಾರ್ಥಿಯಿಂದ ವಸೂಲಿಬಾಜಿಗೆ ಒಳಗಾಗಿ, ಈ ವ್ಯವಹಾರದಲ್ಲಿ ಮೌಲ್ಯಮಾಪಕನೂ ಪಾಲುದಾರನಾಗಿರುತ್ತಾನೆ. ಇವನ್ನೆಲ್ಲ ತಪ್ಪಿಸಲು ಉತ್ತರ ಪತ್ರಿಕೆನೊಂದಣಿ ಸಂಖ್ಯೆಗಳ ಕೋಡಿಂಗ್ ವ್ಯವಸ್ಥೆ ಜಾರಿಯಲ್ಲಿದ್ದರೂ ಕೋಡಿಂಗ್ ಅಧಿಕಾರಿಗಳೂ ಈ ವ್ಯವಹಾರದಲ್ಲಿ ಶಾಮೀಲಾಗಿ, ಬೇಲಿಯೇ ಎದ್ದು ಹೊಲವನ್ನು ಮೆಯ್ದಂತಾಗುತ್ತಿದೆ.

ಮುಕ್ತ ಶಿಕ್ಷಣ – ಶಿಕ್ಷಣಕ್ಕೆ ಮುಕ್ತಿ :–

ಈಚೆಗೆ ದೇಶದ ಅನೇಕ ವಿಶ್ವ ವಿದ್ಯಾಲಯಗಳು ಔಪಚಾರಿಕವಲ್ಲದ, ಅಂಚೆ–ತರಪಿನ ಶಿಕ್ಷಣ, ಮುಕ್ತ ಶಿಕ್ಷಣ, ದೂರ ಶಿಕ್ಷಣವೆಂಬ ವಿಶೇಷ ಶಿಕ್ಷಣ ವ್ಯವಸ್ಥೆಗಳ ಮೂಲಕ ಪದವೀಧರರನ್ನು, ಜ್ಞಾನಿಗಳನ್ನು ತಯಾರು ಮಾಡುತ್ತಿವೆ. ಇದರ ಪ್ರಯೋಜಕ–ಫಲಾನುಭವಿ ಯಾರು ಎಂಬುದು ಇನ್ನೂ ಸ್ಪಷ್ಟವಾಗಬೇಕಿದೆ. ಆರ್ಥಿಕವಾಗಿ ದುರ್ಬಲರಾದವರಿಗೆ, ಸೇವೆಯಲ್ಲಿ ಬಡ್ತಿ ನಿರೀಕ್ಷಿಸುವ ನೌಕರ ವೃಂದಕ್ಕೆ, ನೌಕರಿಯ ಬೇಟೆಯಲ್ಲಿರುವವರಿಗೆ ಇವು ಹಿಂಬಾಗಿಲ ಪ್ರವೇಶವನ್ನು ಸಾಧ್ಯವಾಗಿಸುತ್ತವೆ. ಕೆಲವೊಮ್ಮೆ ಜ್ಞಾನ ಪ್ರಪಂಚದಿಂದ ವಂಚಿತರದ ಪ್ರತಿಭಾವಂತರು, ವಯೋನಿವೃತ್ತ ಜ್ಞಾನಾಪೇಕ್ಷಿಗಳು ಇದರ ನೈಜ ಫಲಾನುಭವಿಗಳಾದುದೂ ಇದೆ. ಶಿಕ್ಷಣದ ದುಬಾರೀಕರಣವನ್ನು ಅಗ್ಗಗೊಳಿಸುವ ಪರಿಣಾಮಕಾರಿ ಮಾಧ್ಯಮವಾಗಿ ಈ ವ್ಯವಸ್ಥೆ ತನ್ನ ಮೂಲ ಉದ್ದೇಶ, ಆಶಯಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿತ್ತು. ಆದರೆ ಈ ಬಗೆಯ ಶಿಕ್ಷಣ ಪದ್ಧತಿಯಲ್ಲಿ ಇದನ್ನು ಭ್ರಷ್ಟಗೊಳಿಸುವ ಮಾರ್ಜಾಲ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ.

ವಿಶ್ವವಿದ್ಯಾಲಯಗಳ ಈ ಬಗೆಯ ಕಾರ್ಯಕ್ರಮಗಳನ್ನು ತಮ್ಮ ಹಣ ಮಾಡುವ ಸ್ವಾರ್ಥಕ್ಕೆ ಪರಿವರ್ತಿಸಿಕೊಳ್ಳಬಲ್ಲ ಈ ಸಂಸ್ಥೆಗಳು "ಅಧ್ಯಯನ ಕೇಂದ್ರ"ಗಳು ಎಂಬ ಅಭಿದಾನದೊಂದಿಗೆ ನಾಯಿಕೊಡೆಗಳಂತೆ ಜನ್ಮತಾಳುತ್ತವೆ. ವಿಶ್ವ ವಿದ್ಯಾಲಯದ ವಿಷಯ ತಜ್ಞರಿಂದ ತಯಾರಿಸಲ್ಪಟ್ಟ ಪಠ್ಯ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ, ಈ ಕೇಂದ್ರಗಳಲ್ಲಿ ನೋಂದಿತರಾದ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಮತ್ತು ಪರಿಮಿತ ಗಂಟೆಗಳಲ್ಲಿ ವಿಶೇಷ ಉಪನ್ಯಾಸಕರಿರಿಂದ ಪಾಠ–ಪ್ರವಚನಗಳನ್ನು ನಡೆಸಿ ಕೊಡುವ ಈ ಕೇಂದ್ರಗಳು ಇದಾವುದನ್ನು ನಿರ್ವಹಿಸದೆ, ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ಕಳ್ಳ ರಹದಾರಿಗಳನ್ನು ತೋರುತ್ತವೆ. ಈ ಒಳದಾರಿಗಳಲ್ಲಿ ತಾವು ಪಡೆಯುವ ಸರ್ಟಿಫಿಕೇಟ್‌ಗಳಿಗೆ ನಾಳಿನ ದಿನಗಳಲ್ಲಿ ಕವಡೆ–ಕಾಸಿನ ಕಿಮ್ಮತ್ತೂ ಇರುವುದಿಲ್ಲ–ಎಂಬ ದೂರದರ್ಶಿತ್ವವೂ ಈ ವಿದ್ಯಾರ್ಥಿಗಳಿಗಿರುವುದಿಲ್ಲ. ಅಥವಾ ಅಪ್ರಿಯವಾದ ಈ ಸತ್ಯ ಇವರಾರಿಗೂ ಬೇಡ. ಪರೀಕ್ಷಾ ಕೇಂದ್ರಗಳಲ್ಲಿ "ಮಾಸ್‌ಕಾಪಿ"ಯ ಮೂಲಕ 'ಹರಕೆಯ ಕುರಿ' ಗಳಾಗುತ್ತಾರೆ.ಇವರಲ್ಲಿ ರಂಗವಲ್ಲಿಯ ಕೆಳಗೆ ನುಸಿಯಬಲ್ಲ ಎರಡನೆಯ ವರ್ಗದವರಿದ್ದಾರೆ. 'ಇಂಪರ್ಸನೇಷನ್' (ಅನ್ಯ

ಕಟ್ಟಡಗಳು ಕಟ್ಟುವ ಹಂತದಲ್ಲೇ ಕುಸಿಯುತ್ತಿವೆ. ಹೊಟ್ಟೆ–ಬಟ್ಟೆ ಕಟ್ಟಿ ಕಲಿಸಲ್ಪಟ್ಟ ಮಗ ಸಾಮಾಜಿಕ ನೆಮ್ಮದಿಯನ್ನು ಕಲಕುತ್ತಿದ್ದಾನೆ; ಕೌಟುಂಬಿಕ ಸಂಬಂಧ–ವಾತ್ಸಲ್ಯಗಳನ್ನು ಧಿಕ್ಕರಿಸುತ್ತಿದ್ದಾನೆ. 'Pen is mightier than sword' ಎಂಬುದು ಸತ್ಯವಾಕ್ಯ. ಆದರೆ ಇಂದು ಖಡ್ಗದ ಜಾಗದಲ್ಲಿ ಬಂದೂಕುಗಳು ಮಾತಾಡುತ್ತಿವೆ! ನಳಿಕೆಯ ಮುಂದಿರುವವನಿಗೆ ಬಂದೂಕಿನ ಹಿಂಬದಿ ಕಾಣುತ್ತಿಲ್ಲ. ನಳಿಕೆಯ ಮುಂದಿರುವ ದನಿ ಹಿಂಬದಿಗೆ ಕೇಳಿಸುತ್ತಿಲ್ಲ. ಒಲೆ ಹೊತ್ತಿ ಉರಿಯಬೇಕಾದಲ್ಲಿ ನೆಲಹೊತ್ತಿ ಉರಿಯುತ್ತಿದೆ. ಮಕ್ಕಳಿಗೆ ನೀಡುವ ಶಿಕ್ಷಣ 'ತಾಯ ಮೊಲೆವಾಲೇ ನಂಜು' ಎಂಬಂತಾಗಿದೆ.

ವ್ಯಕ್ತಿಯಿಂದ ಪರೀಕ್ಷೆ ಬರೆಸುವುದು), ನಕಲಿ ಮಾರ್ಕ್ಸ್ ಕಾರ್ಡ್‌ಗಳ ಚಾಣಾಕ್ಷರಿವರು. ಈ ಹೈಟೆಕ್ ದರೋಡೆಕೋರರಿಗೆ ಹೋಲಿಸಿದಾಗ ಮಾಸ್‌ಕಾಪಿ ಮಾಡುವವರು ನಿಜದ ಹರಕೆಯ ಕುರಿಗಳೇ ಸರಿ.

ಸರಸ್ವತೀ ದ್ರೋಹಿಗಳು :

'ಸರ್ವಶುಕ್ಲಾ ಸರಸ್ವತಿ'ಯ ಮೇಲೆ ನಡೆಯುವ ಅತ್ಯಾಚಾರದಲ್ಲಿ ಲಕ್ಷ್ಮೀ ಪುತ್ರರಾಗುವವರು ಕೇವಲ ಅಧ್ಯಯನ ಕೇಂದ್ರ 'ಹುಟ್ಟು ಹಾಕಿ'ಕೊಂಡವರಲ್ಲ, ಸಾಕ್ಷಾತ್ "ಪರಬ್ರಹ್ಮ"ರಾದ ಅಧ್ಯಾಪಕ ಸಿಬ್ಬಂದಿ, ಲಿಪಿಕ ಸಿಬ್ಬಂದಿ ಮತ್ತು ನಿಯಮನಿರೂಪಕ ಹಾಗೂ ನಿರ್ವಾಚಕರಾದ ವಿಶ್ವವಿದ್ಯಾಲಯದ ಉನ್ನತ ಅಧಿಕಾರಿ ವರ್ಗವೇ ಇದೆ! ತರಗತಿಗಳಲ್ಲಿ ಪಾಠ ಮಾಡದೆ ಮನೆ ಪಾಠಗಳಿಗೆ ವಿದ್ಯಾರ್ಥಿಗಳನ್ನು ಎಳೆಯುವವನೂ ಇದೇ ವರ್ಗಕ್ಕೆ ಸೇರುತ್ತಾನೆ.

ಕೂಸು ಹುಟ್ಟುವುದಕ್ಕೆ ಮುನ್ನ ಕುಲಾಯಿ :–

ಬೆಂಗಳೂರಿನಂತಹ ಕಾಸ್ಮೊಪಾಲಿಟನ್ ನಗರಗಳಲ್ಲಿ ಮಧ್ಯಮ ವರ್ಗದವರು ಹುಟ್ಟದ, ಭ್ರೂಣಾವಸ್ಥೆಯ ಮಗುವಿಗೆ, ಹೆಸರುಮಾಡಿದ ಶಾಲೆಗಳಲ್ಲಿ ಲಕ್ಷಗಳ ಲೆಕ್ಕದಲ್ಲಿ ಮುಂಗಡ ಬುಕ್ಕಿಂಗ್ ಮಾಡಿಸಬೇಕಾಗುತ್ತದೆ. ಈ ರೋಗ ಉಲ್ಬಣಾವಸ್ಥೆಗೆ ತಲುಪಲು ನಮ್ಮ ಜನರ ಇಂಗ್ಲೀಷ್ ಮೀಡಿಯಂ ವ್ಯಾಮೋಹವು ವೇಗವರ್ಧಕದಂತೆ ಕೆಲಸ ಮಾಡುತ್ತಿದೆ.

ಧರೆ ಹತ್ತಿ ಉರಿದೊಡೆ......?

'Young men are the salt of the nation'. ಆದರೆ ಉಪ್ಪೇ ತನ್ನ ಗುಣವನ್ನು ಕಳೆದುಕೊಂಡರೆ, ಅದನ್ನು ಎಲ್ಲಿಂದ ಭರ್ತಿ ಮಾಡುವುದು? ಇದು ಗಾಂಧೀಜಿಯನ್ನು ಅಂದು ಕಾಡಿದ ಸಮಸ್ಯೆ.

ವಿದ್ಯಾರ್ಜನೆಯ ಜ್ಞಾನಾರ್ಜನೆಯ ಸಲುವಾಗಿ ಎಂಬ ಮೂಲಮಂತ್ರವನ್ನು ಮರೆತ ದಿನಗಳಲ್ಲಿ ನಾವಿದ್ದೇವೆ. ಉದ್ಯೋಗಸ್ಥ, ವಿವಿಧ ಸರ್ಕಾರಿ ಇಲಾಖೆಗಳ ನೌಕರರು "ಇಲ್ಲಿ"ಂದ(ಶಿಕ್ಷಣ ಕ್ಷೇತ್ರದಿಂದ) ಅಲ್ಲಿಗೆ "ಸಲ್ಲು"ತ್ತಿದ್ದಾರೆ; ಭ್ರಷ್ಟರಾಗುತ್ತಿದ್ದಾರೆ. ಸರ್ಕಾರಿ ಹಾಗೂ ಖಾಸಗಿ ವಲಯಗಳು ಭ್ರಷ್ಟತೆಯಿಂದ ಮಲಿನಗೊಂಡಿವೆ. ಇದು ಹರಿಯುವ ಅಖಂಡವಾದ ಪ್ರವಾಹ, ಶಿಕ್ಷಣ ಇಲಾಖೆಯಾದರೂ ಇದಕ್ಕೆ ಹೊರತಾಗಿ ನಿಲ್ಲಬೇಕಿತ್ತು. "ಇಲ್ಲಿ"ಸಲ್ಲದವರು ಉಪ್ಪಾಗಿದ್ದಾರೆ. ಉಪ್ಪು ತನ್ನ ಗುಣವನ್ನು ಕಳೆದುಕೊಂಡಿದೆ. ಲಂಚ ಪಡೆಯುವವರು ಲಂಚ ನೀಡಿ ನೌಕರಿಗೆ ಪ್ರವೇಶ ಪಡೆಯುತ್ತಾರೆ. ಕೋಟಿಗಳಲ್ಲಿ ಡೊನೇಷನ್ ನೀಡಿದವರು ಕಿಡ್ನಿ ಕದಿಯುತ್ತಿದ್ದಾರೆ. ರಸ್ತೆಗೆ ಹಾಕಿದ ಜಲ್ಲಿ, ಡಾಂಬರುಗಳು ಮೂರು ತಿಂಗಳ ಮಳೆಗೆ ನೀರಲ್ಲಿ ನೀರಾಗುತ್ತಿವೆ.

ಕಟ್ಟಡಗಳು ಕಟ್ಟುವ ಹಂತದಲ್ಲೇ ಕುಸಿಯುತ್ತಿವೆ. ಹೊಟ್ಟೆ–ಬಟ್ಟೆ ಕಟ್ಟಿ ಕಲಿಸಲ್ಪಟ್ಟ ಮಗ ಸಾಮಾಜಿಕ ನೆಮ್ಮದಿಯನ್ನು ಕಲಕುತ್ತಿದ್ದಾನೆ; ಕೌಟುಂಬಿಕ ಸಂಬಂಧ–ವಾತ್ಸಲ್ಯಗಳನ್ನು ಧಿಕ್ಕರಿಸುತ್ತಿದ್ದಾನೆ. 'Pen is. mightier than sword' ಎಂಬುದು ಸತ್ಯವಾಕ್ಯ. ಆದರೆ ಇಂದು ಖಡ್ಗದ ಜಾಗದಲ್ಲಿ ಬಂದೂಕುಗಳು ಮಾತಾಡುತ್ತಿವೆ! ನಳಿಕೆಯ ಮುಂದಿರುವವನಿಗೆ ಬಂದೂಕಿನ ಹಿಂಬದಿ ಕಾಣುತ್ತಿಲ್ಲ. ನಳಿಕೆಯ ಮುಂದಿರುವ ದನಿ ಹಿಂಬದಿಗೆ ಕೇಳಿಸುತ್ತಿಲ್ಲ. ಒಲೆಹೊತ್ತಿ ಉರಿಯ ಬೇಕಾದಲ್ಲಿ ನೆಲಹೊತ್ತಿ ಉರಿಯುತ್ತಿದೆ. ಮಕ್ಕಳಿಗೆ ನೀಡುವ ಶಿಕ್ಷಣ 'ತಾಯ ಮೊಲೆವಾಲೇ ನಂಜು' ಎಂಬಂತಾಗಿದೆ. ಹೀಗೆ ಸೃಷ್ಟಿಗೊಂಡ ಈ ಕಂದಕದ ಮೂಲ ಎಲ್ಲಿದೆ–ಎಂಬುದು ನಮ್ಮ ನೇತಾರ–ಮತದಾರರಿಬ್ಬರಿಗೂ ತಿಳಿಯುತ್ತಿಲ್ಲ, ಅಥವಾ ತಿಳಿದುಕೊಳ್ಳುವುದು ಅವರ ಈಗಿನ ಅಗತ್ಯವಲ್ಲ.

ಗಂಟೆಕಟ್ಟುವವರು ನಾವೇ :–

ಪಡೆದ ಜ್ಞಾನ–ಆಯ್ಕೆ ಮಾಡಿಕೊಂಡ ವೃತ್ತಿಗೆ ಇದ್ದ ಸಂಬಂಧಗಳು–ಅಂದಿನಂತೆ ಇಂದಿಲ್ಲ. ಜಾಗತೀಕರಣ, ಮುಕ್ತ ಮಾರುಕಟ್ಟೆಯ ಈ ದಿನಗಳಲ್ಲಿ ಇದು ಅಧಿಕವಾಗುತ್ತಿದೆ. ಗುಣಾತ್ಮಕತೆ ನೇಪಥ್ಯಕ್ಕೆ ಸರಿದು ಧನಾತ್ಮಕತೆ ರಂಗಪ್ರವೇಶ ಮಾಡಲು ನಾವು ಅನುಸರಿಸಿದ ಆರ್ಥಿಕ ನೀತಿಗಳೇ(ಅಂತಃರಾಷ್ಟ್ರೀಯ ಮಟ್ಟದಲ್ಲಿ) ಕಾರಣ. ಇದನ್ನು ವಿವಾದಕ್ಕೆ ಎಡೆ ಇಲ್ಲದೆ ಈಗಲಾದರೂ ಒಪ್ಪಿಕೊಳ್ಳದಿದ್ದರೆ ಈ ಅಪಾಯದ ಸ್ಥಿತಿ ದುರಂತದಲ್ಲಿ ಕೊನೆಯಾಗುತ್ತದೆ.

ನೆಲ–ನೀರು–ಆಕಾಶಗಳನ್ನು ನನ್ನ ಸ್ವಾಮ್ಯಕ್ಕೆ ಪಡೆದ ನಾನು ಈಗಲಾದರೂ ಅರಿಯಬೇಕಿದೆ; ನಾನು ನಡೆದು ಬಂದ ದಾರಿ ತಪ್ಪು–ಎಂದು. ಸನಾತನಶಿಕ್ಷಣ, ಆಧುನಿಕ ಶಿಕ್ಷಣಗಳು ನಮ್ಮನ್ನು ಜ್ಞಾನಿಯನ್ನಾಗಿಸಿವೆ; ಮನುಷ್ಯರನ್ನಾಗಿ ಅಲ್ಲ. ಈ ನೋವಿನ, ದುಃಖದ ಸಂಗತಿ ಮನವರಿಕೆಯಾದಾಗ ಕಂದಕದ ಮೂಲ ತಿಳಿಯುತ್ತದೆ; ಸೇತುವೆ ನಿರ್ಮಾಣ ಸಹಜವಾಗಿರುತ್ತದೆ; ಸುಲಭವಾಗಿರುತ್ತದೆ; ಪ್ರತಿಭಾ ಪಲಾಯನ ತಪ್ಪುತ್ತದೆ.

ಮಠದೊಳಗಣ ಬೆಕ್ಕು :

ಈ ಶಿಕ್ಷಣ ಸಾಮಾನ್ಯ ಬೆಕ್ಕಲ್ಲ; ಮಠದೊಳಗಣ ಬೆಕ್ಕು. ಇದಕ್ಕೆ ಗಂಟೆ ಕಟ್ಟುವವರು ಯಾರು? ಮೊದಲು ಮತದಾರ, ನಂತರ ನೇತಾರ, ಇದನ್ನು ಅರಿಯದವರು ಪಠ್ಯಗಳಲ್ಲಿ ಮತಾಂತರೀಕರಣ, ಕೇಸರೀಕರಣ, ಜಾಗತೀಕರಣದಂತ ಚಿಲ್ಲರೆ ವ್ಯಾಪಾರಗಳಲ್ಲಿ ಮಾನವಕುಲಕ್ಕೆ ಶತ್ರುವಾಗುತ್ತಾರೆ. Knowledge is power ಎಂಬುದು Knowledge is danger ಎಂದು ನಾವು ಹೆಜ್ಜೆಯನ್ನು ಹಿಂದಕ್ಕೆ ಹಾಕುವುದುಬೇಡ. ಇದುವರೆಗೆ ನಾವು ಪಡೆದ ಜ್ಞಾನ, ಮಿತಜ್ಞಾನ ಮತ್ತು ಅಲ್ಪಜ್ಞಾನ ಎಂದು ಅರಿತರೆ ಸಮಸ್ಯೆಗೆ ಪರಿಹಾರವಿದೆ. ಲೋಕಕಲ್ಯಾಣವೇ ನೈಜ ಜ್ಞಾನದ ಗುರಿ–ಗಮ್ಯತೆ. □

ಚಂದಮಾಮನ ಮಾತು...

ಮೈಕಲ್ ಜಾಕ್ಸನ್ ಇಲ್ಲವಾಗಿ ತಿಂಗಳುಗಳೇ ಉರುಳಿವೆ. ಆತ ಇದ್ದಾಗ ಗಳಿಸಿದ್ದ ಜನಪ್ರಿಯತೆ ಆತನ ಸಾವಿನ ನಂತರ ಇನ್ನೂ ಹೆಚ್ಚಾಗುತ್ತಿದೆ. ಆತ ಐದು ವರ್ಷದ ಮಗುವಾಗಿದ್ದಾಗಿನಿಂದ ತನ್ನ ವಿಶೇಷ ನೃತ್ಯ, ಹೃದಯ ಮುಟ್ಟುವ ಸಂಗೀತ, ಕಪ್ಪು ಜನರ ಆಳದ ಯಾತನೆ, ಆರ್ದ್ರತೆ, ಕಕ್ಕುಲತೆಯನ್ನು ವ್ಯಕ್ತಪಡಿಸುವ ಹಾಡುಗಳು ಎಲ್ಲವೂ ಕಾಡುತ್ತಿವೆ. ಕಪ್ಪು ಜನಾಂಗದ ದುರಂತವೇನೋ ಎಂಬಂತೆ ತನ್ನ ಬಣ್ಣದ ಕೀಳರಿಮೆ ಮೀರುವ ಸಲುವಾಗಿ ಜಾಕ್ಸನ್ ಬಿಳಿ ಚರ್ಮವನ್ನು ಮುಖಕ್ಕೆ ಮೆತ್ತಿಸಿಕೊಂಡ. ತನ್ನ ಆಕಾರವನ್ನು ನಾನಾ ರೀತಿಗಳಲ್ಲಿ ಬದಲಾಯಿಸುತ್ತಾ ವಿಕಾರ ರೂಪಕ್ಕೊಳಗಾಗಿದ್ದ. ಆತನ ಮುಖದ ಮೇಲಿರುವ ಬಿಳಿ ಚರ್ಮವು ಪದರ ಪದರವಾಗಿ ಉದುರಿಹೋಗುತ್ತಿತ್ತು ಎನ್ನುವ ಗಾಳಿ ಸುದ್ದಿಯೂ ಇತ್ತು. ಕಣ್ಣಿನ ದೃಷ್ಟಿ ಕೂಡ ಮಂದವಾಗಿತ್ತಂತೆ. ಮೊದಲು ವಜ್ರದಂತೆ ಹೊಳೆಯುತ್ತಿದ್ದ ಆತನ ಕಪ್ಪು ಮುಖ ಗೋಲಿಯಂತೆ ಪ್ರಖರವಾಗಿದ್ದ ಕಣ್ಣುಗಳು ಸದೃಢವಾದ ದೇಹ ಈಗಂತೂ ಕೇವಲ ನೆನಪು ಮಾತ್ರ.

ಜಾಕ್ಸನ್ ಕೇವಲ ನೃತ್ಯ ಪಟುವಲ್ಲ. ಒಳ್ಳೆಯ ಕವಿ, ಅದ್ಭುತ ಹಾಡುಗಾರ. ಅವನ ಆಳದಲ್ಲಿ ಮಗುವೊಬ್ಬನಿದ್ದ.. ಅದಕ್ಕೆ ಅವನಿಗೆ ಮಕ್ಕಳೆಂದರೆ ಪ್ರೀತಿ. ಇಂತಹ ಜಾಕ್ಸನ್‌ನನ್ನು 2001 ಮಾರ್ಚ್ ತಿಂಗಳಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದವರು ಭಾಷಣಕ್ಕೆಂದು ಕರೆದರು. ಅವನು ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ಭಾಷಣ ಮಾಡಿದ್ದು ಅಲ್ಲೇ. ನಮ್ಮ ಓದುಗರಿಗಾಗಿ ಜಾಕ್ಸನನ 'ಹೀಲ್ ದ ಕಿಡ್ಸ್' ಭಾಷಣದ ಅನುವಾದವನ್ನು ಇಲ್ಲಿ ನೀಡುತ್ತಿದ್ದೇವೆ.

–ಸಂಪಾದಕರು

ಡಾ. ಲಕ್ಷ್ಮೀಪತಿ ಸಿ. ಜಿ

ಥ್ಯಾಂಕ್ಯೂ ಫ್ರೆಂಡ್ಸ್, ಥ್ಯಾಂಕ್ಯೂಡಿಯರ್ ಫ್ರೆಂಡ್, ಇಂತಹ ಪ್ರೀತಿ ತುಂಬಿದ ಎದೆಯಾಳದ ಸ್ಫೂರ್ತಿ ತುಂಬುವ ಸ್ವಾಗತ ಮಾಡಿದ್ದಕ್ಕಾಗಿ ನಿಮಗೆ ಧನ್ಯವಾದಗಳು. ಸಭೆಯ ಅಧ್ಯಕ್ಷರೇ, ನೀವು ನನಗೆ ಭಾಷಣ ಮಾಡಲು ಆಹ್ವಾನಿಸಿದ್ದು ನನಗೆ ನೀಡಿದ ಗೌರವ. ಇದನ್ನು ಗೌರವ ಪೂರ್ವಕವಾಗಿ ಸ್ವೀಕರಿಸಿದ್ದೇನೆ. ಆಕ್ಸ್‌ಫರ್ಡ್‌ನಲ್ಲಿ ಕಳೆದ 11 ವರ್ಷಗಳಿಂದ ಗುರುವಾಗಿ ಸೇವೆ ಸಲ್ಲಿಸುತ್ತಿರುವ ಶ್ಮಲೆ ಅವರಿಗೆ ವಿಶೇಷ ಧನ್ಯವಾದಗಳು. ಶ್ಮಲೆ ಅವರೇ, ಹೀಲ್ ದ ಕಿಡ್ಸ್ ಎನ್ನುವ ಕಾರ್ಯಕ್ರಮವನ್ನು ರೂಪಿಸಲು ನಾವು ಕಳೆದ ಅನೇಕ ವರ್ಷಗಳಿಂದ ಶ್ರಮ ಪಡುತ್ತಿರುವುದು ನಿಮಗೆ ಚೆನ್ನಾಗಿ ಗೊತ್ತಿದೆ. ಹಾಗೆಯೇ ಮಕ್ಕಳ ಬಗ್ಗೆ ನಾವಿಬ್ಬರೂ ಕೂಡಿ ಪುಸ್ತಕವೊಂದನ್ನು ಬರೆದೆವು. ಅದರಲ್ಲಿ ನಮ್ಮಿಬ್ಬರ ಶ್ರಮವೂ ಅಡಗಿತ್ತು. ನೀವು ನನಗೆ ಸತತವಾಗಿ ಬೆಂಬಲ ನೀಡುತ್ತಾ, ನನ್ನ ಪ್ರೀತಿ ಪಾತ್ರ ಗೆಳೆಯರಾಗಿದ್ದೀರಿ. ಹಾಗೆ ಟೋಬಾ ಫ್ರೆಡ್ಮನ್‌ಗೂ ಧನ್ಯವಾದಗಳು. ಏಕೆಂದರೆ, ಹೀಲ್ ದ ಕಿಡ್ಸ್ ಕಾರ್ಯಕ್ರಮವನ್ನು ನಿರ್ದೇಶಕಿಯಾಗಿ ಮುನ್ನಡೆಸುತ್ತಿದ್ದಾರೆ.

ಮದರ್ ತೆರೇಸಾ, ಆಲ್ಬರ್ಟ್ ಐನ್‌ಸ್ಟೀನ್, ರೊನಾಲ್ಡ್ ರೇಗನ್, ರಾಬರ್ಟ್ ಕೆನಡಿ ಮತ್ತು ಮಾಲ್ಕಂಟೆಂತ್ ಮೊದಲಾದ ಗಣ್ಯಮಾನ್ಯರು ನಿಂತು ಮಾತನಾಡಿದ ಈ ಜಾಗದಲ್ಲಿ ನಿಂತಿರುವುದಕ್ಕೆ ನಾನು ವಿನೀತ ಭಾವದಿಂದ ತುಂಬಿ ಹೋಗಿದ್ದೇನೆ. ಹಾಗೆಯೇ, ಕರ್ಮಿಟ್ ಮತ್ತು ಫ್ರಾಗ್ ಇಲ್ಲಿ ಬಂದಿದದರೆಂದು ಕೇಳಿಸಿಕೊಂಡಿದ್ದೇನೆ. ಕರ್ಮಿಟ್ ಹಸಿರು ಜಗತ್ತಿನ ಬಗ್ಗೆ ಮಾತಾನಾಡುವಾಗ ನನ್ನ ಹಾಗೆಯೇ ಈ ಜಾಗದಲ್ಲಿ ತಡವರಿ ಸಿರಬೇಕು.

ಈ ದಿನ ಇಡೀ ಆಕ್ಸ್‌ಫರ್ಡ್‌ನಲ್ಲಿ ಸುತ್ತಾಡುವಾಗ ಈ ವಿಶ್ವವಿದ್ಯಾಲಯದ ಗಾಂಭೀರ್ಯ ಮತ್ತು ವೈಭವ ನನ್ನ ಮನಸ್ಸನ್ನು ಆವರಿಸಿದವು. ಇಲ್ಲಿನ ಪ್ರತಿಭಾವಂತರು ಮತ್ತು ಸರಸ್ವತಿಯ ವರಪುತ್ರರು ಶತಮಾನಗಳಿಂದ ಸುತ್ತಾಡಿದ ಬೀದಿಗಳಲ್ಲಿಯೇ ನಾನೂ ಸುತ್ತಾಡಿದೆ. ಆಕ್ಸ್‌ಫರ್ಡ್ ಕೇವಲ ಶ್ರೇಷ್ಠ ತತ್ವಶಾಸ್ತ್ರಜ್ಞರನ್ನು, ವಿಜ್ಞಾನಿಗಳನ್ನು ಮಾತ್ರವೆ ರೂಪಿಸಲಿಲ್ಲ. ಜೆ.ಆರ್.ಆರ್. ಟೋಲ್‌ಕಿನ್ ಮತ್ತು ಸಿ.ಎಸ್. ಲೆವಿಸ್‌ರಂತಹ ಅದ್ಭುತವಾದ ಮಕ್ಕಳ ಸಾಹಿತಿಗಳನ್ನು ರೂಪಿಸಿತು. ಈ ದಿನ ಕ್ರೈಸ್ಟ್ ಚರ್ಚಿನ ಊಟದ ಮನೆಯೊಳಗೆ ಅವಕಾಶ ಲಭ್ಯವಾಯಿತು. ಲೆವಿಸ್ ಕಾರಲ್ಸ್‌ನ 'ಆ್ಯಲಿಸ್ ವಂಡರ್ ಲ್ಯಾಂಡ್' ಊಟದ ಮನೆಯ

> **ಈ ದಿನ ಇಡೀ ಆಕ್ಸ್‌ಫರ್ಡ್‌ನಲ್ಲಿ ಸುತ್ತಾಡುವಾಗ ಈ ವಿಶ್ವವಿದ್ಯಾಲಯದ ಗಾಂಭೀರ್ಯ ಮತ್ತು ವೈಭವ ನನ್ನ ಮನಸ್ಸನ್ನು ಆವರಿಸಿದವು. ಇಲ್ಲಿನ ಪ್ರತಿಭಾವಂತರು ಮತ್ತು ಸರಸ್ವತಿಯ ವರಪುತ್ರರು ಶತಮಾನಗಳಿಂದ ಸುತ್ತಾಡಿದ ಬೀದಿಗಳಲ್ಲಿಯೇ ನಾನೂ ಸುತ್ತಾಡಿದೆ. ಆಕ್ಸ್‌ಫರ್ಡ್ ಕೇವಲ ಶ್ರೇಷ್ಠ ತತ್ವಶಾಸ್ತ್ರಜ್ಞರನ್ನು, ವಿಜ್ಞಾನಿಗಳನ್ನು ಮಾತ್ರವೆ ರೂಪಿಸಲಿಲ್ಲ. ಜೆ. ಆರ್. ಆರ್. ಟೋಲ್ ಕಿನ್ ಮತ್ತು ಸಿ.ಎಸ್. ಲೆವಿಸ್‌ರಂತಹ ಅದ್ಭುತವಾದ ಮಕ್ಕಳ ಸಾಹಿತಿಗಳನ್ನು ರೂಪಿಸಿತು. ಈ ದಿನ ಕ್ರೈಸ್ಟ್ ಚರ್ಚಿನ ಊಟದ ಮನೆಯೊಳಗೆ ಅವಕಾಶ ಲಭ್ಯವಾಯಿತು. ಲೆವಿಸ್ ಕಾರಲ್ಸ್‌ನ 'ಆ್ಯಲಿಸ್ ವಂಡರ್ ಲ್ಯಾಂಡ್' ಊಟದ ಮನೆಯ ಗಾಜಿನ ಗೋಡೆಗಳ ಮೇಲೆ ಚಿತ್ತಾರದಿಂದ ರೂಪುಗೊಂಡು ಅಮರವಾಗಿವೆ.**

ಗಾಜಿನ ಗೋಡೆಗಳ ಮೇಲೆ ಚಿತ್ತಾರದಿಂದ ರೂಪು ಗೊಂಡು ಅಮರವಾಗಿವೆ. ನನ್ನ ಅಮೆರಿಕನ್ ಸಹೋದರ ಪ್ರೀತಿಯ ಡಾ.ಸ್ಯೂಸ್ ಗೋಡೆಗಳ ಮೇಲೆ ತನ್ನ ಅದ್ಭುತ ಕಲ್ಪನೆಗಳನ್ನು ಹರಿಯ ಬಿಟ್ಟಿದ್ದಾನೆ. ಅದೊಂದು ಕಡೆ ಇರಲಿ ಈ ಸಂಜೆ ನಿಮ್ಮೆದುರಿಗೆ ಮಾತಾಡಲು ನನಗಿರುವ ಅರ್ಹತೆಗಳನ್ನು ಕುರಿತು ಸಣ್ಣ ಪಟ್ಟಿಯೊಂದನ್ನು ಮಾಡುತ್ತೇನೆ. ನಾನು ಶೈಕ್ಷಣಿಕ ತಜ್ಞನಲ್ಲ. ಈ ಸಭಾಂಗಣದಲ್ಲಿ ಶಿಕ್ಷಣವೇತ್ತರು ಮಾತಾಡಿ ಹೋಗಿದ್ದಾರೆ. ಆದರೆ ಅವರೆಲ್ಲರೂ ಮೂನ್‌ವಾಕ್‌ನಲ್ಲಿ ನಿಪುಣರಾಗಿರಲಿಲ್ಲ. ಅದರಲ್ಲೂ ಐನ್‌ಸ್ಟಿನ್ ಈ ವಿಚಾರದಲ್ಲಿ ಭಯಂಕರವಾಗಿದ್ದಿರಬೇಕು.

ಆದರೆ ನಾನು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ. ನಾನು ಇತರರಿಗಿಂತ ಹೆಚ್ಚು ಸ್ಥಳಗಳನ್ನೂ ಮತ್ತು ಸಂಸ್ಕೃತಿಗಳನ್ನು ಅನುಭವಿಸಿದ್ದೇನೆ. ಮನುಷ್ಯನ ಜ್ಞಾನ ಎಂಬುದು ಕೇವಲ ಗ್ರಂಥಾಲಯದ ಪುಸ್ತಕಗಳಲ್ಲಿಲ್ಲ. ಮಣಗಟ್ಟಲೆ ಜ್ಞಾನ ಮನುಷ್ಯನ ಹೃದಯದ ಮೇಲೆ ಬರೆಯಲ್ಪಟ್ಟಿದೆ. ಮನುಷ್ಯನ ಆತ್ಮಗಳ ಮೇಲೆ ಕೊರೆಟಿಯಲ್ಪಟ್ಟಿದೆ. ಮನೋಧರ್ಮದ ಮೇಲೆ ಬಿಡಿಸಲ್ಪಟ್ಟಿದೆ. ಸ್ನೇಹಿತರೇ, ನೀವು ನಂಬಲಾರಿರಿ ನನಗೀಗ ವಯಸ್ಸು 43. ಈ 43ನೇ ವಯಸ್ಸಿಗೆ ನಾನು ಸಾಕಷ್ಟು ಕಂಡಿದ್ದೇನೆ. ಆಗಗ ಶ್ಲೋಲೆಗೆ ಹೇಳುತ್ತಿರುತ್ತೇನೆ. ಇನ್ನು ಕೆಲವೇ ವರ್ಷಗಳಲ್ಲಿ ಕನಿಷ್ಠವೆಂದರೂ ನನಗೀಗ 80 ವರ್ಷದ ವ್ಯಕ್ತಿಯಷ್ಟು ಅನುಭವವಾಗಿರುತ್ತದೆ. ಈ ದಿನ ಈ ರಾತ್ರಿ ನಾನು 80 ವರ್ಷದವನಂತೆಯೇ ನಡೆಯುತ್ತಿದ್ದೇನೆ. ಆದುದರಿಂದ ಮನಗೊಟ್ಟು, ಕಿವಿಗೊಟ್ಟು ನನ್ನ ಮಾತನ್ನು ಕೇಳಿ. ಈ ರಾತ್ರಿ ನಾನು ಹೇಳಲಿರುವ ಮಾತುಗಳು ನಮ್ಮ ಗ್ರಹಕ್ಕೂ ಮತ್ತು ಮನುಷ್ಯಲೋಕಕ್ಕೂ ಸಾಂತ್ವನವನ್ನು ನೀಡಬಲ್ಲುದು.

ದೇವರ ದಯೆಯಿಂದ ಮತ್ತು ಅದೃಷ್ಟ ವಶಾತ್ ನಾನು ಚಿಕ್ಕ ವಯಸ್ಸಿನಲ್ಲಿಯೇ ಕಲೆಯಿಂದ ದೊರೆಯಬಹುದಾದ ಎಲ್ಲಾ ವೃತ್ತಿಪರ ಸಂತೋಷವನ್ನೂ ಸಾಧಿಸಿಬಿಟ್ಟೆ. ಆದರೆ ಗೆಳೆಯರೇ ಸಾಧನೆಗಳು ಮತ್ತೂ ಸಾಧನೆಗಳು ನಾನಾರು ಎಂಬುದನ್ನು ತಿಳಿಸಲಾರವು. ನಾನೇ ಬೇರೆ ಸಾಧನೆಗಳೇ ಬೇರೆ. ನಾನು 5 ವರ್ಷದ ಮಗುವಾಗಿದ್ದಾಗ ನೃತ್ಯ ಮಾಡುತ್ತಾ ಕುಣಿಯುತ್ತಿದ್ದಾಗ ನಗುನಗುತ್ತಾ ನಲಿಯುತ್ತಿದ್ದಾಗ ಆ ನಗುವಿನ ಹಿಂದೆ ಇರುವ ಮಗು ರಾಕಿನ್ ರಾಬಿನ್ ಮತ್ತು ಕಲಾವಿದರನ್ನು ಹುಚ್ಚರಂತೆ ಆರಾಧಿಸುತ್ತಿದ ಜನತೆಗೆ ತಿಳಿದಿರಲಿಲ್ಲ. ಅಂತಹ ಮಗುವಾದ ನಾನು ಈ ರಾತ್ರಿ ಸುಪ್ರಸಿದ್ಧ ಪಾಪ್ ತಾರೆಯಾಗಿ ಈ ಪೀಳಿಗೆಯ ಮತ್ತು ಬರಲಿರುವ ಪೀಳಿಗೆಯ ಆರಾಧ್ಯ ದೈವವಾಗಿ ನಿಮ್ಮೆದುರು ನಿಂತಿದ್ದೇನೆ. ಆದರೆ ಮಕ್ಕಳಿಗೆ ಇದೆಲ್ಲಾ ಯಾವ ಅರ್ಥವನ್ನು ಕೊಡುತ್ತದೆ ಎಂಬುದು ನನಗೆ ತಿಳಿದಿಲ್ಲ.

ನಾವೆಲ್ಲರೂ ನಮ್ಮ ಬಾಲ್ಯದ ಫಲಿತಗಳು. ಆದರೆ ನಾನು ಅಂಥಹ ಒಂದು ಸುಂದರ ಬಾಲ್ಯವನ್ನು ಕಳೆದುಕೊಂಡವನು. ಜಗತನ್ನು ಲೆಕ್ಕಿಸದೆ ಹಾಡುತ್ತಾ, ಕುಣಿಯುತ್ತಾ ಬಾಲ್ಯವನ್ನು ಕಳೆಯಬೇಕಿತ್ತು. ಆದರೆ ನಮ್ಮ ಕಾಳಜಿ ಇದ್ದುದು ಸೋಮವಾರ ಬೆಳಿಗ್ಗೆ ಬರುವ ಕಾಗುಣಿತದ ಪರೀಕ್ಷೆಯ ಬಗೆಗೆ. ಜಾಕ್ಸನ್ 5 ಸಂಗೀತದ ತಂಡದ ಬಗ್ಗೆ ನಿಮಗೆ ಗೊತ್ತಿರಬೇಕು. ನಾನು ಎಳೆಯ ವಯಸ್ಸಿನಲ್ಲಿಯೇ ನೃತ್ಯ ಮಾಡಲು ಹಾಡಲು ಶುರು ಮಾಡಿದೆ. ಇಲ್ಲಿಯವರೆಗೆ ನನ್ನ ನೃತ್ಯ ಮತ್ತು ಹಾಡು ನಿಂತಿಲ್ಲ. ಕುಣಿಯುವಾಗ ಮತ್ತು ನರ್ತಿಸುವಾಗ ನಾನು ಅಮಿತಾನಂದವನ್ನು ಅನುಭವಿಸುತ್ತೇನೆ. ಆ ಕ್ಷಣದಲ್ಲಿ ಮಟಾಣಿ ಹುಡುಗನಂತಾಗಿ ಬಿಡುತ್ತೇನೆ. ಆದರೆ ನನ್ನ ಬಾಲ್ಯದಲ್ಲಿಯೂ

ಕೆಲವು ಇಂಥದ್ದೇ ಆಸೆಗಳಿದ್ದವು. ಮರಳಿನಲ್ಲಿ ಮನೆ ಕಟ್ಟುವುದು ಗಾಳಿಯಲ್ಲಿ ಬಲೂನುಗಳನ್ನು ತೇಲಿ ಬಿಡುವುದು ಸ್ನೇಹಿತರೊಡನೆ ಕಣ್ಣಮುಚ್ಚಾಲೆಯಾಡುವುದು. ಆದರೆ ವಿಧಿ ಇವುಗಳಿಂದ ನನ್ನನ್ನು ವಂಚಿಸಿತು.

ನನ್ನ ಸುತ್ತ ಕಿವಿಗೆ ಅಪ್ಪಳಿಸುತ್ತಿದ ನಗುವಿನ ಅಲೆ ಮತ್ತು ಕಣ್ಣಿಗೆ ಕಾಣುತ್ತಿದ್ದ ಆಟದ ಬಯಲು ಅಸೂಯೆಯನ್ನು ಹುಟ್ಟಿಸುತ್ತಿದ್ದವು. ನನ್ನ ಸುತ್ತ ಗಿರಕಿ ಹೊಡೆಯುತ್ತಿದ್ದವು. ನನ್ನ ವೃತ್ತಿಜೀವನದಿಂದ ಬಿಡುಗಡೆಯೇ ಇರಲಿಲ್ಲ. ಸುವಾರ್ತೆ ಹರಡುವುದಕ್ಕೆ ಯೆಹೋವಾನ ಸಾಕ್ಷಿ ಎಂದು ಕರೆಯುತ್ತಾರೆ. ಭಾನುವಾರ ಬೆಳಿಗ್ಗೆ ನಾನು ಅದಕ್ಕಾಗಿ ಹೋದಾಗ ಬೇರೆಯ ಜನರ ಬಾಲ್ಯದ ಸೊಬಗನ್ನು ಕಾಣುತ್ತಿದೆ. ಬಾಲಕನಾಗಿದ್ದಾಗಲೇ ನಾನು ಸೆಲೆಬ್ರಿಟಿಯಾಗಿದ್ದೆ. ಕದ್ದು ಮುಚ್ಚಿ ಹೊರಗಡೆ ಓಡಾಡಬೇಕಿತ್ತು. ತಲೆಗೊಂದು ವಿಗ್ ಅಂಟಿಸಿದ್ದ ಗಡ್ಡ, ದೊಡ್ಡ ಸೂಟು ಮತ್ತು ಬಣ್ಣದ ಕನ್ನಡಕ ತೊಟ್ಟು ದಕ್ಷಿಣ ಕ್ಯಾಲಿಫೋರ್ನಿಯಾದ ಬೀದಿಬೀದಿಗಳಲ್ಲಿ ಸುತ್ತುತ್ತಿದ್ದವು. ನಮ್ಮ ವಾಚ್‌ಟವರ್

ನಾವೆಲ್ಲರೂ ನಮ್ಮ ಬಾಲ್ಯದ ಫಲಿತಗಳು. ಆದರೆ ನಾನು ಅಂಥಹ ಒಂದು ಸುಂದರ ಬಾಲ್ಯವನ್ನು ಕಳೆದುಕೊಂಡವನು. ಜಗತನ್ನು ಲೆಕ್ಕಿಸದೆ ಹಾಡುತ್ತಾ, ಕುಣಿಯುತ್ತಾ ಬಾಲ್ಯವನ್ನು ಕಳೆಯಬೇಕಿತ್ತು. ಆದರೆ ನಮ್ಮ ಕಾಳಜಿ ಇದ್ದುದು ಸೋಮವಾರ ಬೆಳಿಗ್ಗೆ ಬರುವ ಕಾಗುಣಿತದ ಪರೀಕ್ಷೆಯ ಬಗೆಗೆ. ಜಾಕ್ಸನ್ 5 ಸಂಗೀತದ ತಂಡದ ಬಗ್ಗೆ ನಿಮಗೆ ಗೊತ್ತಿರಬೇಕು. ನಾನು ಎಳೆಯ ವಯಸ್ಸಿನಲ್ಲಿಯೇ ನೃತ್ಯ ಮಾಡಲು ಹಾಡಲು ಶುರು ಮಾಡಿದೆ. ಇಲ್ಲಿಯವರೆಗೆ ನನ್ನ ನೃತ್ಯ ಮತ್ತು ಹಾಡು ನಿಂತಿಲ್ಲ. ಕುಣಿಯುವಾಗ –ನರ್ತಿಸುವಾಗ ನಾನು ಅಮಿತಾನಂದವನ್ನು ಅನುಭವಿಸುತ್ತೇನೆ.

ಮ್ಯಾಗಜೀನ್‌ಗಳನ್ನು ಹಂಚಲು ಶಾಪಿಂಗ್ ಮಾಲ್‌ಗಳಿಗೆ ಹೋಗುತ್ತಿದ್ದವು.

ಕ್ಯಾಲಿಫೋರ್ನಿಯಾದ ಸುತ್ತ ಇರುವ ಪ್ರತೀ ಮನೆ ಬಾಗಿಲಿಗೂ ಹೋಗುತ್ತಿದ್ದಾಗ ಅಲ್ಲಿ ಕಾಣಿಸುತ್ತಿದ್ದ ದೃಶ್ಯಗಳು ಇನ್ನೂ ನನ್ನ ಮನದಾಳದಲ್ಲಿ ಹಾಗೆಯೇ ನಿಂತಿವೆ. ಆ ಮನೆಗಳ ಹೊರಗಡೆ ಹಾಕಿರುತ್ತಿದ್ದ ಸೋಮಾರಿ ಕುರ್ಚಿಗಳು ಅಜ್ಜಿಯ ತೊಡೆಯಂದಿರ ಮೇಲೆ ರಾಜ–ರಾಣಿಯಂತೆ ಕುಳಿತ ಮಕ್ಕಳು ನನ್ನ ಜೀವನದ ಮರೆಯಲಾಗದ ದೃಶ್ಯಗಳು. ನನಗೆ ಗೊತ್ತು ಇವೆಲ್ಲಾ ನಿಮ್ಮಲ್ಲಿ ಅನೇಕರಿಗೆ ಅಂತಹ ದೊಡ್ಡ ವಿಚಾರಗಳೆಂದೆನಿಸುವುದಿಲ್ಲ. ಆದರೆ ನನಗೆ ಮಾತ್ರ ಈ ದೃಶ್ಯಗಳು ನಿರಂತರವಾಗಿ ಹುಚ್ಚು ಹಿಡಿಸಿವೆ.

ಅದೇನೋ ಗೊತ್ತಿಲ್ಲ. ನನಗೆ ಯಾವಾಗಲೂ ಒಂದು ಕೊರಗಿದೆ. ನಾನು ಬಾಲ್ಯವಿಲ್ಲದ ಬದುಕನ್ನು ಕಳೆದುಬಿಟ್ಟೆನಲ್ಲಾ ಎಂದು ಯೋಚಿಸುತ್ತೇನೆ. ಈ ಭಾವನೆಯನ್ನು ಎಲ್ಲರ ಬಳಿಯೂ ಹೇಳಿಕೊಳ್ಳಲಾರೆ. ಕೆಲವೇ ಕೆಲವರ ಬಳಿ ಮಾತ್ರ ಇವುಗಳನ್ನು ಹಂಚಿಕೊಳ್ಳಬಲ್ಲೆ. ನಾನು ಇತ್ತೀಚೆಗೆ ಶರ್ಲಿ ಟೆಂಪಲ್ ಬ್ಲಾಕ್‌ಳನ್ನು ಭೇಟಿ ಮಾಡಿದೆ. 1930 ಮತ್ತು 40ರಲ್ಲಿ ಅವಳು ತಾರಾಮೌಲ್ಯದ ಬಾಲ ಕಲಾವಿದೆಯಾಗಿದ್ದಳು. ನಾವಿಬ್ಬರು ಪರಸ್ಪರ ಭೇಟಿಯಾದ ಕೂಡಲೇ ಏನನ್ನೂ ಮಾತಾಡಲಿಲ್ಲ. ಒಬ್ಬರನ್ನೊಬ್ಬರು ನೋಡುತ್ತಾ ಅಳುತ್ತಾ ನಿಂತುಬಿಟ್ಟೆವು. ಈ ನೋವನ್ನು ನನ್ನ ಇತರ ಗೆಳೆಯರಾದ ಎಲಿಜಬೆತ್ ಟೈಲರ್ ಮತ್ತು ಮೆಕಾಲೆ ಕುಲ್ಕಿನ್ ಜೊತೆ ಮಾತ್ರ ಹಂಚಿಕೊಳ್ಳುತ್ತೇನೆ.

ಇದನ್ನೆಲ್ಲಾ ನಿಮ್ಮ ಅನುಕಂಪ ಗಳಿಸಲು ನಾನು ಹೇಳುತ್ತಿಲ್ಲ ಅಥವಾ ನಿಮ್ಮನ್ನು ಮೆಚ್ಚಿಸಲೂ ಅಲ್ಲ. ಆದರೆ ಒಬ್ಬ ಪ್ರಮುಖವಾದ ವಿಷಯವನ್ನು ಮಾತ್ರ ನಿಮಗೆ ಮುಟ್ಟಿಸಬೇಕು. ಇದು ಕೇವಲ ಹಾಲಿವುಡ್‌ನ ಬಾಲ ಕಲಾವಿದರು ಮಾತ್ರ ಬಾಲ್ಯವನ್ನು ಕಳೆದುಕೊಂಡಿಲ್ಲ. ಇಡೀ ವಿಶ್ವದ ಮಕ್ಕಳೆ ಬಾಲ್ಯವಿಲ್ಲದೆ ನರಳುತ್ತಿದ್ದಾರೆ. ಇದೊಂದು ಜಾಗತಿಕ ದುರಂತ. ಇಡೀ ಭೂಗೋಳವನ್ನು ಆವರಿಸಿರುವ ಪ್ರಳಯ. ಈ ಆಧುನಿಕ ದಿನ ಮಾನದಲ್ಲಿ ಬಾಲ್ಯವೆಂಬುದು ಘೋರ ಅನುಭವವಾಗಿದೆ. ನಮ್ಮ ಸುತ್ತ ಮುತ್ತ ಸಂತೋಷವಿಲ್ಲದ ಕೇವಲ ಅಂಕಗಳನ್ನು ಪಡೆಯುವ ಮಕ್ಕಳನ್ನು ಉತ್ಪಾದಿಸುತ್ತಿದ್ದೇವೆ. ಮಗುವಿಗೆ ಮಗುವೆಂದರೇನು ಎಂಬುದು ಅರಿವಿಗೆ ಬಂದಿರುವುದಿಲ್ಲ. ಯಾವ ಹಕ್ಕುಗಳೂ ಇಲ್ಲ, ಸ್ವಾತಂತ್ರ್ಯವೂ ಇಲ್ಲ.

ಇತ್ತೀಚಿನ ದಿನಗಳಲ್ಲಂತೂ ಮಕ್ಕಳನ್ನು ಬೇಗ ದೊಡ್ಡವರನ್ನಾಗಿ ಮಾಡಲು ಪ್ರೋತ್ಸಾಹಿಸಲಾಗುತ್ತಿದೆ. ಬಾಲ್ಯವೆಂಬುದು ಹೊರೆಯಾಗಿದೆ. ಈ ಹೊರೆಯನ್ನು ಮಕ್ಕಳು ಹೊರಲೇಬೇಕಾಗಿದೆ. ನಾವು ಈ ಹೊರೆಯನ್ನು ಇಳಿಸಬೇಕಾಗಿದೆ. ಈ ವಿಚಾರದಲ್ಲಂತೂ ಖಂಡಿತವಾಗಿಯೂ ನಾನು ಪ್ರಪಂಚದ ನಿಷ್ಣಾತ. (ಅಬ್ರೇಷನ್) ನಮ್ಮ ಪೀಳಿಗೆಯು ಅಪ್ಪ–ಅಮ್ಮಂದಿರ ಜೊತೆಗೆ ಒಂದು ಬಗೆಯ ಅತಿರೇಕದ ಸಂಬಂಧಗಳನ್ನು ಹೊಂದಿದೆ. ಮನಶಾಸ್ತ್ರಜ್ಞರು ಮಕ್ಕಳನ್ನು ಬೆಳೆಸುವ ಕುರಿತು ರಾಶಿಗಟ್ಟಲೆ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಜೊತೆಗೆ ಬೇಷರತ್ತಾಗಿ ಮಕ್ಕಳನ್ನು ಪ್ರೀತಿಸದೆ ಹೋದರೆ ಅದರಿಂದ ಉಂಟಾಗುವ ಅನಾಹುತವನ್ನೂ ತಿಳಿಸಿಕೊಡುತ್ತಿದ್ದಾರೆ. ಆದರೆ, ನಮ್ಮ ಮಕ್ಕಳು ಪೋಷಕರ ಉಪೇಕ್ಷೆಯಿಂದಾಗಿ ತಮ್ಮನ್ನು ತಾವೇ ರೂಪಿಸಿಕೊಳ್ಳುವ ಒತ್ತಾಯಕ್ಕೊಳಗಾಗಿದ್ದಾರೆ. ಒಂದು ಪೀಳಿಗೆಯನ್ನು ಮತ್ತೊಂದು ಪೀಳಿಗೆಗೆ ಬೆಸೆಯುತ್ತಿದ್ದ ಅಮರವಾದ ಸಂಬಂಧವು ಛಿದ್ರವಾಗಿದೆ. ಅಪ್ಪ–ಅಮ್ಮ



ಮತ್ತು ಕುಟುಂಬದ ಸದಸ್ಯರಿಂದ ಮಕ್ಕಳು ದೂರವಾಗಿದ್ದಾರೆ.

ಈ ಪ್ರೀತಿಯ ಉಲ್ಲಂಘನೆ ಹೊಚ್ಚ ಹೊಸ ಪೀಳಿಗೆಯೊಂದನ್ನು ರೂಪಿಸುತ್ತಿದೆ. ಈ ಪೀಳಿಗೆಯನ್ನು 'ಓ' ಎಂದು ಕರಿಯೋಣ. ಹಳೆಯ ಪೀಳಿಗೆಯಿಂದ ಇದು ಪಂಜನ್ನು ತೆಗೆದುಕೊಂಡಿದೆ. ಈ ಓ ಪೀಳಿಗೆಗೆ ಬಾಹ್ಯದಲ್ಲಿಯು ಎಲ್ಲವೂ ಇದೆ. ಶ್ರೀಮಂತಿಕೆ, ಯಶಸ್ಸು, ಬಣ್ಣಬಣ್ಣದ ಬಟ್ಟೆಗಳು, ನವನೂತನ ಕಾರುಗಳು ಎಲ್ಲವೂ ಇದೆ. ಆದರೆ ಒಳಗೆ ಮಾತ್ರ ಯಾತನೆ ತುಂಬಿದ ಶೂನ್ಯ. ಎಲ್ಲಿ ಒಂದು ಕಾಲದಲ್ಲಿ ಹೃದಯ ಪ್ರೀತಿಯಿಂದ ಮಿಡಿಯುತ್ತಿತ್ತೋ ಪ್ರೇಮದಿಂದ ತುಂಬಿತ್ತೋ ಆ ಜಾಗದಲ್ಲಿ ಗಾಯಗಳಿವೆ. ಆತ್ಮ ಬಂಜರು ಭೂಮಿಯಾಗಿದೆ. ಕೇಂದ್ರ ಶೂನ್ಯವಾಗಿದೆ.

ಅಯ್ಯೋ! ಕೇವಲ ಮಕ್ಕಳು ಮಾತ್ರ ಈ ರೀತಿ ನರಳುತ್ತಿಲ್ಲ. ಅಪ್ಪ ಅಮ್ಮಂದಿರ ನರಳಾಟವೂ ಹೀಗೆಯೆ ಇದೆ. ಚಿಕ್ಕ ಮಗುವಿನ ದೇಹದಲ್ಲಿ ವಯಸ್ಕನನ್ನು ಅರಳಿಸುತ್ತಾರೆ. ನಮ್ಮ ಬಾಲ್ಯದ ಗುಣಗಳನ್ನು ಕಿತ್ತೆಸೆಯಲಾಗುತ್ತದೆ. ಆದರೆ ಮಗುವಿನ ಗುಣಗಳು ವಯಸ್ಕನಲ್ಲಿ ಉಳಿಯುವುದು ಅಗತ್ಯವೆಂಬುದನ್ನು ಯಾರೂ ಮನಗಾಣುತ್ತಿಲ್ಲ.

ಮಹಿಳೆಯರೇ ಮತ್ತು ಮಹನೀಯರೇ, ಮನುಷ್ಯ ಕುಟುಂಬ ತನ್ನ ಅಮೂಲ್ಯ ಪರಂಪರೆಯನ್ನು ಕಳೆದುಕೊಂಡುಬಿಟ್ಟಿದೆ ಪ್ರೀತಿಯನ್ನು ಕೂಡ. ಅದರೊಂದಿಗೆ ಬರುವ ಘನತೆ ಮತ್ತು ಅಭಿಮಾನವನ್ನೂ ಕೂಡ. ಈ ಕೈದೀವಿಗೆಗಳು ಪೀಳಿಗೆಯಿಂದ ಪೀಳಿಗೆಗೆ ಕೊಡಮಾಡಲ್ಪಟ್ಟವು. ಹಿಂದಿನ ದಿನಗಳಲ್ಲಿ ಸಾಕು ಬೇಕಾದಷ್ಟು ಅನುಭವಿಸುವ ಸಂಪತ್ತಿರಲಿಲ್ಲ. ಅವರ ಮನೆಗಳಲ್ಲಿ ವಿದ್ಯುತ್ ದೀಪವೂ ಇರಲಿಲ್ಲ. ಪುಟ್ಟ ಪುಟ್ಟ ಕೋಣೆಗಳಲ್ಲಿ ಮಕ್ಕಳು ಬಿದ್ದುಕೊಂಡಿರುತ್ತಿದ್ದವು. ಚಳಿಗಾಲದಲ್ಲಿ ಬೆಚ್ಚಗಾಗಿಸುವ ಯಂತ್ರಗಳೂ ಇರಲಿಲ್ಲ. ಆದರೆ ಅಲ್ಲಿ ಕತ್ತಲಿರಲಿಲ್ಲ, ಚಳಿಯೂ ಇರಲಿಲ್ಲ. ಮನುಷ್ಯನ ಹೃದಯದ ಬೆಚ್ಚಗಿನ ಪ್ರೀತಿ ಮತ್ತು ವಾತ್ಸಲ್ಯದಿಂದ ಹೊಳೆಯುತ್ತ ಇಡೀ ಕುಟುಂಬವನ್ನೇ ಬೆಚ್ಚಗಿಡುತ್ತಿದ್ದವು. ಅಪ್ಪ-ಅಮ್ಮಂದಿರು ಶ್ರೀಮಂತಿಕೆ ಮತ್ತು ಸ್ಥಾನಮಾನದ ದಾಹದಿಂದ ತಮ್ಮ ಮಕ್ಕಳ ಕೋಮಲ ಬಾಲ್ಯವನ್ನು ನಾಶಮಾಡಿಬಿಟ್ಟರು.

ನಿಮಗೆಲ್ಲಾ ಗೊತ್ತಿರಬೇಕಲ್ಲ ನಮ್ಮ ಎರಡೂ ದೇಶಗಳು ಥಾಮರ್ ಜೆಫರ್‌ಸನ್ ಹೇಳಿದಂತೆ ಕೆಲವು ಮೂಲಭೂತ ಹಕ್ಕುಗಳ ವಿಚಾರ ಕುರಿತಂತೆ ಭಿನ್ನಾಭಿಪ್ರಾಯದಿಂದ ಒಡೆದುಹೋದವು. ನಾವು ಅಮೇರಿಕನ್ನರೋ – ಬ್ರಿಟಿಷರು ಜೆಫರ್‌ಸನನ ಹೇಳಿಕೆಯ ನ್ಯಾಯಾ ನ್ಯಾಯಗಳನ್ನು ಕುರಿತು ಮಾತನಾಡಿಕೊಳ್ಳಬಹುದು ಜಗಳವಾಡಬಹುದು. ಆದರೆ, ಒಂದಂತೂ ಸತ್ಯ. ಮಕ್ಕಳ ಸಂತೋಷ, ಯಾರೂ ಎಂದಿಗೂ ಅಳಿಸಿಲಾಗದ ಅವರ ಹಕ್ಕುಗಳ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿರಲು ಸಾಧ್ಯವೇ ಇಲ್ಲ. ಇಡೀ ಪ್ರಪಂಚದಾದ್ಯಂತ ಮಕ್ಕಳ ಸಂತೋಷವನ್ನು ಮತ್ತು ಬಾಲ್ಯದ ಭದ್ರತೆಯನ್ನು ನಿಧನವಾಗಿ ಗುಡಿಸಿ ಹಾಕಲಾಗಿದೆ.

ಗೆಳೆಯರೇ, ಆದುದರಿಂದ ಈ ರಾತ್ರಿ ನಾನು ವಿಶ್ವದ ಮಕ್ಕಳ ಹಕ್ಕುಗಳನ್ನು ನಿಮ್ಮ ಮುಂದಿಡಲಿದ್ದೇನೆ. ಈ ಹಕ್ಕುಗಳನ್ನು ಪ್ರತೀ ಮನೆಯಲ್ಲಿಯೂ ಛಾಪಿಸಿರಿ.

1. ಗಳಿಸದೆಯೂ ಬೇಷರತ್ತಾಗಿ ಪ್ರೀತಿಸಲ್ಪಡುವ ಹಕ್ಕು
2. ಅನರ್ಹರಾಗಿದರೂ ರಕ್ಷಿಸಲ್ಪಡುವ ಹಕ್ಕು.
3. ಏನನ್ನೂ ಗಳಿಸದೆ ಈ ಜಗತ್ತಿಗೆ ಬಂದಿದ್ದರೂ ನಾನು ಅಮೂಲ್ಯ ಎಂದು ಭಾವಿಸುವ ಹಕ್ಕು.
4. ಅಸಕ್ತಿಯಿಲ್ಲದಿದ್ದರೂ ಅವರ ಮಾತುಗಳನ್ನು ಕೇಳಿಸಿಕೊಳ್ಳುವ ಹಕ್ಕು.
5. ಪ್ರತಿ ರಾತ್ರಿ ಪ್ರಸಾರವಾಗುವ ವಾರ್ತಾ ವಾಹಿನಿಯ ಜೊತೆ ಸ್ಪರ್ಧಿಸಲ್ಪಡುವ ಜೋಗುಳ ಹಾಡಿಸಿಕೊಳ್ಳುತ್ತಾ ಕತೆ ಕೇಳಿಸಿಕೊಳ್ಳುವ ಹಕ್ಕು.
6. ಮದ್ದು ಗುಂಡುಗಳನ್ನು ಶಾಲೆಯಲ್ಲಿ ಮುಚ್ಚಿಡದೆ ಶಿಕ್ಷಣ ಪಡೆಯುವ ಹಕ್ಕು.
7. ನಾನು ಪ್ರೀತಿಸಲ್ಪಡುತ್ತಿದ್ದೇನೆ, ಆರಾಧಿಸಲ್ಪಡುತ್ತಿದ್ದೇನೆ ಎಂದು ತಿಳಿದುಕೊಳ್ಳುವ ಹಕ್ಕು.

ಸ್ನೇಹಿತರೇ, ಮನುಷ್ಯನ ಜ್ಞಾನದ ಅಡಿಪಾಯವೇನು ಗೊತ್ತೇ? ಪ್ರಜ್ಞೆಯ ಆರಂಭ. ಈ ಪ್ರಜ್ಞೆಯ ಮೂಲವೇನು ಗೊತ್ತೇ? ಪ್ರೀತಿ, ನೀನು ಕಪ್ಪು ಕೂದಲನ್ನು ಹೊಂದಿದ್ದೀಯೋ ಅಥವಾ ಕೆಂಚು ಕೂದಲೋ ಅಥವಾ ನೀನು ಕಪ್ಪು ಅಥವಾ ನೀನು ಬಿಳುಪು ಎಂದು ತಿಳಿಯುವ ಮೊದಲೇ, ನೀನು ಯಾವ ಧರ್ಮದವನು ಎಂದು ಅರಿಯುವ ಮೊದಲೇ ನೀನು ಪ್ರೀತಿಸಲ್ಪಡುತ್ತಿದ್ದಿ ಎಂದು ಮೊದಲು ಗೊತ್ತಾಗಬೇಕು.

ಅದೇನೋ ಗೊತ್ತಿಲ್ಲ. ನನಗೆ ಯಾವಾಗಲೂ ಒಂದು ಕೊರಗಿದೆ. ನಾನು ಬಾಲ್ಯವಿಲ್ಲದ ಬದುಕನ್ನು ಕಳೆದುಬಿಟ್ಟೆನಲ್ಲಾ ಎಂದು ಯೋಚಿಸುತ್ತೇನೆ. ಈ ಭಾವನೆಯನ್ನು ಎಲ್ಲರ ಬಳಿಯೂ ಹೇಳಿಕೊಳ್ಳಲಾರೆ. ಕೆಲವೇ ಕೆಲವರ ಬಳಿ ಮಾತ್ರ ಇವುಗಳನ್ನು ಹಂಚಿಕೊಳ್ಳಬಲ್ಲೆ. ನಾನು ಇತ್ತೀಚೆಗೆ ಶರ್ಲಿ ಟೆಂಪಲ್ ಬ್ಲಾಕ್‌ಳನ್ನು ಭೇಟಿ ಮಾಡಿದೆ. 1930 ಮತ್ತು 40 ರಲ್ಲಿ ಅವಳು ತಾರಾಮೌಲ್ಯದ ಬಾಲ ಕಲಾವಿದೆಯಾಗಿದ್ದಳು. ನಾವಿಬ್ಬರು ಪರಸ್ಪರ ಭೇಟಿಯಾದ ಕೂಡಲೇ ಏನನ್ನೂ ಮಾತಾಡಲಿಲ್ಲ. ಒಬ್ಬರನ್ನೊಬ್ಬರು ನೋಡುತ್ತಾ ಅಳುತ್ತಾ ನಿಂತುಬಿಟ್ಟೆವು. ಈ ನೋವನ್ನು ನನ್ನ ಇತರ ಗೆಳೆಯರಾದ ಎಲಿಜಬತ್ ಟೈಲರ್ ಮತ್ತು ಮೆಕಾಲೆ ಕುಲ್ಕಿನ್ ಜೊತೆ ಮಾತ್ರ ಹಂಚಿಕೊಳ್ಳುತ್ತೇನೆ.

ಕೇವಲ 12 ವರ್ಷಗಳ ಹಿಂದೆ ನಾನು ನನ್ನ 'ಬ್ಯಾಡ್' ಅಲ್ಬಂನ ಪ್ರಚಾರ ಪ್ರವಾಸವನ್ನು ಕೈಗೊಳ್ಳುವ ಮೊದಲು, ಪುಟಾಣಿ ಹುಡುಗನೊಬ್ಬ ನನ್ನನ್ನು ಭೇಟಿಯಾಗಲು ತನ್ನ ತಂದೆ ತಾಯಿಯರೊಡನೆ ಕ್ಯಾಲಿಫೋರ್ನಿಯಾದ ಮನೆಗೆ ಬಂದ, ಅವನು ಕ್ಯಾನ್ಸರ್‌ನಿಂದ ಬಳಲಿ ಸಾಯುವ ಅಂಚಿನಲ್ಲಿದ. ಜೊತೆಗೆ ನನ್ನನ್ನೂ ನನ್ನ ಸಂಗೀತವನ್ನೂ ಅಪಾರವಾಗಿ ಪ್ರೀತಿಸುವುದನ್ನು ತಿಳಿಸಿದ. ಅವನ ಅಪ್ಪ-ಅಮ್ಮಂದಿರು ಅವನು ಬಹಳ ದಿನ ಬದುಕುವುದಿಲ್ಲವೆಂದು ಹೇಳಿದರು. ತಕ್ಷಣ ನಾನು ಅವನ ಬಳಿಗೆ ಹೋಗಿ ಹೇಳಿದೆ.

'ಮಗು. ನಿನ್ನ ಊರಾದ ಕಾನಾಸ್‌ಗೆ ಇನ್ನು ಮೂರು ತಿಂಗಳಲ್ಲಿ ನಾನು ಬರುತ್ತೇನೆ. ನೀನು ನನ್ನ ನೃತ್ಯ ಪ್ರದರ್ಶನಕ್ಕೆ ಬರಬೇಕು. ನನ್ನ ವಿಡಿಯೋದಲ್ಲಿ ಹಾಕ್ಕೊಂಡಿದ್ದೀನಲ್ಲಾ ಆ ಜಾಕೆಟ್‌ನ್ನು ನಿನಗೆ ಕೊಡುತ್ತಿದ್ದೇನೆ' ಎಂದೆ. ಅವನ ಕಣ್ಣುಗಳು ಜೀವ ತುಂಬಿ ಹೊಳೆದವು. 'ಅಯ್ಯೋ! ಇದನ್ನು ನನಗೆ ಕೊಟ್ಟೇ ಬಿಡುತ್ತೀಯಾ' ಎಂದ. ಕೂಡಲೇ ನಾನೆಂದೆ 'ಹೌದು, ಆದರೆ ನೀನು ಇದನ್ನು ನನ್ನ ನೃತ್ಯ ಪ್ರದರ್ಶನಕ್ಕೆ ಹಾಕಿಕೊಂಡು ಬರುತ್ತೇನೆಂದು ಪ್ರಾಮಿಸ್ ಮಾಡಬೇಕು. ಆ ಡ್ಯಾನ್ಸ್‌ಶೋನಲ್ಲಿ ಈ ಜಾಕೆಟ್ ಮತ್ತು ಗ್ಲೌಸ್‌ಗಳೊಂದಿಗೆ ನಿನ್ನನ್ನು ನಾನು ನೋಡಬೇಕು. ನಾನು ನನ್ನ ರೈನ್‌ಸ್ಟೈಲ್ ಗ್ಲೌಸ್‌ಗಳನ್ನು ಅವನಿಗೆ ನೀಡಿದೆ. ಸಾಮಾನ್ಯವಾಗಿ ಯಾರಿಗೂ ನಾನು ಅದನ್ನು ಕೊಡುತ್ತಿರಲಿಲ್ಲ. ಆಗ ಅವನು ನಿಜವಾಗಿಯೂ ಸ್ವರ್ಗದಲ್ಲಿದ್ದವನಂತೆ ಕಾಣುತ್ತಿದ್ದ. ಆದರೆ ನಿಜವಾಗಿಯೂ ಸ್ವರ್ಗಕ್ಕೆ ಹತ್ತಿರವಾಗಿದ್ದ.

ಏಕೆಂದರೆ, ನಾನು ಅವನ ಊರಿಗೆ ಹೋದಾಗ ಆ ಮಗು ಆಗಲೇ ತೀರಿಕೊಂಡಿತ್ತು. ಅವನನ್ನು ಗ್ಲೌಸ್ ಮತ್ತು ಜಾಕೆಟ್‌ಗಳ ಸಮೇತ ಮಣ್ಣು ಮಾಡಲಾಗಿತ್ತು. ಅವನಿಗೆ ಕೇವಲ 10 ವರ್ಷ. ಆ ದೇವರಿಗೇ ಗೊತ್ತು. ನನಗನಿಸುತ್ತದೆ ಅವನು ಬದುಕಿ ಉಳಿಯಲು ಸಾಕಷ್ಟು ಪ್ರಯತ್ನಪಟ್ಟಿರಬೇಕು. ಒಂದು ಸಮಾಧಾನವೆಂದರೆ ಅವನು ತೀರಿಕೊಳ್ಳುವ ಮೊದಲು ತನ್ನ ತಂದೆತಾಯಿಂದ ಮಾತ್ರವಲ್ಲ, ನನ್ನಂತಹ ಒಬ್ಬ ಅಪರಿಚಿತನಿಂದಲೂ ಪ್ರೀತಿಯನ್ನು ಪಡೆದೆ ಎಂಬ ಭಾವನೆಯನ್ನು ಹೊಂದಿದ್ದನ್ನೋ ಏನೋ. ಈ ಪ್ರಪಂಚಕ್ಕೆ ನಾನೊಬ್ಬನೇ ಬರಲಿಲ್ಲ. ಪ್ರಪಂಚವನ್ನು ಬಿಟ್ಟು ನಾನೊಬ್ಬನೇ ತೆರಳಲಿಲ್ಲ ಎಂಬ ಭಾವನೆಯಾದರೂ ಆ ಮಗುವಿನ ಮನದಲ್ಲಿ ಉಳಿದಿರಬೇಕು.

ಈ ಜಗತ್ತಿಗೆ ಬರುವಾಗ ಮತ್ತು ಅದನ್ನು ಬಿಟ್ಟು ತೆರಳುವಾಗ ನಾನು ಪ್ರೀತಿಸಲ್ಪಡುತ್ತಿದ್ದನೆ ಎಂಬ ಅರಿವು ಇದ್ದರೆ ನಡುವೆ ಬರುವ ವಿಚಾರಗಳನ್ನು ಸುಲಭವಾಗಿ ನಿಭಯಿಸಬಹುದು. ಇಂತಹ ಅರಿವು ನಮ್ಮನ್ನು ಯಾವಾಗಲು ಸುರಕ್ಷಿತ ಭಾವನೆಯಲ್ಲಿಡುತ್ತದೆ. ಪ್ರೊಫೆಸರ್ ಒಬ್ಬರು ನಿಮ್ಮನ್ನು ಹೀಗಳೆಯಬಹುದು. ಆಗ ನೀವು ಹೀಗಳೆಯಲ್ಪಟ್ಟ ಭಾವನೆಗೆ ಒಳಗಾಗುವುದಿಲ್ಲ. ಬಾಸ್ ಒಬ್ಬನು ನಿಮ್ಮನ್ನು ಹಿಂಡಿ ಹಿಪ್ಪೆ ಮಾಡಬಹುದು ನೀವು ಹಿಪ್ಪೆಯಾಗುವುದಿಲ್ಲ. ಕಾರ್ಪೋರೇಟ್ ಘಾತುಕನೊಬ್ಬನು ನಿಮ್ಮನ್ನು

ನಾಶ ಮಾಡಲು ಪ್ರಯತ್ನಿಸಬಹುದು ಆದರೂ ನೀವು ಗೆಲುವಿನ ಭಾವನೆಯನ್ನು ಹೊಂದಿರುತ್ತೀರ. ನೀವು ಪ್ರೀತಿಸಲ್ಪಡುತ್ತಿರುವ ಭಾವನೆ ಇದ್ದರೆ ನಿಮ್ಮನ್ನು ಯಾರೂ ಕೆಳಗೆಳೆಯಲಾರರು. ನಿಮಗೆ ಗೊತ್ತಿರಬೇಕು ನಾನು ಪ್ರೀತಿಸಲು ಅರ್ಹವಾಗಿರುವ ವ್ಯಕ್ತಿ ಎಂದು. ಅದಿದ್ದರೆ ಸಾಕು ಇನ್ನುಳಿದಿದ್ದೆಲ್ಲಾ ಕೇವಲ ಜೀವನದೊಂದಿಗೆ ಬಂದಿರುವ ಪ್ಯಾಕೇಜ್.

ನಿಮಗೆ ಪ್ರೀತಿಸಲ್ಪಡುತ್ತಿರುವ ನೆನಪೇ ಇಲ್ಲ ಎಂದಿಟ್ಟುಕೊಳ್ಳಿ. ಅದಕ್ಕಾಗಿ ಹುಡುಕುವ ನಿಮ್ಮ ಶೂನ್ಯವನ್ನು ತುಂಬುವ ಹತಾಶ ಸ್ಥಿತಿಗೆ ತಳ್ಳಲ್ಪಡುತ್ತೀರಿ. ನೀವು ಎಷ್ಟೋ ದುಡ್ಡು ಮಾಡಬಹುದು. ಎಷ್ಟೋ ಪ್ರಸಿದ್ಧರಾಗಬಹುದು ಆದರೆ ನೀವು ಆಳದಲ್ಲಿ ಖಾಲಿ ಖಾಲಿಯಾಗಿರುತ್ತೀರಿ. ಬೇಷರತ್ತಾದ ಪ್ರೀತಿಗಾಗಿ ಅನರ್ಹರಾದರೂ ಸ್ವೀಕರಿಸಲ್ಪಟ್ಟ ಭಾವನೆಗಾಗಿ ನಿರಂತರವಾಗಿ ಹುಡುಕಾಡುತ್ತಲೇ ಇರುತ್ತೀರಿ. ಈ ಸ್ವೀಕೃತಿ ಮತ್ತು ಪ್ರೀತಿಯನ್ನು ಬಾಲ್ಯದಲ್ಲಿಯೇ ನಿರಾಕರಿಸಲಾಗುತ್ತದೆ.

ಗೆಳೆಯರೇ, ನಿಮಗಾಗಿ ಅಮೇರಿಕಾದ ಒಂದು ದಿನದ ಬದುಕಿನ ಚಿತ್ರಣ ಕೊಡುತ್ತೇನೆ. ಕನಿಷ್ಟ 20 ವರ್ಷದ ಒಳಗಿನ 6ಯುವಕರು ಪ್ರತಿದಿನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. 20 ವರ್ಷದ ಒಳಗಿನ 12 ಮಕ್ಕಳು ಕೊಲ್ಲಲ್ಪಡುತ್ತಾರೆ. ಈ ದಿನವನ್ನು ನೆನಪಿನಲ್ಲಿಟ್ಟುಕೊಳ್ಳಿ ನಾನು ವರ್ಷದ ಕುರಿತು ಮಾತಾಡುತ್ತಿಲ್ಲ. ಮಾದಕ ವಸ್ತುಗಳ ದುರುಪಯೋಗಕ್ಕಾಗಿ ದಿನವೊಂದಕ್ಕೆ 399 ಮಕ್ಕಳನ್ನು ಬಂಧಿಸಲಾಗುತ್ತದೆ. ಎಳೆಯ ಅವಿವಾಹಿತ ತಾಯಂದಿರು ಪ್ರತಿದಿನ 1352 ಮಕ್ಕಳಿಗೆ ಜನ್ಮವೀಯುತ್ತಾರೆ. ಇದೆಲ್ಲಾ ಆಗುತ್ತಿರುವುದು ಎಲ್ಲಿ? ಪ್ರಪಂಚದ ಸುಪ್ರಸಿದ್ಧ ಚಾರಿತ್ರಿಕವಾದ ಶ್ರೀಮಂತಿಕೆ ತುಂಬಿದ ಅಭಿವೃದ್ಧಿ ಹೊಂದಿದ ರಾಷ್ಟ್ರವೆಂದು ಕರೆಯಲಾಗುವ ಅಮೇರಿಕಾದಲ್ಲಿ.

ಹೌದು, ನನ್ನ ದೇಶದಲ್ಲಿ ಹಿಂಸೆಯೆನ್ನುವುದು ಸಾಂಕ್ರಾಮಿಕವಾಗಿ ಹರಡಿದೆ. ಈ ಹಿಂಸೆಗೆ ಸರಿಸಾಟಿಯಾದ ಮತ್ತೊಂದು ಕೈಗಾರಿಕಾ ದೇಶವಿಲ್ಲ. ಹಾಗಾಗಿಯೇ ಮಾದಕ ವಸ್ತುಗಳನ್ನು ತೆಗೆದುಕೊಳ್ಳುತ್ತಾ, ಎಳೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ಹೆರುತ್ತಾ, ಅಮೇರಿಕಾದ ಯುವ ಜನತೆ ತಮ್ಮ ಕೋಪ ಮತ್ತು ಆಕ್ರೋಶವನ್ನು ಅಭಿವ್ಯಕ್ತಪಡಿಸುತ್ತಿದ್ದಾರೆ. ಈ ಬಗೆಯ ಕೋಪ ಮತ್ತು ಆಕ್ರೋಶ ಇಂಗ್ಲೆಂಡಿನಲ್ಲಿಲ್ಲವೆಂದು ಭಾವಿಸದಿರಿ. ಪ್ರತಿ ಗಂಟೆ ಗೊಮ್ಮೆ ಚಿಕ್ಕಮಕ್ಕಳು ಇಲ್ಲಿ ತಮ್ಮ ದೇಹವನ್ನು ಕುಯ್ದುಕೊಳ್ಳುವುದು ಅಥವಾ ಸುಟ್ಟುಕೊಳ್ಳುವುದು ಅಥವಾ ಮಾಧಕ ವಸ್ತುವನ್ನು ತೆಗೆದುಕೊಳ್ಳುವುದು ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮನ್ನು ತಾವೇ ಹಿಂಸಿಸಿಕೊಳ್ಳುತ್ತಿರುತ್ತಾರೆ. ನಿರ್ಲಕ್ಷ್ಯವನ್ನು, ನಿರಾಸೆಯನ್ನು ಮತ್ತು ಭಾವನೆಗಳ ಕೊರತೆಯನ್ನು ಹೀಗೆ ನೀಗಿಕೊಳ್ಳುತ್ತಾರೆ.

ಬ್ರಿಟನ್ನಿನಲ್ಲಿ ಕೇವಲ ಶೇ. 20 ರಷ್ಟು ಕುಟುಂಬಗಳು ಮಾತ್ರ ವರ್ಷಕ್ಕೊಮ್ಮೆ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ. ಊಟ ಮಾಡುವ ಗತಿಯೇ ಹೀಗಿದ್ದರೆ ಮಕ್ಕಳು ಮಲಗಿದಾಗ ಜೋಗುಳ ಹಾಡುತ್ತಾ, ಕಥೆ ಹೇಳುತ್ತಾ ಇರುವ ಪರಿಸ್ಥಿತಿಯನ್ನು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. 1980ರಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಯಾವ ಮಗು ತನ್ನ ಬಾಲ್ಯದಲ್ಲಿ ಒಳ್ಳೆಯ ಕಥೆಗಳನ್ನು ಕೇಳಿರುತ್ತದೋ ಅಂತಹ ಮಗು ತನ್ನ ಗೆಳೆಯರಿಗಿಂತ ಉತ್ತಮ ಸಾಧನೆಯನ್ನು ಮಾಡಿರುತ್ತದೆ. ಆದರೆ ಕೇವಲ ಶೇ.33 ರಷ್ಟು ಬ್ರಿಟಿಷ್ ಮಕ್ಕಳು ರಾತ್ರಿಯ ಹೊತ್ತು ಮಲಗುವಾಗ ಅಪ್ಪ-ಅಮ್ಮಂದಿರು ಹೇಳುವ ಕಥೆಗಳನ್ನು ಕೇಳಿದ್ದಾರೆ.

ನನ್ನ ದೇಶದಲ್ಲಿ ಹಿಂಸೆಯೆನ್ನುವುದು ಸಾಂಕ್ರಾಮಿಕವಾಗಿ ಹರಡಿದೆ. ಈ ಹಿಂಸೆಗೆ ಸರಿಸಾಟಿಯಾದ ಮತ್ತೊಂದು ಕೈಗಾರಿಕಾ ದೇಶವಿಲ್ಲ. ಹಾಗಾಗಿಯೇ ಮಾದಕ ವಸ್ತುಗಳನ್ನು ತೆಗೆದುಕೊಳ್ಳುತ್ತಾ, ಎಳೆಯ ವಯಸ್ಸಿನಲ್ಲಿಯೇ ಮಕ್ಕಳನ್ನು ಹೆರುತ್ತಾ, ಅಮೇರಿಕಾದ ಯುವ ಜನತೆ ತಮ್ಮ ಕೋಪ ಮತ್ತು ಆಕ್ರೋಶವನ್ನು ಅಭಿವ್ಯಕ್ತಪಡಿಸುತ್ತಿದ್ದಾರೆ. ಈ ಬಗೆಯ ಕೋಪ ಮತ್ತು ಆಕ್ರೋಶ ಇಂಗ್ಲೆಂಡಿನಲ್ಲಿಲ್ಲವೆಂದು ಭಾವಿಸದಿರಿ. ಪ್ರತಿ ಗಂಟೆಗೊಮ್ಮೆ ಚಿಕ್ಕಮಕ್ಕಳು ಇಲ್ಲಿ ತಮ್ಮ ದೇಹವನ್ನು ಕುಯ್ದುಕೊಳ್ಳುವುದು ಅಥವಾ ಸುಟ್ಟುಕೊಳ್ಳುವುದು ಅಥವಾ ಮಾಧಕ ವಸ್ತುವನ್ನು ತೆಗೆದುಕೊಳ್ಳುವುದು ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮನ್ನು ತಾವೇ ಹಿಂಸಿಸಿಕೊಳ್ಳುತ್ತಿರುತ್ತಾರೆ.

ನಮಗೀಗ ಸ್ಪಷ್ಟವಾಗಿದೆ. ಈ ಕೋಪ, ಹತಾಶೆ, ಹಿಂಸೆ, ನೋವು, ಎಲ್ಲಿಂದ ಬರುತ್ತದೆ ಎಂಬ ಪ್ರಶ್ನೆಯನ್ನು ಕೇಳಬೇಕಾಗಿಲ್ಲ ಅದು ಸ್ಪಟಿಕ ಸ್ಪಷ್ಟವಾಗಿ ಗೋಚರಿಸುತ್ತಿದೆ. ನಿರ್ಲಕ್ಷ್ಯ ಹಾಗೂ ಉದಾಸೀನದ ವಿರುದ್ಧ ಮಕ್ಕಳು ದಂಗೆ ಎದ್ದಿದ್ದಾರೆ. ತಮ್ಮನ್ನು ಗಮನಿಸಲಿ ಎಂದು ಭೋರ್ಗರೆದು ಅಳುತ್ತಿದಾರೆ. ಈ ಉದಾಸೀನಕ್ಕೆ ಮಿಲಿಯಗಟ್ಟಲೆ ಅಮೇರಿಕನ್ ಮಕ್ಕಳು ತುತ್ತಾಗಿದ್ದಾರೆ. ಉದಾಸೀನ ಹೌದು, ಕೇವಲ ಉದಾಸೀನ. ಎಲೆಕ್ಟ್ರಾನಿಕ್ ವಸ್ತುಗಳಿಂದ ತುಂಬಿರುವ ಶ್ರೀಮಂತಿಕೆಯಿಂದ ಮೆರೆಯುತ್ತಿರುವ ಮನೆಗಳಿಗೆ ಅಪ್ಪ-ಅಮ್ಮಂದಿರು ಬರುತ್ತಾರೆ. ಅವರ ದೇಹಗಳು ಮಾತ್ರವೇ ಬರುತ್ತವೆ. ಆತ್ಮ ಆಫೀಸಿನಲ್ಲಿಯೇ ಇರುತ್ತದೆ. ಆ ಸಂದರ್ಭದಲ್ಲಿ ಮಕ್ಕಳು ತಮ್ಮ ಭಾವಶೂನ್ಯತೆಯನ್ನು ತುಂಬಿಕೊಳ್ಳಲು ಕಂಪ್ಯೂಟರ್, ಟೀವಿ, ವೀಡಿಯೋಗಳಂತವುಗಳಿಗೆ ಮೊರೆ ಹೋಗುತ್ತವೆ.

ಮಕ್ಕಳ ಈ ಪರಿಸ್ಥಿತಿಯು ನನ್ನ ಆತ್ಮ, ಹೃದಯಗಳನ್ನು ಕಲಕಿವೆ. ನಿಮಗೀಗ ಗೊತ್ತಾಗಿರಬೇಕು. ನಾನೇಕೆ ಮಕ್ಕಳಿಗಾಗಿ ಈ ಪ್ರಮಾಣದ ಸಂಪನ್ಮೂಲವನ್ನೂ ಮತ್ತು ಸಮಯವನ್ನೂ ವ್ಯಯಿಸುತ್ತಿದ್ದೇನೆಂದು.

ನಮ್ಮ ಉದ್ದೇಶ ಸರಳವಾಗಿದೆ. ಅಪ್ಪ-ಅಮ್ಮಂದಿರು ಮತ್ತು ಮಕ್ಕಳ ನಡುವಿನ ಸಂಬಂಧವನ್ನು ಪುನರ್ ಬೆಸೆಯುವುದು. ಭರವಸೆಯ ಬೆಳಕನ್ನು ಮೂಡಿಸುವುದು. ಸುಂದರವಾದ ಈ ಜಗತ್ತಿನಲ್ಲಿ ಎಲ್ಲಾ ಮಕ್ಕಳು ನಲಿಯುವಂತೆ ಮಾಡುವುದು.

ಇದು ನನ್ನ ಮೊದಲ ಸಾರ್ವಜನಿಕ ಭಾಷಣ. ನನ್ನನ್ನು ನೀವು ನಿಮ್ಮ ಹೃದಯದೊಳಕ್ಕೆ ಸ್ವಾಗತಿಸಿಟ್ಟಿದ್ದೀರಿ. ಅದಕ್ಕಾಗಿಯೇ ನನಗೆ ಮತ್ತೂ ಮಾತನಾಡುವ ಭಾವನೆಯುಂಟಾಗುತ್ತಿದೆ. ಪ್ರತಿಯೊಬ್ಬರಿಗೂ ಹೇಳಿಕೊಳ್ಳಲು ತಮ್ಮದೇ ಆದ ಕಥೆಯಿರುತ್ತದೆ.

ಕೆಲವರು ಹೇಳುತ್ತಾರೆ. ಮಕ್ಕಳನ್ನು ಸಾಕುವುದು ಎಂದರೆ ನೃತ್ಯ ಮಾಡುವಂತೆ, ನೀನು ಒಂದು ಅಡಿ ಇಡು, ಮಗು ಮತ್ತೊಂದು ಅಡಿ ಮುಂದಿಡುತ್ತದೆ. ನಾನು ಮತ್ತೂ ಒಂದು ವಿಚಾರವನ್ನು ಕಂಡುಕೊಂಡಿದ್ದೇನೆ. ಅದೇನೆಂದರೆ, ಅಪ್ಪ-ಅಮ್ಮಂದಿರು ತಮ್ಮ ಮಕ್ಕಳಿಗಾಗಿ ತಮ್ಮನ್ನು ಅರ್ಪಿಸಿಕೊಳ್ಳುವಂತೆ ಮಾಡುವುದು ಒಂದು ಕಥೆಯಾದರೆ, ಅದಕ್ಕಿಂತ ದೊಡ್ಡ ಕಥೆ ಎಂದರೆ ಮಕ್ಕಳು ತಮ್ಮ ಅಪ್ಪ-ಅಮ್ಮಂದಿರನ್ನು ಮರು ಒಪ್ಪಿಕೊಳ್ಳುವುದು.

ನನಗಿನ್ನೂ ನೆನಪಿದೆ. ನಾನು ಚಿಕ್ಕ ಮಗುವಾಗಿದ್ದಾಗ ನಮ್ಮ ಮನೆಯಲ್ಲಿ ಬ್ಲಾಕ್ ಗರ್ಲ್ ಎನ್ನುವ ಪುಟಾಣಿ ನಾಯಿ ಮರಿಯಿತ್ತು. ಅದು ತೋಳದಂತಿತ್ತು. ಅದು ಯಾವಾಗಲೂ ಒಂದು ರೀತಿ ಆಶ್ಚರ್ಯದ ನೋಟ ಮತ್ತು ಭಯವನ್ನು ವ್ಯಕ್ತಪಡಿಸುತ್ತಿತ್ತು. ನಾನು ನನ್ನ ಸೋದರಿ ಜಾನೆಟ್ ಅದನ್ನು ಹೊರಗೆ ಕೊಂಡೊಯ್ದಾಗಲೆಲ್ಲಾ ಒಂದು ರಸ್ತೆಯನ್ನು ದಾಟಲು ಭಯ ಪಡುತ್ತಿತ್ತು. ಆದರೆ ನಾನೂ ಜಾನೆಟ್ ಅದಕ್ಕೆ ಎಷ್ಟೊಂದು ಪ್ರೀತಿಯನ್ನು ಧಾರೆ ಎರೆದೆವೆಂದರೆ ಅದು ತನ್ನ ಹಿಂದಿನ ಮಾಲೀಕನ ಬಳಿ ಗಾಯಗಳನ್ನು ವಾಸಿ ಮಾಡಿದೆವು ಮತ್ತು ಕಳೆದುಕೊಂಡಿದ್ದ ವಿಶ್ವಾಸವನ್ನು ಮರಳಿ ತುಂಬಿದೆವು. ಆಗ ಬ್ಲಾಕ್ ಗರ್ಲ್ ನಿಜವಾಗಿಯೂ ವಿಶ್ವಾಸದಿಂದ ತುಂಬಿಹೋಯಿತು.

ನಿಜವಾಗಿಯೂ ಮಕ್ಕಳು ಗಾಯಗೊಂಡ ಮುದ್ದು ನಾಯಿಮರಿಗಳು. ನಿರಂತರವಾಗಿ ಮೊಣಕಾಲೂರಿ ನಿಮ್ಮ ಪ್ರೀತಿಯನ್ನು ಬೇಡುತ್ತಿರುತ್ತವೆ. ಕೆಲವು ಮಕ್ಕಳು ತಮ್ಮ ಅಪ್ಪ-ಅಮ್ಮಂದಿರನ್ನು ಮೀರಿ ಮುನ್ನಡೆಯುತ್ತಾರೆ. ಅವರೇ ತಮ್ಮ ಸ್ವಾತಂತ್ರ್ಯದ ಹಾದಿಯನ್ನು ಹುಡುಕಿಕೊಳ್ಳುತ್ತಾರೆ. ಆದರೆ ಇನ್ನೂ ಕೆಲವು ಮಕ್ಕಳು ಅಪ್ಪ-ಅಮ್ಮಂದಿರ ಬಗ್ಗೆ ದ್ವೇಷ ಮತ್ತು ಕಹಿಯನ್ನು ಉಳಿಸಿಕೊಳ್ಳುತ್ತಾರೆ. ತಾವು ಅನುಭವಿಸಿದ ಹಿಂಸೆ, ನೋವನ್ನು ಅಪ್ಪ-ಅಮ್ಮಂದಿರಿಗೆ ಹಿಂದಿರುಗಿ ನೀಡುತ್ತಾರೆ.

ಈ ಸಂಜೆ ಈ ಬಗೆಯ ತಪ್ಪನ್ನು ನಾವು ಯಾರೂ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ನಾನು ಪ್ರಪಂಚದ ಮಕ್ಕಳೆಲ್ಲರಲ್ಲಿಯೂ ಈ ರಾತ್ರಿ ಒಂದು ಬೇಡಿಕೆ ಇಡುತ್ತಿದ್ದೇನೆ. ನಿಮ್ಮ ಅಪ್ಪ-ಅಮ್ಮಂದಿರು ನಿಮ್ಮನ್ನು ಉದಾಸೀನ ಮಾಡಿದ್ದರೂ ನೀವು ಅವರನ್ನು ಕ್ಷಮಿಸಿಬಿಡಿ ಮತ್ತು ಅವರಿಗೆ ಸಾಧ್ಯವಾದರೆ ಕಲಿಸಿ ಹೇಗೆ ಪ್ರೀತಿಸುವುದೆಂದು.

ಈಗಾಗಲೇ ನಿಮಗೆ ಗೊತ್ತಿರುವಂತೆ ನನ್ನ ಬಾಲ್ಯ ಅಷ್ಟೇನೂ ಆದರ್ಶಪ್ರಾಯವಾಗಿರಲಿಲ್ಲ. ನನ್ನ ಅಪ್ಪ ಮತ್ತು ನನ್ನ ನಡುವೆ ಒಂದು ರೀತಿಯ ಘರ್ಷಣೆ ಇರುತಿತ್ತು. ನಮ್ಮಪ್ಪ ಗಟ್ಟಿ ಮನುಷ್ಯ. ಚಿಕ್ಕಂದಿನಿಂದಲೇ ನಮ್ಮನ್ನು ಈ ವೃತ್ತಿಗೆ ಬಲವಾಗಿ ತಳ್ಳಿಬಿಟ್ಟ. ಅವನಿಗೆ ಮಮತೆಯನ್ನು ವ್ಯಕ್ತಪಡಿಸುವುದು ಕಷ್ಟಕರವಾಗಿತ್ತು. ಅವನು ಎಂದೂ ನನ್ನನ್ನು ಪ್ರೀತಿಸುತ್ತಿದ್ದೇನೆಂದು ಹೇಳಲಿಲ್ಲ ಅಥವಾ ಒಂದು ಮೆಚ್ಚುಗೆಯ ಮಾತನ್ನೂ ಆಡಲಿಲ್ಲ. ನಾನೇನಾದರೂ ಒಂದು ಅತ್ಯುತ್ತಮ ಪ್ರದರ್ಶನವನ್ನು ನೀಡಿದರೆ ಪರವಾಗಿಲ್ಲ ಎನ್ನುತ್ತಿದ. ಪ್ರದರ್ಶನ ಸುಮಾರಾಗಿದ್ದರೆ ಅದು ಬೇಜವಬ್ದಾರಿ ಪ್ರದರ್ಶನ ಎನ್ನುತ್ತಿದ. ಅವನಿಗೆ ಆಳದಲ್ಲಿ ಪ್ರತಿಯೊಂದನ್ನು ಲಾಭದಾಯಕ ವ್ಯಾಪಾರವನ್ನಾಗಿ ಮಾಡಿ ಯಶಸ್ಸನ್ನು ಕಾಣಬೇಕು ಎಂಬ ಭಾವನೆಯಿತ್ತು. ನಮ್ಮಪ್ಪ ಅದ್ಭುತವಾದ ಮ್ಯಾನೇಜರ್ ಆಗಿದ್ದ. ನಮ್ಮೆಲ್ಲಾ ವೃತ್ತಿಪರ ಯಶಸ್ಸು ಅವನಿಗೇ ಸಲ್ಲುತ್ತದೆ. ನನ್ನನ್ನು ಶೋಮ್ಯಾನ್ ಆಗಿ ರೂಪಿಸಲು ಬಹಳ ಕಷ್ಟಪಟ್ಟ ಹಾಗೂ ಕಷ್ಟಕೊಟ್ಟ, ಅವನೆದುರಿಗೆ ನಾನು

ಅಪ್ಪಿತಪ್ಪಿಯೂ ಒಂದೂ ತಪ್ಪು ಹೆಜ್ಜೆಯನ್ನು ಹಾಕಲು ಸಾಧ್ಯವಿರಲಿಲ್ಲ.

ಸಆದರೆ, ನನಗೆ ಪ್ರೀತಿಯನ್ನು ತೋರಿಸುವ ನಿಜವಾದ ಅಪ್ಪನೊಬ್ಬ ಬೇಕಿತ್ತು. ಆದರೆ ನಮ್ಮಪ್ಪ ಅದನ್ನು ಮಾಡಲಿಲ್ಲ. ಒಂದೇ ಒಂದು ಸಾರಿ ಕಣ್ಣಲ್ಲಿ ಕಣ್ಣಿಟ್ಟು ಐ ಲವ್‌ಯೂ ಮಗನೇ ಎಂದು ಹೇಳಲಿಲ್ಲ. ನನ್ನ ಜೊತೆ ಒಂದು ಆಟವನ್ನೂ ಆಡಲಿಲ್ಲ. ಕೂಸು ಮರಿ ಹಾಕಲಿಲ್ಲ. ಪೀಪಿ ಕೊಡಿಸಲಿಲ್ಲ. ಆದರೆ ನನಗೆ ನೆನಪಿದೆ. ನನಗೆ 4 ವರ್ಷವಾಗಿದ್ದಾಗ ಸಣ್ಣ ಮೇಳವೊಂದಕ್ಕೆ ಕೊಂಡೊಯ್ದಿದ್ದ. ಅಲ್ಲಿ ನನ್ನನ್ನು ಯಾವುದೋ ಒಂದು ಆಟದ ಕುದುರೆಯ ಮೆಲೆ ಎತ್ತಿ ಕೂರಿಸಿದ್ದ. ಆ ಒಂದು ಕ್ಷಣ ಅವನ ಹೃದಯದಲ್ಲಿ ನನಗೆ ಜಾಗ ದೊರಕಿತ್ತು. ಆದರೆ, ಐದು ನಿಮಿಷವಾದ ಮೇಲೆ ಅವನು ಅದನ್ನು ಮರೆತೇ ಹೋಗಿಬಿಟ್ಟ. ಕೇವಲ ಅ ಒಂದು ಕ್ಷಣಕ್ಕಾಗಿ ನನ್ನ ಹೃದಯದಲ್ಲಿ ಅವನಿಗಾಗಿ ಒಂದು ವಿಶೇಷ ಜಾಗ ಇದೆ. ಮಕ್ಕಳೆಂದರೆ ಹೀಗೆಯೇ ಇರುವುದು. ಸಣ್ಣ ಸಣ್ಣ ವಿಚಾರಗಳು ಅವರಿಗೆ ಸಂತೋಷವನ್ನು ಕೊಡುತ್ತವೆ ನನಗೂ ಕೂಡ. ಪ್ರತಿಯೊಂದು ಕ್ಷಣವನ್ನೂ ಮಕ್ಕಳು ಅನುಭವಿಸುತ್ತವೆ. ಇದನ್ನು ನಾನು ಒಂದು ಕ್ಷಣ ಅನುಭವಿಸಿದೆ. ಆ ಕ್ಷಣವೇ ನಮ್ಮಪ್ಪನನ್ನು, ಜಗತ್ತನ್ನೂ ಪ್ರೀತಿಸುವಂತೆ ಮಾಡಿದೆ.

ಆದರೀಗ ನಾನು ನನ್ನ ಮಕ್ಕಳ ಬಗ್ಗೆ ಯೋಚಿಸುತ್ತಿದ್ದೇನೆ. ನನ್ನ ಮಕ್ಕಳು ಬೆಳೆದವರಾದ ಮೇಲೆ ನನ್ನ ಬಗ್ಗೆ ಪ್ರಿನ್ಸ್ ಮತ್ತು ಪ್ಯಾರಿಸ್‌ನನ್ನು ನೆನೆಸಿಕೊಳ್ಳುವಂತೆ ನನ್ನನ್ನು ನೆನೆಸಿಕೊಳ್ಳಬೇಕು. ಪ್ರತಿ ಸಂದರ್ಭದಲ್ಲಿಯೂ ಅವರನ್ನು ಹೇಗೆ ಪ್ರೀತಿಸಿದೆನೆಂದು, ಹೇಗೆ ಬೆಳೆಸಿದೆನೆಂದು ನೆನಪಿಸಿಕೊಳ್ಳಬೇಕು. ಹಾಗೆಯೇ ಅವರ ಬದುಕಿನಲ್ಲಿ ಸವಾಲುಗಳಿರಬೇಕು. ನನ್ನ ಮಕ್ಕಳು ನನ್ನ ಜನಪ್ರಿಯತೆಯ ಬಲೆಗೆ ತುತ್ತಾಗಿದ್ದಾರೆ. ಅವರು ಯಾವಾಗಲೂ ನನ್ನ ಜೊತೆ ಪಾರ್ಕಿಗಾಗಲೀ, ಉದ್ಯಾನವಕ್ಕಾಗಲೀ ಅಥವಾ ಸಿನಿಮಾಕ್ಕಾಗಲಿ ಬರಲಾರರು.

ಅವರು ನಾಳೆ ಬೆಳೆದಾಗ ನನ್ನ ಜನಪ್ರಿಯತೆಯಿಂದ ಅವರ ಮೇಲೆ ಉಂಟಾಗಿರುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಬಹುದು. ಜೊತೆಗೆ, ನನ್ನನ್ನು ಕೇಳಿಯೂ ಕೇಳಬಹುದು. ಏಕೆ ಎಲ್ಲರ ರೀತಿಯ ಬಾಲ್ಯವನ್ನು ನಮಗೆ ನೀನು ನೀಡಲಿಲ್ಲ ಎಂದು ಪ್ರಶ್ನಿಸಬಹುದು. ಆಗ ನನ್ನ ಮಕ್ಕಳನ್ನು ಕೇಳಿಕೊಳ್ಳುತ್ತೇನೆ ನನಗೆ ಬೆನಿಫಿಟ್ ಆಫ್ ಡೌಟ್ ಕೊಡಿ ಎಂದು. ಆಗ ಅವರಿಗವರೇ ಹೇಳಿಕೊಳ್ಳಬಹುದು. 'ನಮ್ಮಪ್ಪ ನಮಗೆ ಮಾಡಬಹುದಾದ್ದನ್ನೆಲ್ಲ ಮಾಡಿದ್ದಾನೆ. ಆದರೆ ಅವನು ವಿಶಿಷ್ಟ ಪರಿಸ್ಥಿತಿಯಲ್ಲಿರುವ ವ್ಯಕ್ತಿಯಾಗಿದ್ದ. ಅವನು ತುಂಬಾ ಸರಿಯಾಗಿಲ್ಲದಿರಬಹುದು ಆದರೆ ಬೆಚ್ಚಗಿನ ಪ್ರೀತಿಯ ಒಬ್ಬ ಸಂಭಾವಿತನಾಗಿದ್ದ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಪಂಚದಲ್ಲಿರುವ ಪ್ರೀತಿಯನ್ನೆಲ್ಲಾ ನಮಗೆ ಧಾರೆ ಎರೆಯಲು ಪ್ರಯತ್ನಿಸಿದ.

ನನ್ನ ಮಕ್ಕಳು ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾರೆ ಎಂದು ನಂಬಿಕೊಂಡಿದ್ದೇನೆ. ಅವರಿಗಾಗಿ ನಾನು ಮಾಡಿರುವ ತ್ಯಾಗವನ್ನು ಅರಿತುಕೊಳ್ಳಲು ಹೇಳಿದ್ದೇನೆ. ನಾನು ಮಾಡುತ್ತಿರುವ ತಪ್ಪುಗಳನ್ನು ಟೀಕಿಸದಂತೆ ಮತ್ತು ಇನ್ನು ಮುಂದೆಯೂ ಅವರನ್ನು ರೂಪಿಸುವಾಗ ಆಗಬಹುದಾದ ತಪ್ಪುಗಳನ್ನು ಗಮನಿಸದಂತೆ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಾವೆಲ್ಲರೂ ಮತ್ತೊಬ್ಬರ ಮಕ್ಕಳೇ ಆಗಿರುತ್ತೇವೆ. ನಾನು ನನ್ನ ಮಕ್ಕಳಿಗೆ ಎಷ್ಟೇ ಅತ್ಯುತ್ತಮವಾದುದನ್ನು ನೀಡಬೇಕೆಂದು ಬಯಸಿದರೂ ತಪ್ಪುಗಳು



ಆಗಿಯೇ ತೀರುತ್ತವೆ. ಏಕೆಂದರೆ, ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ನನ್ನ ಮಕ್ಕಳು ನನ್ನನ್ನು ತಪ್ಪು ತಿಳಿಯಲಿಲ್ಲವೆಂದು ಭಾವಿಸುತ್ತೇನೆ ಹಾಗೂ ನನ್ನ ಮಿತಿಗಳನ್ನು ಕ್ಷಮಿಸುತ್ತಾರೆಂದು ಕೊಂಡಿದ್ದೇನೆ. ಅವನು ನನ್ನನ್ನು ಪ್ರೀತಿಸುತ್ತಿದ್ದ ಎನ್ನುವುದು ಗೊತ್ತಿದ್ದೂ ಕೂಡ ನಾನು ಯಾವಾಗಲೂ ನಮ್ಮಪ್ಪ ನನ್ನನ್ನು ಪ್ರೀತಿಸಬೇಕಾಗಿತ್ತು ಎಂದುಕೊಳ್ಳುತ್ತೇನೆ.

ನನ್ನ ಅಪ್ಪ ಮತ್ತು ನನ್ನ ನಡುವೆ ಒಂದು ರೀತಿಯ ಘರ್ಷಣೆ ಇರುತಿತ್ತು. ನಮ್ಮಪ್ಪ ಗಟ್ಟಿ ಮನುಷ್ಯ. ಚಿಕ್ಕಂದಿನಿಂದಲೇ ನಮ್ಮನ್ನು ಈ ವೃತ್ತಿಗೆ ಬಲವಾಗಿ ತಳ್ಳಿಬಿಟ್ಟ. ಅವನಿಗೆ ಮಮತೆಯನ್ನು ವ್ಯಕ್ತಪಡಿಸುವುದು ಕಷ್ಟಕರವಾಗಿತ್ತು. ಅವನು ಎಂದೂ ನನ್ನನ್ನು ಪ್ರೀತಿಸುತ್ತಿದ್ದೇನೆಂದು ಹೇಳಲಿಲ್ಲ ಅಥವಾ ಒಂದು ಮೆಚ್ಚುಗೆಯ ಮಾತನ್ನೂ ಆಡಲಿಲ್ಲ. ನಾನೇನಾದರೂ ಒಂದು ಅತ್ಯುತ್ತಮ ಪ್ರದರ್ಶನವನ್ನು ನೀಡಿದರೆ ಪರವಾಗಿಲ್ಲ ಎನ್ನುತ್ತಿದ. ಪ್ರದರ್ಶನ ಸುಮರಾಗಿದ್ದರೆ ಅದು ಬೇಜವಾಬ್ದಾರಿ ಪ್ರದರ್ಶನ ಎನ್ನುತ್ತಿದ. ಅವನಿಗೆ ಆಳದಲ್ಲಿ ಪ್ರತಿಯೊಂದನ್ನು ಲಾಭದಾಯಕ ವ್ಯಾಪಾರವನ್ನಾಗಿ ಮಾಡಿ ಯಶಸ್ಸನ್ನು ಕಾಣಬೇಕು ಎಂಬ ಭಾವನೆಯಿತ್ತು. ನಮ್ಮಪ್ಪ ಅದ್ಭುತವಾದ ಮ್ಯಾನೇಜರ್ ಆಗಿದ್ದ. ನಮ್ಮೆಲ್ಲಾ ವೃತ್ತಿಪರ ಯಶಸ್ಸು ಅವನಿಗೇ ಸಲ್ಲುತ್ತದೆ.

ನಾನು ಚಿಕ್ಕವನಾಗಿದ್ದಾಗ ನಾನು ತಿಂಡಿಯನ್ನು ಬಹಳ ಇಷ್ಟಪಡುತ್ತಿದ್ದೆ. ನಾವೆಲ್ಲರೂ ಅಷ್ಟೆ ನನಗೆ ಕಜ್ಜಾಯ ತುಂಬಾ ಇಷ್ಟವಾಗುತ್ತಿತ್ತು. ನಮ್ಮ ನಮ್ಮಪ್ಪನಿಗೂ ಅದು ಗೊತ್ತಿತ್ತು. ಅವನು ಯಾವಾಗಲಾದರೂ ಒಂದು ಬೆಳಿಗ್ಗೆ ಮಹಡಿಯ ಮೇಲಿನ ಅವನ ರೂಮಿನಿಂದ ಕೆಳಗಿಳಿದು ಅಡುಗೆ ಮನೆಯ ಹತ್ತಿರ ಬ್ಯಾಗಿನ ತುಂಬಾ ಕಜ್ಜಾಯವನ್ನು ಇಟ್ಟು ಹೊರಟುಹೋಗುತ್ತಿದ್ದ ಮಾತಿಲ್ಲ ಕಥೆಯಿಲ್ಲ. ಕೇವಲ ಕಜ್ಜಾಯ. ಸಾಂತಾಕ್ಲಾಸ್‌ನ ರೀತಿಯಲ್ಲಿ.

ನಾನು ಅನೇಕ ದಿನ ಮಧ್ಯರಾತ್ರಿಯವರೆಗೆ ಎಚ್ಚರವಾಗಿದ್ದು, ಅವನು ಆ ಕಜ್ಜಾಯವನ್ನು ಅಲ್ಲಿಗೆ ತಂದಿಡುವುದನ್ನೇ ಕಾಯುತ್ತಾ ಕುಳಿತಿರುತ್ತಿದ್ದೆ. ಹೇಗೆಂದರೆ, ಕ್ರಿಸ್‌ಮಸ್ ಹಬ್ಬದಲ್ಲಿ ಮಕ್ಕಳು ಸಾಂತಾಕ್ಲಾಸ್‌ಗಾಗಿ ಕಾಯುವಂತೆ. ಆದರೆ, ನಮ್ಮಪ್ಪ ಅದನ್ನು ರಹಸ್ಯವಾಗಿ ಮಧ್ಯರಾತ್ರಿಯಲ್ಲಿ ತಂದಿಟ್ಟು ಹೋಗುತ್ತಿದ್ದ. ಯಾರದರೂ ಅದನ್ನು ನೋಡುವುದು ಅವನಿಗೆ ಇಷ್ಟವಿರಲಿಲ್ಲ. ಅವನಿಗೆ ಭಾವನೆಗಳ ಬಗ್ಗೆಯೇ ಭಯವಿತ್ತೋ ಅಥವಾ ಅದು ಅರ್ಥವೂ ಆಗಿರಲಿಲ್ಲವೇನೋ ಇಲ್ಲ ಅದನ್ನು ನಿಭಾಯಿಸುವ ವಿಧಾನವೂ ಅವನಿಗೆ ಗೊತ್ತಿರಲಿಲ್ಲವೇನೋ.

ನಾನು ನನ್ನ ನೆನಪಿನ ಪ್ರವಾಹದ ಗೇಟನ್ನು ತೆರೆದುಬಿಟ್ಟರೆ ನೆನಪುಗಳು ಒಂದಾದರ ಮೇಲೊಂದರಂತೆ ಅಪ್ಪಳಿಸುತ್ತವೆ. ನಮ್ಮಪ್ಪ ತನ್ನ ಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ. ಎಷ್ಟು ಪ್ರೀತಿಯನ್ನು ತೋರಲು ಸಾಧ್ಯವೋ ಅಷ್ಟನ್ನು ತೋರಿದ. ಆದುದರಿಂದ ಗೆಳೆಯರೇ, ಈ ಸಂಜೆ ಅವನು ಏನು ಮಾಡಲಿಲ್ಲ ಎಂದು ಹೇಳುವುದಕ್ಕಿಂತ ಅವನೇನು ಮಾಡಿದ ಎಂದಷ್ಟೇ ಹೇಳುತ್ತೇನೆ. ಏಕೆಂದರೆ, ಅವನಿಗೆ ಆದ ಸವಾಲುಗಳಿದ್ದವು. ಅವನ ಬಗ್ಗೆ ನ್ಯಾಯ ತೀರ್ಮಾನ ಮಾಡುವುದನ್ನು ನಿಲ್ಲಿಸುತ್ತೇನೆ.

ನಮ್ಮಪ್ಪನ ಕುರಿತು ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ನಮ್ಮಪ್ಪ ದಟ್ಟ ದರಿದ್ರ ಕುಟುಂಬದಲ್ಲಿ ಜನಿಸಿದ. ದಕ್ಷಿಣ ಅಮೇರಿಕಾದಲ್ಲಿ ಬೆಳೆದ. ಅವರಪ್ಪನ ಜೊತೆ 1930 ಆರ್ಥಿಕ ಹಿಂಜರಿತದ ಕಷ್ಟ

ಸುಖಗಳನ್ನು ಅನುಭವಿಸಿದ. ನಮ್ಮ ತಾತ ನಮ್ಮಪ್ಪನನ್ನು ಬೆಳೆಸಲು ಬಹಳ ಕಷ್ಟಪಟ್ಟಿದ್ದಾನೆ. ಕರಿಯ ಮನುಷ್ಯನೊಬ್ಬ ದಕ್ಷಿಣ ಅಮೇರಿಕಾದಲ್ಲಿ ಅಂತಹ ಸಂದರ್ಭದಲ್ಲಿ ಮಕ್ಕಳನ್ನು ಬೆಳೆಸುವುದು ಎಷ್ಟು ಕಷ್ಟ ಎಂಬುದು ನೀವು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಘನತೆಯಿಂದ ವಂಚಿತವಾದ, ಭರವಸೆಯೇ ಇಲ್ಲದ ಕೇವಲ ಮನುಷ್ಯರಾಗಲು ಹೆಣಗಾಡಬೇಕಾದ ಪರಿಸ್ಥಿತಿ ಇದ್ದ ಜಗತ್ತು ನಮ್ಮಪ್ಪನನ್ನು ಯಾವಾಗಲೂ ಕೀಳಾಗಿಯೇ ಕಂಡಿತ್ತು. ಎಂ ಟಿವಿಯಲ್ಲಿ ಹಾಡಿದ ಮೊಟ್ಟ ಮೊದಲ ಕರಿಯ ಕಲಾವಿದ ನಾನು. ಅದೆಷ್ಟೊಂದು ದೊಡ್ಡ ವಿಚಾರವಾಗಿತ್ತು ಎಂಬುದು ನನಗಿನ್ನೂ ನೆನಪಿದೆ. ಅದು ಯಾವಾಗ ಗೊತ್ತೇ? 1980ನೇ ಇಸವಿಯಲ್ಲಿ!

ನಮ್ಮಪ್ಪ ದಕ್ಷಿಣದಿಂದ ತನ್ನ ದೊಡ್ಡ ಕುಟುಂಬದೊಡನೆ ಇಂಡಿಯಾನಗೆ ಬಂದ. ಉಕ್ಕಿನ ಕಾರ್ಖಾನೆಯಲ್ಲಿ ದೀರ್ಘಕಾಲ ದುಡಿಯುತ್ತಿದ. ಪ್ರತಿನಿತ್ಯ ದುಡಿಮೆ ಅವನ ಶ್ವಾಸಕೋಶಗಳನ್ನು ಕೊಲ್ಲುತ್ತಿತ್ತು. ಅವನ ಘನತೆಯನ್ನು ಕುಗ್ಗಿಸುತ್ತಿತ್ತು. ಇದನ್ನೆಲ್ಲಾ ಅವನು ಯಾರಿಗಾಗಿ ಮಾಡುತ್ತಿದ್ದ ಕೇವಲ ತನ್ನ ಕುಟುಂಬಕ್ಕಾಗಿ. ಪರಿಸ್ಥಿತಿ ಹೀಗಿರುವಾಗ ಅವನು ತನ್ನ ಭಾವನೆಗಳನ್ನು ಪ್ರಕಟಪಡಿಸದಿದ್ದಲ್ಲಿ ಆಶ್ಚರ್ಯವೇನಿದೆ? ಭಾವನಾರಹಿತನಂತೆ, ಹೃದಯ ರಹಿತನಂತೆ ವರ್ತಿಸಿದ್ದಲ್ಲಿ ತಪ್ಪೇನು ಕಾಣುತ್ತದೆ? ಎಲ್ಲಕ್ಕಿಂತ ಹೆಚ್ಚಾಗಿ ಕಡುಬಡತನದಿಂದ ಮತ್ತು ಘನತೆ ರಹಿತ ಬದುಕಿನಿಂದ ನಮ್ಮನ್ನು ರಕ್ಷಿಸಲು ನಮ್ಮಪ್ಪ ನಮ್ಮನ್ನು ಬಲವಂತವಾಗಿ ವೃತ್ತಿಪರ ಲೋಕಕ್ಕೆ ತಳ್ಳಿರಬಹುದು.

ಇತ್ತೀಚೆಗೆ ನಮ್ಮಪ್ಪನ ಕಾಠಿಣ್ಯದಲ್ಲೂ ಆಳವಾದ ಪ್ರೀತಿಯಿದ್ದುದನ್ನು ಗುರುತಿಸಲು ಪ್ರಾರಂಭಿಸಿದ್ದೇನೆ. ಆ ಪ್ರೀತಿ ಅಸ್ಪಷ್ಟವಾದದ್ದಾಗಿರಬಹುದು ಆದರೆ, ಅದು ಯಾರಿಗೂ ಕಡಿಮೆ ಇರಲಿಲ್ಲ. ನನ್ನನ್ನು ಈ ಲೋಕಕ್ಕೆ ತಳ್ಳಿದ ಏಕೆಂದರೆ ನನ್ನನ್ನು ಪ್ರೀತಿಸಿದ. ತನ್ನ ಮಗನನ್ನು ಯಾರೂ ಕೀಳಾಗಿ ಕಾಣಬಾರದೆಂಬುದೇ ಅವನ ಭಾವನೆಯಾಗಿತ್ತು.

ಈಗ ನನ್ನಲ್ಲಿ ಕಹಿ ಭಾವನೆಗಳಿಲ್ಲ. ಕಾಲ ಕಳೆದಂತೆ ನಾನು ಕೋಪದ ಜಾಗದಲ್ಲಿ ಪರಿಪೂರ್ಣತೆಯನ್ನು, ದ್ವೇಷದ ಜಾಗದಲ್ಲಿ ಹೊಂದಾಣಿಕೆ ಕಂಡುಬರುತ್ತಿದೆ. ನನ್ನ ಬಾಲ್ಯದ ಕೋಪ ನಿಧಾನಕ್ಕೆ ಕ್ಷಮೆಯ ರೂಪ ತಾಳುತ್ತಿದೆ.

ಒಂದು ದಶಕದ ಹಿಂದೆ ನಾನು 'ಹೀಲ್ ದ ವರ್ಲ್ಡ್' ಎಂಬ ದತ್ತಿ ಸಂಸ್ಥೆಯನ್ನು ಸ್ಥಾಪಿಸಿದೆ. ನನಗೆ ಅಳದಲ್ಲಿ ಹಾಗೆನಿಸಿತ್ತು. ಯುದ್ಧ ಮತ್ತು ಜನಾಂಗೀಯ ಹತ್ಯೆ ಗಾಯಗಳಿಂದ ತುಂಬಿಹೋಗಿರುವ ಈ ಜಗತ್ತನ್ನು ನಾವು ಸಾಂತ್ವನದಿಂದ ತುಂಬಬಹುದೇ? ಅದು ಸ್ವಲ್ಪ ಕಷ್ಟ ಆದರೆ, ನಮ್ಮ ಮಕ್ಕಳ ಗಾಯಗಳನ್ನು ನಾವು ಗುಣಪಡಿಸಬಹುದು. ಬಂದೂಕಿನೊಂದಿಗೆ ಶಾಲೆ ಪ್ರವೇಶಿಸಿ ತಮ್ಮ ಸ್ನೇಹಿತರನ್ನೇ ಕೊಲ್ಲುವಂತಹ ಮಕ್ಕಳನ್ನು ನಾವು ನಿಜವಾಗಿಯೂ ಗುಣಪಡಿಸಬಹುದು. ಅದಕ್ಕಾಗಿಯೇ ಈ ರಾತ್ರಿ ನಿಮ್ಮ ಬಳಿ ಇಷ್ಟು ಹೊತ್ತು ಮಾತಾಡುತ್ತಿದ್ದೇನೆ.

ಇದೆಲ್ಲವೂ ಸಾಧ್ಯವಾಗುವುದು ಇತರರನ್ನು ಕ್ಷಮಿಸುವುದರಿಂದ ಮಾತ್ರ, ಏಕೆಂದರೆ ಜಗತನ್ನು ಗುಣಪಡಿಸುವ ಮೊದಲು ನಮ್ಮನ್ನು ನಾವು ಗುಣಪಡಿಸಿಕೊಳ್ಳಬೇಕು. ಮಕ್ಕಳಿಗೆ ಸಾಂತ್ವನ ಹೇಳುವ ಮೊದಲು ನಮ್ಮ ಪ್ರತಿಯೊಬ್ಬರ ಒಳಗಿರುವ ಮಗುವಿಗೆ ಸಾಂತ್ವನ ಹೇಳಬೇಕು. ನನಗೆ ಗೊತ್ತು ನಾನು ಪರಿಪೂರ್ಣ ಮನುಷ್ಯನೇನಲ್ಲ ಅಥವಾ ಬೇಷರತ್ತಾಗಿ ನನ್ನ ಮಕ್ಕಳನ್ನು ಪ್ರೀತಿಸುವ ತಂದೆಯೂ ಅಲ್ಲ. ಆದರೆ ನನ್ನನ್ನು ಕಾಡುತ್ತಿರುವ ನನ್ನ ಬಾಲ್ಯದ

> **ನಾನು ನನ್ನ ನೆನಪಿನ ಪ್ರವಾಹದ ಗೇಟನ್ನು ತೆರೆದುಬಿಟ್ಟರೆ ನೆನಪುಗಳು ಒಂದಾದರ ಮೇಲೊಂದರಂತೆ ಅಪ್ಪಳಿಸುತ್ತವೆ. ನಮ್ಮಪ್ಪ ತನ್ನ ಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ. ಎಷ್ಟು ಪ್ರೀತಿಯನ್ನು ತೋರಲು ಸಾಧ್ಯವೋ ಅಷ್ಟನ್ನು ತೋರಿದ. ಆದುದರಿಂದ ಗೆಳೆಯರೇ, ಈ ಸಂಜೆ ಅವನು ಏನು ಮಾಡಲಿಲ್ಲ ಎಂದು ಹೇಳುವುದಕ್ಕಿಂತ ಅವನೇನು ಮಾಡಿದ ಎಂದಷ್ಟೇ ಹೇಳುತ್ತೇನೆ. ಏಕೆಂದರೆ, ಅವನಿಗೆ ಆದ ಸವಾಲುಗಳಿದ್ದವು. ಅವನ ಬಗ್ಗೆ ನ್ಯಾಯ ತೀರ್ಮಾನ ಮಾಡುವುದನ್ನು ನಿಲ್ಲಿಸುತ್ತೇನೆ. ನಮ್ಮಪ್ಪನ ಕುರಿತು ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು. ನಮ್ಮಪ್ಪ ದಟ್ಟ ದರಿದ್ರ ಕುಟುಂಬದಲ್ಲಿ ಜನಿಸಿದ. ದಕ್ಷಿಣ ಅಮೇರಿಕಾದಲ್ಲಿ ಬೆಳೆದ. ಅವರಪ್ಪನ ಜೊತೆ 1930 ಆರ್ಥಿಕ ಹಿಂಜರಿತದ ಕಷ್ಟ ಸುಖಗಳನ್ನು ಅನುಭವಿಸಿದ. ನಮ್ಮ ತಾತ ನಮ್ಮಪ್ಪನನ್ನು ಬೆಳೆಸಲು ಬಹಳ ಕಷ್ಟಪಟ್ಟಿದ್ದಾನೆ.**

ಸುಖದ ಹಾಡು

ಅಳಿದ ಕೋಣ
ಮಣ್ಣಾಗಲು
ಬಿಡಲಿಲ್ಲ,
ಹಸಿದ ಹೊಟ್ಟೆ
ತುಂಬಿಸಿದ.
ಅದರ.....
ಮೂಳೆಯಲೊಂದು
ಕೊಳಲ ಮಾಡಿದ
ಅಪ್ಪ;
ದುಃಖವಾದಾಗಲೆಲ್ಲ
ನುಡಿಸುತ್ತಾನೆ
ಸುಖದ ಹಾಡ!

○ ಹಳ್ಳಿ ವೆಂಕಟೇಶ್

ಭೂತಕ್ಕೆ ಮಾತ್ರ ವಿಶ್ರಾಂತಿ ಕೊಡುತ್ತೇನೆ– ನಾವೆಲ್ಲರೂ ಹಾಗೆಯೇ ಮಾಡಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ದೇವರು ನೀಡಿದ ದಶಾಜ್ಞೆಗಳಲ್ಲಿ ಐದನೆಯ ದಶಾಜ್ಞೆಗಳಿಗನುಣವಾಗಿ ಬಾಳಿ, ನಿಮ್ಮ ಅಪ್ಪ–ಅಮ್ಮಂದಿರನ್ನು ಗೌರವಿಸಿ. ಅವರ ಬಗ್ಗೆ ತೀರ್ಪು ನೀಡಲು ಹೋಗಬೇಡಿ. ಬೆನಿಫಿಟ್ ಆಫ್ ದಿ ಡೌಟ್ ಕೊಟ್ಟುಬಿಡಿ.

ಅದಕ್ಕಾಗಿಯೇ ನಮ್ಮಪ್ಪನನ್ನು ನಾನು ಕ್ಷಮಿಸಿಬಿಟ್ಟಿದ್ದೇನೆ. ಅವನ ಬಗ್ಗೆ ತೀರ್ಪು ನೀಡುವುದಿಲ್ಲ. ಏಕೆಂದರೆ, ನನಗೆ ನಮ್ಮಪ್ಪ ಬೇಕು. ಅದಕ್ಕುಳಿದಿರುವ ಮಾರ್ಗ ಇದೊಂದೇ. ನನ್ನ ಬಾಲ್ಯದ ಭಾರವನ್ನು ಭುಜದ ಮೇಲಿನಿಂದ ಇಳಿಸಿಬಿಡುತ್ತೇನೆ. ನಮ್ಮಪ್ಪನೊಂದಿಗೆ ನಾನು ಹೊಸ ಸಂಬಂಧವನ್ನು ಹೊಂದಬೇಕು. ನನ್ನ ಉಳಿದ ಜೀವನದಲ್ಲಿ ಗತಕಾಲವನ್ನು ಮರೆಯಬೇಕು.

ಗೆಳೆಯರೇ, ನಾವೆಲ್ಲರೂ ಸೇರಿ ಹೃದಯಗಳ ಮಿಲನದ ಸ್ವರಮೇಳವೊಂದನ್ನು ನುಡಿಸುವ. ಜಗತ್ತಿನ ಎಲ್ಲಾ ಮಕ್ಕಳು ಪ್ರೀತಿಯಲ್ಲಿ ಮಿಂದೇಳುವ ಪವಾಡವನ್ನು ಕಾಣುವ. ಗಾಯಗೊಂಡ ಜಗತ್ತನ್ನು ಗುಣಪಡಿಸುತ್ತಾ ಅದರ ನೋವನ್ನು ಮಾಯ ಮಾಡುವ. ಇಂತಹ ಒಂದು ಸಂಗೀತವನ್ನು ಎಲ್ಲರೂ ಒಟ್ಟಾಗಿ ನುಡಿಸುವ, "ಗಾಡ್ ಬ್ಲೆಸ್ ಯೂ ಅಂಡ್ ಐ ಲವ್ ಯೂ".

ಜಾಕ್ಸನ್ನನ ಈ ಸುದೀರ್ಘ ಭಾಷಣದಿಂದ ಇಡೀ ಆಕ್ಸ್‌ಫರ್ಡ್‌ನ ಸಂಭಾಂಗಣ ಸಂತೋಷ, ಹೆಮ್ಮೆ, ನೋವು, ಸಾಂತ್ವನದಿಂದ ತುಂಬಿ ಹೋಯಿತು. ಕೆಲವರ ಕಣ್ಣಾಲಿಗಳು ತುಂಬಿ ಬಂದಿದ್ದವು. ಜಾಕ್ಸನ್ನನನ್ನು ಕೇವಲ ಒಬ್ಬ ಡ್ಯಾನ್ಸರ್ ಎಂದೇ ಭಾವಿಸಿದ್ದ ಅನೇಕರಿಗೆ ಆತನೊಳಗಿನ ಘನತೆವೆತ್ತ ಮನುಷ್ಯ, ಅನುಭವ ತುಂಬಿದ ಮಾಗಿದ ಮನಸ್ಸು, ತೋರಿಕೆಯಿಲ್ಲದ ಆಳದ ಧಾರ್ಮಿಕತೆ, ಮಕ್ಕಳ ಬಗೆಗಿನ ಕಕ್ಕುಲತೆ ಒಂದು ಬಗೆಯ ಆರ್ದ್ರ ಭಾವನೆಯನ್ನು ಉಂಟು ಮಾಡಿದವು. ಜಾಕ್ಸನ್ ತನ್ನ ಬಾಲ್ಯದಲ್ಲಿ ಅಪಾರ ಯಾತನೆ ಮತ್ತು ನೋವನ್ನು ಅನುಭವಿಸಿದ. ಆ ನೋವಿಗೆ ಕಾರಣನಾದ ಅಪ್ಪನನ್ನು ಕ್ಷಮಿಸಿದ. ತನ್ನ ನೃತ್ಯ ಮತ್ತು ಹಾಡಿನಿಂದ ಇಡೀ ಜಗತ್ತಿನ ಸಂಗೀತಪ್ರಿಯರ ದೊರೆಯಾಗಿ ಮೆರೆದ. ಈಗ ಜಾಕ್ಸನ್ ತನ್ನ ಬಾಲ್ಯದ ಕಹಿ ಅನುಭವದಿಂದಲೋ ಅಥವಾ ಮೇರೆ ಮೀರಿದ ಖ್ಯಾತಿಯಿಂದಲೋ ಅಥವಾ ತನ್ನ ಕಪ್ಪು ವರ್ಣೀಯ ಎಂಬ ಭಾವನೆಯಿಂದಲೋ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ದೀರ್ಘವಾದ ಚರ್ಮದ ಕಾಯಿಲೆಗೆ ತುತ್ತಾಗಿದ್ದಾನೆ.

ಅವನು ಅವನಪ್ಪನ ಬಗ್ಗೆ ತೀರ್ಪು ಮಾಡಲು ಇಷ್ಟಪಡುವುದಿಲ್ಲ. ಅವರಪ್ಪನಲ್ಲಿನ ಸಕಾರಾತ್ಮಕ ಅಂಶಗಳನ್ನು ಮಾತ್ರ ತೆಗದುಕೊಳ್ಳಲು ಬಯಸುತ್ತಾನೆ. ಹಾಗೆಯೇ ನಾವು ಕೂಡ ಜಾಕ್ಸನ್ನನ ಬಗ್ಗೆ ತೀರ್ಪು ನೀಡಲು ಹೋಗಬಾರದು. ಇಡೀ ಜಗತಿನ ಜನರ ಗಾಯಗಳು ವಾಸಿಯಾಗಲಿ, ಮಕ್ಕಳಿಗೆ ಸಾಂತ್ವನ ದೊರೆಯಲಿ ಎಂದು ಆಶಿಸಿದ ಕೋಟ್ಯಾಂತರ ಸಾವಿರ ಡಾಲರ್‌ಗಳನ್ನು ಮಕ್ಕಳ ದೇಣಿಗೆ ಸಂಸ್ಥೆಗಳಿಗೆ ನೀಡಿದ ಜಾಕ್ಸನ್‌ನ ಕೋಟ್ಯಾಂತರ ಅಭಿಮಾನಿಗಳ ಹಾರೈಕೆ ಒಂದೇ, ಮತ್ತೆ ಜಾಕ್ಸನ್ ಗುಣ ಮುಖನಾಗಲಿ. ಇಡೀ ದೇಹವನ್ನು ಬಳ್ಳಿಯಂತೆ ಬಳುಕಿಸುತ್ತಾ ಗಾಳಿಯಲ್ಲಿ ತೇಲುತ್ತಾ ಮಧುರ ಕಂಠದಲ್ಲಿ ಹಾಡುತ್ತಾ, ಕೇಳುಗರಲ್ಲಿ ರೋಮಾಂಚನ ಹುಟ್ಟಿಸುತ್ತಾ ಎಲ್ಲರ ಕಣ್ಣ ಮುಂದೆ ಬರಲಿ. ಮತ್ತೆ ಅವನ ಕುಣಿತದ ಲಯ ನಮ್ಮ ನರನಾಡಿಗಳಲ್ಲಿ ರೋಮಂಚನ ಹುಟ್ಟಿಸಲಿ. ಅವನ ಗೀತೆಗಳು ಎದೆಯಲ್ಲಿ ಮಾರ್ದನಿಸಲಿ. □

ಜನತಂತ್ರದ ಜೀವಾಳವಾದ ಸಂವಾದ ಚರ್ಚೆ - ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡುವ, ಲಿಂಗ/ವರ್ಗ ಸಮಾನತೆಗಳಂತಹ ಪ್ರಗತಿಪರ ಆಶಯಗಳೊಂದಿಗೆ ಜನರಿಂದಲೇ ಆಯ್ಕೆಗೊಂಡು ಅಧಿಕಾರದ ಚುಕ್ಕಾಣಿ ಹಿಡಿಯುವ ಪ್ರಜಾಪ್ರಭುತ್ವ ಮಾದರಿಯ ವ್ಯವಸ್ಥೆ ತಾತ್ವಿಕವಾಗಿ ಅತ್ಯಂತ ಆಕರ್ಷಣೀಯವಾದುದು. ಅದರ ಹುಟ್ಟಿನ ಜತೆಗೇ ಅದನ್ನು ನೆಪಮಾತ್ರಗೊಳಿಸುವ ಹುನ್ನಾರಗಳೂ ಹುಟ್ಟಿಕೊಂಡು ಸದ್ದಿಲ್ಲದೇ ಕಾರ್ಯನಿರ್ವಹಿಸುತ್ತವೆ. ಜನರಾಯ್ಕೆಯ ಪ್ರಕ್ರಿಯೆಯೇ ನಿರ್ಧಾರಕ ಘಳಿಗೆಯಾದುದರಿಂದ ಚುನಾವಣೆಗಳೇ ಜನತಂತ್ರದ ಸೋಲು ಮತ್ತು ಗೆಲುವುಗಳನ್ನು ನಿರ್ಧರಿಸುವ ಅವಕಾಶಗಳಾಗಿವೆ. ಚುನಾವಣೆಗಳು ಹೇಗೆ ನಡೆಯುತ್ತವೆ?. ಸ್ಪರ್ಧಿಸುವ ಅಭ್ಯರ್ಥಿಗಳು ಯಾರು? ಮತದಾರರು ಮತಚಲಾಯಿಸುವ ಸ್ಥಿತಿ ಎಂತಹದ್ದು? ಎಂಬವುಗಳು ಇಲ್ಲಿ ಮುಖ್ಯವಾಗುತ್ತವೆ.

ಜಯಪ್ರಕಾಶ್ ಶೆಟ್ಟಿ .ಎಚ್

ಭಾಗ 1

ನಾವೀಗ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿದ್ದೇವೆ. 19ನೇ ಶತಮಾನದ ಹೊಸ್ತಿಲಲ್ಲಿ ಜಗತ್ತಿನ ಯಾವ ರಾಷ್ಟ್ರವೂ ಈ ಮಾದರಿಯ ಪ್ರಭುತ್ವವನ್ನು ಅಳವಡಿಸಿಕೊಂಡಿರಲಿಲ್ಲ. ಹಾಗಾಗಿ ಜನರನ್ನು ನೈಜ ಪ್ರಭುಗಳನ್ನಾಗಿ ಮಾಡುವಲ್ಲಿ ಪ್ರಜಾತಂತ್ರವೆಂಬುದು 19ನೇ ಶತಮಾನದ ಆವಿಷ್ಕಾರವೇ ಸರಿ. ಇಂದು ಜಗತ್ತಿನ ಸರಿಸುಮಾರು 119 ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ಆದರೆ ಇದು ಬಿಟ್ಟಿಯಾಗೇನೂ ದೊರೆತುದಲ್ಲ. ಸಾಮಾನ್ಯರ, ದುಡಿಯುವ ವರ್ಗದ, ರೈತ ಸಮುದಾಯದ ಕೈಗಳು ಅಧಿಕಾರದಲ್ಲಿ ಪಾಲುಕೇಳಿ ನಡೆಸಿದ ರಕಸಿಕ್ತ ಕ್ರಾಂತಿಯ ಫಲವಾಗಿಯೇ ಪ್ರಜಾಪ್ರಭುತ್ವವೆಂಬ ಆಡಳಿತ ವ್ಯವಸ್ಥೆ ಸೃಷ್ಟಿಯಾಯಿತೆಂಬುದನ್ನು ಮರೆಯಲಾಗದು. ಗ್ರೀಕ್‌ದಾರ್ಶನಿಕರೆನ್ನುವಂತೆ ಪ್ರಜಾಪ್ರಭುತ್ವವೆಂದರೆ 'ಜನತೆಯ ಆಳ್ವಿಕೆ, ಅಧಿಕಾರ'. ಈ ಮಾತಿನೊಂದಿಗೆ ಲಿಂಕನ್ನ್‌ರ ಪ್ರಸಿದ್ಧ ಹೇಳಿಕೆಯನ್ನು ನೆನಪಿಸಿಕೊಂಡಾಗ ಎಲ್ಲಾ ವಲಯಗಳಲ್ಲಿ ಅಧಿಕಾರ ಎನ್ನುವುದು ಜನತೆಯ ಕಡೆಗೆ ವಾಲುವುದನ್ನೇ ನಾವು ಪ್ರಜಾಸತ್ತಾತ್ಮಕ ವ್ಯವಸ್ಥೆ ಎನ್ನಬೇಕಾಗುತ್ತದೆ. ಇದನ್ನೇ ಫರೀದ್ ಜಕಾರಿಯಾ 'ಡೆಮಾಕ್ರೆಟೈಜೇಶನ್' ಎಂದು ಕರೆಯುತ್ತಾ, "ಏಣಿ ಶ್ರೇಣಿಗಳು ಮುರಿದು ಬೀಳುತ್ತವೆ, ಮುಚ್ಚಿದ ಬಾಗಿಲುಗಳು ಕದ ತೆರೆದುಕೊಳ್ಳುತ್ತವೆ. ಮುಖ್ಯವಾಗಿ ಜನಸಮೂಹದ ಒತ್ತಡ ಸಾಮಾಜಿಕಬದಲಾವಣೆಯ ಸಂಗತಿಯಾಗಿ ನಿರ್ಣಾಯಕ ಪಾತ್ರ ಎಸಗುತ್ತದೆ" ಎನ್ನುತ್ತಾರೆ. ಪ್ರಸ್ತುತ ಲೇಖನವು ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಪರಿಕಲ್ಪನೆಗಳನ್ನು ಸಂಕ್ಷಿಪ್ತ ಚರ್ಚೆಗೆ ಒಳಪಡಿಸಿ ಅಂಚಿನ ಸಮುದಾಯವಾದ ಕೊರಗ ಸಮುದಾಯ ಈ ವ್ಯವಸ್ಥೆಯ ಪ್ರತಿಫಲವನ್ನು ಪಡೆದ ಬಗೆ ಮತ್ತು ಅಲಕ್ಷಿತವಾದ ಪ್ರಮಾಣವನ್ನು ಮುಂದಿಡುವ ಉದ್ದೇಶ ಹೊಂದಿದೆ.

ಜನತಂತ್ರದ ಜೀವಾಳವಾದ ಸಂವಾದ- ಚರ್ಚೆ- ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡುವ, ಲಿಂಗ/ವರ್ಗ ಸಮಾನತೆಗಳಂತಹ ಪ್ರಗತಿಪರ ಆಶಯಗಳೊಂದಿಗೆ ಜನರಿಂದಲೇ ಆಯ್ಕೆಗೊಂಡು ಅಧಿಕಾರದ ಚುಕ್ಕಾಣಿ ಹಿಡಿಯುವ ಪ್ರಜಾಪ್ರಭುತ್ವ ಮಾದರಿಯ ವ್ಯವಸ್ಥೆ ತಾತ್ವಿಕವಾಗಿ ಅತ್ಯಂತ ಆಕರ್ಷಣೀಯವಾದುದು. ಅದರ ಹುಟ್ಟಿನ ಜತೆಗೇ ಅದನ್ನು ನೆಪಮಾತ್ರಗೊಳಿಸುವ ಹುನ್ನಾರಗಳೂ ಹುಟ್ಟಿಕೊಂಡು ಸದ್ದಿಲ್ಲದೇ ಕಾರ್ಯನಿರ್ವಹಿಸುತ್ತವೆ. ಜನರಾಯ್ಕೆಯ ಪ್ರಕ್ರಿಯೆಯೇ ನಿರ್ಧಾರಕ ಘಳಿಗೆಯಾದುದರಿಂದ ಚುನಾವಣೆಗಳೇ ಜನತಂತ್ರದ ಸೋಲು ಮತ್ತು ಗೆಲುವುಗಳನ್ನು ನಿರ್ಧರಿಸುವ ಅವಕಾಶಗಳಾಗಿವೆ. ಚುನಾವಣೆಗಳು ಹೇಗೆ ನಡೆಯುತ್ತವೆ?. ಸ್ಪರ್ಧಿಸುವ ಅಭ್ಯರ್ಥಿಗಳು ಯಾರು? ಮತದಾರರು ಮತಚಲಾಯಿಸುವ ಸ್ಥಿತಿ ಎಂತಹದ್ದು? ಎಂಬವುಗಳು ಇಲ್ಲಿ ಮುಖ್ಯವಾಗುತ್ತವೆ. ಜನರಿಂದ ಚುನಾಯಿತರಾಗಿ ರಾಜನ ಎಲ್ಲಾ ಹಕ್ಕುಗಳನ್ನು ಹೊಂದುವ, ಅಧಿಕಾರ ಚಲಾಯಿಸುವ ರಾಜಪ್ರಭುತ್ವದ ಮೂಲಕ ಪ್ರಜಾಪ್ರಬುತ್ವದ ಅಣಕವಷ್ಟೇ ಸಾಧ್ಯ. ಇಂತಹ ಪ್ರಭುತ್ವ ಎಂದಿಗೂ ಸಮತಾವಾದಿ ಮಾಬರಿಯದಾಗಲಾರದು ಮತ್ತು ಅವಕಾಶ ವಂಚಿತರ ಭಾಗದ ಅವಕಾಶದಕದ ತೆರೆಯಲಾರದು.

ಹಾಗಾಗಿ ಡೆಮಾಕ್ರಸಿಯ ನಿಜವಾದ ಚೇತನವಿರುವುದು ಅದಕ್ಕೆ ಸಿಗುವ ಸಮಾಜವಾದಿ ಆಯಾಮದಲ್ಲಿ. ಸಂಪತ್ತಿನ ಸಮಾನ ಹಂಚಿಕೆಯೊಂದಿಗೆ ಅಧಿಕಾರದಲ್ಲಿಯ ಪಾಲುಕೂಡಾ ಸಮಾನತೆಯ ನೆಲೆಯಲ್ಲಿ ವಿತರಣೆಯಾಗದಲ್ಲಿ ರಾಜಕೀಯ ಸ್ವಾತಂತ್ರ್ಯವಿದ್ದೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವಿರದ ಪ್ರಜಾಪ್ರಭುತ್ವದ ಬೆದರುಬೊಂಬೆಯಷ್ಟೇ ಸಾಧ್ಯವಾಗುತ್ತದೆ. ಸ್ವಾತಂತ್ರ್ಯ ಮತ್ತು ಸಮಾನತೆ ಪ್ರಜಾಪ್ರಭುತ್ವದ ಮೂಲ ಅಂಗಗಳು. ಹಾಗಿದ್ದರೆ ಸ್ವಾತಂತ್ರ್ಯ ಎಂದರೇನು? ಅದಕ್ಕೊಂದು ಸಾರ್ವತ್ರಿಕ, ಸಾರ್ವಕಾಲಿಕ ಸಿದ್ಧ ಅರ್ಥವಿದೆಯೇ? ವಾಸ್ತವವಾಗಿ ಇದು ಏಕಕಾಲದಲ್ಲಿ ಎಲ್ಲರನ್ನೂ ಒಳಗೊಳ್ಳುವ, ತರತಮಗಳಿ

ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಕೊರಗರು

ಲ್ಲದೇ ಪ್ರತಿನಿಧಿಸುವ ನಿರಪೇಕ್ಷ ಪರಿಕಲ್ಪನೆಯಲ್ಲ.

'ಸ್ವ' ಎಂಬುದು ವ್ಯಕ್ತಿ/ಸಮುದಾಯ/ಪ್ರದೇಶವಾಚಕವಾಗಿಯೂ, 'ತಂತ್ರ' ಎಂಬುದು 'ಸ್ವ'ದ ಇಚ್ಛೆಯನ್ನು ಮೆಟೀರಿಯಲೈಸ್ ಆಗುವ ವಿಧಾನದ ಜತೆಗೆ ಆ ವಿಧಾನದ ಬಗೆಗಿನ ಜ್ಞಾನ ಹಾಗೂ ತಿಳುವಳಿಕೆಯಾಗುತ್ತದೆ. ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಮೂಲಕ ಬದುಕನ್ನೇ ಬದಲಾಯಿಸಿಕೊಳ್ಳಲು 'ವಿಧಾನ' ಮತ್ತು 'ಜ್ಞಾನ'ವನ್ನು ಹಕ್ಕಾಗಿ ಉಪಯೋಗಿಸಿಕೊಂಡು ಪರಿಸ್ಥಿತಿಯನ್ನು ಬದಲಾಯಿಸುವುದು ಸ್ವಾತಂತ್ರ್ಯ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯವೆಂಬುದು ಯಾರ ನಿಯಂತ್ರಣ/ ಅಡೆತಡೆ ಮತ್ತು ದಬ್ಬಾಳಿಕೆಗಳಿಲ್ಲದೆ ಭೌತಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ಬದುಕಿನ ಅಗತ್ಯಗಳನ್ನಾಗಿ ಮಾರ್ಪಡಿಸಿಕೊಳ್ಳುವ ವಿಧಾನ ಮತ್ತು ಅವುಗಳನ್ನು ಮಾರ್ಪಡಿಸಿಕೊಳ್ಳುವ ಜ್ಞಾನ ಮತ್ತು ಹಕ್ಕುಗಳ ಅನುಷ್ಠಾನವಾಗುತ್ತದೆ.

ಪ್ರಜಾಪ್ರಭುತ್ವಕ್ಕೆ ಸ್ವಾತಂತ್ರ್ಯದಷ್ಟೇ ಮುಖ್ಯವಾದ ಇನ್ನೊಂದು ಪರಿಕಲ್ಪನೆ ಸಮಾನತೆ. ಒಂದು ವ್ಯವಸ್ಥೆ ಕೊಡಮಾಡುವ ಅಥವಾ ಮುಕ್ತವಾಗಿರಿಸುವ ಸಮಾನತೆಯ ಅವಕಾಶ ಮತ್ತದರ ಸ್ವರೂಪವು ಸ್ವಾತಂತ್ರ್ಯ ಪರಿಕಲ್ಪನೆಯಂತೆಯೇ ಸಾಪೇಕ್ಷವಾಗಿರುತ್ತದೆ. ಸಮಾನತೆಗೆ ಪೂರಕವಾದ ಇನ್ನೊಂದು ಪರಿಕಲ್ಪನೆ ಸಬಲೀಕರಣ. ಜಾತಿ/ಲಿಂಗ/ವರ್ಗ ತಾರತಮ್ಯವಿರುವ ಸಾಮಾಜಿಕ ಆವರಣದಲ್ಲಿ ಭೌತಿಕ ಪರಿಸ್ಥಿತಿಯನ್ನು ಅನುಲಕ್ಷಿಸದೇ ಸಮಾನತೆಯನ್ನು ಕೇವಲ ತಾತ್ವಿಕಸಂಗತಿಯಾಗಿ ಅನುಸರಿಸಲಾಗದು. ತಾರತಮ್ಯಾಧಾರಿತವಾಗಿ ಸಂಪತ್ತಿನ ಸಮರೂಪದ ಹಂಚುವಿಕೆ ಸಾಧಿಸುವ ಪ್ರಭುತ್ವ ವ್ಯವಸ್ಥೆಯಷ್ಟೇ ಯಶಸ್ವಿ ಪ್ರಜಾಪ್ರಭುತ್ವವೆನಿಸುತ್ತದೆ. ಭೌತಿಕ ಪರಿಸ್ಥಿತಿಯ ಅರಿವಿನೊಂದಿಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳೆಂಬ ಈ ಅವಳಿ ಪರಿಕಲ್ಪನೆಗಳಲ್ಲಿ ಯಾವುದೊಂದನ್ನು ಕಳೆದುಕೊಂಡರೂ ಅದು ಅಪೂರ್ಣವಾಗಿರುತ್ತದೆ.

ಭಾಗ–2

ಪ್ರಜಾಪ್ರಭುತ್ವ ಆಡಳಿತ ನಿರ್ವಹಣೆಯ ಫಲಿತದ ಗುಣಾತ್ಮಕತೆಯನ್ನು ನಿರ್ಧರಿಸುವ ಬಹುಮುಖ್ಯಮಾನದಂಡಗಳಲ್ಲಿ ಅದು ಸಾಧಿಸುವ ಅಭಿವೃದ್ಧಿಗೆ ವಿಶೇಷ ಸ್ಥಾನವಿದೆ. ಆಧುನಿಕತೆ ಮತ್ತು ಅಭಿವೃದ್ಧಿಗಳನ್ನು ಅನೇಕ ಬಾರಿ ಒಂದೇ ಎಂಬಂತೆ ಭಾವಿಸುವುದುಂಟು. ಆದರೆ ಆಧುನಿಕತೆ ಎಂಬುದು ವಿಜ್ಞಾನ ಮತ್ತು ತಂತ್ರಜ್ಞಾನಗಳು ಕೊಡಮಾಡಿದ ಹೊಸ ಅವಕಾಶಗಳ ಲಭ್ಯತೆಯನ್ನು ಆಧರಿಸಿದೆ. ಉದಾ:– ದೇವನೂರರ ಡಾಂಬರು ಬಂದುದು ಕಥೆಯಲ್ಲಿಯ ಡಾಂಬರು ಇಂತಹದ್ದೊಂದು ಆಧುನಿಕತೆಯ ಸಂಗತಿ. ಬಡವರ ಪಾಲಿಗೆ ಮಡಿಕೆಯ ತೂತು ಮುಚ್ಚುವ ಪರಿಕರವಾದ ಡಾಂಬರು, ಉಳ್ಳವರ ಪಾಲಿಗೆ ಬೇರೊಂದು ಆಯಾಮದಲ್ಲಿ ಲಾಭಕರವಾಗುತ್ತದೆ. ಎಲ್ಲರನ್ನೂ ತಲುಪಬಲ್ಲ ವಿಜ್ಞಾನ ಮತ್ತು ತಂತ್ರಜ್ಞಾನದ ಸೌಲಭ್ಯಗಳ ಮೇಲೆ ಸರ್ಕಾರದ ನಿಯಂತ್ರಣ ಮತ್ತು ನಿರ್ದೇಶನಗಳಿರುವುದಿಲ್ಲ. ಆದರೆ ಅಭಿವೃದ್ಧಿ ಎಂಬುದು ಸಂಪೂರ್ಣವಾಗಿ ಸರ್ಕಾರದಿಂದ ನಿಯಂತ್ರಿಸಲ್ಪಡುವಂತಹದ್ದು ಮತ್ತು State policy ಗೆ ಸಂಬಂಧಿಸಿದ್ದು.

ಅಭಿವೃದ್ಧಿ ಎಂದ ತಕ್ಷಣ ವರಮಾನ – ಸರಕು – ಉತ್ಪನ್ನ ಮತ್ತು ಉದ್ಯೋಗಗಳ ಪರಿಭಾಷೆಯಲ್ಲಿ ಚಿಂತಿಸಲಾಗುತ್ತದೆ. ವರಮಾನ ಏರಿಕೆಯ ತೀವ್ರಗತಿಯ ಬೆಳವಣಿಗೆಯಿಂದ ಬಡತನ ಮತ್ತು ಅಸಮಾನತೆಯನ್ನು ನೀಗಿಸಬಹುದು ಎಂದು ವಾದಿಸಲಾಗುತ್ತದೆ. ಆದರೆ ಕಲ್ಯಾಣ ಆರ್ಥಿಕತೆಯ ಚಿಂತಕ ಅಮರ್ತ್ಯಸೇನ್ ಅಭಿವೃದ್ಧಿಯನ್ನು 'ಧಾರಣಾಸಾಮರ್ಥ್ಯ ಮತ್ತು ಸ್ವಾತಂತ್ರ್ಯಕ್ಕಾಗಿ ಅಭಿವೃದ್ಧಿ' ಎಂಬಂತೆ ವಿವರಿಸಿಕೊಳ್ಳುತ್ತಾರೆ. ಅಮರ್ತ್ಯಸೇನ್, ಮೆಹಬೂಬ್ ಉಲ್ಲಹಕ್, ಮಾರ್ಥನುಸುಬೌಮ್, ಜೋಸೆಫ್ ಸ್ಟಿಗ್ ರಿಟ್ಜ್ ಮುಂತಾದವರು ವರಮಾನದ ಏರಿಕೆಯಿಂದ ಬಡತನ ನಿವಾರಣೆಯ ಅನುಮಾನಗಳನ್ನು ಸಂಶೋಧನೆ, ಅಧ್ಯಯನಗಳ ಆಧಾರದ ಮೇಲಿಂದ ಪ್ರತಿಪಾದಿಸಿದ್ದಾರೆ. ಕಾರ್ಪೊರೇಟ್ ವಲಯ ಕಟ್ಟಿಕೊಡುವ ಸರಕು–ಸಾಮಾಗ್ರಿ ಏರಿಕೆಯ ಬಂಡವಾಳ ಕೇಂದ್ರಿತ ಅಭಿವೃದ್ಧಿ ಪರಿಕಲ್ಪನೆಯು ಪ್ರಾದೇಶಿಕ ಮತ್ತು ಜನಾಂಗಿಕ ಅಸಮಾನತೆಗಳನ್ನು ಅನುಲಕ್ಷಿಸಿದ ಸ್ವಾತಂತ್ರ್ಯ ಮತ್ತು ಸಹಭಾಗಿತ್ವದ ಪರಿಕಲ್ಪನೆಯಲ್ಲ.

ಮಾನವಾಭಿವೃದ್ಧಿಯ ಪರಿಭಾಷೆಯಲ್ಲಿ ಹಸಿವು, ಅನಕ್ಷರತೆ, ಅನಾರೋಗ್ಯ, ಬಡತನಗಳಿಂದ ಪಡೆಯುವ ಬಿಡುಗಡೆಯ ಸ್ವಾತಂತ್ರ್ಯವಾಗಿ ಅಭಿವೃದ್ಧಿಯನ್ನು ಗಣಿಸಲಾಗುತ್ತದೆ. ದುಡಿದು ತಿನ್ನುವ ಜನವರ್ಗ ದುಡಿಯದ ನಾಳೆಯೂ ಬದುಕಬಲ್ಲ ರೀತಿಯಲ್ಲಿ ಅಸಮಾನ ಹಂಚಿಕೆಯ ಪ್ರಮಾಣದಲ್ಲಿ ಸಾಧಿಸುವ ಇಳಿಕೆಯೇ ಅಭಿವೃದ್ಧಿ ಎನಿಸಿಕೊಳ್ಳುತ್ತದೆ. ಜನರ ಸ್ವಾಭಿಮಾನ, ಸ್ವಾತಂತ್ರ್ಯದ ಪ್ರಶ್ನೆಯಾಗಿ ವ್ಯಾಖ್ಯಾನಿಸಲ್ಪಡಬೇಕಾದ ಅಭಿವೃದ್ಧಿ ಜನರ ಹಕ್ಕಿನ ಪ್ರಶ್ನೆಯೇ ಹೊರತು, ಹಂಗಿನ ಭಿಕ್ಷೆಯಲ್ಲ. ದಾನಶೂರರುಗಳು ವಿಜೃಂಭಿಸುವ ಸಮಾಜ ಮತ್ತು ಪ್ರಭುತ್ವಗಳು ಭಿಕ್ಷುಕರನ್ನೂ ಉತ್ಪಾದಿಸುತ್ತವೆ ಎಂಬುದನ್ನು ನೆನಪಿನಲ್ಲಿಡಬೇಕು.

ವರಮಾನದ ಏರಿಕೆಯೊಂದೇ ಉಳಿದೆಲ್ಲಾ ಸಮಸ್ಯೆಗಳ ನಿವಾರಕ ಮಂತ್ರದಂಡವೆಂದು ನಂಬುವ ಈ ಅಭಿವೃದ್ಧಿ ಮೀಮಾಂಸೆಗೆ ಅಂಚಿನ ಸಮುದಾಯಗಳಲ್ಲಿಯ ಸಾಕ್ಷರತಾ ಪ್ರಮಾಣದ ಕನಿಷ್ಠತೆ, ಭೂರಹಿತ ಕೃಷಿಕೂಲಿಕಾರರ ಆದಿಕ್ಯ, ಅವರ ಗುಡಿಸಲುವಾಸ ಪ್ರಶ್ನೆಯಾಗಿ ಕಾಡುವುದಿಲ್ಲ. ಅಭಿವೃದ್ಧಿಯನ್ನು ಆರ್ಥಿಕಾಭಿವೃದ್ಧಿ ಮತ್ತು ಮಾನವಾಭಿವೃದ್ಧಿಯ ನೆಲೆಯಲ್ಲಿ ವಿವರಿಸಿಕೊಳ್ಳಬಹುದಾದರೆ, ಜನರ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಲಿಂಗಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳನ್ನು ಒಳಗೊಳ್ಳುವ ವಿಶಾಲ ಪರಿಕಲ್ಪನೆಯಾದ ಮಾನವಾಭಿವೃದ್ಧಿ ಪ್ರಜಾಪ್ರಭುತ್ವ ಮಾದರಿಗೆ ಹೆಚ್ಚು ಪೂರಕವಾದುದಾಗಿರುತ್ತದೆ.

ಮಾನವಾಭಿವೃದ್ಧಿಯ ಪರಿಭಾಷೆಯಲ್ಲಿ ಹಸಿವು, ಅನಕ್ಷರತೆ, ಅನಾರೋಗ್ಯ, ಬಡತನಗಳಿಂದ ಪಡೆಯುವ ಬಿಡುಗಡೆಯ ಸ್ವಾತಂತ್ರ್ಯವಾಗಿ ಅಭಿವೃದ್ಧಿಯನ್ನು ಗಣಿಸಲಾಗುತ್ತದೆ. ದುಡಿದು ತಿನ್ನುವ ಜನವರ್ಗ ದುಡಿಯದ ನಾಳೆಯೂ ಬದುಕಬಲ್ಲ ರೀತಿಯಲ್ಲಿ ಅಸಮಾನ ಹಂಚಿಕೆಯ ಪ್ರಮಾಣದಲ್ಲಿ ಸಾಧಿಸುವ ಇಳಿಕೆಯೇ ಅಭಿವೃದ್ಧಿ ಎನಿಸಿಕೊಳ್ಳುತ್ತದೆ. ಜನರ ಸ್ವಾಭಿಮಾನ, ಸ್ವಾತಂತ್ರ್ಯದ ಪ್ರಶ್ನೆಯಾಗಿ ವ್ಯಾಖ್ಯಾನಿಸಲ್ಪಡಬೇಕಾದ ಅಭಿವೃದ್ಧಿ ಜನರ ಹಕ್ಕಿನ ಪ್ರಶ್ನೆಯೇ ಹೊರತು, ಹಂಗಿನ ಭಿಕ್ಷೆಯಲ್ಲ. ದಾನಶೂರರುಗಳು ವಿಜೃಂಭಿಸುವ ಸಮಾಜ ಮತ್ತು ಪ್ರಭುತ್ವಗಳು ಭಿಕ್ಷುಕರನ್ನೂ ಉತ್ಪಾದಿಸುತ್ತವೆ ಎಂಬುದನ್ನು ನೆನಪಿನಲ್ಲಿಡಬೇಕು. ರಾಷ್ಟ್ರವೊಂದರ ತಲಾ ಆದಾಯದ ಏರಿಕೆ, ಕೋಟ್ಯಾದೀಶರ ಏರಿಕೆಯು ಭಾಗ್ಯದ ಪ್ರವಾಹವಲ್ಲ. ಹೀಗಾಗಿ ಸಮಾಜದ ಕಟ್ಟಕಡೆಯ ನಾಗರಿಕ ಮತ್ತು ಸಮುದಾಯಧ ಮಾನವಾಭಿವೃದ್ಧಯ ಗುರುತರವಾದ ಹೊಣೆಗಾರಿಕೆ ಪ್ರಜಾಪ್ರಭುತ್ವೀಯ ಸರ್ಕಾರದ ಮೇಲಿರುತ್ತದೆ.

ಭಾಗ –3

ಅಧಿಕಾರ ಕೇಂದ್ರದ ಆಯಕಟ್ಟಿನ ಜಾಗವನ್ನು ಆಕ್ರಮಿಸಿ ಕಾಲಪ್ರವಾಹದ ನಡುವೆಯೂ ಉಳಿದುಬಿಡುವ ಶಕ್ತಿ ಹೊಂದಿದ ಸಮುದಾಯಗಳು ಎಲ್ಲಾ ಕಾಲದಲ್ಲಿಯೂ, ಎಲ್ಲಾ ಮಾದರಿಯ ಪ್ರಭುತ್ವದಲ್ಲಿಯೂ ಅವಕಾಶದ ಸಿಹಿ ಅನುಭವಿಸುತ್ತಿರುತ್ತವೆ. ಆದರೆ ಈ ಕೇಂದ್ರದಿಂದ ಬಹಳ ದೂರಕ್ಕೆ ತಳ್ಳಲ್ಪಟ್ಟವರು ನಿರ್ಲಕ್ಷಿತರಾಗಿ ಮತ್ತಷ್ಟು ಪರಿಧಿಗೆ ಒತ್ತಲ್ಪಡುವುದರಿಂದಾಗಿ ಮುಖ್ಯವಾಹಿನಿ (?) ಎಂದು ಕರೆಯುವ ಸಮೂಹದ ಜತೆಗೆ ಸೇರಿಕೊಳ್ಳದೇ ಹೋಗುತ್ತಾರೆ. ಇಂತಹ ಸಮೂಹವನ್ನೇ ಅಂಚಿನ/ಪರಿಧಿಯ ಸಮುದಾಯಗಳು ಎನ್ನುತ್ತಾರೆ. ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಅಧಿಕಾರ ಕೇಂದ್ರಕ್ಕೆ ಅಪರಿಚಿತವಾಗಿಯೇ ಉಳಿಯುವ ಈ ಚಲನಶೀಲ ಸಾಮಾಜಿಕ ವಸ್ತುಸ್ಥಿತಿಯು ವೈರುಧ್ಯ, ಸಂಕೀರ್ಣ, ಅಸಮಾನತೆ ಮತ್ತು ಶ್ರೇಣೀಕರಣಗಳಿಲ್ಲದ ಏಕಘನಾಕೃತಿಯ ಮಾದರಿಯಲ್ಲ. ಅಂಚಿನ ಸಮುದಾಯಗಳ ಒಳಗಡೆಯೇ ನೂರಾರು ಜಾತಿ ಉಪಜಾತಿ, ಶ್ರೇಣೀಕರಣ, ತರತಮಗಳು, ಆರ್ಥಿಕ ಅಸಮಾನತೆ, ಲಿಂಗ ತಾರತಮ್ಯಗಳೂ ಜೀವಂತವಿದ್ದು, ಒಂದು ಚಲನಶೀಲ ಅವಸ್ಥೆಯಲ್ಲಿ ತೆರೆದುಕೊಳ್ಳುವುದನ್ನು ಕಾಣುತ್ತೇವೆ. ಹಾಗಾಗಿ ಅಂಚಿನ ಸಮುದಾಯಗಳೆಲ್ಲವನ್ನೂ ಒಂದು ಮುದ್ದೆ (lump)ಯಂತೆ ಗ್ರಹಿಸಲಾಗದು.

ಘನತರವಾದ ಸಾಂಸ್ಕೃತಿಕ ಕಲಾ ಸಂಪನ್ನತೆಯನ್ನು ಹೊಂದಿಯೂ ಸಮಾಜದ ಋಣಾತ್ಮಕ ಗುರುತಿಸುವಿಕೆಗೆ ಒಳಗಾಗಿ ಶೋಷಣೆಯ ತಳಮಟ್ಟದಲ್ಲಿರುವ ಭಾರತದ ಏಕಮಾತ್ರ ಬುಡಕಟ್ಟೊಂದಿದ್ದರೆ ಅದು ಕೊರಗರು ಮಾತ್ರ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಶೇ.1 ಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿರುವ ಕೊರಗರನ್ನು 1931ರ ಜನಗಣತಿ ಆಧರಿಸಿ 'ಹೆಚ್ಚು ಅಂಚಿಗೆ ತಳ್ಳಲ್ಪಟ್ಟವರು', 'ಹೆಚ್ಚು ಶೋಷಿತರು' ಎಂಬ ಆಧಾರದಲ್ಲಿ 1950ರ ಸಂವಿಧಾನದಲ್ಲಿ ಉಲ್ಲೇಖಿತವಾದಂತೆ ಮತ್ತು 1936ರ ಭಾರತ ಸರ್ಕಾರದ ಆದೇಶದಂತೆ ಪರಿಶಿಷ್ಟ ಜಾತಿಯಾಗಿ ಗುರುತಿಸಲಾಯಿತು. 1956ರಲ್ಲಿ ರಾಷ್ಟ್ರಪತಿಯವರ ವಿಶೇಷ ಆದೇಶದ ಮೇರೆಗೆ ಇವರನ್ನು ಪರಿಶಿಷ್ಟ ಪಂಗಡದಲ್ಲಿ ಸೇರಿಸಲಾಯಿತು. 1986 ರಲ್ಲಿ ಪಿಟಿಜಿ (primitive tribal group) ಗುರುತಿಸಲಾಯಿತು.

ಸಂಶೋಧಕ ಅಯ್ಯಪ್ಪನ್ ಅವರೆನ್ನುವಂತೆ ಕೊರಗ ಪದದ ಮೂಲ 'ಕುರುವರ್' ಅಂದರೆ 'ಬೆಟ್ಟದ ಮನುಷ್ಯರು' ಎಂದರ್ಥ. ಕೊರಗ ಎಂದರೆ ಸೂರ್ಯನನ್ನು ಆರಾಧಿಸುವವರು ಎಂಬರ್ಥವೂ ಇದೆ. ಇವರಾಡುವ ಕೊರಗ ಭಾಷೆ ಉತ್ತರದ್ರಾವಿಡ ಭಾಷೆಯೊಂದಿಗೆ

ತೋರುವ ಸಾಮ್ಯತೆಯಿಂದಾಗಿ ಮತ್ತು ಇವರಲ್ಲಿ ಕಾಣುವ ಅಲೆದಾಟದ ಕುರುಹುಗಳಿಂದಾಗಿ ದಕ್ಷಿಣದಲ್ಲಿದ್ದರೂ ಉತ್ತರ ಮೂಲದವರೆಂದೂ, ಅರೆ-ಅಲೆಮಾರಿ ಜನಾಂಗವೆಂದೂ ಕಲ್ಪಿಸಲಾಗಿದೆ. ಮೂಲದಲ್ಲಿ ಆಹಾರ ಸಂಗ್ರಹಿಸಿಡುವುದು ಇವರಲ್ಲಿ ನಿಷೇಧವಿತ್ತು ಎಂಬ ವಿಚಾರ ತಿಳಿದು ಬರುತ್ತದೆ. ಒಂದೆಡೆ ನೆಲೆನಿಂತುದರಿಂದಾಗಿ ಈ ನಿಯಮ ಮೂಲೆ ಗುಂಪಾಗಿರಬೇಕು.

ಕೊರಗ ಸಮುದಾಯದೊಳಗಡೆಯೇ ತರತಮ ಒಳಬೇಧಗಳಿಲ್ಲವೆಂದೇನೂ ಇಲ್ಲ. ಜೀವನ ಮಟ್ಟ, ಮಾನವ ಸಂಪನ್ಮೂಲ, ಭಾಗವಹಿಸುವಿಕೆಗಳ ಪ್ರಮಾಣದಲ್ಲಿಯೂ ಈ ಒಳಪಂಗಡಗಳ ನಡುವೆ ಸೂಕ್ಷ್ಮವಾದ ವ್ಯತ್ಯಾಸಗಳಿವೆ. ಒಳಪಂಗಡಗಳಾಗಿ ಸಪ್ಪು, ಒಂಟಿ, ಕಪ್ಪಡ ಕೊರಗರೆಂಬಂತೆ ಪ್ರಧಾನವಾಗಿ ಗುರುತಿಸುತ್ತಾರಾದರೂ, ಕೆಲವೊಂದು ಕಡೆ ಮುಂಡು, ಸಪ್ಪು, ಅಂಡೆ, ಚಿಪ್ಪು, ಬಾಕುಡೆಕೊರಗರೆಂಬ ಒಳಬೇಧಗಳಲ್ಲಿಯೂ ಉಲ್ಲೇಖಿಸುತ್ತಿದ್ದ ಬಗ್ಗೆಯೂ ಉಲ್ಲೇಖಗಳು ಸಿಗುತ್ತವೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿರುವ ಇವರಲ್ಲಿ "ಬಳಿ" ಅಥವಾ "ಬೆಡಗು"ಗಳ ಕಲ್ಪನೆಗೆ ವಿಶೇಷ ಮಹತ್ವವಿದೆ. ಕೃಷಿ ಪೂರ್ವ ನಾಗರೀಕತೆಯ ಸ್ಥಿತಿಯಿಂದ ಕೃಷಿ ನಾಗರೀಕತೆಗೆ ದಾಟಿ ಬಂದಿರದ ಈ ಜನವರ್ಗ ಒಕ್ಕಲು ಮಸೂದೆಯ ಕಾಲದ ಪ್ರಯೋಜನವನ್ನು ಶೇಕಡಾ 1ರಷ್ಟೂ ಪಡೆಯದೇ ಇರುವ ವರ್ಗ. ಅವಿಭಕ್ತ ದಕ್ಷಿಣ ಜಿಲ್ಲೆಯಲ್ಲಿ ಒಂದೋ, ಎರಡೋ, ಕುಟುಂಬಗಳು ಮಾತ್ರ ಕೃಷಿಯಲ್ಲಿ ತೊಡಗಿಸಿಕೊಂಡ ಉದಾಹರಣೆಗಳು ಸಿಗುತ್ತವೆ. ಒಕ್ಕಲು ಮಸೂದೆಯಿಂದಾಗಿ ಇವರು ಬದುಕುತ್ತಿದ್ದ ಮೂಲ ಅಡಿಗಳಿಂದ ಎತ್ತಂಗಡಿ ಕಂಡುಕೊಂಡು, ಮತ್ತೂ ಜನರಿಂದ ದೂರವಾಗಿಯೇ ಇರುವುದನ್ನು ಕಾಣುತ್ತೇವೆ.

ಉಳುವವನಿಗೆ ಹೊಲದ ಹಕ್ಕು ಕೊಡುವ ಕಾನೂನಿನ ಲಾಭವನ್ನು ಪಡೆಯದ ಈ ಸಮುದಾಯ 1986 ರಿಂದೀಚೆಗೆ ಪಿಟಿಜಿಯಾಗಿ ಗುರುತಿಸಲ್ಪಟ್ಟಿದ್ದರೂ ಅಜಲಿನಂತಹ ಆಚರಣೆಯ ಮೂಲಕ ಜಾತಿ ಪದ್ಧತಿಯ ಅಸ್ಪೃಶ್ಯತೆಯ ವರ್ತುಲದಲ್ಲಿ ಸಿಕ್ಕಿಕೊಂಡಿದೆ. ಈ ಹಿನ್ನೆಲೆಯಲ್ಲಿ ಇವರನ್ನು ಪರಿಶಿಷ್ಟ ಜಾತಿಯಲ್ಲಿ ಗುರುತಿಸಬೇಕೆಂಬ ಲಾಬಿಯೂ ನಡೆಯುತ್ತಿದೆ. ಹಾಗೆ ವಾದ ಮಾಡುವವರು ಬುಡಕಟ್ಟಿನ ಸ್ಥಾನಮಾನ ಪಡೆಯಲು ಜಾತಿಯಿಂದ ಬಹು ದೂರವಿರಬೇಕೆಂಬ ನಿಲುವನ್ನು ಮುಂದೊಡ್ಡುತ್ತಿದ್ದಾರೆ. ಕೊರಗರನ್ನು ನಾಗರೀಕ ಜಗತ್ತು (?) ತನ್ನ ಊಳಿಗಕ್ಕೆ ತರಬೇತುಗೊಳಿಸುವ ಸಲುವಾಗಿ ಅಜಲಿನಂತಹ ಆಚರಣೆಯ ಮೂಲಕ, ಬ್ಲ್ಯಾಕ್ ಮ್ಯಾಜಿಕ್‌ನ ಅವರಣದೊಳಗೆ ಎಳೆದುಕೊಂಡು ಅವರ ದಾರುಣಸ್ಥಿತಿಗೆ ಕಾರಣವಾಗಿರುವುದನ್ನು ಅರ್ಥಮಾಡಿಕೊಳ್ಳದೆ ಪರಿಶಿಷ್ಟ ಜಾತಿಯಲ್ಲಿ ಸೇರಿಸಿದ್ದೇ ಆದರೆ ದೂರಗಾಮಿ ದುಷ್ಪರಿಣಾಮವಾಗಲಿದೆ.

ಈಗಾಗಲೇ ಬುಡಕಟ್ಟು ಸಮುದಾಯವಾಗಿ ಗುರುತಿಸಲ್ಪಟ್ಟು ಅದರಡಿಗೆ ಬರುವ ಒಟ್ಟು ಅನುದಾನದ 10% ರ ಪಾಲೂ ಪಡೆಯದೇ ಉಳಿದಿರುವ ಸ್ಥಿತಿಯ ನಡುವೆ ಪಿಟಿಜಿಯಿಂದಲೂ ಕಳೆದುಬಿಟ್ಟಲ್ಲಿ ಪ್ರಿಮಿಟಿವ್ ಅಲೋಕೇಶನ್ ಮೂಲಕ ಸಿಗುವ ಲಾಭವೂ ಕೈತಪ್ಪಿ ಮತ್ತಷ್ಟು ಹಿಂದುಳಿದಿರುವಿಕೆಗೆ ಕಾರಣವಾಗಲಿದೆ ಎನ್ನಬಹುದು. ಪ್ರಿಮಿಟಿವ್ ಟ್ರೈಬಲ್‌ಗ್ರೂಪ್ ಎಂಬ ವರ್ಗೀಕರಣದಡಿಗೆ ಭಾರತದ ಸುಮಾರು 75 ಬುಡಕಟ್ಟುಗಳನ್ನು ಸೇರಿಸಿರುವ ಕೇಂದ್ರ ಸರ್ಕಾರ ಹಾಗೆ ಸೇರಿಸಲು ಈ ಕೆಳಕಂಡ ಮಾನದಂಡಗಳನ್ನು ಅಳವಡಿಸಿಕೊಂಡಿದೆ.

ಕೊರಗ ಸಮುದಾಯದೊಳಗಡೆಯೇ ತರತಮ ಒಳಬೇಧಗಳಿಲ್ಲವೆಂದೇನೂ ಇಲ್ಲ. ಜೀವನ ಮಟ್ಟ, ಮಾನವ ಸಂಪನ್ಮೂಲ, ಭಾಗವಹಿಸುವಿಕೆಗಳ ಪ್ರಮಾಣದಲ್ಲಿಯೂ ಈ ಒಳಪಂಗಡಗಳ ನಡುವೆ ಸೂಕ್ಷ್ಮವಾದ ವ್ಯತ್ಯಾಸಗಳಿವೆ. ಒಳಪಂಗಡಗಳಾಗಿ ಸಪ್ಪು, ಒಂಟಿ, ಕಪ್ಪಡ ಕೊರಗರೆಂಬಂತೆ ಪ್ರಧಾನವಾಗಿ ಗುರುತಿಸುತ್ತಾರಾದರೂ, ಕೆಲವೊಂದು ಕಡೆ ಮುಂಡು, ಸಪ್ಪು, ಅಂಡೆ, ಚಿಪ್ಪು, ಬಾಕುಡೆಕೊರಗರೆಂಬ ಒಳಬೇಧಗಳಲ್ಲಿಯೂ ಉಲ್ಲೇಖಿಸುತ್ತಿದ್ದ ಬಗ್ಗೆಯೂ ಉಲ್ಲೇಖಗಳು ಸಿಗುತ್ತವೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಹೊಂದಿರುವ ಇವರಲ್ಲಿ "ಬಳಿ" ಅಥವಾ "ಬೆಡಗು"ಗಳ ಕಲ್ಪನೆಗೆ ವಿಶೇಷ ಮಹತ್ವವಿದೆ.

1. ಕೆಳಮುಖವಾಗಿ ಚಲಿಸುತ್ತಿರುವ ಜನಸಂಖ್ಯೆ
2. ಕೆಳಮಟ್ಟದ ಶಿಕ್ಷಣ
3. ಕೃಷಿಪೂರ್ವ ಆರ್ಥಿಕತೆ
4. ಭಿನ್ನವಾಗಿರುವ ಮತ್ತು ವಿಚಿತ್ರ ಜೀವನ ಕ್ರಮಗಳು.

ಕರ್ನಾಟಕದಲ್ಲಿ ಜೇನುಕುರುಬ ಮತ್ತು ಕೊರಗ ಸಮುದಾಯಗಳೆರಡೂ ಈ ಗುಂಪಿನಡಿಗೆ ಗುರುತಿಸಲ್ಪಡುತ್ತಿವೆ. ಬುಡಕಟ್ಟು ಸಮುದಾಯಗಳ ಸಮಸ್ಯೆಗಳಾದ ಬಡತನ, ಅನಕ್ಷರತೆ, ನಿರುದ್ಯೋಗ, ಮತ್ತು ಅರೆ ಉದ್ಯೋಗ, ಆರೋಗ್ಯ ಸಮಸ್ಯೆ, ಇತ್ಯಾದಿಗಳೊಂದಿಗೆ ಪಿಟಿಜಿಯ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಕೊರಗ ಸಮುದಾಯ 1993-94ರಲ್ಲಿ ಡಾ. ಪೀರ್ ಮಹಮ್ಮದ್ ದ.ಕ. ಜಿಲ್ಲಾ ಪಂಚಾಯತ್‌ಗೆ ನೀಡಿದ ವರದಿಯಲ್ಲಿ ಉಲ್ಲೇಖಿತವಾದಂತೆ, ಶೋಚನೀಯವಾದ ಸಾಮಾಜಿಕ, ಆರ್ಥಿಕ ಸ್ಥಿತಿಯಿಂದಾಗಿ ಅಸ್ತಿತ್ವದ ತೀವ್ರ ಅಭದ್ರತೆಯನ್ನು ಅನುಭವಿಸುತ್ತಿರುವ ಸಮುದಾಯ.

ಇದೇ ವರದಿಯಲ್ಲಿ ಉಲ್ಲೇಖಿತವಾದಂತೆ ಅಸ್ಪೃಶ್ಯರಲ್ಲಿಯೇ ಅಸ್ಪೃಶ್ಯರಾಗಿ ಪರಿಗಣಿಸಲ್ಪಟ್ಟ ಈ ಸಮುದಾಯ ಪೌಷ್ಟಿಕತೆ, ನೈರ್ಮಲ್ಯ, ಶೈಕ್ಷಣಿಕ ಸ್ಥಿತಿಯ ಅಭಾವದಲ್ಲಿ ಆರ್ಥಿಕ ಶೂನ್ಯತೆಯಿಂದಾಗಿ ಕೆಳಮಟ್ಟದ ಜೀವನವನ್ನು ಅನುಭವಿಸುತ್ತಿದ್ದು, ಶಿಶುಮರಣದ ಅಧಿಕ ಸರಾಸರಿ, ಜೀವಿತಾವಧಿಯ ಕನಿಷ್ಟ ಮಟ್ಟಗಳೊಂದಿಗೆ ಅರಿವಿನ ಕೊರತೆಯಿಂದಾಗಿ ಜನಸಂಖ್ಯೆಯ ತೀವ್ರ ಇಳಿಕೆಯನ್ನು ಕಾಣುತ್ತಿದೆ. ಕರ್ನಾಟಕ, ಕೇರಳ ಕರಾವಳಿಯ ಭಾಗಗಳಲ್ಲಿ ಕಾಣಸಿಗುವ ಕೊರಗರ ಜನಸಂಖ್ಯೆ 1991 ಗಣತಿ ಮೇರೆಗೆ 22,000 ಮಾತ್ರವಿತ್ತು. ಈ ಸಂಖ್ಯೆ 2001ರ ಗಣತಿಯಲ್ಲಿ 18,000 ಎನ್ನಲಾಗಿದೆಯಾದರೂ ಲಭ್ಯ ಮಾಹಿತಿಯ ಮೇರೆಗೆ ಇವರ ಜನಸಂಖ್ಯೆ 1991ರಲ್ಲಿ 17,712, ಹಾಗೂ 2001ರ ಗಣತಿ ಮೇರೆಗೆ 16,500 ಮತ್ತು 2007ರಲ್ಲಿ ಮಾಡಿದ ಗಣತಿಯನ್ವಯ 13,853 ಆಗಿರುತ್ತದೆ. ಈ ಗಣತಿ ಸಂಖ್ಯೆಯಲ್ಲಿಯ ಋಣಾತ್ಮಕ ಬೆಳವಣಿಗೆಯನ್ನು ತೋರಿಸುತ್ತದೆ.

ಬುಡಕಟ್ಟು ಸಮುದಾಯದ ಅಭಿವೃದ್ಧಿ ಯೋಜನೆಗಳು ಮತ್ತು ಕೊರಗರು

ಬುಡಕಟ್ಟು ಸಮುದಾಯದ ಅಭಿವೃದ್ಧಿ ಹೇಗಾಗಿರಬೇಕು? ನೀತಿಗಳೇನು? ಯೋಜನೆಗಳೇನು? ಎಂಬ ಕುರಿತು ವಿದ್ವಾಂಸರುಗಳಾದ ವೆರಿಯರ್ ಎಲ್ವಿನ್ ಮತ್ತು ಜಿ.ಎಸ್. ಘುರ್‍ರೆಯವರ ನಡುವಿನ ಚರ್ಚೆ ಅನೇಕ ವಿಚಾರಗಳತ್ತ ಬೆಳಕು ಚೆಲ್ಲಿತ್ತು. ಎಲ್ವಿನ್ ಬುಡಕಟ್ಟಿನ ಪ್ರತ್ಯೇಕಿತ ಅಸ್ತಿತ್ವಕ್ಕೆ ಒತ್ತುಕೊಟ್ಟು ಅಭಿವೃದ್ಧಿಯನ್ನು ಪ್ರಸ್ತಾಪಿಸುತ್ತಾರೆ. ಘುರ್‍ರೆಯವರು ಮುಖ್ಯವಾಹಿನಿಯಲ್ಲಿ ವಿಲೀನವಾಗುವುದೇ ಒಳಿತೆಂಬ ಒಲವು ವ್ಯಕ್ತಪಡಿಸುತ್ತಾರೆ. ಆದರೆ ವಾಸ್ತವಿಕವಾಗಿ ಬುಡಕಟ್ಟು ಸಮುದಾಯದ ಲೋಕದೃಷ್ಟಿ, ತಾಂತ್ರಿಕ ಕೌಶಲ್ಯ, ಸಾಂಸ್ಕೃತಿಕ ಸಂದರ್ಭಗಳನ್ನು ರೂಪಿಸಿದ ಮತ್ತು ಉಳಿದ ಸಮುದಾಯಗಳಿಗಿಂತ ಅವರನ್ನು ಭಿನ್ನವಾಗಿ ಉಳಿಸಿದ ಪ್ರತ್ಯೇಕಿತ ಚಹರೆಗಳಿಗೆ ನೆಲೆಯಾದ ಅವರ ಹೆಬಿಟ್ಯಾಟ್ (ಮೂಲನೆಲೆ)ಗಳನ್ನು ನಾಶಮಾಡಿ / ಕಳೆದುಬಿಟ್ಟು ಮಾಡುವ ಆರ್ಥಿಕ ಅಭಿವೃದ್ಧಿಯ ಜೊತೆಗೆ ಹೊಂದಿಕೊಂಡು ಸಾಗುವುದು ಸಮುದಾಯಕ್ಕೂ ಸುಲಭ ಸಾಧ್ಯವಲ್ಲ. ಅದೇ ಸಂದರ್ಭದಲ್ಲಿ ಆಧುನೀಕರಣ, ಪಾಶ್ಚಾತ್ಯೀಕರಣಗಳ ದಾವಂತದಲ್ಲಿ ಸರ್ಕಾರಗಳು ಇಲ್ಲಿಯವರೆಗೆ ಅನುಸರಿಸಿಕೊಂಡು ಬಂದ ಅಭಿವೃದ್ಧಿ ಅಂದರೆ ವರಮಾನದ ಏರಿಕೆ ಎಂಬ ಬಿಡುಸಾದ ಕಲ್ಪನೆಗಳಿಂದಾಗಿ ಹಿಂದಕ್ಕೆ ಕರೆದುಕೊಂಡು ಹೋಗಿ ನೆಲೆಗಳನ್ನು ಮರುಸ್ಥಾಪಿಸುವುದು ಸರಳವಲ್ಲ.

ಭಾರತ ಸಂವಿಧಾನದ ಕೆಲವು ವಿಶೇಷ ಕಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ/ಮೀಸಲು ಸೌಲಭ್ಯ ಪಡೆಯಲು ಅವಕಾಶಮಾಡಿಕೊಟ್ಟಿವೆ. ಈ ಸಂವಿಧಾನಾತ್ಮಕ ರಕ್ಷಣೆಯಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸುವ ಸಲುವಾಗಿ ಅನೇಕ ಸಮಿತಿ, ಆಯೋಗಗಳನ್ನು ಸರ್ಕಾರ ಕಾಲಕಾಲಕ್ಕೆ ರಚಿಸಿದೆ. 1961ರ ದಾಬರ್ ಆಯೋಗ, 1972ರಲ್ಲಿ ರಚಿತವಾದ ಬುಡಕಟ್ಟು ಅಭಿವೃದ್ಧಿಯ ಕಾರ್ಯಪಡೆ (Task Force), 1996ರಲ್ಲಿ ನೇಮಿಸಲಾದ ಬೂರಿಯಾ ನೇತೃತ್ವದ ಎರಡನೇ ಬುಡಕಟ್ಟು ಆಯೋಗಗಳು ಈ ಸಂಬಂಧವಾದ ಗಣನೀಯ ಕೆಲಸಮಾಡಿವೆ. ಇದಲ್ಲದೆ ಪ್ರತೀ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಸಂಬಂಧವಾದ ಅನುದಾನದ ಪ್ರಮಾಣವನ್ನೂ ಏರಿಸಿಕೊಂಡು ಬರಲಾಗಿದೆ. ಬುಡಕಟ್ಟು ಉಪಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಉದ್ದೇಶದಿಂದ "ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ(ITDP)", "ಮಾರ್ಪಡಿಸಿದ ಪ್ರದೇಶ ಅಭಿವೃದ್ಧಿ (MADA)" ಮುಂತಾದ ಕಾರ್ಯಕ್ರಮ ಅನುಷ್ಠಾನದ ಸಂಸ್ಥೆಗಳನ್ನು ರಚಿಸಲಾಗಿದೆ.

ಪಂಚಾಯತಿಯೊಂದು ತನ್ನ ಆದಾಯದ 22.5% ಭಾಗದೊಂದಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಅನುದಾನದ ಪೈಕಿ ಶೇ. 18 ರಿಂದ 20 ರಷ್ಟು ಪ್ರಮಾಣದ ಅನುದಾನವನ್ನು ಬುಡಕಟ್ಟು ಅಭಿವೃದ್ಧಿಗೆ ಬಳಸಬೇಕಾಗಿದೆ. ಇದಲ್ಲದೆ ಪಿಟಿಜಿಗಳಿಗಾಗಿ ಕೇಂದ್ರ, ರಾಜ್ಯ ಸರ್ಕಾರಗಳು ವಿಶೇಷ ಯೋಜನೆಗಳನ್ನು ಪ್ರಕಟಿಸುತ್ತಾ ಬಂದಿವೆ. ಕೇಂದ್ರ ಸರ್ಕಾರವು 2006ರ ತನ್ನ ನ್ಯೂ ಟ್ರೈಬಲ್ ಪಾಲಿಸಿಯನ್ವಯ ನಾಶದ ಆತಂಕವನ್ನೆದುರಿಸುತ್ತಿರುವ ಬುಡಕಟ್ಟು

ಸಮುದಾಯದ ಹೆಬಿಟೈಟ್‌ಗಳನ್ನು ಉಳಿಸುವ ವಿಚಾರದತ್ತ ವಿಶೇಷ ಗಮನ ನೀಡಿತ್ತು. ಬುಡಕಟ್ಟು ಸಮುದಾಯದ ಕಲೆ, ಜ್ಞಾನ, ಸಾಹಿತ್ಯ ಇತ್ಯಾದಿಗಳೆಲ್ಲವೂ ಅವರು ಬದುಕುವ ಪರಿಸರ (ಹೆಬಿಟೈಟ್)ದಿಂದ ಬೇರ್ಪಟ್ಟು ಅನಾಥವಾಗುತ್ತವೆ, ಮಾತ್ರವಲ್ಲ ಈ ಜೀವನ ಪರಿಸರದ ನಾಶದಿಂದ / ಬೇರ್ಪಡಿಸುವಿಕೆಯಿಂದ ಬುಡಕಟ್ಟು ಅಭಿವೃದ್ಧಿ ಅಸಾಧ್ಯವೆಂಬ ತೀರ್ಮಾನಕ್ಕೆ ಬರಲಾಗಿತ್ತು. ಕೇಂದ್ರ ಸರ್ಕಾರವು ಈಗಾಗಲೇ ಬುಡಕಟ್ಟು ಅಭಿವೃದ್ಧಿ ಖಾತೆಯನ್ನು ಸೃಷ್ಟಿಸಿದೆ. ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬುಡಕಟ್ಟು ಅಭಿವೃದ್ಧಿ ಯೋಜನೆಗಳ ಮೂಲಕ ನಿರಂತರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಉನ್ನತೀಕರಣಕ್ಕೆ ಶ್ರಮಿಸುತ್ತಿವೆ.

ಬುಡಕಟ್ಟು ಆರ್ಥಿಕತೆಯನ್ನು ಹೊರಗಿನ ಮಾರುಕಟ್ಟೆಯಿಂದ ರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಮೂಲಕ ಈ ಜನರ ಸಂಘಟನಾತ್ಮಕ ಸಾಮರ್ಥ್ಯ ಮತ್ತು ಸ್ವಸಾಮರ್ಥ್ಯವನ್ನು ಬೆಳೆಸುವ ದಿಸೆಯಲ್ಲಿ ಸರ್ಕಾರದೊಂದಿಗೆ ಅನೇಕ ಸರ್ಕಾರೇತರ ಸಂಘ-ಸಂಸ್ಥೆಗಳೂ ತಮ್ಮನ್ನು ತೊಡಗಿಸಿಕೊಂಡಿವೆ. ವಿಶ್ವವಿದ್ಯಾಲಯಗಳು, ಸಂಶೋಧನಾ ಕೇಂದ್ರಗಳು ಈ ಸಂಬಂಧವಾದ ಸಂಶೋಧನೆ ಮತ್ತು ಕ್ರಿಯಾಯೋಜನೆಗಳ ತಯಾರಿಯಲ್ಲಿ ಶ್ರಮಿಸುತ್ತಿವೆ.

ಮೇಲೆ ಹೇಳಲಾಗಿರುವ ಎಲ್ಲಾ ಕೆಲಸಗಳು ಸಮರ್ಪಕವಾಗಿ ಕಾರ್ಯ ರೂಪದಲ್ಲಿ ಜಾರಿಯಾಗುತ್ತಿವೆಯೇ?. ದೇಶದ ಎಲ್ಲಾ ಬುಡಕಟ್ಟುಗಳಿಗೂ ತಮ್ಮ ಹಕ್ಕಿನ ಪ್ರಶ್ನೆಯಾಗಿ ಈ ಅಭಿವೃದ್ಧಿ ಯೋಜನೆಗಳಲ್ಲಿ ಅವಕಾಶ ದೊರೆಯುತ್ತಿದೆಯೇ?. ವ್ಯಯಿಸಲಾಗುಯತ್ತಿರುವ ದೇಶದ ಸಂಪತ್ತು ಮತ್ತು ಮಾನವ ಕಾಲಗಳು ಬುಡಕಟ್ಟುಗಳಲ್ಲಿ ಪರಿಣಾಮಕಾರಿಯಾದ ಫಲಿತಾಂಶವನ್ನು ನೀಡುತ್ತಿವೆಯೇ? ಹಾಗಿದ್ದಲ್ಲಿ ಅಳಿವಿನಂಚಿನ ಬುಡಕಟ್ಟುಗಳು ಯಾಕೆ ಸೃಷ್ಟಿಯಾಗುತ್ತಿವೆ?. ಅಭಿವೃದ್ಧಿ ಯೋಜನೆಗಳ ಗರಿಷ್ಠ ಪಾಲನ್ನು ಪಡೆಯುವಲ್ಲಿ ಬುಡಕಟ್ಟುಗಳ ನಡುವಿರುವುದು ಸ್ಪರ್ಧೆಯೇ? ರಾಜಕಾರಣವೇ? ಬಲಾಢ್ಯನ ಬದುಕು ಎಂಬ ನಿಯಮವೇ?. ಕಾಲಬದ್ಧವಾಗಿ ಖರ್ಚು ಮಾಡಬೇಕಾದ ಪರಿಶಿಷ್ಟ ಪಂಗಡ (S.T.)ಕ್ಕಾಗಿರುವ ಅನುದಾನ ಹಾಗೂ ಕಾಲಮಿತಿಗೊಳಪಡದ ಪ್ರಿಮಿಟಿವ್ ಎಲೊಕೇಶನ್‌ಗಳು ಹೇಗೆ ವಿನಿಯೋಗಿಸಲ್ಪಡುತ್ತಿವೆ?.

ರಾಜ್ಯದ ಜನ ಸಂಖ್ಯೆಯ ಶೇ. 1ಕ್ಕಿಂತ ಕಡಿಮೆಯಿರುವ ಅಳಿವಿನಂಚಿನ, ಕೃಷಿಪೂರ್ವ ಜೀವನಕ್ರಮದಲ್ಲಿ ಉಳಿದುಕೊಂಡಿರುವ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಕೊರಗರಿಗೆ ಸರ್ಕಾರಿ ಯೋಜನೆಗಳು ತಲುಪಿರುವ ಪ್ರಮಾಣವೆಷ್ಟು? ಕೊರಗರ ಹಿರಿಯಜೀವ ಗೋಕುಲದಾಸ್ ಕದ್ರಿ ಹೇಳುವಂತೆ '1987 ರವರೆಗೆ ಸರ್ಕಾರಿ ಯೋಜನೆಗಳೆಂದರೇನು ಎಂಬ ಅರಿವಿರದ' ಜಗತ್ತಿನಲ್ಲಿ ಸ್ವಾತಂತ್ರ್ಯ ಬಂದು 40 ವರ್ಷಗಳವರೆಗೂ ಕೊರಗರು ಅಂಧರಾಗಿದ್ದರು ಯಾಕೆ? ಯೋಜನೆಗಳು ಭೂ/ಕೃಷಿ ಕೇಂದ್ರಿತವಾಗಿದ್ದುದರಿಂದ ಕೊರಗರ ಮೇಲೆ ಉಂಟು ಮಾಡಿದ ಪರಿಣಾಮವೇನು? ಕೇವಲ ವರಮಾನ, ಅನುದಾನ, ಕ್ರಿಯಾಯೋಜನೆಗಳು ಮುಂತಾದ ಸರ್ಕಾರಿ ಕಡತದ ಪರಿ ಭಾಷೆಗಳಿಗಿಂತ ಭಿನ್ನವಾಗಿ ಮಾನವಾಭಿವೃದ್ಧಿ, ಮಾನವ ಸಂಪನ್ಮೂಲಗಳ ಪರಿಭಾಷೆಗಳಲ್ಲಿ ಆದ್ಯತೆ ನೀಡಬೇಕಾದ ಕ್ಷೇತ್ರಗಳು ಯಾವುವು? ಸಮುದಾಯದಲ್ಲಿ ಶಿಕ್ಷಣ – ಸಾಕ್ಷರತೆ – ಅರಿವಿನಮಟ್ಟ ಹೇಗಿದೆ? ಅಜಲಿನಂತಹ ಅನಿಷ್ಟಗಳು 21ನೇ ಶತಮಾನದ ವರೆಗೂ ಹೇಗೆ ಮುಂದುವರಿದುಕೊಂಡು ಬಂದುವು?

ಭಾರತ ಸಂವಿಧಾನದ ಕೆಲವು ವಿಶೇಷ ಕಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ ಮೀಸಲು ಸೌಲಭ್ಯ ಪಡೆಯಲು ಅವಕಾಶಮಾಡಿ ಕೊಟ್ಟಿವೆ. ಈ ಸಂವಿಧಾನಾತ್ಮಕ ರಕ್ಷಣೆಯಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮ ಪಡಿಸುವ ಸಲುವಾಗಿ ಅನೇಕ ಸಮಿತಿ, ಆಯೋಗಗಳನ್ನು ಸರ್ಕಾರ ಕಾಲಕಾಲಕ್ಕೆ ರಚಿಸಿದೆ. 1961ರ ದಾಬರ್ ಆಯೋಗ, 1972ರಲ್ಲಿ ರಚಿತವಾದ ಬುಡಕಟ್ಟು ಅಭಿವೃದ್ಧಿಯ ಕಾರ್ಯಪಡೆ, 1996ರಲ್ಲಿ ನೇಮಿಸಲಾದ ಬೂರಿಯಾ ನೇತೃತ್ವದ ಎರಡನೇ ಬುಡಕಟ್ಟು ಆಯೋಗಗಳು ಈ ಸಂಬಂಧವಾದ ಗಣನೀಯ ಕೆಲಸ ಮಾಡಿವೆ. ಇದಲ್ಲದೆ ಪ್ರತೀ ಪಂಚ ವಾರ್ಷಿಕ ಯೋಜನೆಗಳಲ್ಲಿ ಈ ಸಂಬಂಧವಾದ ಅನುದಾನದ ಪ್ರಮಾಣವನ್ನೂ ಏರಿಸಿಕೊಂಡು ಬರಲಾಗಿದೆ.

ಕೊರಗರು ತಮ್ಮ ಕುರಿತಾಗಿ ಹೇಳಿಕೊಂಡು / ನಂಬಿಕೊಂಡು ಬಂದ ತಮ್ಮ "ಮೂಲದ ಕುರಿತಾದ ಪುರಾಣ ಹಾಗೂ ಗತದ ಕುರಿತಾದ ಚರಿತ್ರೆ"ಗಳು ಅವರ ಸೋಲು, ದಾಸ್ಯಗಳಿಗಾಗಿ ತಯಾರಾದ 'ಸಮ್ಮತಿಯ ಉತ್ಪಾದಕ' ಸಾಧನಗಳಲ್ಲವೆ?

ಹೆಬಿಟೈಟ್‌ಗಳಿಂದ ಬೇರ್ಪಡಿಸಲ್ಪಟ್ಟ ಕೊರಗರನ್ನು ಅಭಿವೃದ್ಧಿಯ ಯಾವ ಪರಿಭಾಷೆಯಲ್ಲಿ ಸ್ಪರ್ಶಿಸಬೇಕಾಗಿದೆ? ಅವರ ಕುಲಮೂಲೀಯ ಕೌಶಲ್ಯ, ಕಲೆ, ಜ್ಞಾನ ಇತ್ಯಾದಿಗಳು ಅವರಿಗೆ ನೀಡಲಾಗುವ ಶಿಕ್ಷಣದ ಒಳಗಡೆ ಜಾಗ ಪಡೆದಿವೆಯೇ? ಮುಖ್ಯವಾಹಿನಿ ಎಂಬ ಕಲ್ಪಿತ ಸತ್ಯ ಕೊರಗರನ್ನು ಅಮುಖ್ಯಗೊಳಿಸುವುದಿಲ್ಲವೇ? ಇಂತಹ ನೂರಾರು ಪ್ರಶ್ನೆಗಳು ಹುಟ್ಟಿಕೊಂಡು ಸರ್ಕಾರ ಮತ್ತು ಸಮಾಜ ಈ ಅಂಚಿನ ಸಮುದಾಯದ ಬಗೆಗೆ ಕನಿಕರ ತೋರಿರಬಹುದಾದರೂ, ಕಾಳಜಿ ತೋರಿದೆಯೆ? ಎಂಬ ಗಂಭೀರ ಪ್ರಶ್ನೆಯನ್ನೇ ಹುಟ್ಟಿಸುತ್ತವೆ.

1993 – 94 ರಲ್ಲಿ ದ.ಕ. ಜಿಲ್ಲಾ ಪಂಚಾಯತಿಗೆ ಕೊರಗರ ಕುರಿತು ಮೊಹಮ್ಮದ್ ಪೀರ್ ನೀಡಿರುವ ವರದಿಯಲ್ಲಿ ಗುರುತಿಸಿದಂತೆ, The development schemes have not helped them to improve their condition. On the contrary, these schemes have adversely effected in their life. Most of the programmes initiated for the development of koragas have been a failure due to the inadequate knowledge about their problems, requirements and socio-cultural values." ತಮ್ಮೆದುರು ಯಶಸ್ಸಿನ ಯಾವುದೇ ಮಾದರಿಯನ್ನು ಹೊಂದಿರದೆ, ಕೃಷಿ ಪೂರ್ವ ನಾಗರೀಕತೆಯೊಂದಿಗೆ ಪ್ರಚಲಿತ ಮಾದರಿಯ ಶೈಕ್ಷಣಿಕ ಅನಭಿವೃದ್ಧಿಯಿಂದಲೂ ನರಳುತ್ತಿರುವ ಕೊರಗರಿಗೆ ಸಂಬಂಧಿಸಿದ ಯಾವುದೇ ಕ್ರಿಯಾಯೋಜನೆಗಳು ಮೊದಲಿನಿಂದಲೇ ಆರಂಭವಾಗಬೇಕಿದೆ. ಹಾಗಿದ್ದೂ ಇಲ್ಲಿಯವರೆಗಿನ ಕಾಲದ ಹರಿವಿನಲ್ಲಿ ಕೊರಗ ಸಮುದಾಯ ಚಲನೆಯನ್ನೇ ಕಾಣದೆ ಉಳಿದಿಲ್ಲ. 60 ವರ್ಷಗಳಿಗೂ ಮಿಕ್ಕಿದ ಸ್ವಾತಂತ್ರ್ಯೋತ್ತರ ಭಾರತದ ಪ್ರಜಾಪ್ರಭುತ್ವೀಯ ಆಡಳಿತದಲ್ಲಿ ಮಾನವಾಭಿವೃದ್ಧಿಯ ಪರಿಭಾಷೆಯಲ್ಲಿ ಈ ಸಮುದಾಯದ ವಸ್ತು ಸ್ಥಿತಿಯನ್ನು ಲಭ್ಯ ಮಾಹಿತಿಗಳ ಮೇಲಿಂದ ಈ ಮುಂದಿನಂತೆ ಪರಿಚಯಿಸಿಕೊಳ್ಳಬಹುದು.

ಕೊರಗರು ಮತ್ತು ಮಾನವ ಸಂಪನ್ಮೂಲ

ಸಮುದಾಯ/ ದೇಶವೊಂದರ ಅಭಿವೃದ್ಧಿ ಮಾನವ ಸಂಪನ್ಮೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸರಿಯಾದ ಸಂಯೋಜನೆಯನ್ನಾಧರಿಸಿದೆ. ವ್ಯಕ್ತಿಯೊಬ್ಬ ತನ್ನ ಬೌದ್ಧಿಕ ಮತ್ತು ಶಾರೀರಿಕ ಸಾಮರ್ಥ್ಯಗಳನ್ನು ಸೂಕ್ತ ರೀತಿಯ ಸಂಯೋಜನೆಯೊಂದಿಗೆ ಸಾಮಾಜಿಕ ಚಟುವಟಿಕೆಯಲ್ಲಿ ಅಭಿವ್ಯಕ್ತಗೊಳಿಸುವುದನ್ನು ಮಾನವ ಸಂಪನ್ಮೂಲ ಎನ್ನುತ್ತೇವೆ. ಇದು ಸಾಕ್ಷರತೆ, ಆಹಾರದ ಪೌಷ್ಠಿಕತೆ, ಲಿಂಗ ಸಂಬಂಧ ಜೀವನಮಟ್ಟ, ಆರೋಗ್ಯ, ಪಾಲ್ಗೊಳ್ಳುವಿಕೆ, ಬದಲಾವಣೆಗೆ ತೆರೆದುಕೊಳ್ಳುವ ಬಗೆ ಇತ್ಯಾದಿ ಅಂಶಗಳನ್ನು ಆಧರಿಸಿದೆ. ಆದರೆ ಈ ಕ್ಷೇತ್ರಗಳನ್ನು ಗಮನಕ್ಕೆ ತೆಗೆದುಕೊಂಡರೆ ಕೊರಗರ ಮಾನವಸಂಪನ್ಮೂಲದ ಸ್ಥಿತಿ ಬಿಗಡಾಯಿಸಿದೆ ಎಂದೇ ಹೇಳಬೇಕು.

ಒಕ್ಕಲು ಮಸೂದೆಯ ಪರಿಣಾಮವಾಗಿ ಉಳುವವರಾಗಿರದ ಕೊರಗರನ್ನು ಅವರ ಮೂಲನೆಲೆಗಳಿಂದ ದೊಡ್ಡ

ಪ್ರಮಾಣದಲ್ಲಿ ಎತ್ತಂಗಡಿ ಮಾಡಲಾಯಿತು. ಹೀಗೆ ತಮ್ಮ ಆವಾಸದ ಪಾರಂಪರಿಕ ತಾಣಗಳಾದ, ತಮ್ಮ ಸೃಜನಶೀಲತೆಯ ಕೌಶಲ್ಯದ ನೆಲೆಗಳಾದ ಹೆಬಿಟೈಟ್‌ಗಳಿಂದ ಬೇರ್ಪಟ್ಟು ಪುನರ್ವಸತಿ ಕೇಂದ್ರಗಳಂತೆ ಆರಂಭವಾದ ಕೊರಗರ ಕಾಲೋನಿಗಳಿಗೆ (ತುಂಡುಭೂಮಿ, ಸರ್ಕಾರಿ ಮನೆ(?)ಗಳಿಗೆ) ವರ್ಗಾವಣೆಗೊಳ್ಳುವಂತಾಯಿತು. ಹೀಗೆ ತಮ್ಮ ಸಾಂಸ್ಕೃತಿಕ ಪರಿಸರದಿಂದ 'ಅನ್ಯ'ವಾಗಿಸಲ್ಪಟ್ಟು, ಸಾಮಾಜಿಕ ಆವರಣದ ತಿರಸ್ಕೃತಿಯನ್ನು ಅನುಭವಿಸುವ (Exile) ವಲಸಿಗರಂತೆ ಬದುಕಬೇಕಾದ ಸ್ಥಿತಿ ನಿರ್ಮಾಣವಾಯಿತು. ಈ ನಡುವೆಯೂ ನೆಲೆಯನ್ನು ಕಳೆದ ಸಮಾಜ ತನ್ನ ಅಜಲಿನ ಊಳಿಗಕ್ಕಾಗಿ ಪಳಗಿಸಿಟ್ಟ ಪ್ರಜ್ಞೆಯನ್ನು ಮಾಯವಾಗದಂತೆ ಕಾದುಕೊಂಡಿತು. ಹಬ್ಬ ಹರಿದಿನಗಳಲ್ಲಿ, ಸಾವು, ರೋಗ, ಮಾರಿ, ಬಲಿಗಳಲ್ಲಿ ಕೊರಗರ ಉಪಯೋಗವನ್ನು ನಿರಾತಂಕವಾಗಿ ಮುಂದುವರೆಸಿತು.

ಸರ್ಕಾರಿ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಮುಖ್ಯವಾಹಿನಿಯಲ್ಲಿ ಕರೆಯುವ ಬೃಹತ್ ಸಮಾಜದ ಎದುರು "ಸೋಲಿನ ಚರಿತ್ರೆಯ ಮೂಟೆ"ಯಾಗಿಸಿದ ಸಮುದಾಯವೊಂದನ್ನು ಅಭಿವೃದ್ಧಿಯ ಪರಿಭಾಷೆಯಡಿಗೆ ಅರ್ಥೈಸುವಲ್ಲಿ ಈ ವಸ್ತುಸ್ಥಿತಿಯನ್ನು ಗಣನೆಗೆತೆಗೆದುಕೊಳ್ಳದೇ ಹೋದುದು ಯೋಜನೆಗಳ ಫಲಿತಗಳು ತಲೆಕೆಳಗಾಗುವಂತಾದುದರ ಮೂಲ ಕಾರಣ ಎನಿಸುತ್ತದೆ. ಮುಖ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕೊರಗರನ್ನು ಅರಿವಿನ ಪರಿಧಿಗೆ ಎಳೆದು ತರಬೇಕೇ? ಅಥವಾ ಅವರ ಅರಿವಿನ ಜಗತ್ತನ್ನು ಜೀವಂತಗೊಳಿಸಬೇಕೇ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದೆ, 'ಈತ ಗಣಪ, ಗಣಪ ಈಶನ ಮಗ' ಎಂಬ ಬಾಯಿಪಾಠದ ಪಠ್ಯವನ್ನು ಉರುಹಚ್ಚಲು ತೊಡಗಿಸಲಾಯಿತು. ಕೊರಗರ ನಾದಜಗತ್ತಿನ ವಿಭಿನ್ನ ತಕ್ಕುಗಳೊಂದಿಗೆ ಕಲಾನೈಪುಣ್ಯತೆಯ ಭಾಗವಾದ ಡೋಲನ್ನು ಅಣಕವಾಗಿ "ಬಪ್ಪನಾಡಿನ ದೋಲು ಗುದ್ದುವ ವ್ಯರ್ಥ ರೂಪಕವಾಗಿಸಿ"ಕೊಂಡ ಮುಖ್ಯವಾಹಿನಿಯ ಒಳಗೆ ಈ ಮಕ್ಕಳು ಗಣಪ ಈಶನನ್ನು ಹುಡುಕುವುದಾದರೂ ಹೇಗೆ? ಸಹಜವಾಗಿಯೇ ತಮ್ಮ ಹೆಬಿಟೈಟ್‌ಗಳಿಂದ ವಂಚಿತರಾದ ಕೊರಗಮಕ್ಕಳಿಗೆ ಶಾಲೆ ಒಂದು ಆಕರ್ಷಣೆಯ ತಾಣ ಇನ್ನೂ ಆಗಿಲ್ಲ. 2007-08ರ ಗಣತಿ ಮೇರೆಗೆ ಪ್ರಾಥಮಿಕ ಶಾಲೆಯಲ್ಲಿರುವ ಒಟ್ಟು ಸಂಖ್ಯೆ 1407.

2008-09 ನೇ ಸಾಲಿನ ಆ ಸಮುದಾಯದ ಮಕ್ಕಳ ಸಂಖ್ಯೆಯಾದ 37% ಕ್ಕೆ ಹೋಲಿಸಿದಲ್ಲಿ ಇದು ತೀರಾ ಕಡಿಮೆಯೇ. ಈ ಸಂಖ್ಯೆಯ ಒಳಗೂ ದೊಡ್ಡ ಪ್ರಮಾಣದಲ್ಲಿ ಮಧ್ಯದಲ್ಲಿಯೇ ಶಾಲೆಬಿಡುವ ಡ್ರಾಪ್‌ಔಟ್ಸ್ ಗಳಿದ್ದಾರೆ. ಶಿಕ್ಷಣದ ಕುರಿತಾದ ಈ ಮಕ್ಕಳ ಒಲವಿನ ಮಾದರಿಯ ಕುರಿತು ನಡೆದ ಸಮೀಕ್ಷೆ (ಕೊರಗ ಸಮುದಾಯದಲ್ಲಿ ಶಿಕ್ಷಣ – ಒಂದು ಅಧ್ಯಯನ) ಯ ಮೇರೆಗೆ ಅರ್ಥವಾಗದ ಪಾಠವನ್ನು ಅಧ್ಯಾಪಕ/ಮಿತ್ರ/ಹೆತ್ತವರು ಯಾರಲ್ಲಿಯೂ ಕೇಳದವರ ಸಂಖ್ಯೆ 62%. ಮತ್ತು ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಲ್ಲಿಯ ಅವರ ಸರಾಸರಿ ಯಶಸ್ಸು ಕ್ರಮವಾಗಿ 5%, 4% ಮತ್ತು 2%. ಸಮುದಾಯದ ಅಕ್ಷರಸ್ಥರನ್ನು ಗಣಿಸಲು ಮಾನವಾಭಿವೃದ್ಧಿ ಸೂಚ್ಯಾಂಕಕ್ಕಾಗಿ ನಡೆದ ಸಮೀಕ್ಷೆಯಂತೆ 38% ಮಹಿಳೆಯರು ಮತ್ತು 41% ಪುರುಷರು ಅಕ್ಷರ ಬಲ್ಲವರಾಗಿದ್ದಾರೆ. ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆಯೂ ಸಾಕ್ಷರಜಿಲ್ಲೆ ಎಂಬ ಘೋಷಣೆ ನಡುವೆಯೂ ಪರಿಸ್ಥಿತಿ ಆಶಾದಾಯಕವಾಗಿಲ್ಲ.

ಆಹಾರಕ್ಕೆ ಸಂಬಂಧಿಸಿದಂತೆ ಸಮುದಾಯ ಅಪೌಷ್ಠಿಕತೆಯಿಂದ ಬಳಲುತ್ತಿದೆ. ಅರೆಉದ್ಯೋಗ, ನಿರುದ್ಯೋಗದಿಂದಾಗಿ ದುಡಿಮೆಯ ಫಲಿತಗಳು ಶೂನ್ಯವಾಗುತ್ತಿದ್ದು, ಕೊಳ್ಳುವ ಸಾಮರ್ಥ್ಯ ಕ್ಷೀಣಿಸಿದ ವರ್ಗವಿದು. ಅಜಲಿನ ಆಚರಣೆಯ ಭಾಗವಾಗಿ ಉಗುರು, ಕೂದಲು ಬೆರೆಸಿದ ಅಪಾಯಕಾರಿ ಆಹಾರ ಸೇವನೆಯನ್ನು ಮಾಡುತ್ತಿದ್ದುದಲ್ಲದೆ, ಸಮಾರಂಭಗಳಲ್ಲಿ ಉಂಡೆಸೆದ ಎಂಜಲೆಲೆಗಳಿಂದ ಆಹಾರವನ್ನು ಸಂಗ್ರಹಿಸಿ ಒಣಗಿಸಿ ಪುನಃ ಬೇಯಿಸಿ ತಿನ್ನುವ ಪರಿಪಾಠವನ್ನು ಅನುಸರಿಸುತ್ತಿದ್ದುದರಿಂದ ಆಹಾರ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಪಾರಂಪರಿಕವಾಗಿ ಒಳ್ಳೆಯ ಇತಿಹಾಸವನ್ನು ಕಾಣುವುದು ಕಷ್ಟವಾಗಿದೆ.

ಮಹಮ್ಮದ್ ಪೀರ್ ವರದಿಯಲ್ಲಿ ಉಲ್ಲೇಖಿತವಾದಂತೆ ಶೇ 44.7% ರಷ್ಟು ಜನ ಉಂಡೆಸೆದ ಎಲೆಗಳಿಂದ ಆಹಾರ ಸಂಗ್ರಹಿಸುತ್ತಿದ್ದರು. ಈ ಮಾದರಿಯ ಸಂಗ್ರಹಣೆ ಇಂದಿನ ದಿನಗಳಲ್ಲಿ ಕಡಿಮೆಯಾಗುತ್ತಿದ್ದರೂ, ಆಹಾರದ ಪೌಷ್ಠಿಕತೆಗೆ ಸಂಬಂಧಿಸಿದಂತೆ ಉಳಿದ ಸಮುದಾಯಗಳಿಗಿಂತ ಕೊರಗರು ತೀರಾ ಹಿಂದುಳಿದಿರುವುದನ್ನು ಗುರುತಿಸುತ್ತೇವೆ.

ಲಿಂಗ ಸಂಬಂಧಿ ವಿಚಾರಗಳಿಗೆ ಸಂಬಂಧಿಸಿದಂತೆ ಮಾತೃ ಪ್ರಧಾನ ಸಮಾಜವಾಗಿದ್ದೂ ಹೆಣ್ಣುಮಕ್ಕಳ ದುಡಿಮೆಯನ್ನೇ ಸಂಸಾರ ಹೆಚ್ಚು ನೆಚ್ಚಿಕೊಂಡಿರುವುದನ್ನು ಗುರುತಿಸುತ್ತೇವೆ. ಮಹಮ್ಮದ್ ಪೀರ್ ವರದಿಯನ್ವಯ ಮಹಿಳೆಯರು ತಮ್ಮ ವಯಸ್ಸಿಗಿಂತ 15-20 ವರ್ಷ ಹೆಚ್ಚು ವಯಸ್ಸಿನ ಮುದುಕಿಯರಂತೆ ಕಾಣುತ್ತಾರೆ. ಶೇಕಡಾ 59ರಷ್ಟು ಹೆಣ್ಣು ಮಕ್ಕಳು ಮದುವೆಯ ವಯಸ್ಸು 18-20 ವರ್ಷವಾದರೆ 36% ಹೆಣ್ಣು ಮಕ್ಕಳು 21-22ರ ವಯೋಮಾನದಲ್ಲಿ ಮದುವೆಯಾಗುತ್ತಾರೆ. ರಾಜಕೀಯ ಕ್ಷೇತ್ರದ ಪಾಲ್ಗೊಳ್ಳುವಿಕೆಯಲ್ಲಿ ಮೀಸಲಾತಿಯ ಕಾರಣದಿಂದಾಗಿ ಇತರ ಪರಿಶಿಷ್ಟ ಪಂಗಡಗಳು ಇಲ್ಲದಲ್ಲಿ ಅದರ ಅವಕಾಶಗಳು ಮಹಿಳೆಯರಿಗೇ ಸಿಕ್ಕಿದೆ.

> **ಸರ್ಕಾರಿ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಮುಖ್ಯವಾಹಿನಿಯಲ್ಲಿ ಕರೆಯುವ ಬೃಹತ್ ಸಮಾಜದ ಎದುರು "ಸೋಲಿನ ಚರಿತ್ರೆಯಮೂಟೆ"ಯಾಗಿಸಿದ ಸಮುದಾಯವೊಂದನ್ನು ಅಭಿವೃದ್ಧಿಯ ಪರಿಭಾಷೆಯಡಿಗೆ ಅರ್ಥೈಸುವಲ್ಲಿ ಈ ವಸ್ತುಸ್ಥಿತಿಯನ್ನು ಗಣನೆಗೆತೆಗೆದುಕೊಳ್ಳದೇ ಹೋದುದು ಯೋಜನೆಗಳ ಫಲಿತಗಳು ತಲೆಕೆಳಗಾಗುವಂತಾದುದರ ಮೂಲ ಕಾರಣ ಎನಿಸುತ್ತದೆ. ಮುಖ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕೊರಗರನ್ನು ಅರಿವಿನ ಪರಿಧಿಗೆ ಎಳೆದು ತರಬೇಕೇ? ಅಥವಾ ಅವರ ಅರಿವಿನ ಜಗತ್ತನ್ನು ಜೀವಂತಗೊಳಿಸಬೇಕೇ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದೆ, 'ಈತ ಗಣಪ, ಗಣಪ ಈಶನ ಮಗ' ಎಂಬ ಬಾಯಿಪಾಠದ ಪಠ್ಯವನ್ನು ಉರುಹಚ್ಚಲು ತೊಡಗಿಸಲಾಯಿತು.**

ಜೀವನಮಟ್ಟವನ್ನು ಗಮನಿಸಿದಲ್ಲಿ ಕೊರಗರದ್ದು ಅತ್ಯಂತ ಕಡಿಮೆ ಆದಾಯದ ಗುಂಪು. ಹೆಬಿಟೈಟ್‌ಗಳಿಂದ ಸ್ಥಳಾಂತರಗೊಂಡಿರುವುದರಿಂದಾಗಿ ಪಕ್ಕಾಮನೆಗಳು ಶೇ. 94ರಷ್ಟು ಕಂಡುಬರುತ್ತಿದೆಯಾದರೂ ಶೇ 63ರಷ್ಟು ಮನೆಗಳಲ್ಲಿ ಶೌಚಾಲಯಗಳಿಲ್ಲ.ಮತ್ತು ಶೇ.35ರಷ್ಟು ಮನೆಗಳಲ್ಲಿ 2ಕ್ಕಿಂತ ಕಡಿಮೆ ಕೋಣೆಗಳಿವೆ. ಸ್ವಂತ ಭೂಮಿ ಹೊಂದಿರುವವರ ಸಂಖ್ಯೆ 7% ಮಾತ್ರ. ಸ್ವಂತವಲ್ಲದ ಭೂಮಿ ಹೊಂದಿರುವವರ ಸಂಖ್ಯೆ 29% ಮತ್ತು ಭೂಮಿಯ ಮೂಲದ ಜ್ಞಾನವೇ ಇರದವರು 64%. ಸರಕಾರದಿಂದ ನೀಡಲಾದ ಮನೆಗಳಾದ ಕಾರಣ 72% ಮನೆಗಳಲ್ಲಿ ಭಾಗ್ಯ ಜ್ಯೋತಿ ವಿದ್ಯುತ್ ಇದೆ. 28% ಮನೆಗಳು ಇನ್ನೂ ಚಿಮಣಿ ಬೆಳಕಿನಲ್ಲಿವೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಬೀಳುಬುಟ್ಟಿ 75%, ಕೃಷಿ ಕಾರ್ಮಿಕರಾಗಿ 10% ಸರ್ಕಾರಿ ಕಛೇರಿಗಳಲ್ಲಿ "ಡಿ." ದರ್ಜೆ ನೌಕರರಾಗಿ 2% ಕೆಲಸ ನಿರ್ವಹಿಸುತ್ತಿದ್ದು, ಅಧಿಕ ಸಂಖ್ಯೆಯಲ್ಲಿ ಸ್ವಚ್ಛತಾಕೆಲಸಗಳಿಗೆ ಬಳಕೆಗೊಳ್ಳುತ್ತಿದ್ದಾರೆ. ಇಡಿಯ ಸಮುದಾಯಕ್ಕೆ ಇಂಜಿನಿಯರಿಂಗ್ ಪಡೆದ ಏಕೈಕ ವ್ಯಕ್ತಿ ಇದ್ದು, ಒಬ್ಬರು ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ್ದಾರೆ. ಮತ್ತು ಒಂದಿಬ್ಬರು ವಕೀಲರುಗಳಿದ್ದಾರೆ. ಮತ್ತುಳಿದಂತೆ ಕೆಲವೊಂದಿಷ್ಟು ಮಂದಿ ಶಿಕ್ಷಣ ಪದವಿ ಪಡೆದ ಶಿಕ್ಷಕರಿದ್ದಾರೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಭ್ಯ ಮಾಹಿತಿಯ ಮೇರೆಗೆ ಕೃಷಿಕರಾಗಿರುವವರು ಒಬ್ಬರೋ ಇಬ್ಬರೋ ಇದ್ದಾರೆ. ಆರೋಗ್ಯ ಸಂಬಂಧಿ ವಿಚಾರಗಳಿಗೆ ಸಂಬಂಧಿಸಿದಂತೆ ಅಪೌಷ್ಠಿಕತೆಯಿಂದ ಬಳಲುತ್ತಿರುವ ಕಾರಣದಿಂದಾಗಿ 2009 – 10ನೇ ಸಾಲಿನ ಮಾಹಿತಿಯಂತೆ ಶೇ. 80ರಷ್ಟು ಮಕ್ಕಳು ಮತ್ತು ಮಹಿಳೆಯರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಹಾಗೆಯೇ ಅಧಿಕ ಶಿಶುಮರಣದ ದಾಖಲೆಗಳೂ ಇವರಲ್ಲಿದೆ. 2004-05ರಲ್ಲಿ ಸರಾಸರಿ 11% (400ಕ್ಕೆ 43) ರಷ್ಟು ಶಿಶುಮರಣ ದಾಖಲುಗೊಂಡಿರುವುದನ್ನು ಕಾಣುತ್ತೇವೆ. ಶೇ95ರಷ್ಟು ಮದ್ಯಪಾನಿಗಳೂ, 80 ಶೇ. ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ತಂಬಾಕು ಸಹಿತವಾಗಿ ವೀಳ್ಯದೆಲೆ ಜಗಿಯುವವರೂ ಕಂಡುಬಂದಿರುವುದಾಗಿ ಗಂಭೀರ ಆರೋಗ್ಯ ಸಮಸ್ಯೆಗಳಿದ್ದು, ಸರಾಸರಿ ಜೀವಿತಾವಧಿ 40 ರಿಂದ 50 ವರ್ಷದ ಒಳಗಡೆ ಇದೆಯೆಂಬಂತೆ ಅಂದಾಜು ಮಾಡಲಾಗಿದೆ. ಆರೋಗ್ಯ ಸಮಸ್ಯೆಗಳಿಗೆ ವೈದ್ಯರನ್ನು ಸಂಪರ್ಕಿಸುವುದಕ್ಕಿಂತ ಅಧಿಕವಾಗಿ ಜ್ಯೋತಿಷ್ಯ, ಕೊಲೆ, ಭೂತಗಳನ್ನು ನಂಬುತ್ತಿರುವುದರಿಂದಾಗಿ ಸಕಾಲಿಕ ಚಿಕಿತ್ಸೆಗೆ ಒಳಪಡುವುದರಲ್ಲಿಯೂ ವಿಳಂಬವನ್ನನುಭವಿಸುತ್ತಿದ್ದಾರೆ. ನೈರ್ಮಲ್ಯದ ಅಭಾವದಿಂದಾಗಿ ಮತ್ತು ಅದಕ್ಕೆ ಪೂರಕವಾದ ಇತರ ಕಾರಣಗಳಿಂದಾಗಿ ಅನೇಕ ಸಾಂಕ್ರಾಮಿಕ ಮತ್ತು ಮಾರಕ ರೋಗಗಳಿಗೆ ಬಹುಬೇಗ ಬಲಿಯಾಗುವ ಅಪಾಯವೂ ಇವರಲ್ಲಿ ಹೆಚ್ಚಾಗಿದೆ.

ಕೊರಗರು ಮತ್ತು ರಾಜಕೀಯ ಕ್ಷೇತ್ರ ಹಾಗೂ ಸರ್ಕಾರಿ ಅನುದಾನ

ಜನಸಂಖ್ಯೆಯ ತೀವ್ರ ಇಳಿಕೆಯ ನಡುವೆಯೂ ಕರಾವಳಿಯ ಬುಡಕಟ್ಟು ಸಮುದಾಯದ ಒಟ್ಟು ಸಂಖ್ಯೆ

> **ಜನಸಂಖ್ಯೆಯ ತೀವ್ರ ಇಳಿಕೆಯ ನಡುವೆಯೂ ಕರಾವಳಿಯ ಬುಡಕಟ್ಟು ಸಮುದಾಯದ ಒಟ್ಟು ಸಂಖ್ಯೆಯಲ್ಲಿ 28% ಜನಸಂಖ್ಯೆಯನ್ನು ಪ್ರತಿನಿಧಿಸುವ ಕೊರಗ ಸಮುದಾಯಕ್ಕೆ ಪರಿಶಿಷ್ಟ ಪಂಗಡದಡಿಗೆ ರಾಜಕೀಯ ಪ್ರತಿನಿಧಿತ್ವದ ಅವಕಾಶವಿದೆಯಾದರೂ, ವಿಧಾನಸಭೆ, ಜಿಲ್ಲಾಪಂಚಾಯತ್ ಹಾಗೂ ತಾಲ್ಲೂಕ್ ಪಂಚಾಯತ್‌ನಲ್ಲಿ ಎಸ್.ಟಿ ಮೀಲಾತಿಯಡಿಗೆ ಒಬ್ಬನೇ ಒಬ್ಬ ಸದಸ್ಯನಿಲ್ಲವಾಗಿದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಎಲ್ಲೆಲ್ಲಿ ಎಸ್.ಟಿ. ಯಾಗಿ ಗುರುತಿಸಲ್ಪಡುವ ಮರಾಠಿ ನಾಯ್ಕರು ಇಲ್ಲವೋ, ಅಲ್ಲಿ ಮಾತ್ರ ಕೊರಗರಿಗೆ, ಅದೂ ಮಹಿಳೆಯರಿಗೆ ಗ್ರಾಮಪಂಚಾಯತ್‌ಗೆ ಸ್ಪರ್ಧಿಸಲು ಅವಕಾಶ ಸಿಕ್ಕಿದೆ. ಉಡುಪಿ ಜಿಲ್ಲೆಯ ಶಿರ್ವ, ನಲ್ಲೂರು ಪಂಚಾಯತ್‌ಗಳಲ್ಲಿ ಕೊರಗ ಮಹಿಳಾ ಅಧ್ಯಕ್ಷರಿದ್ದಾರೆ. ಈ ಅವಕಾಶ ಬಿಟ್ಟರೆ ಇಡಿಯಾಗಿ ಕೊರಗ ಸಮುದಾಯ, ಅದರಲ್ಲಿಯೂ ಕೊರಗ ಪುರುಷರಿಗೆ ರಾಜಕೀಯ ಪ್ರವೇಶಾವಕಾಶವೇ ಇಲ್ಲವಾಗಿದೆ.**

ಯಲ್ಲಿ 28% ಜನಸಂಖ್ಯೆಯನ್ನು ಪ್ರತಿನಿಧಿಸುವ ಕೊರಗ ಸಮುದಯಕ್ಕೆ ಪರಿಶಿಷ್ಟ ಪಂಗಡದಡಿಗೆ ರಾಜಕೀಯ ಪ್ರತಿನಿಧಿತ್ವದ ಅವಕಾಶವಿದೆಯಾದರೂ, ವಿಧಾನಸಭೆ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕ್ ಪಂಚಾಯತ್‌ನಲ್ಲಿ ಎಸ್.ಟಿ ಮೀಲಾತಿಯಡಿಗೆ ಒಬ್ಬನೇ ಒಬ್ಬ ಸದಸ್ಯನಿಲ್ಲವಾಗಿದೆ. ಗ್ರಾಮ ಪಂಚಾಯತ್ ಮಟ್ಟದಲ್ಲಿ ಎಲ್ಲೆಲ್ಲಿ ಎಸ್.ಟಿ. ಯಾಗಿ ಗುರುತಿಸಲ್ಪಡುವ ಮರಾಠಿ ನಾಯ್ಕರು ಇಲ್ಲವೋ, ಅಲ್ಲಿ ಮಾತ್ರ ಕೊರಗರಿಗೆ, ಅದೂ ಮಹಿಳೆಯರಿಗೆ ಗ್ರಾಮ ಪಂಚಾಯತ್‌ಗೆ ಸ್ಪರ್ಧಿಸಲು ಅವಕಾಶ ಸಿಕ್ಕಿದೆ. ಉಡುಪಿ ಜಿಲ್ಲೆಯ ಶಿರ್ವ(ಉಡುಪಿ ತಾ.), ನಲ್ಲೂರು (ಕಾರ್ಕಳ ತಾ.) ಪಂಚಾಯತ್‌ಗಳಲ್ಲಿ ಕೊರಗ ಮಹಿಳಾ ಅಧ್ಯಕ್ಷರಿದ್ದಾರೆ. ಈ ಅವಕಾಶ ಬಿಟ್ಟರೆ ಇಡಿಯಾಗಿ ಕೊರಗ ಸಮುದಾಯ, ಅದರಲ್ಲಿಯೂ ಕೊರಗ ಪುರುಷರಿಗೆ ರಾಜಕೀಯ ಪ್ರವೇಶಾವಕಾಶವೇ ಇಲ್ಲವಾಗಿದೆ. ಬುಡಕಟ್ಟುವಿಗಾಗಿ ನೀಡಲಾದ ರಾಜಕೀಯ ಪಾಲ್ಗೊಳ್ಳುವಿಕೆಯ ಅವಕಾಶವನ್ನು ಸಂಖ್ಯಾಧಾರಿತವಾಗಿಯಾದರೂ ಪಡೆಯಲಾರದ ಸ್ಥಿತಿಯಲ್ಲಿ ಕೊರಗ ಸಮುದಾಯವಿದೆ. ಸಿಕ್ಕಿರುವ ರಾಜಕೀಯ ಪ್ರತಿನಿಧಿತ್ವವೂ ಊಳಿಗಮಾನ್ಯ ದೊರೆಗಳ ನಿರ್ದೇಶನದಡಿಗೆ ಕೆಲಸಮಾಡಬೇಕಾದ ರಾಜಕೀಯ ಭಿಕ್ಷೆಯಂತೆ ಲಭ್ಯವಾಗುತ್ತಿದೆ ಎಂಬುದು ಸತ್ಯಕ್ಕೆ ಹತ್ತಿರವಾದ ಮಾತು.

ಪರಿಶಿಷ್ಟ ಪಂಗಡಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕವಾಗಿ ಅನುದಾನ ಮಂಜೂರು ಮಾಡುತ್ತಿವೆ. ಅಲ್ಲದೆ ಪಂಚಾಯತ್ ತನ್ನ ಆದಾಯದ 22.5% ಭಾಗವನ್ನು ಈ ದಿಸೆಯಲ್ಲಿ ವ್ಯಯಿಸಬೇಕಾಗಿದೆ. ಮತ್ತು ಕೇಂದ್ರ–ರಾಜ್ಯ ಅನುದಾನದ 18–20 ಅಂಶ ಈ ಭಾಗದ ವ್ಯಯಕ್ಕಾಗಿಯೇ ನಿಗಧಿಗೊಂಡಿರುತ್ತದೆ. ಆದರೆ ಇದರ ಬಹುಭಾಗವನ್ನು ಈ ಗುಂಪಿನ ಬಲಾಢ್ಯ ಪಂಗಡ ತನ್ನ ಕಡೆಗೆ ಹರಿಯಿಸಿಕೊಳ್ಳುವುದರಿಂದ ಕೊರಗರಿಗೆ ದಕ್ಕಬೇಕಾದ ನ್ಯಾಯಯುತ ಪಾಲು ದಕ್ಕುತ್ತಿಲ್ಲ. ಅಲ್ಲದೇ ಹೀಗೆ ಬರುವ ಬಹುಭಾಗದ ಹಣ ಕಾಲಬದ್ಧವಾಗಿ ಖರ್ಚು ಮಾಡಬೇಕಾದವೂ ಮತ್ತು ಭೂಕೇಂದ್ರಿತವಾಗಿರುವುದರಿಂದ ಹಾಗೂ ಸರ್ಕಾರಿ ಯಂತ್ರಕ್ಕೆ ಪ್ರಗತಿ ವರದಿ ನೀಡಲು ಸುಲಭವೆಂಬ ಕಾರಣಕ್ಕಾಗಿ ಕೊರಗರಲ್ಲದ ಬುಡಕಟ್ಟುಗಳಿಗೆ ಹೆಚ್ಚು ಸಂದಾಯವಾಗುತ್ತದೆ.

ಅನುದಾನ ವಿನಿಯೋಗದಲ್ಲಿ ಕೊರಗರು ಪಡೆಯುತ್ತಿರುವ ಪಾಲಿನ ಮಾದರಿಯನ್ನು ಅರ್ಥೈಸಿಕೊಳ್ಳಲು 2008 – 09 ನೇ ಸಾಲಿಗೆ ಕರ್ನಾಟಕ ರಾಜ್ಯ ಸರ್ಕಾರ ಉಡುಪಿ ಜಿಲ್ಲೆ ITDP ಗೆ ಮಂಜೂರು ಮಾಡಿದ 86.13 ಲಕ್ಷ ರೂಪಾಯಿ ಅನುದಾನದ ವಿಲೇವಾರಿಯನ್ನು ಗಮನಿಸಬಹುದು. ಈ ಮೊತ್ತದಲ್ಲಿ ಜಿಲ್ಲಾ ಪಂಚಾಯತ್ ವಿಶೇಷ ಆಸಕ್ತಿ ತಳೆದು ಕೊರಗಮಕ್ಕಳ ವಿದ್ಯಾರ್ಥಿವೇತನಕ್ಕೆಂದು ಮೀಸಲಿರಿಸಿ ನೀಡಿದ 10.18 ಲಕ್ಷ ರೂಪಾಯಿ ಹೊರತುಪಡಿಸಿ, ಮಿಕ್ಕ 75.95 ಲಕ್ಷ ರೂ.ಗಳಲ್ಲಿ 90% ಕ್ಕಿಂತಲೂ ಹೆಚ್ಚಿನ ಪಾಲು ಪ.ಪಂ. ದ ಬಲಾಢ್ಯ ಪಂಗಡದ ಪಾಲಾಗಿದೆ. ಇದಲ್ಲದೆ ಟಿಪಿಜಿಯಡಿಗೆ ಬರುವ ಅನುದಾನವನ್ನು ಕಾಲಮಿತಿಯೊಳಗೆ ಬಳಸಲೇ ಬೇಕಾದ ಒತ್ತಡಯಿಲ್ಲದಿರುವುದರಿಂದಾಗಿ ಅದನ್ನು ಮುಂದೆ ಹಾಕಿಕೊಳ್ಳುತ್ತ ಬರಲಾಗುತ್ತಿದೆ.

ಇದೇ ಸಂದರ್ಭದಲ್ಲಿ ಈ ಅನುದಾನಗಳನ್ನು ಹೆಬಿಟೈಟ್‌ಗಳ ಪರಿಕಲ್ಪನೆಯಿಲ್ಲದೆ ವ್ಯಯಿಸುತ್ತಿರುವುದು, ಅಭಿವೃದ್ಧಿಯನ್ನು ಮಾನವಾಭಿವೃದ್ಧಿಗೆ ಹೊರತಾಗಿ ಲೆಕ್ಕ ಹಾಕುತ್ತಿರುವುದು ಇವುಗಳಿಂದಾಗಿ ಮತ್ತಷ್ಟು ಸಮಸ್ಯೆಗಳಾಗುತ್ತಿವೆ. ಈ ದಿಸೆಯಲ್ಲಿ ವೆರಿಯರ್ ಎಲ್ವಿನ್ ಹೇಳುವ ಬುಡಕಟ್ಟುಗಳ ಅಸ್ಮಿತೆಯನ್ನು ಉಳಿಸಿ ಅಭಿವೃದ್ಧಿ ಪಡಿಸುವ ಆಲೋಚನೆಗೆ ಈಗೀಗ ಗಮನಲಭ್ಯವಾಗುತ್ತಿದ್ದು, 2006 ರಲ್ಲಿ ಕೇಂದ್ರ ಸರ್ಕಾರದ ನ್ಯೂಟ್ರೈಬಲ್ ಪಾಲಿಸಿ ಅನ್ವಯ ಬುಡಕಟ್ಟುಗಳ ಹೆಬಿಟೈಟ್‌ಗಳನ್ನು ಉಳಿಸುವ (conservation) ಯೋಜನೆಗೆ ಒತ್ತು ನೀಡಲಾಗಿದೆ. ಇದರನ್ವಯ 11ನೇ ಪಂಚವಾರ್ಷಿಕ ಯೋಜನೆಯಡಿಗೆ ಉಡುಪಿ ಜಿಲ್ಲೆಯ ಪಿಟಿಜಿಗಾಗಿ ಆರು ಕೋಟಿ ರೂ.ಗಳು ಮಂಜೂರಾಗಿದ್ದು, ಈ ಬುಡಕಟ್ಟಿನ ಹೆಬಿಟೈಟ್‌ಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಕಾರ್ಯರೂಪಕ್ಕೆ ಬರಬೇಕಿದೆ. ಆದರೆ ಈಗಾಗಲೇ ಲೇಖನದಲ್ಲಿ ದಾಖಲಿಸಿರುವಂತೆ ತಮ್ಮ ಮೂಲನೆಲೆಗಳಿಂದ ಎತ್ತಂಗಡಿಗೆ ಒಳಗಾಗಿ ತಮ್ಮ ಕಲೆ, ಕೌಶಲ್ಯ, ತಾಂತ್ರಿಕತೆಯ ಸೃಜನಾತ್ಮಕ ಪ್ರೇರಣೆಯ ಆವರಣವನ್ನು ಕಳೆದುಕೊಂಡು ಸರ್ಕಾರ ನೀಡಿರುವ ಪುನರ್ವಸತಿಯಂತಹ 5 ಸೆಂಟ್ಸ್ ಭೂಮಿಗೆ ಸ್ಥಳಾಂತರ ಗೊಂಡಿರುವ ಕೊರಗರ ಹೆಬಿಟೈಟ್‌ಗಳನ್ನು ಅಭಿವೃದ್ಧಿಪಡಿಸುವುದು ಹೇಗೆ ಎಂಬ ಪ್ರಶ್ನೆ ಉಳಿದುಬಿಡುತ್ತದೆ.

ಸರ್ಕಾರ ಯೋಜ ನೆಗಳನ್ನು ಮಾಡುತ್ತದೆ, ಅವು ಚೆನ್ನಾಗಿಯೇ ಇರುತ್ತವೆ. ಆದರೆ ಧಾರಣಾ ಸಾಮರ್ಥ್ಯದ ಅಧ್ಯಯನವೇ ಸರಿಯಾಗಿ ನಡೆಯದೇ ಅನುದಾನ ನೀಡಿ ಅಭಿವೃದ್ಧಿಯ ಗಡಿಯಾರದ ಚಲನೆಗಾಗಿ ಕಾಯಲಾಗುತ್ತಿರುವುದು ವಿಪರ್ಯಾಸ. ಇಲ್ಲೆಲ್ಲಾ ಸರ್ಕಾರಿ ಯಂತ್ರಗಳು ಅಭಿವೃದ್ಧಿಯನ್ನು ಆರ್ಥಿಕಾಭಿವೃದ್ಧಿಯೆಂದೇ ಗಣಿಸುತ್ತವೆ. ಲೆಕ್ಕಾಚಾರದ ಫಲಿತಾಂಶ ಬಾರದೇ ಹೋದಾಗ ಸಮುದಾಯವೇ ಸ್ಪಂದಿಸುತ್ತಿಲ್ಲ ಎಂಬ ಷರಾ ಬರೆಯುವ ಮೂಲಕ ಮೌಲ್ಯಮಾಪನ ನಡೆಸಿ ಬಿಡುತ್ತಾರೆ.

ಪ್ರಜಾಪ್ರಭುತ್ವದ ಮುಖ್ಯ ತತ್ವವಾದ ಎಲ್ಲರ ಸಮಾನಾಭಿವೃದ್ಧಿಯ ಕಲ್ಪನೆಗೆ ಕೊರಗರ ಈ ಹಿಂದುಳಿದಿರುವಿಕೆ ಪೂರ್ಣ ವಿರುದ್ಧವಾದುದು. ಪ್ರಜಾಪ್ರಭುತ್ವ ದೇಶದಲ್ಲಿ ವ್ಯಕ್ತಿಯೊಬ್ಬನು ಅರಿವಿನಿಂದ ಮಾತ್ರ ಪ್ರಜೆ ಮತ್ತು ಪ್ರಭುವಾಗಬಹುದು. ಸಮುದಾಯದ ಅಭಿವೃದ್ಧಿಗೆ ಮುಖ್ಯವಾದುದು ಶಿಕ್ಷಣದ ಪ್ರಸರಣ. ಆದರೆ ಈ ಶಿಕ್ಷಣ ಹೇಗಿರಬೇಕು ಎಂಬುದನ್ನು ಭೌತಿಕವಸ್ತುಸ್ಥಿತಿಯ ನೆಲೆಯಲ್ಲಿ ನಿರ್ಧರಿಸಿಕೊಳ್ಳಬೇಕು. ಎಲ್ಲರ ನಡುವೆ ನಿಲ್ಲಲಾರದ ಸ್ಥಿತಿಯಲ್ಲಿರುವ ಸಮುದಾಯಕ್ಕೆ ಆ ಎಲ್ಲರ ಮಾದರಿಯನ್ನು ಎದುರಿಗೆ ಹಿಡಿದು ಮತ್ತಷ್ಟು ಹಿಂದಕ್ಕೆ ಓಡಿಸುವುದಕ್ಕಿಂತ ಭಿನ್ನವಾಗಿ ಶಿಕ್ಷಣವನ್ನು ನಿರ್ವಚಿಸಿಕೊಳ್ಳಬೇಕಾಗಿದೆ. ಸಮುದಾಯದಲ್ಲಿ ಸಂಪ್ರದಾಯವಾಗಿ ಹರಿದುಬಂದ ಕಲೆ, ವೃತ್ತಿಕೌಶಲ್ಯಗಳು ಇವರಲ್ಲಿರುವ ಶೈಕ್ಷಣಿಕ ಅಭಿವೃದ್ಧಿಯ ಸಾಧ್ಯತೆಗಳನ್ನು ತಿಳಿಸುತ್ತವೆ. ಶಿಕ್ಷಣದ ಕೊರತೆಯನ್ನು ಇಲ್ಲವಾಗಿಸಿ ಸಮುದಾಯದ ಮಾನವಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವ ಮೂಲಕ ಸರ್ಕಾರಿ ಯೋಜನೆಗಳನ್ನು ಹಕ್ಕುಪ್ರತಿಪಾದನೆಯ ಮಾದರಿಯಲ್ಲಿ ಪಡೆಯುವಂತಾಗಬೇಕು.

ಡಾ. ಮಹಮ್ಮದ್‌ಪೀರ್ ಅಭಿಪ್ರಾಯ ಪಡುವಂತೆ, "The development initiatives starting from basic socio - cultural perspective would be more appropriate to them. In short self-realization, self-organization, motivation and the effective participation become the essential ingredients of the development plan rather than giving assets at a stroke which may not be productively utilized at all".

ಒಟ್ಟಂದದಲ್ಲಿ ಪ್ರಜಾಪ್ರಭುತ್ವದ ಆಶಯಗಳು ಈಡೇರಿಕೆಯಾಗಿ ತಾತ್ವಿಕ ಹಾಗೂ ಪ್ರಾಯೋಗಿಕ ಆಯಾಮಗಳಲ್ಲಿ ಯಶಸ್ವಿ ಮತ್ತು ಆರೋಗ್ಯಕರ ಜನಪ್ರಭುತ್ವ ಎನಿಸಬೇಕಾದರೆ, ಜನರನ್ನು ಅಭಿವೃದ್ಧಿಯ ಧಾತುವಾಗಿ ಸ್ವೀಕರಿಸಿಕೊಂಡು ಮುನ್ನಡೆಯಬೇಕು. ಸಹಭಾಗಿತ್ವದ, ಒಳಗೊಳ್ಳುವ ಮಾನವಾಭಿವೃದ್ಧಿಯಲ್ಲಿ ಬಹಳ ಮುಖ್ಯವಾದುದು ಸಮುದಾಯವೊಂದರಲ್ಲಿಯ ಮಾನವಸಂಪನ್ಮೂಲದ ಉದ್ದೀಪನ. ಅರಿವಿನ ಬೆಳಕಿನಲ್ಲಿ ಸ್ವಪ್ರಚೋದನೆ ಹೊಂದುವಂತೆ ಅಂಚಿನ ಸಮುದಾಯಗಳ ಪ್ರತ್ಯೇಕಿತ ಅವಸ್ಥೆಯನ್ನು ದೂರಮಾಡಿ, ಅಲ್ಲಿನ ಲಿಂಗ ತಾರತಮ್ಯ, ಅಪೌಷ್ಟಿಕತೆ, ಭಾಗವಹಿಸದಿರುವಿಕೆ, ಜೀವನಮಟ್ಟ, ಶಿಕ್ಷಣಮಟ್ಟ ಇತ್ಯಾದಿಗಳಲ್ಲಿ ಸುಧಾರಣೆ ತಂದು, ಉಳಿದ ಸಮುದಾಯಗಳಂತೆ ದೇಶದ ಬೆಳವಣಿಗೆಯ ಫಲವನ್ನು ಸಮಾನತೆಯ ಆಧಾರದಲ್ಲಿ ಹಕ್ಕಾಗಿ, ಸ್ವತಂತ್ರವಾಗಿ ನಿರ್ಭೀತಿಯಿಂದ ಅನುಭವಿಸುವ ಅವಕಾಶ ದೊರೆಯುವಂತಾಗುವುದು ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಎನಿಸುತ್ತದೆ.

ಯಾವುದೇ ಅಭಿವೃದ್ಧಿ ಜನಸಮುದಾಯದ ಪಾಲಿಗೆ ಭಿಕ್ಷೆಯಂತಿರಬಾರದು. ಹಾಗೆಯೇ ಯಾವುದೇ ಒಂದು ಸಮುದಾಯ ಕಾಲಾಂತರದಲ್ಲಿ ಶೋಷಣೆಯೊಂದಿಗೆ ಬದುಕಿ ದಮನಿಸಲ್ಪಟ್ಟ ಜನಾಂಗವಾಗಿಯೇ ಗುರುತಿಸಲ್ಪಡು

ವುದು ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದುದು ಮತ್ತು ಅದು ದೇಶವೊಂದರ ಚರಿತ್ರೆಯ ಕಪ್ಪು ಚುಕ್ಕೆಯೇ ಸರಿ. ಈ ಹಿನ್ನಲೆಯಲ್ಲಿ ಮುಂದುವರಿದ ಜಾತಿ, ವರ್ಗಗಳಿಗೆ ಹೋಲಿಸಿದಲ್ಲಿ ಬಾಳೇ(ಬದುಕೇ) ಒಂದು ಶಿಕ್ಷೆಯಾಗಿರುವ ಹಿಂದುಳಿದ ಜಾತಿ, ವರ್ಗಗಳು ಆ ಶಿಕ್ಷೆಯಿಂದ ಹೊರ ಬರುವಂತೆ ಮಾಡುವುದೇ ಅಭಿವೃದ್ಧಿ / ಬದಲಾವಣೆಯ ಮೂಲ ಆಶಯ. 'ಕಾಡು' ಊರಿಗೆ ಬರುವಂತೆ ಮಾಡುವುದು ಮತ್ತು ಊರಲ್ಲಿರುವ 'ಕಾಡು' ಕರಗುವಂತೆ ಮಾಡುವುದು ಪರಿವರ್ತನಶೀಲ ಸಂಸ್ಕೃತಿಯ ಪ್ರಧಾನ ಒತ್ತಾಸೆಯಾಗಬೇಕು.

ಟಿಪ್ಪಣಿ:

ಕೊರಗರ ಡೋಲಿನ ಜೊತೆಗೆ ಬೆಸೆದುಕೊಂಡಿರುವ ಜನಪ್ರಿಯ ಕಥನವೊಂದು ಜಲಪ್ರಳಯದ ಕಾಲದಲ್ಲಿಯೇ ಕೊರಗರ ಮತ್ತು ಡೋಲಿನ ಇರುವಿಕೆಯನ್ನು ಸಾರುತ್ತಿದೆ. ಈ ಕಥನ ತೇಲಿಬಂದ ಡೋಲಿನ ಒಳಗಡೆಯಿದ್ದ ಅಣ್ಣ-ತಂಗಿಯರೇ ಒಂದಾಗಿ ಸಂತಾನ ಸೃಷ್ಟಿಯಾಯಿತೆಂಬ ಹೇಳುತ್ತಾ ಜಗತ್ತಿನ ಎಲ್ಲರೂ ತಮ್ಮ ಮಕ್ಕಳೆಂದೂ, ತಾವು ಮೂಲಪುರುಷರೆಂದೂ ಸಾರುತ್ತದೆ. ಅದರ ಮುಂದುವರಿದ ಭಾಗವಾಗಿ ಎಂಜಲು ತಿನ್ನುವ, ಅಜಲು ಚಾಕ್ರಿ ನಡೆಸುವ, ಅಸ್ಪ್ರಶ್ಯತೆ ಆಚರಣೆಯ ತಮ್ಮದೇ ಅವನತಾವಸ್ಥೆಗೆ ಕಥನದ ಮೂಲಕ ಸಮರ್ಥನೆಯನ್ನು ಕಟ್ಟಿಕೊಟ್ಟಂತಿದೆ. ಮಕ್ಕಳ ಎಂಜಲು ಹೆತ್ತವರಿಗೆ ಹೇಸಿಗೆಯಲ್ಲ, ಮಕ್ಕಳ ಕಷ್ಟ ಹೆತ್ತವರ ಹೊರೆ, ಅಣ್ಣ-ತಂಗಿಯರು ಸೇರುವ ಮೂಲಕ ಪಾಪ ಮಾಡಿ ತುಚ್ಛರೆನಿಸಿದವರು- ಸೊಗಸಾದ ತರ್ಕ!

ಈ ಪುರಾಣ ಕೊರಗರ ಪುರಾಣವಾಗಿದ್ದರೂ, ಸಮಾಜದ ಆಸ್ತಿಯಾಗಿ ಎಲ್ಲರ ಬಾಯಲ್ಲೂ ಇದೆ. ಇಂತಹ ದಾಸ್ಯದ ಸಮರ್ಥನೆಯ ಪುರಾಣ ವೊಂದನ್ನು ಯಾವುದಾದರೂ ಜನಾಂಗ ತನ್ನ ಪರವಾಗಿ ತಾನೇ ಹೆಣೆದುಕೊಳ್ಳಲು ಸಾಧ್ಯವೇ? ಕೊರಗರನ್ನು ಕಾಡಿನಿಂದ ನಾಡಿಗೆ ಳೆದವರು ತಮ್ಮ ಕಷ್ಟದ/ದುರಿತದ ವರ್ಗಾವಣೆಗಾಗಿ, ತಾವೆ ಸೆದುದನ್ನು ತಿಂದು ಮಾಡುವ ಊಳಿಗಕ್ಕಾಗಿ ತರಬೇತುಗೊಳಿಸಲು ಕಟ್ಟಿದ ಕಥನವಾಗಿರುವ ಸಾಧ್ಯತೆಯೇ ಹೆಚ್ಚು. ಕಥನ ಕಟ್ಟುವವರು ತಲೆಯಲಿಯೋ, ಭುಜದಲ್ಲಿಯೋ ಹುಟ್ಟಿದವರೆಂದು ಕಥನ ಕಟ್ಟಿಕೊಂಡು ಅಪೌರುಷೇಯಗೊಳಿಸಿಕೊಳ್ಳುವ ಬದಲು ಪಾಪಿಷ್ಠರಾಗಿ, ಅಕ್ರಮ ಸಂತಾನದ ಕಾರಣ ಪುರುಷರಾಗಿ ತಮ್ಮನ್ನು ಖಂಡಿತಾ ನಿರೂಪಿಸಿಕೊಳ್ಳಲಾರರು.

ಈ ಕರಾವಳಿ ಭಾಗದಲ್ಲಿ ಬುದ್ಧಿವಂತರ ಜಿಲ್ಲೆಯ ಬುದ್ಧಿವಂತರೆಲ್ಲರೂ ಉಲ್ಲೇಖಿಸುವ ಪರಶುರಾಮ ಸೃಷ್ಟಿಯ ಪುರಾಣವನ್ನು ಇಲ್ಲಿಯೇ ನೆನಪಿಸಿಕೊಳ್ಳಬಹುದು. ಕೊಡಲಿಯ ಮುಂಚಲನೆ, ಸಮುದ್ರದ ಹಿಂಚಲನೆಯ ಮೂಲಕ ಬೌದ್ಧಿಕ ಸೂಕ್ಷ್ಮವನ್ನು ಬಳಸಿ ತಮ್ಮನ್ನು ಕರೆತಂದು ಪುರಾಣ ಬರೆಸಿಕೊಂಡು ನೆಲೆ ಒದಗಿಸಿದ ರಾಜಪ್ರಭುತ್ವದ ಬೆಂಬಲಪಡೆದು ನಾಡಿನವರನ್ನು ಕಾಡಿಗೆ ಓಡಿಸಿ ಪಡೆದ ರಾಜದಾನವನ್ನು ದೇವದಾನವಾಗಿಸಿ ಇಲ್ಲಿಯ ಸ್ಥಳೀಯರ ಮೇಲೆ ಯಜಮಾನಿಕೆ ಸಾಧಿಸಿದ ವಲಸಿಗರ ಪುರಾಣ ನಾಡಿನ ಮೂಲನಿವಾಸಿಗಳನ್ನು ತರಬೇತುಗೊಳಿಸಿರುವುದನ್ನು ಅಧಿಕಾರ ರಾಜಕಾರಣದ ಹಿನ್ನೆಲೆಯಲ್ಲಿಯೇ ಗಮನಿಸಬೇಕು. ಮೂಲನಿವಾಸಿಗಳೆನಿಸಿಕೊಂಡ ಮಾತೃಮೂಲೀಯ/ಮಾತೃಪ್ರಧಾನ ಸಮುದಾಯಗಳೆಲ್ಲವೂ ಈ 'ಮಾತೃಹಂತಕನ' ಸೃಷ್ಟಿಯನ್ನು ತಮ್ಮ ನೆಲೆಯೆಂದು ಹೇಗೆ ನಂಬಿ ಆ ಪುರಾಣ ಕಟ್ಟಿದವರ ಊಳಿಗಕ್ಕೆ ಇಂದಿಗೂ ಕೊರಳೊಡ್ಡುತ್ತಿವೆಯೊ ಹಾಗೆಯೇ ಕೊರಗರಿಗೆ ಸಂಬಂಧಿಸಿದ ಡೋಲಿನ ಪುರಾಣವೂ ಅವರನ್ನು ತರಬೇತುಗೊಳಿಸುವ ಸಮ್ಮತಿಯ ಉತ್ಪಾದಕವೆಂದೇ ಭಾವಿಸಬಹುದಾಗಿದೆ.

ಚಾರಿತ್ರಿಕ ಕಾಲಘಟ್ಟದಲ್ಲಿ ಕೊರಗರು ಪ್ರಭುತ್ವದ ಭಾಗವಾಗಿದ್ದರು, ಕೇಂದ್ರವಾಗಿದ್ದರು ಎಂಬಂತೆ ಪ್ರಚಲಿತವಿರುವ ಐತಿಹ್ಯಗಳು ಹುಬಾಷಿಕ, ನಂದುರಾಜ ಮುಂತಾದ ಕಲ್ಪಿತ ವ್ಯಕ್ತಿತ್ವಗಳನ್ನೂ, ಅವರುಗಳ ಸೋಲಿನ ತರುವಾಯದ ವರ್ತಮಾನದ ತನಕದ ಕೊರಗರ ಸ್ಥಾಗಿತ್ಯವನ್ನೂ ಹೇಳುತ್ತವೆ. ಚರಿತ್ರೆಯ ಗತಿಯಲ್ಲಿ ಪ್ರಭುತ್ವದ ಭಾಗವಾಗಿದ್ದವರು ಪ್ರಭುತ್ವವನ್ನು ಕಳೆದುಕೊಂಡ ಮೇಲೆ ಮರಳಿ ಪಡೆಯುವ ಕ್ರಿಯಾತ್ಮಕ ಇಲ್ಲವೇ ಸಾಂಕೇತಿಕ ಹೋರಾಟಗಳನ್ನು ಮಾಡದ ಉದಾಹರಣೆಗಳು ಬಹಳ ಕಡಿಮೆ. ಹುಭಾಷಿಕ, ನಂದುರಾಜರ ಕಥೆಗಳಲ್ಲಿ ಹೆಣ್ಣು ಕೊಡುವುದಾಗಿ ಕರೆಸಿ ವಂಚಿಸಿ ಹೊಡೆದು ಕಾಡಿಗಟ್ಟಿರುವುದನ್ನೇ ಹೇಳಲಾಗುತ್ತಿದೆ.

ಸಂಘಟನೆಗೊಳ್ಳದ ತೆರದಲ್ಲಿ ಕಾಡಿರುವಲ್ಲಿ ಚದುರಿದಂತೆ ಸ್ವಯಂ ಆಸ್ತಿಯ ಪರಿಕಲ್ಪನೆಯೇ ಇರದೆ, ನಾಳಿನ ಚಿಂತೆಯಿಲ್ಲದೇ ತಮ್ಮದೇ ಬದುಕಿನ ಆವರಣದಲ್ಲಿ ಕಲೆ, ಕೌಶಲ್ಯ, ಭಾಷೆಗಳನ್ನು ಕಟ್ಟಿಕೊಂಡು ದಂಡೆತ್ತಿ ಹೋಗುವ ದುಂಡಾವರ್ತಿಯಿಲ್ಲದ ಸಮುದಾಯವೊಂದನ್ನು ಅತಿ ಸುಲಭವಾಗಿ ಊಳಿಗದ ಗುಲಾಮರನ್ನಾಗಿ ಮಾಡಿಕೊಂಡವರು ಕಟ್ಟಿದ ರೂಪಕವಿದು. ಮಧ್ಯಕಾಲೀನ ಯುಗದಲ್ಲಿ ಅರಬರ ಪ್ರಭಾವದಿಂದ ಬಂದುದೆಂದು ಹೇಳಲಾದ ಬ್ಲ್ಯಾಕ್ ಮ್ಯಾಜಿಕ್‌ನ ಪರಿಕಲ್ಪನೆಯಂತೆ ನಾಗರೀಕ(?) ಜಗತ್ತನ್ನು ನಿಯಂತ್ರಿಸಿಕೊಂಡಿದ್ದ ಊಳಿಗಮಾನ್ಯ ದೊರೆಗಳು ತಮ್ಮ ಸಂಕಟಗಳನ್ನು ವರ್ಗಾವಣೆ ಮಾಡಿ ನೀಚ ದಾನಗಳನ್ನು ನೀಡಲು ಕಂಡುಕೊಂಡ ಈ ಮುಗ್ಧ ಕಾಡುವಾಸಿಗಳಿಗೆ ಸಂಬಂಧಿಸಿದಂತೆ ನಾಡಾಡಿಗಳ ಪ್ರಭುತ್ವದ ಪರಿಭಾಷೆಯನ್ನು ಪರಿಭಾಷೆಯನ್ನು ಆರೋಪಿಸ ಬೇಕು.

ಚಾರಿತ್ರಿಕ ಕಾಲಘಟ್ಟದಲ್ಲಿ ಕೊರಗರು ಪ್ರಭುತ್ವದ ಭಾಗವಾಗಿದ್ದರು, ಕೇಂದ್ರವಾಗಿದ್ದರು ಎಂಬಂತೆ ಪ್ರಚಲಿತವಿರುವ ಐತಿಹ್ಯಗಳು ಹುಬಾಷಿಕ, ನಂದುರಾಜ ಮುಂತಾದ ಕಲ್ಪಿತ ವ್ಯಕ್ತಿತ್ವಗಳನ್ನೂ, ಅವರುಗಳ ಸೋಲಿನ ತರುವಾಯದ ವರ್ತಮಾನದ ತನಕದ ಕೊರಗರ ಸ್ಥಾಗಿತ್ಯವನ್ನೂ ಹೇಳುತ್ತವೆ. ಚರಿತ್ರೆಯ ಗತಿಯಲ್ಲಿ ಪ್ರಭುತ್ವದ ಭಾಗವಾಗಿದ್ದವರು ಪ್ರಭುತ್ವವನ್ನು ಕಳೆದುಕೊಂಡ ಮೇಲೆ ಮರಳಿ ಪಡೆಯುವ ಕ್ರಿಯಾತ್ಮಕ ಇಲ್ಲವೇ ಸಾಂಕೇತಿಕ ಹೋರಾಟಗಳನ್ನು ಮಾಡದ ಉದಾಹರಣೆಗಳು ಬಹಳ ಕಡಿಮೆ. ಹುಭಾಷಿಕ, ನಂದುರಾಜರ ಕಥೆಗಳಲ್ಲಿ ಹೆಣ್ಣು ಕೊಡುವುದಾಗಿ ಕರೆಸಿ ವಂಚಿಸಿ ಹೊಡೆದು ಕಾಡಿಗಟ್ಟಿರುವುದನ್ನೇ ಹೇಳಲಾಗುತ್ತಿದೆ.

ನೀವೂ ಒಂದು ಕಾಲದಲ್ಲಿ ರಾಜರಾಗಿದ್ದಿರಿ, ಆದರೆ ಸೋತಿದ್ದೀರಿ. ವರ್ತಮಾನದಲ್ಲಿ ನಾವು ಗೆದ್ದವರು ನೀವು ಸೋತವರು. ನಿಮ್ಮ ಗತ ವೈಭವಪೂರಿತ, ವರ್ತಮಾನವನ್ನು ಸಹಿಸಿಕೊಳ್ಳಿ, ಚರಿತ್ರೆಯ ಪುನರಾವರ್ತಿಯಾದಂತೆ ನಿಮ್ಮ ಗತ ಬಂದೀತು, ಕಾಯುತ್ತಿರಿ. ಸೇವೆಯನ್ನು ನಿರಂತರ ಮುಂದುವರಿಸಿ ಎಂಬ ಸ್ಪಷ್ಟ ಸಂದೇಶಗಳನ್ನು ರವಾನಿಸುವಂತಿರುವ ಐತಿಹ್ಯ ಇದೆನಿಸುತ್ತಿದೆ. ಮೀರುವಿಕೆಯ ಕಿಂಚಿತ್ತ್ ಹೊಳವು ತೋರದ ಪೂರ್ಣ ಶರಣಾಗತಿಯ ಬುದ್ಧಿಗೇಡಿ ಸಮುದಾಯವೆಂಬ ಹಣೆಪಟ್ಟಿ ಕಟ್ಟುವ ಚರಿತ್ರೆ; ಪಾಪದ ಕ್ರಿಯೆಯ ಮೂಲಕ ಮನುಕುಲದ ಹುಟ್ಟಿಗೆ ಕಾರಣರಾಗಿ ಅಸ್ಪೃಶ್ಯತೆಗೆ ಗುರಿಯಾದುದರ ತರ್ಕ ಹೆಣೆದುಕೊಡುವ ಹೀನತೆಯ ಪುರಾಣಗಳನ್ನು ಯಾವ ಸಮುದಾಯವೂ ತನ್ನ ಕುರಿತಾಗಿ ಕಟ್ಟಿಕೊಳ್ಳಲಾರದು. ಹಾಗಾಗಿ ಕೊರಗರನ್ನು ಶತಮಾನಗಳ ಕಾಲಾವಧಿಯಲ್ಲಿ ನಿರಂತರವಾಗಿ ದುಡಿಸಿಕೊಂಡದ್ದಕ್ಕೆ ರೂಪಕವೋ, ದುಡಿಸಿಕೊಳ್ಳಲು ಸಾಧಕವೋ ಆದ ಅವರ ದಾಸ್ಯದ ಸಮ್ಮತಿಯನ್ನು ಅವರಿಂದಲೇ ಅವರ ಪುರಾಣದ ಮೂಲಕ ಉತ್ಪಾದಿಸಲು ಮಾಡಿಕೊಂಡ ಅದ್ಭುತವಾದ ದಾರಿಯೆಂಬುದು ಹೆಚ್ಚು ಅರ್ಥಪೂರ್ಣ.

* * * * *

ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು:

1. ಡಾ. ಅರವಿಂದ ಮಾಲಗತ್ತಿ ಮತ್ತು ಓ.ಡಿ. ಹೆಗಡೆ : ಕೊರಗ ಜನಾಂಗ ವಿಶ್ಲೇಷಣಾತ್ಮಕ ಅಧ್ಯಯನ. ದ.ಕ.ಜಿ. ಪರಿಷತ್, ಮಂಗಳೂರು.
2. ಬಾಬು ಕೊರಗ, ಪಾಂಗಾಳ: ಕೊರಗರ ಅಜಲು - ಒಂದು ವಿಶ್ಲೇಷಣೆ - 2009.
3. ಫರೀದ್ ಜಕಾರಿಯಾ : Future of Freedom - Illiberal Democracy at Home & Abroad, Penguin weeking publication - 2005.
4. ಪ್ರೊ. ಕಾಳೇಗೌಡ, ನಾಗವಾರ(ಸಂ) : ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ- 2000.
5. ಡಾ. ಎಂ. ಗುರುಲಿಂಗಯ್ಯ : ಬುಡಕಟ್ಟು ಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ. ಮಂ.ವಿ.ವಿ -2004
6. ಡಾ. ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ - 1990.
7. ಸಂಜು : ಕೊರಗ ಸಮುದಾಯದಲ್ಲಿ ಶಿಕ್ಷಣ - ಒಂದು ಅಧ್ಯಯನ. ಸಮಗ್ರ ಗ್ರಾಮೀಣ ಆಶ್ರಮ ಮತ್ತು ಕೊರಗಾಭಿವೃದ್ಧಿ ಸಂಘಗಳ ಒಕ್ಕೂಟ(ರಿ).

ಲೇಖನಗಳು:

1. ಡಾ. ಬಿ.ಎಂ ಪುಟ್ಟಯ್ಯ- ಸ್ವಾತಂತ್ರ್ಯ: ಅಂಚಿನ ಸಮುದಾಯಗಳ ಕನ್ನಡಿ ಗಂಟು, ಸಂವಾದ ಮಾಸಪತ್ರಿಕೆ- ಜೂನ್ 2009.
2. ಎಂ. ಚಂದ್ರಪೂಜಾರಿ- ಸಮಾಜ ಸಂಶೋಧ ನೆಯಲ್ಲಿ ಸಮಸ್ಯೆ ಮತ್ತು ಸಮಸ್ಯೀಕರಿಸುವುದು, ಅಭಿವೃದ್ಧಿ ಅಧ್ಯಯನ, ಹಂಪಿ ವಿ.ವಿ -2005.
3. ಡಾ. ಟಿ.ಆರ್ ಚಂದ್ರಶೇಖರ - ಧರೆ ಹತ್ತಿ ಉರಿದರೆ, (ಲೇಖನಮಾಲೆ) ಸಂವಾದ ಮಾಸಪತ್ರಿಕೆ, ಸೆಪ್ಟೆಂಬರ್, ನವೆಂಬರ್, ಡಿಸೆಂಬರ್ - 2008 ಮತ್ತು ಮಾರ್ಚ್, ಮೇ, ಸೆಪ್ಟೆಂಬರ್ -2009
4. ವಿ.ಬಿ.ತಾರಕೇಶ್ವರ - ಇಂಗ್ಲೀಷ್, ದಲಿತರು ಹಾಗೂ ಆಧುನಿಕತೆ: ಕೆಲವು ಟಿಪ್ಪಣಿಗಳು, ಕನ್ನಡ ಅಧ್ಯಯನ, ಹಂಪಿ. ವಿ.ವಿ. ಡಿಸೆಂಬರ್ 1998.

ಕೃತಜ್ಞತೆಗಳು: ಕೊರಗರ ಕುರಿತು ದ.ಕ.ಜಿಲ್ಲಾ ಪಂಚಾಯತ್‌ಗೆ ವಿಸ್ತೃತ ವರದಿ ನೀಡಿದ ಡಾ. ಮಹಮ್ಮದ್ ಪೀರ್ ಹಾಗೂ ಲೇಖನ ಸಿದ್ಧಪಡಿಸುವಲ್ಲಿ ಅಂಕಿ ಸಂಖ್ಯೆಗಳನ್ನು ಒದಗಿಸಿ ಸಹಕರಿಸಿದ ಸಮಗ್ರ ಗ್ರಾಮೀಣ ಆಶ್ರಮದ ಕಾರ್ಯಕರ್ತರಾದ ಅಶೋಕ ಶೆಟ್ಟಿ, ಗುಣಪಾಲ್ ಶೆಟ್ಟಿ, ಕುಮಾರದಾಸ್ ಮತ್ತು ಉಡುಪಿ ಜಿಲ್ಲಾ ಐ.ಟಿ.ಡಿ.ಪಿ ಅಧಿಕಾರಿ ಊರ್ಮಿಳಾ ಹಾಗೂ ಗೋಕುಲದಾಸ್ ಕದ್ರಿ ಇವರುಗಳಿಗೆ ವಂದನೆಗಳು.

** * * * *

ಈ ಲೇಖನವನ್ನು 2009 ಅಕ್ಟೋಬರ್‌ನಲ್ಲಿ ಉಡುಪಿ ಜಿಲ್ಲೆಯ ಬಸ್ರೂರಿನ ಶಾರದಾ ಕಾಲೇಜಿನಲ್ಲಿ ನಡೆದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿತ್ತು. □

ಕೈಗಾರಿಕಾ ರಂಗದಲ್ಲಿ ಸಾಧನೆಗಳ ಸರಮಾಲೆ

ಸಮೃದ್ಧ ಕರ್ನಾಟಕದ ಸೌಹಾರ್ದಯುತ ಕೈಗಾರಿಕಾ ಬೆಳವಣಿಗೆ

ರಾಜ್ಯದ ಒಟ್ಟಾರೆ ಪ್ರಗತಿಗೆ ಕೈಗಾರಿಕಾ ರಂಗದ ಕೊಡುಗೆ ಅತ್ಯಂತ ಮಹತ್ವದ್ದು. ಉತ್ಪಾದನೆ, ಉದ್ಯೋಗಾವಕಾಶ ಸೃಷ್ಟಿ, ಜೀವನ ಮಟ್ಟ ಸುಧಾರಣೆಯಿಂದ ಒಟ್ಟಾರೆ ಆರ್ಥಿಕತೆಗೆ ಚೈತನ್ಯ ನೀಡುವ ಕೈಗಾರಿಕಾ ರಂಗಕ್ಕೆ ಸರ್ಕಾರವು ಹಲವು ಉತ್ತೇಜನಗಳನ್ನು ನೀಡಿ ಪ್ರೋತ್ಸಾಹಿಸಿದೆ. ರಾಜ್ಯಕ್ಕೆ ಹರಿದು ಬರುತ್ತಿರುವ ಬಂಡವಾಳ, ಸ್ಥಾಪನೆಯಾಗುತ್ತಿರುವ ಹೊಸ ಉದ್ಯಮಗಳು ಹಾಗೂ ರಫ್ತಿನ ಹೆಚ್ಚಳ ಈ ಸಾಧನೆಗೆ ಕನ್ನಡಿ ಹಿಡಿಯುತ್ತವೆ.

ಸಾಧನೆಯ ಪಕ್ಷಿನೋಟ

ಕ್ರಮ ಸಂಖ್ಯೆ	ಯೋಜನೆಗಳ ವಿವರ	[illegible] (ರೂ. ಲಕ್ಷಗಳಲ್ಲಿ)
1	[illegible] – 354 ಯೋಜನೆಗಳು	110447.82
2	ಹೊಸ ಕೈಗಾರಿಕಾ ಸಮೂಹಗಳ ಸ್ಥಾಪನೆ (ವಿಶೇಷ ಘಟಕ ಯೋಜನೆ / ಗಿರಿಜನ ಉಪ ಯೋಜನೆ) 3939 ಫಲಾನುಭವಿಗಳು	1135.93
3	ಕೈಗಾರಿಕಾ ವಿಕಾಸ ಯೋಜನೆ – 385 ಫಲಾನುಭವಿಗಳು	370.00
4	[illegible] – 127 ಸಂಸ್ಥೆಗಳು	300.00
5	ಎಂ. ಎಸ್. ಎಂ. ಇ. ಕೈಗಾರಿಕೆಗಳ ನೋಂದಣಿ – 15706 ಘಟಕಗಳು	101617
6	ಬಂಡವಾಳ ಸಹಾಯಧನ ವಿತರಣೆ – 5203 ಘಟಕಗಳು	9999.07
7	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂ ಹಂಚಿಕೆ – 693 ಘಟಕಗಳು	1713 (ಎಕರೆಗಳು)
8	ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ – 840 ಫಲಾನುಭವಿಗಳು	864.00

ಕ್ಷಿಪ್ರ ಪ್ರಗತಿಯ ಹಾದಿಯಲ್ಲಿ

- ವಿಶೇಷ ಆರ್ಥಿಕ ವಲಯ – ರಾಜ್ಯ ನೀತಿಯನ್ನು ಜಾರಿಗೊಳಿಸಿದೆ
- ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ – 2009 ಅನ್ನು ಜಾರಿಗೊಳಿಸಿರುತ್ತದೆ.
- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕೈಗಾರಿಕಾ ಭೂಮಿಯ ಬ್ಯಾಂಕ್ ಸ್ಥಾಪನೆಗೆ ಅನುದಾನವನ್ನು ಒದಗಿಸಲಾಗಿದೆ
- ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ವೈಜ್ಞಾನಿಕವಾಗಿ ಮತ್ತು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಪಡಿಸುವ ಮೂಲಕ ಭವ್ಯ ಕರ್ನಾಟಕವನ್ನು ನಿರ್ಮಿಸುವುದು.
- 2014 ಒಳಗಾಗಿ ರೂ. 300000 ಕೋಟಿ ಬಂಡವಾಳ ಹೂಡಿಕೆಯ ಹೊಸ ಉದ್ಯಮಗಳ ಸ್ಥಾಪನೆಯ ಮುಖೇನ 10 ಲಕ್ಷ ಮಂದಿಗೆ ಹೆಚ್ಚುವರಿ ಉದ್ಯೋಗ ಸೃಜನೆ
- ಕೈಗಾರಿಕೆಗಳ ಬಲಿಷ್ಠ ಬೆಳವಣಿಗೆಗೆ ಬೇಕಾದ ಅನುಕೂಲಕರ ಸನ್ನಿವೇಶ ಕಲ್ಪಿಸುವುದು.
- ರಾಜ್ಯದ ಒಟ್ಟು ಜಿ.ಡಿ.ಪಿ.ಯಲ್ಲಿ ಉತ್ಪಾದನಾ ಕ್ಷೇತ್ರದ ಪಾಲನ್ನು ಶೇಕಡ 20ಕ್ಕೆ ಹೆಚ್ಚಿಸುವುದು.
- ಕೈಗಾರಿಕೆಗೆ ಅಭಿವೃದ್ಧಿಗಾಗಿ ಸಲಹೆಗಳನ್ನು ನೀಡಲು "ವಿಷನ್ ಗ್ರೂಪ್" ಅನ್ನು ರಚಿಸಲಾಗಿದ್ದು, ವಿಷನ್ ಗ್ರೂಪ್ ಕಾರ್ಯ ಪ್ರವೃತ್ತವಾಗಿದೆ.
- ರಾಜ್ಯದಲ್ಲಿನ ನೈಸರ್ಗಿಕ ಸಂಪನ್ಮೂಲ ಆಧಾರದ ಮೇಲೆ ಉಕ್ಕು, ಸಿಮೆಂಟು, ಜವಳಿ, ಆಹಾರ, ಆಟೋಮೊಬೈಲ್, ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ವಲಯಗಳನ್ನು ಅಭಿವೃದ್ಧಿಪಡಿಸಲು ಸೂಕ್ತ ಕ್ರಮಗಳ ಅನುಷ್ಠಾನ – ಪ್ರತಿ ವಲಯಕ್ಕೆ ವಿಶೇಷ ಕಾರ್ಯಪಡೆ ಕಾರ್ಯಪ್ರವೃತ್ತವಾಗಿದೆ.
- ರಾಜ್ಯದ ವಿವಿಧ ಭಾಗಗಳ ಕೈಗಾರಿಕೋದ್ಯಮಿಗಳ ಸಮಸ್ಯೆಗಳನ್ನು ಅಲ್ಲಿಯೇ ಬಗೆ ಹರಿಸಲು ಬೃಹತ್ ಕೈಗಾರಿಕಾ ಅದಾಲತ್ ಹಮ್ಮಿಕೊಂಡು ಕಾರ್ಯಗತಗೊಳಿಸಲಾಗುತ್ತದೆ
- ರಫ್ತು – ವ್ಯಾಪಾರ ಉತ್ತೇಜನ ಚಟುವಟಿಕೆಗೆ ವಿಟಿಪಿಸಿಯ ಅಧೀನ ಕಚೇರಿಯನ್ನು ಧಾರವಾಡದಲ್ಲಿ ಸ್ಥಾಪಿಸಿದೆ
- 4 ಹೊರ ರಾಜ್ಯಗಳಲ್ಲಿ ಇಲಾಖೆಯ 4 ಹಿರಿಯ ಅಧಿಕಾರಿಗಳ ಪ್ರತ್ಯೇಕ ತಂಡಗಳು ಪ್ರವಾಸ ಕೈಗೊಂಡು ಅಲ್ಲಿನ ಅಭಿವೃದ್ಧಿ ಕುರಿತು ಅಧ್ಯಯನ ನಡೆಸಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಮುರುಗೇಶ್ ರು. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ವೆಂಕಟರಮಣಪ್ಪ
ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ಕೈಗಾರಿಕಾ ಅದಾಲತ್

ಮೈಸೂರು ಮತ್ತು ಗುಲ್ಬರ್ಗ ವಿಭಾಗಗಳ ಕೈಗಾರಿಕಾ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ

ಈಗಾಗಲೇ ಬೆಳಗಾಂ ವಿಭಾಗದಲ್ಲಿ ಕೈಗಾರಿಕಾ ಅದಾಲತ್‌ನ್ನು 10ನೇ ಫೆಬ್ರವರಿ 2009 ರಂದು ಹುಬ್ಬಳ್ಳಿಯಲ್ಲಿ ಯಶಸ್ವಿಯಾಗಿ ನಡೆಸಿದ್ದು 207 ಅಹವಾಲುಗಳನ್ನು ಸ್ವೀಕರಿಸಿದ್ದು 90 ಅಹವಾಲುಗಳನ್ನು ವಿಲೇವಾರಿ ಮಾಡಲಾಗಿದೆ.

ಕರ್ನಾಟಕದಲ್ಲಿ ಬೃಹತ್ ಕೈಗಾರಿಕಾ ಅದಾಲತ್‌ಗಳನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾದ ಶ್ರೀ ಮುರುಗೇಶ್ ರು. ನಿರಾಣಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಮೈಸೂರು ವಿಭಾಗದ 8 ಜಿಲ್ಲೆಗಳಾದ ಮಂಗಳೂರು, ಮಡಿಕೇರಿ, ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಮಂಡ್ಯ ಮತ್ತು ಉಡುಪಿ ಹಾಗೂ ಗುಲ್ಬರ್ಗ ವಿಭಾಗದ 5 ಜಿಲ್ಲೆಗಳಾದ ಬೀದರ್, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ ಉದ್ಯಮಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ನಡುವಿನ ಈ ಮುಖಾಮುಖಿಯು, ಉದ್ಯಮಶೀಲರ ಹಾದಿಯನ್ನು ಸುಗಮಗೊಳಿಸಲು ನೆರವಾಗುವುದು.

ಮೈಸೂರು ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ ಕೈಗಾರಿಕಾ ಅಭಿವೃದ್ಧಿಯನ್ನು ತ್ವರಿತಗೊಳಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಕೈಗಾರಿಕೋದ್ಯಮಿಗಳು ತಮ್ಮ ಸಮಸ್ಯೆ / ಅಹವಾಲನ್ನು ಸಂಬಂಧಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ನಿಗದಿ ದಿನದಲ್ಲಿ ನೀಡಲು ವಿನಂತಿಸಲಾಗಿದೆ.

ಪ್ರಮುಖಾಂಶಗಳು

● ಉದ್ಯಮಿಗಳು ಹಾಗೂ ಅಧಿಕಾರಿಗಳ ನೇರ ಮುಖಾಮುಖಿ ● ಸಮಸ್ಯೆಗಳ ಸ್ಥಳದಲ್ಲಿಯೇ ಪರಿಹಾರ ● ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಒತ್ತು ● ಏಕಗವಾಕ್ಷಿ ಪದ್ಧತಿ ಪರಿಣಾಮಕಾರಿ ಜಾರಿಗೆ ಚಿಂತನೆ ● ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು, ಎಫ್.ಕೆ.ಸಿ.ಸಿ.ಐ., ಕಾಸಿಯಾ, ಚೇಂಬರ್ ಆಫ್ ಕಾಮರ್ಸ್, ಸಿ.ಐ.ಐ. ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಕೈಗಾರಿಕಾ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ

ಅದಾಲತ್‌ನ ಕಾರ್ಯಸೂಚಿ

● ಭೂಮಿ, ವಿದ್ಯುತ್, ಹಣಕಾಸು, ನೀರು, ಕಾರ್ಮಿಕ ಸಮಸ್ಯೆಗಳು ಇತ್ಯಾದಿ ● ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ವಾಣಿಜ್ಯ ತೆರಿಗೆ ಮತ್ತು ಇತರೆ ಸಹಾಯ ಸವಲತ್ತುಗಳ ಬಗ್ಗೆ ಪರಿಹಾರ

ಮೈಸೂರು ವಿಭಾಗ

ದಿನಾಂಕ : 10.06.2009
ಸಮಯ : ಬೆಳಗ್ಗೆ 10.30 ಗಂಟೆಗೆ
ಸ್ಥಳ : ಡಾ। ಟಿ. ಎಂ. ಎ. ಪೈ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್, ಎಂ. ಜಿ. ರಸ್ತೆ, ಮಂಗಳೂರು
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 03.06.2009

ಗುಲ್ಬರ್ಗ ವಿಭಾಗ

ದಿನಾಂಕ : 17.06.2009
ಸಮಯ : ಬೆಳಗ್ಗೆ 10.30 ಗಂಟೆಗೆ
ಸ್ಥಳ : ವಿಜಯಶ್ರೀ ಹೆರಿಟೇಜ್ ವಿಲೇಜ್ ಪ್ರೈವೇಟ್ ಲಿಮಿಟೆಡ್, ವಿ. ಆರ್. ಭೂಪಾಲ್ ನಗರ, ಹಂಪಿ ರಸ್ತೆ, ಹೊಸಪೇಟೆ
ಅಹವಾಲುಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 10.06.2009

ಕರ್ನಾಟಕ ವಾರ್ತೆ

ಖಚಿತ ನಿಲುವು, ಜನಪರ ಒಳನೋಟಗಳ ಚಿಂತನಶೀಲ ಬರಹಗಳು

ಪುಸ್ತಕ ಅವಲೋಕನ

'ವಸಿಷ್ಠರು ಮತ್ತು ವಾಲ್ಮೀಕಿಯರು' ಡಿ. ಎಸ್. ನಾಗಭೂಷಣ ಅವರ ಸಮಾಜವಾದಿ ಸಂಕಥನಗಳ ಮೂರನೇ ಭಾಗ. 350ಕ್ಕೂ ಹೆಚ್ಚು ಪುಟಗಳಿರುವ ಈ ಕೃತಿಯಲ್ಲಿ 50 ಲೇಖನಗಳಿವೆ. ಇವುಗಳಲ್ಲಿ ಶೇ. 90ರಷ್ಟು 'ವಾರದ ಒಳನೋಟ' ಎಂಬ ಅಂಕಣಕ್ಕಾಗಿ 'ವಿಕ್ರಾಂತ ಕರ್ನಾಟಕ' ವಾರಪತ್ರಿಕೆಯಲ್ಲಿ ಬರೆದವುಗಳು. ಮಿಕ್ಕ ಲೇಖನಗಳು ಸಂವಾದ, ಮಯೂರ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದವುಗಳು.

ತಮ್ಮ ಅಂಕಣ ಬರವಣಿಗೆ ನಿಲ್ಲಿಸುವ ಸಂದರ್ಭದಲ್ಲಿ ಅವರು ಬರೆದ ಸಮಾರೋಪ ರೂಪಿಯಾದ 'ವಾರದ ಒಳನೋಟಗಳ ಒಂದು ಹಿನ್ನೋಟ!' ಲೇಖನದಲ್ಲಿ ತಮ್ಮ ಬರವಣಿಗೆಯ ಉದ್ದೇಶವನ್ನು ಡಿ ಎಸ್ ಎನ್ ಹೀಗೆ ಸ್ಪಷ್ಟಪಡಿಸಿದ್ದಾರೆ –"ನಾನು ಪ್ರಧಾನವಾಗಿ ಆಯಾ ವಾರದ ಪ್ರಚಲಿತ ಸುದ್ದಿಯನ್ನಾಧರಿಸಿಯೇ ನನ್ನ ವಿಶ್ಲೇಷಣೆಯನ್ನು ನಡೆಸುತ್ತಿದ್ದೆನಾದರೂ, ಆ ವಿಶ್ಲೇಷಣೆಯ ಹಿಂದೆ ನಾನು ನಂಬಿದ ತಾತ್ವಿಕತೆಯೂ ಇರುತ್ತಿತ್ತೆಂದು ನಂಬಿದ್ದೇನೆ..." (ಪುಟ 258)

ನಮ್ಮ ಸಮಕಾಲೀನ ಮುಖ್ಯ ಚಿಂತಕರಲ್ಲಿ ಒಬ್ಬರಾದ ಡಿ. ಎಸ್. ನಾಗಭೂಷಣ ಅವರು ತಾವು ನಂಬಿದ ತಾತ್ವಿಕತೆಯ ಹಿನ್ನೆಲೆಯಲ್ಲಿ, ನಮ್ಮ ವರ್ತಮಾನ ಸಂದರ್ಭದ ಹಲವು ವಿದ್ಯಮಾನಗಳನ್ನು ಹರಿತವಾದ ವಿಶ್ಲೇಷಣೆಗೆ ಒಳಪಡಿಸಿರುವುದನ್ನು ಈ ಲೇಖನಗಳಲ್ಲಿ ಕಾಣಬಹುದಾಗಿದೆ. ಸಾಹಿತ್ಯ ಸಂಸ್ಕೃತಿಯ ವಿಷಯಗಳೂ ಇದರಲ್ಲಿ ಬಂದಿವೆಯಾದರೂ ರಾಜಕಾರಣದ ವಿಷಯಗಳೇ ಬಹುಮುಖ್ಯವಾಗಿ ಚರ್ಚಿತವಾಗಿರುವುದನ್ನು ನೋಡಬಹುದು. ಅದಕ್ಕೆ ಡಿ.ಎಸ್.ಎಸ್ ಅವರ ಪ್ರಜ್ಞಾಪೂರ್ವಕ ಆಯ್ಕೆಯೂ ಕಾರಣವಾಗಿರುವುದನ್ನು ಈ ಮೊದಲು ಪ್ರಸ್ತಾಪಿಸಿದ ಲೇಖನದಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ –

'ಸಾಹಿತ್ಯ ಸಂವಾದ' ಪತ್ರಿಕೆಯ ಹತ್ತು ವರ್ಷಗಳ 'ಅನುಭವ'ವೇ ನನ್ನನ್ನು ಹೆಚ್ಚಾಗಿ ರಾಜಕೀಯ ವಿಮರ್ಶೆಯ ಕಡೆ ದೂಡಿದ್ದು ಎಂದರೆ ತಪ್ಪಾಗಲಾರದು. ಅದಕ್ಕೆ ಕಾರಣ, ರಾಜಕಾರಣ ಎಂದರೆ ಮೂಲತಃ ಸಾರ್ವತ್ರಿಕ ಶೀಲ ನಿರ್ಮಾಣದ, ಸಮಾಜದ ಅಸ್ತಿವಾರಗಳ ಪುನಾರಚನೆಯ ಕೆಲಸ ಎಂಬ ನನ್ನ ನಂಬಿಕೆ. ಏಕೆಂದರೆ ನಮ್ಮ ಸಾಹಿತಿಗಳು– ಅವರು ಬುದ್ಧಿವಂತರೂ ಆಗಿರುವುದರಿಂದ – ತಮ್ಮ 'ಯಶಸ್ಸಿ'ಗಾಗಿ ನಡೆಸುವ ತಂತ್ರ–ಕುತಂತ್ರಗಳಲ್ಲಿ, ರಾಜಕಾರಣಿಗಳನ್ನೂ ಮೀರಿಸಬಲ್ಲವಾರಾಗಿದ್ದಾರೆ. ರಾಜಕಾರಣಿಗಳಿಗಾದರೂ ಜನರ ಭಯ ಮತ್ತು ಆ ಸಂಬಂಧದ ಲಜ್ಜೆಯಾದರೂ ಇದೆ. ಆದರೆ ಇವರಲ್ಲಿ ಬಹಳಷ್ಟು ಜನಕ್ಕೆ ಅವಾವುವೂ ಇಲ್ಲವಾಗಿದೆ. ಹೀಗಿರುವಾಗ ಸಾಹಿತ್ಯ ವಿಮರ್ಶೆ ಯಾರಿಗೆ ಬೇಕಾಗಿದೆ? ಜಡವೂ, ಅರಾಜಕವೂ ಆಗತೊಡಗಿದ್ದ ಆಕಾಶವಾಣಿಯಿಂದ ನಾನು ಸ್ವಯಂನಿವೃತ್ತಿ ಪಡೆಯಲು ನಿಶ್ಚಯಿಸಿದ್ದೇ, ಈ ಎಲ್ಲದರ ಹಿನ್ನೆಲೆಯಲ್ಲಿ ಬದುಕನ್ನು ಕುರಿತ ನನ್ನ ಆಲೋಚನೆಗಳ ನೆಲೆಗಳನ್ನು ಪುನಾರಚಿಸಿಕೊಳ್ಳುವುದಕ್ಕೆ ಮತ್ತು ಅದರ ಭಾಗವಾಗಿ ನನ್ನ ಬರವಣಿಗೆಯ ಗೊತ್ತು ಗುರಿಗಳನ್ನು ಪುನರ್ ವಿಮರ್ಶಿಸಿಕೊಳುವುದಕ್ಕೆ ಅಗತ್ಯವಾದ ವ್ಯವಧಾನಕ್ಕಾಗಿ..."(ಪು. 264)

ಡಿಎಸ್ಎನ್ ಇಲ್ಲಿನ ಕೆಲವು ಲೇಖನಗಳಲ್ಲಿ ವ್ಯಕ್ತಪಡಿಸುವ ನೈತಿಕ ಸಿಟ್ಟು ಕೆಲವರಿಗೆ ಸಿನಿಕತನವೆಂಬಂತೆ ಕಂಡುಬಂದರೆ ಆಶ್ಚರ್ಯವಿಲ್ಲ. ಆದರೆ ಈ ಬಗೆಯ ಸಿಟ್ಟಿನ ಹಿಂದಿರುವುದು ಜನಹಿತ ಕಾಳಜಿ ಎತ್ತಿ ಹಿಡಿಯುವ ರಚನಾತ್ಮಕ ಗುಣದ್ದು ಎನ್ನುವುದನ್ನು ಇಲ್ಲಿನ ಲೇಖನಗಳು ಹೇಳುತ್ತವೆ. ಕೃತಿಗೆ ಬೆನ್ನುಡಿ ಬರೆದಿರುವ ಖ್ಯಾತ ಅಂಕಣಕಾರ ದಿನೇಶ್ ಅಮೀನ್ ಮಟ್ಟು ಕೂಡ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಓದಿದಾಗಲೆಲ್ಲ ನನ್ನನ್ನು ಸೆಳೆಯುವುದು ಅವರ ಬರಹಗಳಲ್ಲಿ ಸದಾ ಪ್ರಜ್ವಲಿಸುತ್ತಿರುವ ಸಿಟ್ಟು.



ಲೇಖಕ : ಡಿ. ಎಸ್. ನಾಗಭೂಷಣ
ಬೆಲೆ : 150
ಪ್ರ : ಲೋಹಿಯಾ ಪ್ರಕಾಶನ, ಕ್ಷಿತಿಜ, ಕಪ್ಪಗಲ್ಲು ರಸ್ತೆ, ಬಳ್ಳಾರಿ 583103

ಡಾ. ಬಂಜಗೆರೆ ಜಯಪ್ರಕಾಶ

'ಹಿನ್ನೋಟ' ಲೇಖನದಲ್ಲಿ ಕೆ. ಸತ್ಯನಾರಾಯಣರು ಇವರ ಕೃತಿಯೊಂದರ ಬಗ್ಗೆ ಮಾಡಿದ ವಿಮರ್ಶೆಯ ಬಗ್ಗೆ ಚರ್ಚೆ ಮಾಡುತ್ತಾ ಈ ಮಾತುಗಳನ್ನು ಬರೆದಿದ್ದಾರೆ. ಈ ಸಾಲುಗಳು ಡಿ. ಎಸ್.ಎನ್ ಅವರ ಬರವಣಿಗೆಯ ಕೇಂದ್ರ ಗಮನವನ್ನು, ಆ ರೀತಿ ಗಮನ ಕೇಂದ್ರೀಕರಣಕ್ಕೆ ಕಾರಣಗಳನ್ನು ಸ್ಪಷ್ಟಪಡಿಸುತ್ತಿವೆ. ಜೊತೆಗೆ ಡಿ. ಎಸ್.ಎನ್ ಬರವಣಿಗೆಯ ಧಾಟಿಯನ್ನು ಕೂಡ ಬಿಂಬಿಸುತ್ತಿವೆ.

ಡಿ. ಎಸ್.ಎನ್ ಅವರ ಮಾತು ಹಾಗೂ ಬರವಣಿಗೆ ಎರಡೂ ನೇರ. ಮುಲಾಜಿಲ್ಲದೆ ಮಾತನಾಡುವುದು ಹಾಗೂ ಅನ್ನಿಸಿದಂತೆ ಬರೆಯುವ ಅವರ ಅಭ್ಯಾಸ ಈ ಲೇಖನಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಅವರ ಟೀಕೆಗೆ ಹಾಗೂ ಪ್ರಶ್ನೆಗೆ ಗುರಿಯಾಗಿರುವವರಲ್ಲಿ ಇತರರಂತೆಯೇ ಗೆಳೆಯರೂ ಸೇರಿದ್ದಾರೆ. ಗೆಳೆಯರಲ್ಲಿ ಕಂಡುಬರುವ ಲೋಪಗಳ ಬಗ್ಗೆ ಅವರು ಹೆಚ್ಚು ಮೊನಚಾಗಿ ಬರೆಯುತ್ತಾರೆ. ಇದು ಅವರಿಗಿರುವ ಕಾಳಜಿ ಮತ್ತು ವಿಶ್ವಾಸಗಳನ್ನು ವ್ಯಕ್ತಪಡಿಸುವ ವಿಧಾನವಾಗಿ ಕಂಡುಬರುತ್ತದೆ.

ಹಾಸ್ಯ ಮತ್ತು ವ್ಯಂಗ್ಯಗಳನ್ನು ಅವರು ಈ ಬರವಣಿಗೆಯಲ್ಲಿ ಬಳಸಿಕೊಂಡಿಲ್ಲ. ಸಂವಾದ ಹಾಗೂ ವಾಗ್ವಾದ ಈ ಬರವಣಿಗೆಯ ಗುರಿಯಾಗಿದೆ. ಯಾವುದೇ ವಿಷಯದ ಬಗ್ಗೆ ಬರೆಯುವಾಗಲೂ ಅವರು ವ್ಯಕ್ತಪಡಿಸಿರುವುದು ತಮ್ಮ ಆಗ್ರಹಪೂರಿತ ನಿಲುವುಗಳನ್ನು. ಅದರಲ್ಲಿ ದ್ವಂದ್ವ ಅಥವಾ 'ಹೀಗೂ ಇರಬಹುದೇನೋ' ಎಂಬಂತಹ ಧೋರಣೆಯನ್ನು ಇಟ್ಟುಕೊಂಡಿಲ್ಲ ಎಂಬುದಕ್ಕೆ ಈ ಲೇಖನಗಳು ನಿದರ್ಶನಗಳಾಗಿವೆ.

ತಮ್ಮನ್ನು ಆಳವಾಗಿ ಪ್ರಭಾವಿಸಿರುವ ಲೋಹಿಯಾವಾದದ ಹಿನ್ನೆಲೆಯಲ್ಲಿ ರಾಜಕೀಯ ನೈತಿಕತೆಯನ್ನು, ಸಾರ್ವಜನಿಕ ಬದುಕಿನ ಶುದ್ಧತೆಯನ್ನು, ಸಮಾಜದ ಕೆಳವರ್ಗಗಳ ಸ್ವಾಸ್ಥ್ಯದ ಬಗೆಗಿನ ಬದ್ಧತೆಯನ್ನು ಇಲ್ಲಿನ ಲೇಖನಗಳಲ್ಲಿ ಡಿ ಎಸ್ ಎನ್ ಪ್ರಕಟಪಡಿಸಿದ್ದು, ತಕ್ಷಣದ ವಿದ್ಯಮಾನಗಳನ್ನೇ ಅವರು ಕೈಗೆತ್ತಿಕೊಂಡಿದ್ದರೂ ಆ ಮೂಲಕ ತಾತ್ವಿಕ ನೆಲೆಗಟ್ಟಿನ ಶೋಧನೆಯನ್ನು ಕೈಗೊಳ್ಳಬೇಕೆಂಬ ಗಂಭೀರ ಆಶಯವನ್ನು ಅವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಓದಿನ ರಂಜನೆಗಾಗಿ ಅಥವಾ ಬರವಣಿಗೆಯ ಕಲಾತ್ಮಕ ಸೌಂದರ್ಯಕ್ಕಾಗಿ ಈ ಲೇಖನಗಳನ್ನು ಓದಲೆಂಬುದು ಅವರ ನಿರೀಕ್ಷೆಯಲ್ಲ. ಅದು ಡಿ. ಎಸ್.ಎನ್ ಅವರ ಉದ್ದೇಶವಲ್ಲ. ಲಂಕೇಶರ ಬರವಣಿಗೆಯ ರೀತಿಯನ್ನು ಇವರ ಅಂಕಣಗಳು ನೆನಪಿಸುತ್ತವೆ ಎಂದು ವಿಮರ್ಶೆಯೊಂದರಲ್ಲಿ ಬಂದ ಮಾತುಗಳನ್ನು ಇವರು ತನ್ನ ಲೇಖನವೊಂದರಲ್ಲಿ ಖಡಾಖಂಡಿತವಾಗಿ ನಿರಾಕರಿಸಿದ್ದಾರೆ. ಬರವಣಿಗೆಯ ಕಥನಾತ್ಮಕ ಅಂಶಗಳಿಗೆ ಒತ್ತು ಕೊಟ್ಟು ಲಂಕೇಶರು ಬಹಳ ಸಲ ಮುಖ್ಯ ವಸ್ತುವನ್ನು ಬದಿಗಿರಿಸಿ ಬರೆಯುತ್ತಿದ್ದರು, ರಾಜಕೀಯದ ಮುಖ್ಯ ವಿಷಯಗಳನ್ನು

ಳ್ಳಲು, ತನ್ನ ಕಲಾವಂತಿಕೆಯನ್ನು ಪೋಷಿಸಲು ಮತ್ತೊಂದು ರಾಷ್ಟ್ರದಲ್ಲಿ ನೆಲೆ ಕಂಡುಕೊಳ್ಳುವುದು ಭಾರತೀಯ ಸಂವಿಧಾನಕ್ಕೇ ಅಪಮಾನ ಎಸಗಿದಂತಾಗಿದೆ. ಈಗ ಹುಸೇನ್ ಅವರಿಗೆ ರಕ್ಷಣೆ ನೀಡಲು ಮುಂದಾಗುತ್ತಿರುವ ಕೇಂದ್ರ ಸರ್ಕಾರ ಇಷ್ಟು ವರ್ಷಗಳ ಕಾಲ ಯಾವ ಕ್ರಮ ಕೈಗೊಂಡಿದೆ ಎಂದು ಪ್ರಶ್ನಿಸಬೇಕಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಿರುವ ರಾಜಕೀಯ ಬೆಳವಣಿಗೆಗಳು, ಕಲಾವಿದರ, ಬರಹಗಾರರ, ಸಮಾಜ ಕಾರ್ಯಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೇ ಕಂಟಕಪ್ರಾಯವಾಗಿರುವುದು ಸ್ಪಷ್ಟವಾಗಿದ್ದು, ಹುಸೇನ್ ಪ್ರಕರಣದಲ್ಲಿ ಈ ಪ್ರವೃತ್ತಿಯ ಪರಾಕಾಷ್ಠೆಯನ್ನು ಕಾಣಬಹುದು. ಇಂದು ಭಾರತೀಯತೆಯನ್ನು, ಭಾರತೀಯ ಪೌರತ್ವವನ್ನು, ಪ್ರಜೆಗಳ ದೇಶಭಕ್ತಿಯನ್ನು ನಿರ್ಧರಿಸುತ್ತಿರುವುದು ಭಾರತೀಯ ಸಂವಿಧಾನವಲ್ಲ, ಬದಲಾಗಿ ಶಿವ ಸೇನೆ, ಆರೆಸ್ಸೆಸ್, ಭಜರಂಗದಳ, ಎಂಎನ್‌ಎಸ್ ಮುಂತಾದ ಬಲಪಂಥೀಯ ಸಂಘಟನೆಗಳು ಎಂದು ವಿಷಾದದಿಂದ ಹೇಳಬೇಕಿದೆ. ಭಾರತದ ರಾಜಕಾರಣದಲ್ಲಿ ಮತ್ತು ಸಾಮಾಜಿಕ ಪರಿಸರದಲ್ಲಿ ಓರ್ವ ಮಾನವ ಹಕ್ಕುಗಳ ಪ್ರತಿಪಾದಕ ಮಾವೋವಾದಿಯಾಗುವುದು, ಅಲ್ಪಸಂಖ್ಯಾತರನ್ನು ಹಕ್ಕುಗಳನ್ನು ಬೆಂಬಲಿಸುವವನು ಭಯೋತ್ಪಾಕನಾಗುವುದು, ಆದಿವಾಸಿಗಳ ಸಮರ್ಥಕರು ದೇಶದ್ರೋಹಿಗಳಾಗುವುದು ಸಾಮಾನ್ಯ ಸಂಗತಿಯಾಗಿರು ವುದು ಭವಿಷ್ಯದ ಕರಾಳತೆಯ ಸಂಕೇತವಾಗಿದೆ. ಹುಸೇನ್ ಅವರ ಬಹಿಷ್ಕಾರದ ಹಿಂದೆ ಇದೇ ಪ್ರವೃತ್ತಿಯ ವಿಸ್ತೃತ ರೂಪವನ್ನು ಕಾಣಬಹುದಾಗಿದೆ.

ಒಂದು ಉದಾರವಾದಿ ಪರಿಸರದಲ್ಲಿ ತಮ್ಮ ಭಾವನೆಗಳಿಗೆ ಘಾಸಿಯಾದಾಗ ಪ್ರತಿಭಟಿಸುವ ಹಕ್ಕು ಎಲ್ಲ ಜನಸಮುದಾಯಗಳಿಗೂ ಇರುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇರಬೇಕಾದ್ದೂ ಹೌದು. ಆದರೆ ಪ್ರತಿಭಟನೆಯ ಸ್ವರೂಪ ಹಿಂಸಾತ್ಮಕವಾಗಿಯೇ ಇರಬೇಕಿಲ್ಲ. ಬಹಿಷ್ಕಾರದಲ್ಲೇ ಅಂತ್ಯಗೊಳ್ಳಬೇಕಿಲ್ಲ. ಆದರೆ ಪ್ರಸ್ತುತ ರಾಜಕೀಯ ಸಂದರ್ಭದಲ್ಲಿ ಅಸ್ಮಿತೆಗಳ ರಾಜಕಾರಣ ಮತ್ತು ಬೆದರಿಕೆಯ ರಾಜಕಾರಣಗಳು ಸಮ್ಮಿಳಿತಗೊಳ್ಳುತ್ತಿದ್ದು ಅನ್ಯರನ್ನು ಸೃಷ್ಟಿಸುವುದು ಸುಲಭವಾಗಿದೆ. ಇಲ್ಲಿ ಬಲಪಂಥೀಯ ಗುಂಪುಗಳನ್ನು ಮಾತ್ರ ದೂಷಿಸುವುದೂ ತಪ್ಪಾಗುತ್ತದೆ. ದೇಶದಲ್ಲಿನ ಎಲ್ಲಾ ರಾಜಕೀಯ ಸಂಘಟನೆಗಳಲ್ಲೂ ಅಸಹಿಷ್ಣುತೆ ತಾಂಡವಾಡುತ್ತಿದೆ. ಕಾಂಗ್ರೆಸ್, ಎನ್‌ಸಿಪಿ ಮತ್ತಿತರ ಪಕ್ಷಗಳು ಹಲವಾರು ಸಂದರ್ಭಗಳಲ್ಲಿ ತಮ್ಮ ಗೂಂಡಾಗಿರಿ ಪ್ರವೃತ್ತಿಯನ್ನು ಪ್ರಚುರಪಡಿಸಿವೆ. ತಸ್ಲಿಮ ನಸ್ರೀನ್ ಅವರಿಗೆ ರಕ್ಷಣೆ ನೀಡಲು ಹಿಂಜರಿದ ಪಶ್ಚಿಮ ಬಂಗಾಲದ ಎಡರಂಗ ಸರ್ಕಾರ ಹುಸೇನ್ ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಉಪನ್ಯಾಸ ನೀಡುವುದು ಹಾಸ್ಯಾಸ್ಪದ ಎನಿಸುತ್ತದೆ. ಧಾರ್ಮಿಕ, ಮತೀಯ, ಭಾಷಿಕ, ಪ್ರಾದೇಶಿಕ ಭಾವನೆಗಳಂತೆಯೇ ಅಭಿವ್ಯಕ್ತಿ ಸ್ವಾತಂತ್ರ್ಯವೂ ಒಂದು ರಾಜಕೀಯ ದಾಳವಾಗಿ ಪರಿಣಮಿಸಿರುವುದು ಆಧುನಿಕ ಭಾರತದ ದುರಂತ.

ಭಾವನೆಗಳ ಜಂಜಾಟದಲ್ಲಿ

ರಷ್ದಿ ಮತ್ತು ತಸ್ಲಿಮಾರ ಕೃತಿಗಳು ಮುಸ್ಲಿಂ ಸಮುದಾಯದ(?) ಭಾವನೆಗಳನ್ನು ಘಾಸಿಗೊಳಿಸಿದರೆ, ಹುಸೇನ್ ಅವರ ಕಲಾಕೃತಿಗಳು ಹಿಂದೂ ಸಮುದಾಯದ (?) ಭಾವನೆಗಳನ್ನು ಕೆರಳಿಸುತ್ತದೆ. ಡಾವಿನ್ಸಿ ಕೋಡ್ ಕ್ರೈಸ್ತರನ್ನು ಕೆಣಕುತ್ತದೆ. ಆದರೂ ತಸ್ಲಿಮ, ರಷ್ದಿ, ಡಾನ್ ಬ್ರೌನ್,

ಕಳೆದ ಎರಡು ವರ್ಷಗಳಲ್ಲಿ ಭಾರತದಲ್ಲಿ ಸಂಭವಿಸಿರುವ ರಾಜಕೀಯ ಬೆಳವಣಿಗೆಗಳು, ಕಲಾವಿದರ, ಬರಹಗಾರರ, ಸಮಾಜ ಕಾರ್ಯಕರ್ತರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಂಟಕಪ್ರಾಯವಾಗಿರುವುದು ಸ್ಪಷ್ಟವಾಗಿದ್ದು, ಹುಸೇನ್ ಪ್ರಕರಣದಲ್ಲಿ ಈ ಪ್ರವೃತ್ತಿಯ ಪರಾಕಾಷ್ಠೆಯನ್ನು ಕಾಣಬಹುದು. ಇಂದು ಭಾರತೀಯತೆಯನ್ನು, ಭಾರತೀಯ ಪೌರತ್ವವನ್ನು, ಪ್ರಜೆಗಳ ದೇಶಭಕ್ತಿಯನ್ನು ನಿರ್ಧರಿಸುತ್ತಿರುವುದು ಭಾರತೀಯ ಸಂವಿಧಾನವಲ್ಲ, ಬದಲಾಗಿ ಶಿವಸೇನೆ, ಆರೆಸ್ಸೆಸ್, ಭಜರಂಗದಳ, ಎಂಎನ್‌ಎಸ್ ಮುಂತಾದ ಬಲಪಂಥೀಯ ಸಂಘಟನೆಗಳು ಎಂದು ವಿಷಾದದಿಂದ ಹೇಳಬೇಕಿದೆ.

ಹುಸೇನ್ ಇಂತಹ ಮಹಾನ್ ಸಾಹಿತಿ-ಕಲಾವಿದರು ಜನಸಮುದಾಯಗಳ ಅವಕೃಪೆಗೆ ಏಕೆ ಬಲಿಯಾಗಬೇಕು? ಈ ಎಲ್ಲರ ವಿರುದ್ಧ ಇರುವ ಆರೋಪವೆಂದರೆ ಸಮುದಾಯದ ಧಾರ್ಮಿಕ ಭಾವನೆಗಳನ್ನು ಕೆರಳಿಸುವುದು ಅಥವಾ ಧಾರ್ಮಿಕ ನಂಬಿಕೆಗಳನ್ನು ನಿಂದಿಸುವುದು. ಈ ಸಮುದಾಯ ಯಾವುದು? ಇಡೀ ಧರ್ಮದ ಅನುಯಾಯಿಗಳನ್ನು ಸಮುದಾಯ ಪ್ರತಿನಿಧಿಸುತ್ತದೆಯೇ? ಅಥವಾ ಇಡೀ ಸಮುದಾಯದ ಜನ ಒಂದು ನಿರ್ದಿಷ್ಟ ಗುಂಪಿಗೆ ತಮ್ಮ ಭಾವನೆಗಳನ್ನು ರಕ್ಷಿಸುವ ಗುತ್ತಿಗೆ ನೀಡಿದೆಯೇ? ಜನರ ಧಾರ್ಮಿಕ ಭಾವನೆಗಳೆಂದರೆ ಏನು? ಧರ್ಮದ ಹೆಸರಿನಲ್ಲಿ ಪ್ರಬಲ ವರ್ಗಗಳು ಜನಸಮುದಾಯಗಳನ್ನು ತಮ್ಮ ಮುಷ್ಟಿಯಲ್ಲಿರಿಸಿಕೊಳ್ಳಲು ರೂಪಿಸುವ ನಿಯಮಗಳು, ರೀತಿ ರಿವಾಜುಗಳೇ ಧಾರ್ಮಿಕ ಭಾವನೆಗಳೇ? ಅಥವಾ ಧರ್ಮ ಗ್ರಂಥಗಳಲ್ಲಿ ಅಂದಿನ ಕಾಳಘಟ್ಟಕ್ಕೆ ಅನುಗುಣವಾಗಿ ವ್ಯಾಖ್ಯಾನಿಸಲಾಗಿರುವ ವಿದ್ಯಮಾನಗಳನ್ನೇ ಶತಮಾನಗಳ ನಂತರವೂ ಯಥಾವತ್ತಾಗಿ ಪಾಲಿಸುವ ನೀತಿಗಳೇ? ಈ ಗಂಭೀರ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಅಗತ್ಯ.

ಈ ಪ್ರಶ್ನೆಗಳಿಗೆ ಉತ್ತರ ಪ್ರಜಾತಂತ್ರ ವ್ಯವಸ್ಥೆಯಲ್ಲೇ ಇದೆ. ಭಾರತದಂತಹ ಬಹುಮುಖೀ ಸಂಸ್ಕೃತಿಯ ರಾಷ್ಟ್ರಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ತನ್ನದೇ ಆದ ಮಹತ್ವ ಇರಬೇಕಾದುದು ಅತ್ಯಗತ್ಯ. ಅಭಿಪ್ರಾಯ ಸ್ವಾತಂತ್ರ್ಯವೇ ಇಲ್ಲದೆ ಹೋಗಿದ್ದಲ್ಲಿ ಭಾರತೀಯ ಇತಿಹಾಸದ ಅನೇಕ ಸಾಹಿತ್ಯ ಕೃತಿಗಳು ನಶಿಸಿಹೋಗುತ್ತಿದ್ದವು. ಭಾರತದ ಬಹುಸಂಖ್ಯಾತ ಜನತೆ ಶತಮಾನಗಳ ಕಾಲದ ತಮ್ಮ ಅಸ್ತಿತ್ವವನ್ನೇ ನಿರಾಕರಿಸುವ ಸಾಹಿತ್ಯವನ್ನೂ ಸಹಿಸಿಕೊಂಡಿರುವುದೇ ಈ ಸಹಿಷ್ಣುತಾ ಮನೋಭಾವಕ್ಕೆ ಸ್ಪಷ್ಟ ನಿದರ್ಶನ. ಇದೇ ರೀತಿಯಲ್ಲಿ ಸಾಂಪ್ರದಾಯಿಕ ವೈದಿಕ ಸಂಸ್ಕೃತಿಯೂ ಸಹ ಅನೇಕ ಭಿನ್ನಾಭಿಪ್ರಾಯಗಳನ್ನು ಎದುರಿಸಿಯೇ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ. ಭಾರತೀಯ ಧರ್ಮ ಶಾಸ್ತ್ರಗಳಲ್ಲಿ ಕಂಡು ಬರುವ ವೈವಿಧ್ಯತೆಗಳೇ ಸಹಿಷ್ಣುತೆಯನ್ನು ಸೂಚಿಸುತ್ತದೆ. ಎಲ್ಲ ಧರ್ಮಗಳನ್ನೂ ತನ್ನೊಳಗೆ ಆವಾಹನೆ ಮಾಡಿಕೊಂಡು ಸಹಬಾಳ್ವೆಯನ್ನು ನಡೆಸುವ ಧೋರಣೆ ಭಾರತೀಯ ಸಂಸ್ಕೃತಿಯಲ್ಲಿದೆ. ಇದು ಭಾರತದ ಬಹುಮುಖೀ ಜನ ಸಂಸ್ಕೃತಿಯ ಹೆಮ್ಮೆಯ ಲಕ್ಷಣ. ಆದರೆ ಸಮಕಾಲೀನ ಸಂದರ್ಭದಲ್ಲಿ ಭಾರತೀಯ ಜನತೆ ಸ್ಥಾಪಿತ ಧರ್ಮಗಳ ಮೋಡಿಗೊಳಗಾಗಿ ಈ ಮನೋಭಾವದಿಂದ ದೂರ ಸರಿಯುತ್ತಿರುವುದು ಸ್ಪಷ್ಟ ವಾಗುತ್ತಿದೆ.

ಹುಸೇನ್ ಅವರ ಕಲಾಕೃತಿಗಳಾಗಲೀ, ತಸ್ಲಿಮಾ ಅವರ ಲೇಖನಗಳಾಗಲೀ, ಸಲ್ಮಾನ್ ರಷ್ದಿಯ ಕಾದಂಬರಿಗಳಾಗಲೀ ಆಯಾ ಕಲಾವಿದರ ಚಿಂತನೆಯಿಂದ ಹೊರಹೊಮ್ಮುವ ಮಹತ್ತರ ಕೃತಿಗಳಾಗುತ್ತವೆ. ಈ ಕೃತಿಗಳು ಕೆಲವು ಧರ್ಮಗಳ, ಸಮುದಾಯಗಳ ಜನತೆಗೆ ಅಪಮಾನ ಮಾಡುವುದೇ ಆದಲ್ಲಿ ಅದನ್ನು ಪ್ರತಿಭಟಿಸುವ ಪ್ರಜಾತಾಂತ್ರಿಕ ಹಕ್ಕು ಎಲ್ಲ ಜನಸಮುದಾಯಗಳಿಗೂ ಇರುತ್ತದೆ. ಆದರೆ ಪ್ರತಿಭಟನೆಯ ವಿಧಾನವೂ ಪ್ರಜಾಸತ್ತಾತ್ಮಕವಾಗಿರುವುದು ಅಗತ್ಯವಲ್ಲವೇ? ಕಲಾವಿದರಿಗೆ, ಬರಹಗಾರರಿಗೆ ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮನ್ನಿಸುತ್ತಲೇ ನ್ಯಾಯಾಂಗದ ಮೂಲಕವೂ ಪ್ರತಿಭಟಿಸಬಹುದಲ್ಲವೇ? ಹುಸೇನ್ ಅವರ ಕೃತಿಗಳು, ತಸ್ಲಿಮಾ ಅವರ ಪ್ರತಿಪಾದನೆಗಳು ಎಲ್ಲ ವರ್ಗಗಳ ಜನರನ್ನೂ ಮೆಚ್ಚಿಸಬೇಕೆಂದೇನಿಲ್ಲ. ಹಾಗೆ ಅಪೇಕ್ಷಿಸುವುದರಿಂದ ಸಮಾಜವನ್ನು ಹಿಂದಕ್ಕೆ ಕೊಂಡೊಯ್ದಂತಾಗುತ್ತದೆ. ಪ್ರಾಚೀನ-ಮಧ್ಯ ಪ್ರಾಚೀನ ಕಾಲದ ಮಹಾರಾಜರುಗಳ ಆಸ್ಥಾನದಲ್ಲಿದ್ದ ಕವಿಗಳಂತೆ ಆಧುನಿಕ ಚಿಂತಕರು, ಕಲಾವಿದರು ಇರಬೇಕೆಂದು ಅಪೇಕ್ಷಿಸುವುದು ನಾಗರಿಕತೆಗೆ ಅಪಮಾನ ಮಾಡಿದಂತಾಗುತ್ತದೆ. ಆದರೆ ಪ್ರಸ್ತುತ ಇದೇ ಪರಿಸ್ಥಿತಿಯನ್ನು ಭಾರತೀಯ ಸಮಾಜ ಎದುರಿಸುತ್ತಿರುವುದೂ ಅಷ್ಟೇ ಸತ್ಯ.

ಧರ್ಮ-ಸಂಸ್ಕೃತಿಗಳು ಸಾಂಸ್ಥಿಕ ಅಸ್ಮಿತೆಗಳನ್ನು ಸೃಷ್ಟಿಸಿಕೊಂಡು ಸಂಘಟನಾತ್ಮಕವಾಗಿ ಬೆಳೆಯಲು ಹವಣಿಸುತ್ತಿರುವ ಈ ಸಂದರ್ಭದಲ್ಲಿ ಧರ್ಮದ ವ್ಯಾಖ್ಯಾನವೂ ನಿರ್ದಿಷ್ಟ ಗುಂಪುಗಳ ಧೋರಣೆಗಳನ್ನು ಬಿಂಬಿಸುತ್ತಿವೆ. ಹಾಗಾಗಿ ಧಾರ್ಮಿಕ ನಂಬಿಕೆ, ಆಚರಣೆ, ಧರ್ಮ ಗ್ರಂಥ, ಧರ್ಮ ಗುರು ಇವೆಲ್ಲವೂ ಒಂದು ವರ್ಗದ ಖಾಸಗಿ ಆಸ್ತಿಯಾಗಿ ಪರಿಣಮಿಸಿದೆ. ಸ್ವತಂತ್ರ ಭಾರತದ ಸೆಕ್ಯುಲರ್ ವ್ಯವಸ್ಥೆಯಲ್ಲೂ ಧರ್ಮ ಮತ್ತು ಸಂಸ್ಕೃತಿ ರಾಜಕೀಯ ವ್ಯಾಖ್ಯಾನಗಳಿಗೆ ತುತ್ತಾದ ಪರಿಣಾಮವಾಗಿ ಧಾರ್ಮಿಕ ನಂಬಿಕೆಗಳು ಮತ್ತು ಭಾವನೆಗಳು ರಾಜಕೀಯ ಅಸ್ತ್ರಗಳಾಗಿಯೂ ಪರಿಣಮಿಸುತ್ತಿವೆ. ಈ ವಿದ್ಯಮಾನವನ್ನು ಗಂಭೀರವಾಗಿ ಪರಿಗಣಿಸಿ, ಪ್ರಜಾತಂತ್ರ ವ್ಯವಸ್ಥೆಯ ಮೂಲಾಧಾರವಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದು ಆಳ್ವಿಕರ ಕರ್ತವ್ಯ ಮಾತ್ರವಲ್ಲದೆ, ಜನಸಮುದಾಯಗಳ ಕರ್ತವ್ಯವೂ ಆಗಿದೆ. ಈ ನಿಟ್ಟಿನಲ್ಲಿ ಭಾರತೀಯ ಪ್ರಜಾಸತ್ತೆಯ ವೈಫಲ್ಯವೇ ತಸ್ಲಿಮಾ, ರಷ್ದಿ, ಹುಸೇನ್ ಅವರಂತಹ ಸಾಹಿತಿ ಕಲಾವಿದರ ಬಹಿಷ್ಕಾರಕ್ಕೆ ಕಾರಣವಾಗಿದೆ. ಅಭಿಪ್ರಾಯ ಬೇಧವನ್ನು ಮನ್ನಿಸುತ್ತಲೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಪಾಡುವ ಹೊಣೆಗಾರಿಕೆಯನ್ನು ನಾಗರಿಕ ಸಮಾಜ ಒಪ್ಪಿಕೊಂಡಾಗಲೇ ಒಂದು ಸೌಹಾರ್ದಯುತ, ಆರೋಗ್ಯಕರ ಸಮಾಜವನ್ನು ನಿರ್ಮಿಸಲು ಸಾಧ್ಯ. ರಾಷ್ಟ್ರದ ಪೌರತ್ವವನ್ನೇ ತೊರೆಯಬೇಕಾದ ದುರಂತ ಸಂದರ್ಭ ಹುಸೇನ್ ನಂತರದ ಮತ್ತಾವುದೇ ಕಲಾವಿದರಿಗೆ ಬಾರದಿರಲಿ ಎಂದಷ್ಟೇ ಆಶಿಸೋಣ. □

ಗುರಿ- ಗುರುವಿಲ್ಲದ ಅನೇಕಲವ್ಯರು

ಜಿ. ಜಯದೇವಪ್ಪ

ಶಿಕ್ಷಣ: ಬೆಳೆದುಬಂದ ಬಗೆ :

ಜ್ಞಾನ ಸಂಪಾದನೆಯ ಅನೇಕ ವಿಧಾನಗಳಲ್ಲಿ ಔಪಚಾರಿಕ ಶಿಕ್ಷಣ ಕ್ರಮ ಪ್ರಧಾನವಾದುದು. ನಾಗರೀಕತೆ, ತಂತ್ರಜ್ಞಾನ, ವಿಜ್ಞಾನದ ಹೊಸಬಗೆಯ ಆವಿಷ್ಕಾರಗಳಿಗೆ ದಾರಿ ತೋರುವ ಶಾಲಾ-ಕಾಲೇಜುಗಳು, ಅಧ್ಯಯನ-ಸಂಶೋಧನ ಕೇಂದ್ರಗಳು, ಶಿಕ್ಷಣಮಂಡಳಿ-ವಿಶ್ವವಿದ್ಯಾಲಯಗಳು ಮನುಕುಲದ ಪ್ರಗತಿಯ ತೂಗುತೊಟ್ಟಿಲುಗಳಾಗಿವೆ. ಈ ಔಪಚಾರಿಕ ಕಲಿಕಾ ಕೇಂದ್ರಗಳಿಗೆ ಅವುಗಳದೇ ಆದ ಪರಂಪರೆಯಿದೆ. ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಮಾದರಿಯಲ್ಲಿ ರೂಪುಗೊಂಡ ಭಾರತೀಯ ಶಿಕ್ಷಣ ಸಂಸ್ಥೆಗಳಿಗೆ, ಪ್ರತ್ಯೇಕವಾದ ಪೂರ್ವೇತಿಹಾಸವೊಂದಿದೆ.

ಅಂದಿನ ಶಿಕ್ಷಣ ಪದ್ದತಿ :

ವಸಾಹತುಶಾಹಿ ಪೂರ್ವದಲ್ಲಿ, ಸನಾತನ ಶೈಕ್ಷಣಿಕ ವ್ಯವಸ್ಥೆ, ಕಲಿಕಾ ಮಾದರಿ ಮತ್ತು ಪಠ್ಯಕ್ರಮಗಳು ಇಂದಿಗಿಂತ ಭಿನ್ನವಾಗಿದ್ದವು. ರಾಜ್ಯಾಡಳಿತದ ಹೊಣೆಯನ್ನು ಹೊತ್ತ ರಾಜಸತ್ತೆ ಇಂತಹ ಕಲಿಕಾ ಕೇಂದ್ರಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿತ್ತು. ಸಾಮಾನ್ಯವಾಗಿ ಮಠಗಳು, ಗುರುಕುಲಗಳು, ಋಷ್ಯಾಶ್ರಮಗಳು ಜ್ಞಾನಾರ್ಜನೆಯ ಕೇಂದ್ರಗಳಾಗಿದ್ದು, ಈ ಜ್ಞಾನಾರ್ಜನೆಯ ಉದ್ದೇಶವೂ ಕೂಡ ಇಂದಿಗಿಂತ ಭಿನ್ನವಾಗಿತ್ತು. ಪ್ರಧಾನವಾಗಿ ಬದುಕಿಗೆ ಧಾರ್ಮಿಕ ಮತ್ತು ನೈತಿಕ ಚೌಕಟ್ಟನ್ನು ಒಂದು ಅಂಗೀಕೃತ ಮೌಲ್ಯವಾಗಿ ಒಪ್ಪಿಕೊಂಡ ಕುಶಲಿಗಳು ಇಲ್ಲಿ ಪಡೆದ ಜ್ಞಾನದ ಮೂಲಕ ಸಮಾಜದ ವಿವಿಧ ಸ್ತರಗಳಲ್ಲಿ ವೃತ್ತಿನಿರತರಾಗುತ್ತಿದ್ದರು. ತಾವು ಕಲಿತ ವಿದ್ಯೆಗೂ ನಿರ್ವಹಿಸಲಿರುವ ಉದ್ಯೋಗಕ್ಕೂ ನೇರ ಸಂಬಂಧವಿದ್ದು, ಆ ಶಿಕ್ಷಣವು ವೃತ್ತಿನಿರತನಿಗೆ ವೃತ್ತಿಪಾವಿತ್ರ್ಯದ ಸಂಸ್ಕಾರವನ್ನು ಪರೋಕ್ಷವಾಗಿ ತುಂಬಿರುತ್ತಿತ್ತು. ಆದರೆ, ಶ್ರವ್ಯಾಶ್ರವ್ಯತೆಯ ಮಡಿವಂತಿಕೆಗೆ ಒಳಪಡಿಸಲ್ಪಟ್ಟ ಸಂಸ್ಕೃತ ಭಾಷೆ, ಸ್ಪೃಶ್ಯಾಸ್ಪೃಶ್ಯತೆಯ ವರ್ಣಾಶ್ರಮವನ್ನು ಪ್ರಬೋಧಿಸುವ ಹಿತಾಸಕ್ತಿಗಳು ಕಾರಣವಾಗಿ ಜ್ಞಾನ, ಎಲ್ಲ ಸ್ತರದ ಸಾಮಾಜಿಕರು ಪಡೆಯಬಹುದಾದ ದ್ರವ್ಯವಾಗಲಿಲ್ಲ. ಹೀಗಾಗಿ ಜ್ಞಾನವೆಂಬುದು ಕೆಲವೇ ಹಿತಾಸಕ್ತವರ್ಗದ ಆಸ್ತಿಯೆಂಬ 'ಮಿತ ಜ್ಞಾನ'ಕ್ಕೆ ಒಳಗಾದುದು ವಿಪರ್ಯಾಸವೇ ಸರಿ. ಸೇವಾಕ್ಷೇತ್ರದಲ್ಲಿ ನಿರತರದ ವೃತ್ತಿಕುಶಲಿಗಳು ತಮ್ಮ ವೃತ್ತಿಯಪಾವಿತ್ರ್ಯದ ಗೆರೆಯನ್ನು ದಾಟಿ, ಲಂಪಟರಾದ ನಿದರ್ಶನಗಳಿಗೆ ಈ 'ಮಿತಜ್ಞಾನ'ವೇ ಮೂಲವಾಗಿತ್ತು.

ಜ್ಞಾನ – ಬೇಟೆಯ ಸಾಧನ :

ಹೀಗೆ ಜ್ಞಾನವನ್ನು ಪಡೆದ ಜ್ಞಾನಿ, ಹುಟ್ಟಿದ ವರ್ಣವೇ ಕಾರಣವಾಗಿ ಜ್ಞಾನದಿಂದ ವಂಚಿತನಾದ ಅಜ್ಞಾನಿಯನ್ನು ನಡೆಸಿಕೊಂಡುದು, ದುಡಿಸಿಕೊಂಡುದೇ ನಮ್ಮ ಆರ್ಷೇಯ, ಹಿಂದು, ಸನಾತನವಾದಿ ಬದುಕಿನ ಚರಿತ್ರೆಯಾಗಿದೆ. ಅನೇಕ ಋಷಿ-ಮಹರ್ಷಿಗಳ, ಸಾಧು-ಸಂತರ, ಪ್ರಯೋಗಕುತೂಹಲಿಗಳ, ಸಂಶೋಧಕರ ಪ್ರಯತ್ನದ ಫಲವಾಗಿ ಬೆಳಗಿದ ಸತ್ಯಕ್ಕೆ ಮನುಷ್ಯ ಪರವಾದ ಕಾಳಜಿಯಿದೆ. ತಲಾಂತರಗಳಲ್ಲಿ ಉಳಿದು, ಬೆಳೆದು ಬಂದ ಈ ವಿದ್ಯೆ, ಜ್ಞಾನದ ಬಾಗಿಲನ್ನು ತೆರೆದಿದೆ. ಅದು ಪವಿತ್ರವಾಗಿದೆ. ದುರಂತವೆಂದರೆ ಈ ಪವಿತ್ರವಾದ ವಿದ್ಯೆಯನ್ನು ಪಡೆದು ಜ್ಞಾನಿಗಳಾದವರು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರು. ವಿಪರೀತಾರ್ಥ, ಅನ್ಯಾರ್ಥಗಳ ಮೂಲಕ ಜ್ಞಾನವೆಂಬುದು ಮನುಷ್ಯ, ಮನುಷ್ಯನನ್ನು ಬೇಟೆಯಾಡುವ ಸಾಧನವಾಯಿತು.

ಅರ್ವಾಚೀನ ಶಿಕ್ಷಣ ವಿಧಾನ :

17-18ನೇ ಶತಮಾನದಲ್ಲಿ ಆಂಗ್ಲರ ಆಕ್ರಮಣದೊಂದಿಗೆ ಇಂಗ್ಲೀಷ್‌ನ ಆಗಮನವಾಯಿತು. ಅದುವರೆಗೆ ಭಾರತೀಯ ಪ್ರಾದೇಶಿಕ ಭಾಷೆ-ಶಿಕ್ಷಣಗಳಿಗೆ ಸಂಸ್ಕೃತದೊಂದಿಗೆ ಇದ್ದ ಕೊಡುಕೊಳೆಯನ್ನು ಪಲ್ಲಟಗೊಳಿಸಿದ ಆಂಗ್ಲ ಶಿಕ್ಷಣ ಪದ್ಧತಿ, ಹೊಸ ಬಗೆಯ ವ್ಯಾಸಂಗ ಕ್ರಮ

ವಸಾಹತುಶಾಹಿ ಪೂರ್ವದಲ್ಲಿ, ಸನಾತನ ಶೈಕ್ಷಣಿಕ ವ್ಯವಸ್ಥೆ, ಕಲಿಕಾ ಮಾದರಿ ಮತ್ತು ಪಠ್ಯಕ್ರಮಗಳು ಇಂದಿಗಿಂತ ಭಿನ್ನವಾಗಿದ್ದವು. ರಾಜ್ಯಾಡಳಿತದ ಹೊಣೆಯನ್ನು ಹೊತ್ತ ರಾಜಸತ್ತೆ ಇಂತಹ ಕಲಿಕಾ ಕೇಂದ್ರಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿತ್ತು. ಸಾಮಾನ್ಯವಾಗಿ ಮಠಗಳು, ಗುರುಕುಲಗಳು, ಋಷ್ಯಾಶ್ರಮಗಳು ಜ್ಞಾನಾರ್ಜನೆಯ ಕೇಂದ್ರಗಳಾಗಿದ್ದು, ಈ ಜ್ಞಾನಾರ್ಜನೆಯ ಉದ್ದೇಶವೂ ಕೂಡ ಇಂದಿಗಿಂತ ಭಿನ್ನವಾಗಿತ್ತು. ಪ್ರಧಾನವಾಗಿ ಬದುಕಿಗೆ ಧಾರ್ಮಿಕ ಮತ್ತು ನೈತಿಕ ಚೌಕಟ್ಟನ್ನು ಒಂದು ಅಂಗೀಕೃತ ಮೌಲ್ಯವಾಗಿ ಒಪ್ಪಿಕೊಂಡ ಕುಶಲಿಗಳು ಇಲ್ಲಿ ಪಡೆದ ಜ್ಞಾನದ ಮೂಲಕ ಸಮಾಜದ ವಿವಿಧ ಸ್ತರಗಳಲ್ಲಿ ವೃತ್ತಿನಿರತರಾಗುತ್ತಿದ್ದರು.

ಗಳಿಗೆ ದಾರಿ ಮಾಡಿಕೊಟ್ಟಿತು. ಪ್ರಾಥಮಿಕದಿಂದ, ಪ್ರೌಢ, ಉನ್ನತ ಶಿಕ್ಷಣದ ಕ್ಷೇತ್ರಗಳಲ್ಲಿ ಹೊಸ ಬಗೆಯ ಚಿಂತನ ಕ್ರಮಗಳು, ಸಮುದಾಯ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆಗಳು ಭಾರತೀಯನನ್ನು ಹುಬ್ಬೇರಿಸು ವಂತೆ ಮಾಡಿದವು. ಪ್ರಶ್ನಿಸುವ, ಪ್ರಯೋಗಗಳ ಮೂಲಕ ಖಚಿತ ಪಡಿಸಿಕೊಳ್ಳುವ, ಕಾರಣಪೂರ್ವಕವಾಗಿ ನಿರಾಕರಿಸುವ, ವೈಜ್ಞಾನಿಕ ಚಿಂತನ ಕ್ರಮವೊಂದು ಆಂಗ್ಲ ವ್ಯಾಸಂಗ ಕ್ರಮದಿಂದ ಸಾಧ್ಯವಾಯಿತು. ಜ್ಞಾನ ಮೌಲಿಕವಾಯಿತು.

ಸಂಕ್ರಮಣಾವಸ್ಥೆ :

ಋಷ್ಯಾಶ್ರಮಗಳು, ಗುರುಕುಲಗಳಿಂದ ವಲಸೆ ಹೊರಟ ಅಧ್ಯಯನ, ಅಧ್ಯಾಪನಗಳು, ಶಾಲೆ, ಕಾಲೇಜುಗಳಲ್ಲಿ, ವಿಶ್ವ ವಿದ್ಯಾಲಯಗಳಲ್ಲಿ ನೆಲೆಗೊಂಡುದು ಭಾರತೀಯ ಬದುಕಿನಲ್ಲಿನ ಸಂಕ್ರಮಣದ ಕಾಲಘಟ್ಟವೆಂದೇ ಹೇಳಬೇಕು. ಈ ವ್ಯಾಸಂಗದ ಅಂಗವಾಗಿ ಅಧ್ಯಯನಕ್ಕೊಳಪಡುವ ವಿಷಯಗಳು ಪ್ರತ್ಯೇಕ ಶಾಖೆಗಳಾದವು. ಇಂದಿನ ವ್ಯಾಸಂಗ ಕ್ರಮವು ಮಾನವಿಕ, ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ, ಔದ್ಯೋಗಿಕ, ವಾಣಿಜ್ಯ, ಉದ್ಯಮ–ವ್ಯವಹಾರನಿರ್ವಹಣೆ, ವ್ಯಕ್ತಿತ್ವವಿಕಸನ, ಎಂಬ ಅನೇಕ ಶಾಸ್ತ್ರೀಯ ಅಧ್ಯಯನದಿಂದ ಆರಂಭಗೊಂಡು, ಪ್ರಸ್ತುತ ಅಂತರ್ಶಿಸ್ತೀಯ ಅಧ್ಯಯನದವರೆಗೆ ವೈವಿಧ್ಯಮಯವಾಗಿದೆ. ಈ ವೈವಿಧ್ಯತೆಗೆ ಹಲವು ಬಗೆಯ ಬದುಕಿನ ಕ್ರಮಗಳು, ಕೊನೆಯಿಲ್ಲದ ಮಹತ್ವಾಕಾಂಕ್ಷೆಗಳು ಒತ್ತಾಸೆಯಾಗಿ ನಿಂತಿವೆ. ಮನುಷ್ಯನ ದಾಹವನ್ನು ಗಣಕಯಂತ್ರಗಳು, ಅಂತರ್ಜಾಲಸೇವೆಗಳು ತಮ್ಮ ಶಕ್ತ್ಯಾನುಸಾರ ಹಿಂಗಿಸುತ್ತಿವೆ. "ಮಾನವ ಸಂಪನ್ಮೂಲ" ದ ಶೀರ್ಷಿಕೆಯ ಅಡಿಯಲ್ಲಿ ವಿದ್ಯೆ–ಜ್ಞಾನಾರ್ಜನೆಗೆ ಅವಕಾಶಗಳನ್ನು ಕಲ್ಪಿಸಲಾಗಿದೆ. ರಾಜಾಶ್ರಯವನ್ನು ಪಡೆದ ಅಂದಿನ ಶಿಕ್ಷಣ ವ್ಯವಸ್ಥೆ ಇಂದು ಪ್ರಜಾರಾಜ್ಯದ ಆಶ್ರಯದಲ್ಲಿದೆ.

ಸರ್ಕಾರಗಳ ಧೋರಣೆ :

ಶಿಕ್ಷಣ ಎಂದರೇನು ಎಂಬುದನ್ನು ಗಂಭೀರವಾಗಿ ಆಲೋಚಿಸಬೇಕಾದ ಕಾಲಘಟ್ಟದಲ್ಲಿ ಇಂದಿನ ಶಿಕ್ಷಣ ವ್ಯವಸ್ಥೆ ನಿಂತಿದೆ. ಈ ಕ್ಷೇತ್ರಕ್ಕೆ ಕೊಡುಗೆ ನೀಡಿದವರು, ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಶಿಕ್ಷಣವೇತ್ತರ ಉದ್ದೇಶಗಳೇನಿದ್ದವು ಎಂಬುದನ್ನು ಪುನರ್ಮನನ ಮಾಡಬೇಕಾದ ಜರೂರು ಈಗ ಎದುರಾಗಿದೆ. ಇಂದು ನಾವು ನೀಡುತ್ತಿರುವ ಶಿಕ್ಷಣ ಎಷ್ಟರಮಟ್ಟಿಗೆ ಮಾನವ ಕಲ್ಯಾಣಕ್ಕೆ ಪೂರಕವಾಗಿದೆ ಎಂಬುದರ ಆತ್ಮಾವಲೋಕನ ಆಗಬೇಕಿದೆ. "ಒಟ್ಟು ರಾಷ್ಟ್ರೀಯ ಆದಾಯದ ಮೂರನೇ ಒಂದು ಭಾಗ ಶಿಕ್ಷಣ ಕ್ಷೇತ್ರಕ್ಕೆ ವ್ಯಯವಾಗುತ್ತಿದೆ. ಇದು ಒಂದು ಅನುತ್ಪಾದಕ ಕ್ಷೇತ್ರ. ಇದರಲ್ಲಿ ಬಂಡವಾಳ ತೊಡಗಿಸಲು ಸಾಧ್ಯವಿಲ್ಲ; ಆದ್ದರಿಂದ ಶಿಕ್ಷಣ ಸಂಸ್ಥೆಗಳು ಆಕರ್ಷಕವಾದ ಕೋರ್ಸುಗಳನ್ನು ತೆರೆಯುವ ಮೂಲಕ ತಮ್ಮ ಸಂಪನ್ಮೂಲಗಳನ್ನು ತಾವೇ ಕ್ರೋಢೀಕರಿಸಿಕೊಳ್ಳಬೇಕು" ಎಂದು ತಕರಾರು ತೆಗೆಯುವ, ಅನುದಾನವನ್ನು ಕಡಿತಗೊಳಿಸುವ ನಮ್ಮ ಜನಪ್ರಿಯ ಸರಕಾರಗಳು, ವಿಶ್ವ ಬ್ಯಾಂಕಿನಿಂದ ಸಾವಿರಾರು ಕೋಟಿಗಳಲ್ಲಿ ಸಾಲ ತೆಗೆದು ಅಕ್ಷರದಾಸೋಹ, ಅಕ್ಷರತುಂಗಾದಂತಹ ಯೋಜನೆಗಳಲ್ಲಿ ತೊಡಗಿಸುವುದನ್ನು ಮುಂದುವರಿಸಿವೆ.

ವಿದೇಶಿ ವಿಶ್ವವಿದ್ಯಾನಿಲಯಗಳನ್ನು ಆಹ್ವಾನಿಸುವುದು, ವಿದೇಶ ದಲ್ಲಿ ಅಧ್ಯಯನ ಮಾಡಲು ತೆರಳುವ ವಿದ್ಯಾರ್ಥಿಗಳಿಗೆ ಅಗ್ಗದ ಬಡ್ಡಿ ದರದ ಸಾಲ ಸೌಲಭ್ಯ, ವಿದ್ಯಾರ್ಥಿವೇತನಗಳನ್ನು ನೀಡುವುದು, ಸರ್ಕಾರದ ಯೋಜಿತ ಕಾರ್ಯಕ್ರಮಗಳಾಗಿವೆ. ಈ ಕಾರ್ಯಕ್ರಮಗಳ ರೂಪುರೇಷೆ ಸಂಯೋಜನೆಗಳಲ್ಲಿ ಒಂದು ನಿರ್ದಿಷ್ಟ ಗುರಿ–ಗಮ್ಯತೆಗಳು ಇದ್ದಂತೆ ಕಾಣ ಬರುವುದಿಲ್ಲ. ಹಾಗಾಗಿ ಶಿಕ್ಷಣ ಕ್ಷೇತ್ರದ ಸೋಲು–ವೈಫಲ್ಯಗಳಿಗೆ ನಮ್ಮ ಸರ್ಕಾರಗಳ ಗೊಂದಲ ಮೂಲವಾದ ದ್ವಂದ್ವ ನೀತಿಗಳೂ ಕಾರಣವಾಗಿವೆ. ಈ ಲೇಖನದ ಮಿತಿಗೆ ಹೊರೆಯಾದರೂ ಅಪ್ರಸ್ತುತವಾಗಲಾರದ ಕರ್ನಾಟಕ ರಾಜ್ಯ ಸರ್ಕಾರದ ಒಂದು ಪುಟ್ಟ ನಿದರ್ಶನವನ್ನು ವಾಚಕರ ಸ್ಪಷ್ಟೀಕರಣಕ್ಕಾಗಿ ಇಲ್ಲಿ ನೀಡಲೇಬೇಕಿದೆ. ಸರ್ಕಾರದ ಅನನುಭವ ಇದರಿಂದ ಸ್ಪಷ್ಟವಾಗುತ್ತದೆ. ಖ್ಯಾತ ವಿಶ್ವವಿದ್ಯಾನಿಲಯವೊಂದರ ಅಫ್ಲಿಲಿಯೇಷನ್ ಕಮಿಟಿಯೊಂದು ಅಫ್ಲಿಲಿಯೇಷನ್ ಕಾರ್ಯನಿಮಿತ್ತ ಖಾಸಗಿ ಕಾಲೇಜುಗಳಿಗೆ ಸಂದರ್ಶಿಸಿದ ಸಂದರ್ಶನದ ಕಥೆಯ ವ್ಯಥೆಯಿದು :

ಋಷ್ಯಾಶ್ರಮಗಳು, ಗುರುಕುಲಗಳಿಂದ ವಲಸೆ ಹೊರಟ ಅಧ್ಯಯನ, ಅಧ್ಯಾಪನಗಳು, ಶಾಲೆ, ಕಾಲೇಜುಗಳಲ್ಲಿ, ವಿಶ್ವ ವಿದ್ಯಾಲಯಗಳಲ್ಲಿ ನೆಲೆಗೊಂಡುದು ಭಾರತೀಯ ಬದುಕಿನಲ್ಲಿನ ಸಂಕ್ರಮಣದ ಕಾಲ ಘಟ್ಟವೆಂದೇ ಹೇಳಬೇಕು. ಈ ವ್ಯಾಸಂಗದ ಅಂಗವಾಗಿ ಅಧ್ಯಯನಕ್ಕೊಳಪಡುವ ವಿಷಯಗಳು ಪ್ರತ್ಯೇಕ ಶಾಖೆಗಳಾದವು. ಇಂದಿನ ವ್ಯಾಸಂಗ ಕ್ರಮವು ಮಾನವಿಕ, ವಿಜ್ಞಾನ, ತಂತ್ರಜ್ಞಾನ, ವೃತ್ತಿಪರ, ಔದ್ಯೋಗಿಕ, ವಾಣಿಜ್ಯ, ಉದ್ಯಮ–ವ್ಯವಹಾರ ನಿರ್ವಹಣೆ, ವ್ಯಕ್ತಿತ್ವವಿಕಸನ, ಎಂಬ ಅನೇಕ ಶಾಸ್ತ್ರೀಯ ಅಧ್ಯಯನದಿಂದ ಆರಂಭಗೊಂಡು,

ವಿಶ್ವವಿದ್ಯಾನಿಲಯಗಳ ಮಾನ್ಯತೆಯ ಪ್ರಶ್ನೆ :

ಮೊದಲೇ ಆರಂಭವಾದ ಖಾಸಗಿ ಮ್ಯಾನೇಜ್‌ಮೆಂಟಿನ ಪ್ರಥಮ ದರ್ಜೆ ಕಾಲೇಜುಗಳಿಗೆ ರಾಜ್ಯ ಸರ್ಕಾರದ ಅನುದಾನವಿಲ್ಲ ಎಂಬ ಕರ್ನಾಟಕ ಘನಸರ್ಕಾರದ ನಿಯಮವೊಂದು ತಡವಾಗಿ ಜಾರಿಗೆ ಬಂದಿದೆ. ಅಫ್ಲಿಲಿಯೇಷನ್ ಕಮಿಟಿ ಸಂದರ್ಶಿಸಿದ ಕಾಲೇಜುಗಳಲ್ಲಿ ಇಂತಹ ಅನುದಾನ ರಹಿತ ಕೆಲವು ಕಾಲೇಜುಗಳು ಇದ್ದು, ಇವು ಆರಂಭವಾಗಿ ಹತ್ತು–ಹದಿನೆಂಟು ವರ್ಷಗಳು ಸಂದಿವೆ. ಇವುಗಳಿಗೆ ವಿಶ್ವ ವಿದ್ಯಾನಿಲಯದ ಸಂಲಗ್ನತ್ವ (Affiliation) ಬೇಕಾಗಿದೆ. ಇಲ್ಲಿನ ಸಿಬ್ಬಂದಿಗೆ ವೇತನ ಪಾವತಿಸುವುದು, ಕಾಲೇಜಿನ ಖರ್ಚು–ವೆಚ್ಚಗಳು ಆ ವಿಶ್ವವಿದ್ಯಾನಿಲಯದ ಜವಾಬ್ದಾರಿಯಲ್ಲ. ವಿ.ವಿ.ಯ ಮಾನ್ಯತೆಗಾಗಿ ಅಂಗಲಾಚುವ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗದವರು ಭಕ್ಷ್ಯ–ಭೋಜ್ಯಗಳನ್ನು ತಯಾರಿಸಿಕೊಂಡು, ಹಣ್ಣುಹಾರಗಳನ್ನು ಹಿಡಿದು ಕಮಿಟಿಯ ಸದಸ್ಯರು ಡೊಗ್ಗು ಸಲಾಮು ಹಾಕಿ ಸ್ವಾಗತಿಸುತ್ತಾರೆ. ಇಲ್ಲಿನ ಉಪನ್ಯಾಸಕರ ವೇತನ 1000 ಅಥವಾ 1500 ರೂ.ಗಳು ಕಾಲೇಜಿನ ಆಡಳಿತ ಮಂಡಳಿ, ಕಮಿಟಿಗೆ ಹಾಜರು ಪಡಿಸಿದ ವರದಿಯಲ್ಲಿ ರೂ. 8000/– ಎಂದಿದೆ.

ಇದು ಶೋಷಣೆಯ ಪರಮಾವಧಿ. ಇದನ್ನು ಒಪ್ಪಿಕೊಳ್ಳುವ ಆಡಳಿತ ಮಂಡಳಿಯ ಸದಸ್ಯರು ಸಿಬ್ಬಂದಿಗೆ ಸರಿಯಾದ ವೇತನ ನೀಡಲು ಸಾಧ್ಯವಾಗದ ತಮ್ಮ ಅಸಹಾಯಕತೆಯನ್ನು ಕಮಿಟಿಯ ಮುಂದೆ ಒಪ್ಪಿಕೊಳ್ಳುತ್ತಾರೆ. ಇಂದಿನ ಮಾರುಕಟ್ಟೆಗೆ ಆಕರ್ಷಕವಲ್ಲದ ಬಿ.ಎ., ಬಿ.ಎಸ್.ಸಿ. ಕೋರ್ಸುಗಳಿರುವ ಈ ಕಾಲೇಜಿನ ವಿದ್ಯಾರ್ಥಿಗಳು ಕಡುಬಡವರು. ಇವರು ಪರೀಕ್ಷೆ ಬರೆಯಲು ಅವರ ಕಾಲೇಜಿಗೆ ಪರೀಕ್ಷಾ ಕೇಂದ್ರವನ್ನು ವಿ.ವಿ. ನೀಡಿಲ್ಲ. 40–45 ಕಿಲೋ ಮೀಟರು ದೂರದ ನಗರಗಳಿಗೆ ಪರೀಕ್ಷೆ ಬರೆಯುವುದರ ಸಲುವಾಗಿ ಹೋಗಿ ಬರಲು ಇವರಲ್ಲಿ ಬಸ್ ಚಾರ್ಜ್‌ಗೂ ಹಣವಿಲ್ಲ. ಗಾರೆ ಕೆಲಸದವನ ತಿಂಗಳ ದುಡಿಮೆ ಏಳರಿಂದ ಏಳುವರೆ ಸಾವಿರವಿದೆ. ಎಂ.ಎ., ಎಂ.ಎಸ್ಸಿ, ಪದವೀಧರರು 1500 ರೂ. ಪಗಾರಕ್ಕೆ ಈ ಸಂಸ್ಥೆಗಳಿಗೆ ಜೀವ ತೇಯುತ್ತಿದ್ದಾರೆ. ಈ ವೃತ್ತಿಯನ್ನು ಬಿಸಾಡಿ ಕೂಲಿ ಮಾಡಲೂ ಇವರು ಹೋಗಲಾರರು. ಸ್ಟೇಟಸ್ ಇವರಿಗೆ ಅಡ್ಡ ಬರುತ್ತಿದೆ.

ಅಲ್ಲದೆ ನೌಕರಿ ಆಸೆಗಾಗಿ ಮ್ಯಾನೇಜ್‌ಮೆಂಟಿನ ಕೈಗೆ 15–18 ವರ್ಷಗಳ ಕೆಳಗೆ ಐವತ್ತು ಸಾವಿರ, ಲಕ್ಷದವರೆಗೆ ದೇಣಿಗೆ ನೀಡಿದ ಇವರು, ಸರ್ಕಾರದ ಅನುದಾನಕ್ಕಾಗಿ 'ಇಂದು–ನಾಳೆ' ಎಂದು ಕಾಯುವ ಚಾತಕಪಕ್ಷಿಗಳಾಗಿ, ಮುದಿಯರಾಗಿದ್ದಾರೆ; ಹೊಸ ವೃತ್ತಿಗಳಿಗೆ ತಮ್ಮನ್ನು ತೆರೆದುಕೊಳ್ಳಲಾರದ ಸ್ಥಿತಿ ತಲುಪಿದ್ದಾರೆ. ಇವರ ದೇಣಿಗೆಯಲ್ಲಿ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿರುವ ಈ ಕಾಲೇಜುಗಳನ್ನು ಸರ್ಕಾರವಾದರೂ ವಹಿಸಿಕೊಳ್ಳಲಿ–ಎಂಬ ದೈನೇಸಿ ಸ್ಥಿತಿಯಲ್ಲಿರುವ ಮ್ಯಾನೇಜ್‌ಮೆಂಟ್‌ಗಳ ಮೊರೆಯೂ ಜನಪ್ರಿಯ ಸರ್ಕಾರದ ಕಿವುಡುಕಿವಿಗೆ ಕೇಳಿಸಿಲ್ಲ. ತಮ್ಮ ದುಃಖ ದುಮ್ಮಾನಗಳನ್ನು ಒಟ್ಟಾಗಿ ತೋಡಿಕೊಳ್ಳುವ ಉಪನ್ಯಾಸಕ ವರ್ಗ ಮತ್ತು ಆಡಳಿತಮಂಡಳಿಯ ರೋದನ ಅರಣ್ಯರೋದನವಾಗಿದೆ, ಎಂಬುದು ಸಂದರ್ಶಿಸಿದ ಅಫ್ಲಿಲಿಯೇಷನ್ ಕಮಿಟಿಗೆ ಅರ್ಥವಾಗುತ್ತದೆ. ಜೊತೆಗೆ ಆ ಹಳ್ಳಿಯಲ್ಲಿರುವ ಒಂದು ಪ್ರಥಮ ದರ್ಜೆ ಕಾಲೇಜು ರದ್ದಾಗಬಾರದು ಎಂಬ ಸಾರ್ವಜನಿಕವಾದ ಒತ್ತಾಸೆಯೊಂದು ಅಫಿಲಿಯೇಷನ್ ಕಮಿಟಿಯವರ ಆತ್ಮಸಾಕ್ಷಿಗೆ ರಿಂಗಣಿಸುತ್ತದೆ.

ಪರ್ಸೆಂಟೇಜು / ಪಾರ್ಟಿಫಂಡು :–

ಇದು ಸರ್ಕಾರದ ಮಧ್ಯೆ ಸಿಕ್ಕಿಕೊಂಡ ಶಿಕ್ಷಣ ಸಂಸ್ಥೆಗಳ ಒಂದು ಮಗ್ಗುಲು. ಇದರ ಮತ್ತೊಂದು ಮಗ್ಗುಲಿನ ಚಿತ್ರಣ ಇದಕ್ಕೆ ವಿರುದ್ಧವಾಗಿದೆ. ಸಾಂಪ್ರದಾಯಿಕ ಕೋಸುರ್ಗಳ ವಿರುದ್ಧ ಗತಿಯಲ್ಲಿ ಸಾಗುತ್ತಿರುವ ವೃತ್ತಿಪರ ಕೋರ್ಸುಗಳನ್ನು ನಡೆಸುತ್ತಿರುವ ಆಡಳಿತ ಮಂಡಳಿಗೆ ಸರ್ಕಾರದ ಮಾನ್ಯತೆ ಬೇಕೆ ಎಂದು ಆ ಆಡಳಿತ ಮಂಡಳಿಗಳು ವರಿಷ್ಠ ನ್ಯಾಯಾಲಯಗಳಲ್ಲಿ ತಕರಾರು ಎತ್ತಿವೆ. ಇಲ್ಲಿ ಎಂ.ಎಸ್.ಡಬ್ಲ್ಯೂ, ಎಂ.ಡಿ., ಎಂ.ಎಸ್. ಕೋರ್ಸುಗಳು ಅರ್ಧ ಲಕ್ಷದಿಂದ ಕೋಟಿಗಳವರೆಗೆ ಮಾರಾಟವಾಗುತ್ತಿವೆ. ಮೀಸಲು ಕೋಟಾಗಳಿಗೆ ಈ ಆಡಳಿತ ಮಂಡಳಿಗಳ ತಕರಾರು ಇದೆ. ಸರ್ಕಾರಗಳ ತೋರಿಕೆಯ ಕಾಳಜಿಯಾದ "ಸಾಮಾಜಿಕ ಸಮಾನತೆ" ಇಲ್ಲಿ ಗಾಳಿಗೆ ತೂರಲ್ಪಟ್ಟಿದೆ. ವಿದ್ಯಾರ್ಜನೆ, ಶಿಕ್ಷಣ, ಜ್ಞಾನಸಂಪತ್ತುಗಳು, ಇಲ್ಲಿ 'ಉಳ್ಳವರ' ಸ್ವತ್ತಾಗುತ್ತವೆ.

ಇದನ್ನು ನಿಯಂತ್ರಿಸಲಾರದ ನಮ್ಮ ಸರ್ಕಾರಗಳು ಓಟಿನ ಬುಟ್ಟಿಗಾಗಿ ಹೋಬಳಿ ಹೋಬಳಿಗಳಲ್ಲಿ ಮೂಲ

ಸೌಕರ್ಯ-ಸಿಬ್ಬಂದಿಗಳಿಲ್ಲದ ಸಾಂಪ್ರದಾಯಿಕ ಕೋರ್ಸುಗಳುಳ್ಳ ಸರ್ಕಾರಿ ಪದವಿ/ಪೂರ್ವ ಕಾಲೇಜುಗಳನ್ನು ತೆರೆದು, 15-18 ವರ್ಷದಿಂದ ಜೀವನ್ಮರಣಾವಸ್ಥೆ ಯಲ್ಲಿರುವ ಖಾಸಗಿ ಕಾಲೇಜುಗಳನ್ನು ಮುಚ್ಚಿಸುವ ಸ್ಪರ್ಧೆಗೆ ಇಳಿದಿದೆ. ಹೊಸದಾಗಿ ತೆರೆಯಲ್ಪಡುವ ಸರ್ಕಾರಿ ಪದವಿ / ಪೂರ್ವ ಕಾಲೇಜುಗಳಲ್ಲಿ ನೌಕರಿ ಗಿಟ್ಟಿಸಲು ಖಾಸಗಿ ಕಾಲೇಜುಗಳಲ್ಲಿ 18 ವರ್ಷಗಳಿಂದ ಜೀವ ತೇಯ್ದವರಿಗೆ ಸ್ಪರ್ಧಿಸಲು ಅವಕಾಶವಿಲ್ಲ. ವಯೋಭಾರದಿಂದಾಗಿ ನೌಕರಿನೇಮಕಾತಿ ನಿಯಮಗಳಿಗೆ ಅವರು ಹೊರತಾಗಿದ್ದಾರೆ. ಇಂತಹ ಖಾಸಗಿ, ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ದುಡಿದ ನೌಕರರ ವಯೋಮಿತಿಯನ್ನು ನೌಕರಿನೇಮಕಾತಿ ನಿಯಮಗಳಿಂದ ವಿನಾಯಿತಿಗೊಳಪಡಿಸುವುದು ಸರ್ಕಾರಕ್ಕೆ ಸಮಸ್ಯೆಯೇನೂ ಅಲ್ಲ. ಈ ಬಗೆಯ ನಿಯಮಗಳು ಮನುಷ್ಯ-ಮನುಷ್ಯರೇ ಮಾಡಿಕೊಂಡವು ತಾನೆ? ಆದರೆ "ಇದು ವಿಶೇಷ ಸಂದರ್ಭ"ವೆಂದು ಪರಿಗಣಿಸಿ ನೌಕರಿನೇಮಕಾತಿ ನಿಯಮಗಳನ್ನು ಸಡಿಲಗೊಳಿಸಲು ನಮ್ಮ ನೇತಾರರು ತಯಾರಿರುವುದಿಲ್ಲ.

ಏಕೆಂದರೆ 18 ವರ್ಷಗಳಿಂದ ಎಂಟು ನೂರು, ಒಂದು ಸಾವಿರದ ಐದು ನೂರು ರೂಪಾಯಿಗಳಿಗೆ ತಮ್ಮ ಶ್ರಮದಾನ ಮಾಡಿದ ಈ ನೌಕರರಿಂದ ಚುನಾವಣೆಗಳಿಗೆ ಅಗತ್ಯವಾದ ಪರ್ಸೆಂಟೇಜು, ಪಾರ್ಟಿಫಂಡಿನ ಮೊತ್ತವನ್ನು ಪೂರೈಸಲು ಆಗುವುದಿಲ್ಲ. ನೌಕರಿ, ಬಡ್ತಿ, ವರ್ಗಾವಣೆಗಳಲ್ಲಿ ಹಣ ಮಾಡಿಕೊಳ್ಳುವ ಭ್ರಷ್ಟ ಸರ್ಕಾರಗಳು ಮತ್ತು ಈ ಭ್ರಷ್ಟತೆಯಲ್ಲಿ ಇಷ್ಟಪಟ್ಟೋ ಪಡದೆಯೋ ಬಲಿಪಶುಗಳಾದ ವಿದ್ಯಾವಂತನೌಕರರು, ಇಂದಿನ ಶಿಕ್ಷಣ ಪದ್ಧತಿಯಿಂದ ಪಡೆದ ಸಂಸ್ಕಾರಗಳೇನು? -ಎಂಬ ಪ್ರಶ್ನೆಗಳು ಕಾಡುತ್ತವೆ. ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಕರ್ನಾಟಕ ರಾಜ್ಯ ಘನ ಸರ್ಕಾರವು ನಿರುದ್ಯೋಗಿಗಳನ್ನು ಸೃಷ್ಟಿಸುವ ಸುಮಾರು 25 ರಿಂದ 30 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಹುಟ್ಟು ಹಾಕಿದುದರ ಔಚಿತ್ಯವನ್ನು ವರ್ತಮಾನದ ಜರೂರುಗಳ ನೆಲೆಯಲ್ಲಿ ಪ್ರಶ್ನಿಸಬೇಕಿದೆ.

ಸರ್ಕಾರಿ ನಿಲುವಿನ ಮತ್ತೊಂದು ಮಗ್ಗಲು : -

ಸರ್ಕಾರದ ನಿಯಂತ್ರಣಕ್ಕೆ ಸಿಕ್ಕದ, ವೃತ್ತಿಪರ ಕೋರ್ಸುಳ್ಳ (ಮೆಡಿಕಲ್, ಇಂಜಿನಿಯರಿಂಗ್, ನರ್ಸಿಂಗ್ ಇತ್ಯಾದಿ) ಖಾಸಗಿ ಕಾಲೇಜುಗಳೊಂದಿಗೆ ಸಮಾನಾಂತರ ಸರ್ಕಾರಿ ಕಾಲೇಜುಗಳನ್ನು ತೆರೆದು ಸ್ಪರ್ಧೆಗಿಳಿಯಲು ಸರ್ಕಾರಕ್ಕೆ ಅಸಾಧ್ಯವೇನಲ್ಲ. ಆದರೆ ವೃತ್ತಿಪರ ಖಾಸಗಿ ಕಾಲೇಜುಗಳು ನಮ್ಮ ನೇತಾರರ ಅಳಿಯಂದಿರು, ಮಕ್ಕಳ ಮಡದಿಯರ ಒಡೆತನದಲ್ಲಿರುತ್ತವೆ.

ಕರೆಯುವ ಕಾಮಧೇನುಗಳು :-

ಖಾಸಗಿ ಮ್ಯಾನೇಜ್‌ಮೆಂಟ್‌ಗಳು ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ನಡೆಸಿ, ಮೆಡಿಕಲ್, ಎಂಜಿನಿಯರಿಂಗ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಮೆರಿಟ್ ಆಧಾರದ ಪಟ್ಟಿಯೊಂದು ತಯಾರಾಗುತ್ತದೆ. ಇದೇ ಬಗೆಯ ಪರೀಕ್ಷೆಗಳನ್ನು ಸರ್ಕಾರವು ನಡೆಸುತ್ತಿದ್ದು ವಿದ್ಯಾರ್ಥಿಯು ಎರಡೆರಡು ಕಡೆ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾದ ಆತಂಕ-ಒತ್ತಡಕ್ಕೆ ಒಳಗಾಗುತ್ತಾನೆ. ಆರ್ಥಿಕವಾಗಿಯೂ ವಿದ್ಯಾರ್ಥಿಗೆ ಇದು ಹೊರೆಯಾಗುತ್ತದೆ. ಇದು ಸರ್ಕಾರಕ್ಕೆ, ಮ್ಯಾನೇಜ್‌ಮೆಂಟಿಗೆ ಅರಿಯದ ಸಂಗತಿಯೇನಲ್ಲ. ಆದರೂ ಒಂದೇ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಜಾರಿಗೆ ತಂದು, ಒಂದೇ ಮೆರಿಟ್ ಪಟ್ಟಿಯಿಂದ ಇಡೀ ಪ್ರಕ್ರಿಯೆಯನ್ನು ಸರಳಗೊಳಿಸಬಹುದಾದ ಹೊಂದಾ

ಣಿಕೆಗೆ ಬರಲು ಇವರಿಂದ ಸಾಧ್ಯವಾಗುತ್ತಿಲ್ಲ.

ಪರೀಕ್ಷೆ, ಮೌಲ್ಯಮಾಪನ, ಆಯ್ಕೆಗಳಲ್ಲಿ ಪಾರದರ್ಶಕತೆಯ ಕೊರತೆ, ಹಿತಾಸಕ್ತಿಗಳ ಕೈವಾಡವೇ ಇದಕ್ಕೆ ಕಾರಣ. ಸೀಟುಗಳ ಆಯ್ಕೆ-ಹಂಚಿಕೆಯಲ್ಲಿ ದಲ್ಲಾಳಿಗಳು ಹುಟ್ಟಿಕೊಳ್ಳುತ್ತಾರೆ. ಇವರು ದ್ವಿತೀಯ ಪಿ.ಯು.ಸಿ ಓದುತ್ತಿರುವ ಹೊರರಾಜ್ಯಗಳ ಜಾಣ ವಿದ್ಯಾರ್ಥಿಗಳನ್ನು ಕರೆತಂದು ರಾಜ್ಯದ ಖಾಸಗಿ ಕಾಲೇಜುಗಳ ಪ್ರವೇಶ ಪರೀಕ್ಷೆಗೆ ಕೂಡಿಸುತ್ತಾರೆ. ಸೀಟು ಸಿಕ್ಕನಂತರ ಆ ವಿದ್ಯಾರ್ಥಿಗೆ ತನ್ನ ರಾಜ್ಯದಲ್ಲೂ ಸೀಟು ಸಿಕ್ಕಿರುವುದರಿಂದ ಏಜೆಂಟರುಗಳಿಂದ ಲಕ್ಷಗಳ ಲೆಕ್ಕದಲ್ಲಿ ಹಣಪಡೆದು, ಈ ರಾಜ್ಯದ ಸೀಟನ್ನು ಡ್ರಾಪ್ ಔಟ್ ಮಾಡುತ್ತಾನೆ. ಇದು ಏಜೆಂಟರ-ಮ್ಯಾನೇಜ್‌ಮೆಂಟಿನ 'ಹೊಂದಾಣಿಕೆಯ ಸೀಟಾಗುತ್ತದೆ. ಈ ಡ್ರಾಪ್ ಔಟ್ ಸೀಟುಗಳು [ಸರ್ಕಾರಕ್ಕೆ ಹ್ಯಾಮಾರಿಸಿ] ಮೆರಿಟ್ ಇಲ್ಲದ ಲಕ್ಷ್ಮೀಪುತ್ರರಿಗೆ ಕೋಟಿಗಳ ಲೆಕ್ಕದಲ್ಲಿ ಮಾರಾಟವಾಗುತ್ತವೆ.

ಸರ್ಕಾರದ ನಿಯಂತ್ರಣಕ್ಕೆ ಸಿಕ್ಕದ ವೃತ್ತಿಪರ ಕೋರ್ಸುಳ್ಳ (ಮೆಡಿಕಲ್, ಇಂಜಿನಿಯರಿಂಗ್, ನರ್ಸಿಂಗ್ ಇತ್ಯಾದಿ) ಖಾಸಗಿ ಕಾಲೇಜುಗಳೊಂದಿಗೆ ಸಮಾನಾಂತರ ಸರ್ಕಾರಿ ಕಾಲೇಜುಗಳನ್ನು ತೆರೆದು ಸ್ಪರ್ಧೆಗಿಳಿಯಲು ಸರ್ಕಾರಕ್ಕೆ ಅಸಾಧ್ಯವೇನಲ್ಲ. ಆದರೆ ವೃತ್ತಿಪರ ಖಾಸಗಿ ಕಾಲೇಜುಗಳು ನಮ್ಮ ನೇತಾರರ ಅಳಿಯಂದಿರು, ಮಕ್ಕಳ ಮಡದಿಯರ ಒಡೆತನದಲ್ಲಿರುತ್ತವೆ.ಖಾಸಗಿ ಮ್ಯಾನೇಜ್‌ಮೆಂಟ್‌ಗಳು ಸಾಮಾನ್ಯ ಪ್ರವೇಶ ಪರೀಕ್ಷೆಗಳನ್ನು ನಡೆಸಿ, ಮೆಡಿಕಲ್, ಎಂಜಿನಿಯ ರಿಂಗ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಮೆರಿಟ್ ಆಧಾರದ ಪಟ್ಟಿಯೊಂದು ತಯಾರಾಗುತ್ತದೆ.

ಹೀಗೆ ಈ ಸಂಸ್ಥೆಗಳು ಮುಂದಿನ ಸಾರ್ವತ್ರಿಕ ಚುನಾವಣೆಗೆ ಕರೆಯುವ ಕಾಮಧೇನುಗಳಾಗುತ್ತವೆ. ಸಾಮಾಜಿಕ ಸಮಾನತೆಯ ಪ್ರಣಾಳಿಕೆಯಲ್ಲಿ ಚುನಾವಣೆಗೆ ಸ್ಪರ್ಧಿಸುವ ಈ ನೇತಾರರ ಖಾಯಂ ಮತದಾರರು, ತಮ್ಮ ಮಕ್ಕಳ ಪ್ರತಿಭೆ, ಕಲಿಯುವ ಆಕಾಂಕ್ಷೆಗೆ ಸ್ಪಂದಿಸದವರಾಗುತ್ತಾರೆ. ಭಾರತದಲ್ಲಿ ಶಿಕ್ಷಣದ ವ್ಯಾಪಾರೀಕರಣ ಎಷ್ಟು ವ್ಯಾಪಕವಾಗಿದೆಯೆಂದರೆ ಅದು ಒಂದು ದೇಶದ, ನಿರ್ದಿಷ್ಟ ಪಕ್ಷದ, ಸರ್ಕಾರವೊಂದನ್ನು ನಿರ್ಧರಿಸುತ್ತದೆ ಅಂದಮೇಲೆ ಶಿಕ್ಷಣ ಹೇಗೆ ಅನುತ್ಪಾದಕ ಕ್ಷೇತ್ರವಾಗುತ್ತದೆ ಎಂಬುದನ್ನು ಈ ಸರ್ಕಾರಗಳೇ ಹೇಳಬೇಕು.

ನಮ್ಮ ಪರೀಕ್ಷಾ ಮಾನದಂಡಗಳು - ವಾಂತಿ ಮಾಡುವ ಪ್ರಕ್ರಿಯೆ :-

ಇಂತಹ ಕಾರ್ಖಾನೆಗಳಲ್ಲಿ ಪದವಿ ಪತ್ರ ಪಡೆವ ಶಿಕ್ಷಣಾರ್ಥಿಗಳ ಪರೀಕ್ಷಾ ವಿಧಾನ-ಫಲಿತಾಂಶಗಳೂ ಪ್ರತಿಭೆಗಳನ್ನು ಶೋಧಿಸಿ ತೆಗೆಯುವ ನೈಜ ಮಾನದಂಡಗಳಲ್ಲ. ಆ ಅರ್ಥದಲ್ಲಿ ನಮ್ಮ ಇಂದಿನ ಪರೀಕ್ಷೆಗಳು ಪ್ರಶ್ನಾರ್ಹವಾಗುತ್ತವೆ. ವಿದ್ಯಾರ್ಥಿಯೋರ್ವನ ಆಳವಾದ ಅಧ್ಯಯನ, ಪೂರ್ಣ ಪ್ರಮಾಣದ ಗ್ರಹಿಕೆ, ಗ್ರಹಿಸುದುದರ ಮಥನ, ವಿಶ್ಲೇಷಣಾ ಸಾಮರ್ಥ್ಯಗಳ್ಯ ಪರೀಕ್ಷೆ ಇಲ್ಲಿ ಆಗುವುದಿಲ್ಲ. ವಿದ್ಯಾರ್ಥಿಯೋರ್ವನ ನೆನಪಿನ ಶಕ್ತಿ ಮತ್ತು ಚಿಂತನಶೀಲತೆಗಳನ್ನು ಒರೆಗೆ ಹಚ್ಚುವ ಪರೀಕ್ಷೆಗಳು ಇವಲ್ಲ. ವರ್ಷವಿಡೀ ಕಲಿತದ್ದನ್ನು ಪರೀಕ್ಷಾ ಕೊಠಡಿಯಲ್ಲಿ ವಾಂತಿ ಮಾಡಿಸುವ ಪ್ರಕ್ರಿಯೆ ಇಲ್ಲಿ ನಡೆಯುತ್ತದೆ. ಪರೀಕ್ಷಾ ಫಲಿತಾಂಶದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿ ತನ್ನ ವೃತ್ತಿ ಕ್ಷೇತ್ರದಲ್ಲಿ ಕಳಪೆ ಕೌಶಲದ ಅಡ್ಡ-ಕಸುಬಿಯಾಗುತ್ತಾನೆ.

ಮೌಲ್ಯ ಮಾಪನ ಕೇಂದ್ರಗಳು :-

ಮೌಲ್ಯಮಾಪನ ಕೇಂದ್ರಗಳೂ ಕೆಲವೊಮ್ಮೆ ಅವ್ಯವಹಾರದ ಕೇಂದ್ರಗಳಾಗುತ್ತವೆ. ಇಡೀ ಮೌಲ್ಯಮಾಪನದ ಉಸ್ತುವಾರಿಯನ್ನು ಹೊತ್ತ ಕಸ್ಟೋಡಿಯನ್ ಓರ್ವನ ವಿಚಕ್ಷಣೆಯಲ್ಲಿ ಉತ್ತರ ಪತ್ರಿಕೆಗಳ ಮಾಪನಕ್ರಿಯೆ ನಡೆಯುತ್ತದೆ. ದಿನದ ಎರಡು ಅವಧಿಗಳಲ್ಲಿ, ಅವಧಿಗೆ 15ರಂತೆ, ದಿನ ಒಂದಕ್ಕೆ 30 ಉತ್ತರಪತ್ರಿಕೆಗಳ ಮಾಪನಕಾರ್ಯವನ್ನು, ಒಟ್ಟು ಆರು ತಾಸುಗಳಲ್ಲಿ, ಒಬ್ಬ ಮೌಲ್ಯಮಾಪಕ ಮುಗಿಸಬೇಕಾಗುತ್ತದೆ. ಮೂವತ್ತು ಪತ್ರಿಕೆಗಳ ಮಾಪನವೆಂದರೆ ಮೂವತ್ತು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು ಅತ್ಯಂತ ನಿಖರವಾಗಿ, ವೈಜ್ಞಾನಿಕವಾಗಿ ತಾರತಮ್ಯಕ್ಕೆ ಒಳಪಡಿಸುವುದು. ಮೊದಲನೆಯವನಿಂದ ಮೂವತ್ತನೆಯವನವರೆಗೆ ಈ ಎಲ್ಲ ಒಬ್ಬೊಬ್ಬನನ್ನು, ಉಳಿದ ಇಪ್ಪತ್ತೊಂಬತ್ತು ವಿದ್ಯಾ

ಟನೆಯನ್ನು ಹುಟ್ಟು ಹಾಕುತ್ತಾನೆ. ಈ ಸಂದರ್ಭದಲ್ಲಿ ಫತ್ವ ಪ್ರಗತಿ ಪರವಾಗುವುದರ ಬದಲು ಯಜಮಾನಿಕೆಯ ಶಕ್ತಿಯಾಯಿತು. ಇದನ್ನು ಅಂದಿನ ಸಂದರ್ಭದಲ್ಲಿ ನೋಡಬಹುದು. ಅದು ಮತಾಂತರ ಹೊಂದಿದ ಭಾರತೀಯ ದಲಿತ ಮುಸ್ಲಿಂಮರಿಗೆ ಸ್ಥಿತಿಗತಿಯಲ್ಲಿ,ಹಿಂದುಗಳ ಮೇಲೆ ಸುಂಕ ಹಾಕುವುದರಲ್ಲಿ ನಾವು ನೋಡಬಹುದು.

ರಾಷ್ಟ್ರೀಯ ಹೋರಾಟ ಪರಿಪೂರ್ಣವಾಗಿ ಆರಂಭಗೊಳ್ಳುವ ಮೊದಲೇ ಫತ್ವದ ಕೊಡುಗೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಇಲ್ಲಿ ಫತ್ವ ಪ್ರಗತಿಪರವಾಗಿ ನಮಗೆ ಕಂಡು ಬರುತ್ತದೆ. 19ನೇ ಶತಮಾನದಲ್ಲಿ ಅದು ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮವನ್ನು ನೀಡಿದ್ದನ್ನು ಇಲ್ಲಿ ದಾಖಲಿಸಬೇಕು. ರಾಷ್ಟ್ರೀಯ ಹೋರಾಟದ ಆರಂಭವನ್ನು ನಾವು ಮೂಲತಃವಾಗಿ 1857ರ ದಂಗೆಯಲ್ಲಿ ವಿಶ್ಲೇಸುವ ಪರಿ ಇದೆ. ಇದೇ ಸಂದರ್ಭದಲ್ಲಿ 1803 ರ ದಂಗೆಯನ್ನು ನಾವು ಮರೆತು ಬಿಡುತ್ತೇವೆ. ಶಾ ವಲಿಯುಲ್ಲಾನ ಮಗನೂ ಹಾಗೂ ಶಿಷ್ಯನಾದ ಶಾ ಅಬ್ದುಲ್ ಅಜೀಜ್ ದಹಲ್ವಿ ಬ್ರಿಟಿಷರ ವಿರುದ್ಧ 1803 ರಲ್ಲಿ ದಂಗೆ ಎಳುತ್ತಾನೆ. ಇದಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಫತ್ವವನ್ನೇ ಹೊರಡಿಸುತ್ತಾನೆ. ಅಲ್ಲದೇ ಶಸ್ತ್ರಾಸ್ತ್ರಗಳ ಉಪಯೋಗವನ್ನು ಎತ್ತಿ ಹಿಡಿಯುತ್ತಾನೆ.

ಇದೇ ಸಂದರ್ಭದಲ್ಲಿ ಭಾರತವನ್ನು "ದಾರುಲ್ ಹರಬ್"-ಮುಸ್ಲಿಂಮರಿಗೆ ವಿರುದ್ಧವಾಗಿರುವ ಪ್ರದೇಶವೆಂದು ಘೋಷಿಸುತ್ತಾನೆ. ಯಾಕೆಂದರೆ ಅಷ್ಟರೊಳಗೆ ಬ್ರಿಟಿಷರು ಮೊಘಲರನ್ನು ಅಂಚಿಗೆ ತಳ್ಳಿ ಭಾರತದ ಮೇಲೆ ತಮ್ಮ ಯಜಮಾನಿಕೆಯನ್ನು ಹಾಗೂ ಹತೋಟಿಯನ್ನು ಸಾಧಿಸಿದ್ದರು. ವಿಪರ್ಯಾಸವೆಂದರೆ ಇದೇ ಅಜೀಜ್ ಮುಸ್ಲಿಂಮರಿಗೆ "ಇಂಗ್ಲೀಷ್ ಒದಲು ಹಾಗೂ ಕಲಿಯಲು" ಕರೆ ನೀಡುತ್ತಾನೆ. ಇದನ್ನೇ ಮುಂದೆ ಸರ್ ಸಯ್ಯದ್ ಅಹಮದ್ ಖಾನ್ ಬಂಡವಾಳವಾಗಿಸಿ ಮುಸ್ಲಿಂಮರು ಇಂಗ್ಲೀಷನ್ನು ಕಲಿಯಲು ಶಾಲೆ ಕಾಲೇಜ್‌ಗಳನ್ನು ಸ್ಥಾಪಿಸುತ್ತಾರೆ. ಈ ಫತ್ವ ಮುಸ್ಲಿಂಮರನ್ನು ವಸಹತು ಶಾಹಿಗಳ ವಿರುದ್ಧ ಹೋರಾಡಲು ಅನುವು ಮಾಡಿಕೊಟ್ಟಿತ್ತು.

1857ರ ದಂಗೆಯ ದಿನಗಳಲ್ಲಿ ಬ್ರಿಟಿಷರು ದೆಹಲಿಯ ಅಕ್ಕಪಕ್ಕ ಪ್ರದೇಶಗಳಲ್ಲಿ ದಂಗೆ, ಲೂಟಿ ಹಾಗೂ ಧ್ವಂಸ ಮಾಡುತ್ತಿದ್ದ ಸಂದರ್ಭದಲ್ಲಿ 31 ಉಲೇಮಾಗಳು ಎರಡು ಫತ್ವವನ್ನೇ ಹೊರಡಿಸಿದ್ದರು. ಒಂದು ಫತ್ವ ದೆಹಲಿಯರಿಗಾಗಿತ್ತು, ಇನ್ನೊಂದು ಫತ್ವ ಅಕ್ಕ ಪಕ್ಕದ ಹಳ್ಳಿಯರಿಗಾಗಿತ್ತು. ಇಲ್ಲಿ ಬ್ರಿಟಿಷರ ಅಥವಾ ವಸಾಹತುಶಾಹಿಗಳ ವಿರುದ್ಧ "ಯುದ್ಧ"ಅವಶ್ಯಕವೆಂದು ಫತ್ವಗಳು ಸಾರಿದ್ದು ಇತಿಹಾಸದ ಸಂಗತಿ. ಇಲ್ಲಿ ಫತ್ವ ದೇಶಕ್ಕಾಗಿ, ಸ್ವಾತಂತ್ರ್ಯಕ್ಕಾಗಿ, ಸಮಗ್ರತೆಗಾಗಿ ಇತ್ತು ಹಾಗೂ ವಸಾಹತೂ ಶಾಹಿ ವಿರೋಧಿಯಾಗಿತ್ತು.

ಇಲ್ಲೊಂದು ವಿಸ್ಮೃತಿ ಇದೆ. ಅದು ಮೂಲತ:ವಾಗಿ ಕಾಂಗ್ರೆಸ್ ನಾಯಕತ್ವದ ರಾಷ್ಟ್ರೀಯ ಹೋರಾಟದಲ್ಲಿ ಅಲ್ಪ ಸಂಖ್ಯಾಕರ ಭಾಗವಹಿಸುವುದರ ಕುರಿತಾಗಿದೆ. ಇಲ್ಲಿ ಫತ್ವ ಒಂದು ಪ್ರಗತಿಪರ ಸಾಧನವಾಗಿ ಪರಿವರ್ತಿತವಾದದ್ದನ್ನು ನಾವು ನೋಡುವುದಿಲ್ಲ. ವಾಸ್ತವವಾಗಿ 1888 ರಲ್ಲಿಯೇ, ಅದರಲ್ಲೂ ಕಾಂಗ್ರೆಸ್ ಸ್ಥಾಪಿತವಾಗಿ ಮೂರು ವರಷದೊಳಗೆ, ಖ್ಯಾತ ಸ್ವಾತಂತ್ರ್ಯ ಹೋರಾಟಗಾರರಾದ ಮೌಲಾನ ಹಬೀಬುರ್ ರಹೆಮಾನ್ ಲುಧಿಯಾನ್ವಿ ಒಂದು ಫತ್ವನ್ನು ಹೊರಡಿಸಿದ್ದರು. ಇದನ್ನು 300ಕ್ಕೂ ಮಿಕ್ಕಿ ಅಂದಿನ ಉಲೇಮಾಗಳು ಅನುಮೋದಿಸಿದ್ದರು. ಈ ಫತ್ವದ

ರಾಷ್ಟ್ರೀಯ ಹೋರಾಟ ಪರಿಪೂರ್ಣವಾಗಿ ಆರಂಭಗೊಳ್ಳುವ ಮೊದಲೇ ಫತ್ವದ ಕೊಡುಗೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ಇಲ್ಲಿ ಫತ್ವ ಪ್ರಗತಿಪರವಾಗಿ ನಮಗೆ ಕಂಡು ಬರುತ್ತದೆ. 19ನೇ ಶತಮಾನದಲ್ಲಿ ಅದು ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮವನ್ನು ನೀಡಿದ್ದನ್ನು ಇಲ್ಲಿ ದಾಖಲಿಸಬೇಕು. ರಾಷ್ಟ್ರೀಯ ಹೋರಾಟದ ಆರಂಭವನ್ನು ನಾವು ಮೂಲತಃವಾಗಿ 1857ರ ದಂಗೆಯಲ್ಲಿ ವಿಶ್ಲೇಷಿಸುವ ಪರಿ ಇದೆ. ಇದೇ ಸಂದರ್ಭದಲ್ಲಿ 1803 ರ ದಂಗೆಯನ್ನು ನಾವು ಮರೆತು ಬಿಡುತ್ತೇವೆ. ಶಾ ವಲಿಯುಲ್ಲಾನ ಮಗನೂ ಹಾಗೂ ಶಿಷ್ಯನಾದ ಶಾ ಅಬ್ದುಲ್ ಅಜೀಜ್ ದಹಲ್ವಿ ಬ್ರಿಟಿಷರ ವಿರುದ್ಧ 1803 ರಲ್ಲಿ ದಂಗೆ ಎಳುತ್ತಾನೆ. ಇದಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಫತ್ವವನ್ನೇ ಹೊರಡಿಸುತ್ತಾನೆ.

ತಾತ್ಪರ್ಯ ಇಷ್ಟೇ: ಅಂದಿನ ಸಂದರ್ಭದಲ್ಲಿ ಮುಸ್ಲಿಂಮರು ಕಾಂಗ್ರೆಸ್‌ನೊಂದಿಗೆ ಹಾಗೂ ಹಿಂದುಗಳೊಂದಿಗೆ ಕೈ ಜೋಡಿಸಿ ರಾಷ್ಟ್ರೀಯ ಹೋರಾಟವನ್ನು ಗಟ್ಟಿಗೊಳಿಸಬೇಕು ಹಾಗೂ ಬಲಗೊಳಿಸಬೇಕು. ಈ ಸಂದರ್ಭದಲ್ಲಿ ಹಿಂದು-ಮುಸ್ಲಿಂ ಐಕ್ಯತೆಯನ್ನು ಎತ್ತಿಹಿಡಿಯಲಾಯಿತು.

1920ರಲ್ಲಿ ಶೈಖುಲ್ ಹಿಂದ್, ಮಹಮೂದ್ ಹಸನ್ ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಯನ್ನು ಗಟ್ಟಿಗೊಳಿಸಲು ಫತ್ವವನ್ನು ಹೊರಡಿಸಿದರು. ಇದರ ವಿಶಿಷ್ಟವೆಂದರೆ ಮುಸ್ಲಿಂಮರು ಬ್ರಿಟಿಷರ ಆಡಳಿತದಲ್ಲಿ ಸೇರುವುದು, ಅದರಲ್ಲೂ ಪೋಲೀಸು ಹಾಗೂ ಸೈನ್ಯಕ್ಕೆ ಭರ್ತಿಯಾಗಿ ಸೇವೆ ಸಲ್ಲಿಸುವುದನ್ನು ಫತ್ವ ವಿರೋಧಿಸಿತ್ತು. ಆಶ್ಚರ್ಯವೆಂದರೆ ಈ ಫತ್ವವನ್ನು ಹೆಚ್ಚು ಕಡಿಮೆ 474 ಉಲೇಮಾಗಳು ಅನುಮೋದಿಸಿದ್ದರು. ಇದರ ಪರಿಣಾಮವೆಂದರೆ ನೂರಾರು ಮುಸ್ಲಿಂಮರು ಸರಕಾರಿ ಉದ್ಯೋಗಗಳನ್ನು ತ್ಯಾಗಮಾಡಿದರಲ್ಲದೇ, ಮಿಲಿಟರಿ ಕೆಲಸಗಳನ್ನು ಬಿಟ್ಟು ಹೊರಬಂದರು. ಅಲ್ಲದೇ ಸರಕಾರಿ ಬಿರುದು, ಪದಕಗಳನ್ನು ಸರಕಾರಕ್ಕೆ ವಾಪಸು ನೀಡಿದರು. ಇದನ್ನೇ ಗುರಿಯಾಗಿಸಿ ಆಲಿ ಸಹೋದರರು ಖಿಲಾಫತ್ ಸಮ್ಮೇಳನದಲ್ಲಿ (1921) ಒಂದು ನಿರ್ಣಯವನ್ನು ತಂದರು. ಅದರ ಪ್ರಕಾರ ಬ್ರಿಟಿಷ್ ಸರಕಾರದಲ್ಲಿ ಕೆಲಸ ಮಾಡುವುದು "ಹರಾಮ್". ಇದನ್ನೇ ಮುಂದೆ ಫತ್ವದ ರೂಪವಾಗಿ ಹೊರಡಿಸಲಾಯಿತು. ಇದರ ಒಂದು ಪರಿಣಾಮವೆಂದರೆ ಸರಕಾರ ಫತ್ವವನ್ನು ಹೊರಡಿ ಸಿದವರ ಮೇಲೆ ಹಾಗೂ ಅದನ್ನು ಮುದ್ರಿಸಿದವರ ಮೇಲೆ ರಾಜದ್ರೋಹದ ಆರೋಪವನ್ನು ಹೊರಿಸಿತ್ತು. ಅಲ್ಲದೇ ಎರಡು ವರುಷ ಕಠಿಣ ಶಿಕ್ಷೆಯನ್ನು ನೀಡಿತ್ತುಅದನ್ನು "ಕರಾಚಿ ಕೇಸ್" ಎಂದು ಇತಿಹಾಸದಲ್ಲಿ ಗುರುತಿಸಲಾಗುತ್ತದೆ. ಇದರ ಹೊರತಾಗಿಯೂ ಅಸಹಕಾರ ಚಳುವಳಿಗೆ ಬೆಂಬಲ ಕಡಿಮೆಯಾಗಲಿಲ್ಲ.

ಆಸಕ್ತಿದಾಯಕ ವಿಷಯವೆನೆಂದರೆ ಅದೇ ಸುಮಾರಿಗೆ 1920ರಲ್ಲಿ ಮೌಲಾನ ಅಬುಲ್ ಕಲಂ ಆಜಾದ್ ರವರು ಕೂಡ ಒಂದು ಫತ್ವವನ್ನು ಬ್ರಿಟಿಷರ ವಿರುದ್ಧ ಹೊರಡಿಸಿದ್ದರು. ಬ್ರಿಟಿಷರ ವಿರುದ್ಧ ಅಸಹಕಾರವನ್ನು ವ್ಯಕ್ತಪಡಿಸಲು "ಹಿಜರತ್"- ಭಾರತದಿಂದ ಬೇರೆ ದೇಶಕ್ಕೆ ವಲಸೆಗೆ ಹೋಗುವುದನ್ನು ಈ ಸಂದರ್ಭದಲ್ಲಿ ಪ್ರತಿಪಾದಿಸಿದರು.

ಇಲ್ಲಿಗೆ ಫತ್ವಗಳ ರಾಜಕಾರಣ ಮುಗಿಯಲಿಲ್ಲ. 1930ರ ಉಪ್ಪಿನ ಸತ್ಯಗ್ರಾಹದ ಸಮಯದಲ್ಲಿ ಮುಫ್ತಿ ಅತಿಕುರ್ ರಹಮಾನ್ ಉಸ್ಮಾನಿ ಸರಕಾರಕ್ಕೆ ನೀರು ಅಥವಾ ಜಲ ಹಾಗೂ ಉಪ್ಪಿನ ಮೇಲೆ ಕರವನ್ನು ಹೇರುವ ಅಧಿಕಾರವಿಲ್ಲ, ಅಂತಹ ಸರಕಾರದ ವಿರುದ್ಧ ಹೋರಾಟ ನಡೆಸುವುದು ಅವಶ್ಯಕ ಎಂದು ವಾದಿಸಿ ಫತ್ವವನ್ನು ಹೊರಡಿಸಿದ್ದರು. ಇದು ಬಹಳಷ್ಟು ಮುಸ್ಲಿಂಮರನ್ನು ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿತು.

ಈ ಸಂದರ್ಭದಲ್ಲಿ ಬಹಳಷ್ಟು ಪ್ರಗತಿಪರ ಫತ್ವಗಳನ್ನು ಹೊರಡಿಸಿದ ಹೆಗ್ಗಳಿಕೆ ದಿಯೋಬಂದ್‌ನ ದಾರುಲ್ ಉಲ್‌ಮ್‌ಗೆ ಸಲ್ಲುತ್ತದೆ. ವಸಾಹತುಶಾಹಿಗೆ ಈ ಫತ್ವಗಳ ಭೀಕರತೆಯ ಅರಿವು ಅಂದಿನ ಸಂದರ್ಭದಲ್ಲಿ ಇತ್ತು, ಆದ ಕಾರಣವೇ ಬಹಳಷ್ಟು ಫತ್ವಗಳನ್ನು ಮಸಾಹತುಶಾಹಿ ಮುಟ್ಟುಗೋಲು ಮಾಡಿತ್ತು, ಅದನ್ನು ಬೆಂಬಲಿಸುವ ವ್ಯಕ್ತಿಗಳಿಗೆ ಕಠಿಣ ಶಿಕ್ಷೆಯನ್ನು ಕೂಡ ವಿಧಿಸಿತ್ತು. ಅಲ್ಲದೇ ಇಂತಹ ಫತ್ವಗಳು ಅಂದಿನ ಸಂದರ್ಭದಲ್ಲಿ ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮವನ್ನು ನೀಡಿದ್ದು ವಾಸ್ತವ. ಈ ಫತ್ವಗಳಲ್ಲಿ ಮುಸ್ಲಿಂ ಲೀಗ್‌ಗೆ ವಿಭಿನ್ನವಾದ ರಾಜಕಾರಣವನ್ನು, ಹೋರಾಟದ ಧ್ವನಿಯನ್ನು ಹಾಗೂ ಚೌಕಟ್ಟನ್ನು ನೋಡಬಹುದು. ಬಹುಷಃ ಭಾರತದ ರಾಷ್ಟ್ರೀಯ ಹೋರಾಟವನ್ನು ವಿವಿಧ ಫತ್ವಗಳಿಂದ ಅಭ್ಯಸಿಸಲು ಸಾಧ್ಯವಿದೆ. ಆಮೂಲಕ ಹೊಸ ಇತಿಹಾಸವನ್ನೇ ನಿರ್ಮಿಸಬಹುದು- ಈ ಸಂದರ್ಭದಲ್ಲಿ ಮುಸ್ಲಿಂಲೀಗ್‌ಗೆ ಪೂರಕವಾಗಿ ಬಂದಿರುವ ಫತ್ವಗಳನ್ನು ಕೂಡ ತಳ್ಳಿಹಾಕುವಂತಿಲ್ಲ.

ವಸಾಹತುಶಾಹಿಯೋತ್ತರದ ಕಾಲಾವಾಧಿಯಲ್ಲಿ ಫತ್ವಗಳ ನಿಲುವುಗಳಲ್ಲಿ, ನಿರ್ಧಿಷ್ಟತೆಯಲ್ಲಿ ಯಾಕೆ ಬದಲಾವಣೆಗಳಾದವು? ಭಾರತದ ಇತಿಹಾಸದಲ್ಲಿದ್ದ ಪ್ರಗತಿಪರ ಫತ್ವಗಳೇಕೆ ಕಾಣೆಯಾದವು? ಇತ್ಯಾದಿ ಪ್ರಶ್ನೆಗಳನ್ನು ಈ ಸಂದರ್ಭದಲ್ಲಿ ಕೇಳುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಸಾಕಷ್ಟು ಕಾರಣಗಳಿವೆ.

ಇಂದಿನ ಸಂದರ್ಭದಲ್ಲಿ ಒಂದು ಸಾಮಾನ್ಯವಾದ ಸಂಕಥನವೊಂದಿಗೆ. ಅದು ಅಲ್ಪಸಂಖ್ಯಾಕರನ್ನು ಒಂದು ಏಕರೂಪಿ ಸಮುದಾಯವಾಗಿ ನೋಡುತ್ತದೆ. ಅದರ ಪ್ರಕಾರ ಇಲ್ಲಿ ವಿವಿಧ ಚಿಂತನಾ ಶಾಲೆಗಳಿಗಾಗಲೀ, ವಿವಿಧ ಸಾಂಸ್ಕೃತಿಕ ಚಿಂತನೆಗಳಿಗಾಗಲೀ ಅವಕಾಶಗಳಿಲ್ಲ. ವಾಸ್ತವವಾಗಿ ಭಾರತದ ಇಸ್ಲಾಂನಲ್ಲಿ ವಿವಿಧ ಚಿಂತನಾ ಶಾಲೆಗಳಿವೆ: ಇಸ್ಮಲಿಸ್, ಬರಿವಿಲಿ, ದಿಯೋಬಂದಿ, ಶಿಯಾ, ಸುನ್ನಿ ಇತ್ಯಾದಿ. ಈ ವಿವಿಧ ಚಿಂತನಾ ಶಾಲೆಗಳಲ್ಲಿ ಫತ್ವಗಳ ಕುರಿತು ಒಂದು ನಿರ್ಧಿಷ್ಟವಾದ ನಿಲುವುಗಳಿಲ್ಲ. ಒಂದೇ ಅಭಿಪ್ರಾಯವಿಲ್ಲ. ವಿವಿಧ ಚಿಂತನಾ ಶಾಲೆಗಳು ಒಂದೇ ವಿಷಯವನ್ನು ವಿವಿಧ ಪ್ರಕಾರವಾಗಿ, ರೂಪವಾಗಿ ಅರ್ಥೈಸುತ್ತವೆ ಹಾಗೂ ವ್ಯಾಖ್ಯಾನಿಸುತ್ತವೆ.

ಇದರಿಂದಾಗಿ ಒಂದು ಫತ್ವವನ್ನು ಎಲ್ಲ ಚಿಂತನಾ

ಶಾಲೆಗಳು ಒಪ್ಪಿಕೊಳ್ಳುವುದಿಲ್ಲ. ಈ ಚಿಂತನಾ ಶಾಲೆಗಳ ನಡುವಿನ ಭಿನ್ನಭಿಪ್ರಾಯ ಕೆಲವೊಮ್ಮೆ ಘರ್ಷಣೆಯಲ್ಲಿ ಪರ್ಯಸನಗೊಳ್ಳುತ್ತದೆ. ಅಲ್ಲದೇ ಒಂದು ಚಿಂತನಾ ಶಾಲೆ ಮತ್ತೊಂದು ಚಿಂತನಾಶಾಲೆಯನ್ನು "ಕಾಫಿರ್"ರೆಂದು ಕರೆದದ್ದು ಇದೆ. ಇದನ್ನು ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿಯೇ ನೋಡಬಹುದು. ಸುನ್ನಿ ಚಿಂತನಾ ಶಾಲೆಯ ಸಂಸ್ಥಾಪಕ ಅಹಮದ್ ರೆಜಾ ಖಾನ್ ರಾಷ್ಟ್ರೀಯ ಹೋರಾಟದಲ್ಲಿ ಅದರಲ್ಲೂ ಗಾಂಧೀ ನೇತೃತ್ವದ ಹೋರಾಟದೊಂದಿಗೆ ಕೈ ಜೋಡಿಸಿದ ದಿಯೋಬಂದಿ ಚಿಂತನಾ ಶಾಲೆಯವರನ್ನು "ಕಾಫಿರ್"ರೆಂದು ಜರೆದ್ದದ್ದು ಇತಿಹಾಸ ಪ್ರಸಿದ್ಧ. ಇಂತಹ ವಿರೋಧಗಳು, ವೈರುದ್ಯಗಳು, ಭಿನ್ನಭಿಪ್ರಾಯಗಳು ಅನೇಕ ಹಾಗೂ ಬಹಳ. ಅದು ಉರುಸ್ ಆಚರಣೆ, ಗೋರಿಗಳ ಎದುರು "ಫಾತೆಹಾ" ಅಥವಾ ಪ್ರಾರ್ಥನೆ, ಸಂತರ ಅಥವಾ ಸೂಫಿಗಳ ಕುರಿತಾದ ನಂಬಿಕೆಗಳಲ್ಲಿ ನೋಡಬಹುದು.

ಬರಿವಲಿ ಮುಸ್ಲಿಂಮರು ಸಂತರ ಗೋರಿಯನ್ನು ಪೂಜಿಸಿದರೆ ಅಥವಾ ಉರುಸ್‌ಗಳನ್ನು ಆಚರಿಸಿದರೆ, ದಿಯೋಬಂದಿಗಳು ಇದನ್ನು ವಿರೋಧಿಸುತ್ತಾರೆ. ಗೋಹತ್ಯೆಯನ್ನು ನಿಷೇಧಿಸಿ ಬೆಂಬಲವನ್ನು ದಿಯೋಬಂದಿಗಳು ವ್ಯಕ್ತ ಪಡಿಸಿದರೆ, ಉಳಿದವರು ಇದರ ಬಗ್ಗೆ ಮೌನವಾಗುತ್ತಾರೆ. ನಸ್ರೀನ ತಸ್ಲಿಮಗೆ ಬಂದಿರುವ ಫತ್ವವನ್ನೇ ಗಮನಿಸಿ. ಕಲ್ಕತ್ತದ ಟಿಪ್ಪು ಸೆಮಿನಾರಿ ಅವರಿಗೆ ಮರಣದಂಡನೆಯ ಫತ್ವ ನೀಡಿದರೆ, ಇನ್ನೊಂದು ಸೆಮಿನಾರಿ ಅವರ ಮುಖವನ್ನು ಕಪ್ಪಗೆ ಮಾಡಲು ಫತ್ವವನ್ನು ಹೊರಡಿಸಿತು. ಈ ಫತ್ವಗಳಲ್ಲಿ ದ್ವದ್ವಂತೆಯನ್ನು, ವಿರೋಧಭಾಸಗಳನ್ನು ನೋಡಬಹುದು.

ಫತ್ವ ಬಹಳಷ್ಟು ಸಲ ಮಹಿಳಾ ವಿರೋಧಿಯಾಗಿ ಕಂಡು ಬಂದರೆ ಆಶ್ಚರ್ಯವಿಲ್ಲ. ಯಾಕೆಂದರೆ ಪತ್ವವನ್ನು ಹೊರಡಿಸಲು ಮಹಿಳೆ "ಮುಫ್ತಿ"ಯಾಗಬೇಕು. ಇದು ಅಷ್ಟು ಸುಲಭವಲ್ಲ. ಮಹಿಳೆಯರಿಗೆ ಮುಫ್ತಿಯ ತರಬೇತಿಯನ್ನು ನೀಡುವ ಯತ್ನ ಕಳೆದ ವರುಷ ಉತ್ತರ ಪ್ರದೇಶದ ಪ್ರಖ್ಯಾತ ಇಸ್ಲಾಮಿಕ್ ಸೆಮಿನರಿ ನದ್ವತುಲ್ ಉಲೇಮಾ ಅಕೆಡಾಮಿ ಆರಂಭಿಸಿತ್ತು, ಆದರೆ ಅದು ಪೂರ್ಣಗೊಳ್ಳಲು ಇನ್ನೂ ಕೆಲವು ಸಮಯ ಬೇಕಾಗಿದೆ. ಸಿರಿಯಾದಲ್ಲಿ ಈಗಾಗಲೇ ಮಹಿಳಾ ಮುಫ್ತಿಗಳಿರುವುದು ಅಲ್ಲಿರುವ ಬದಲಾವಣೆಗೆ ಸಾಕ್ಷಿ. ವಾಸ್ತವವಾಗಿ ಮಹಿಳೆಯರು ಮುಫ್ತಿಗಳಾಗುವುದರ ಕುರಿತು ಎರಡು ಅಭಿಪ್ರಾಯವಿದೆ. ಒಂದನೇ ಅಭಿಪ್ರಾಯದಲ್ಲಿ ಮಹಿಳೆಯರು ಮುಫ್ತಿಗಳಲ್ಲದೇ ಅತೀ ಉನ್ನತ ಧಾರ್ಮಿಕ ಬೋಧಕರಾಗಬಹುದು, ಎರಡನೇ ಅಭಿಪ್ರಾಯ ಅವರ ಸ್ಥಾನಮಾನನ್ನು ನಾಲ್ಲು ಗೋಡೆಯೋಳಗಿನ ಚೌಕಟ್ಟಿನಲ್ಲಿ ವಿಶ್ಲೇಷಿಸುತ್ತದೆ.

ಇಲ್ಲಿ ವಿವಿಧ ಚಿಂತನಾ ಶಾಲೆಗಳ ವಾದಗಳನ್ನು ಗಮನಿಸಬೇಕು. "ಫತ್ವಯೇ ರಹಮಿಯಾ" ಪ್ರಕಾರ: "ಹೆಚ್ಚಿನ ಜ್ಞಾನಕ್ಕಾಗಿ ಮಹಿಳೆಯರನ್ನು ಶಾಲಾ ಕಾಲೇಜ್‌ಗಳಿಗೆ ಕಳುಹಿಸುವುದು ತರವಲ್ಲ, ಯಾರೆಲ್ಲ ತಮ್ಮ ಹೆಣ್ಣು ಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸುತ್ತಾರೆಯೋ ಅವರು ತಮ್ಮ ಮಕ್ಕಳ ಶತ್ರುಗಳು". ಬಹಳಷ್ಟು ಸಲ ಈ ರೀತಿಯ ವಾದ ಸಮುದಾಯದೊಳಗೆ ನಿರ್ಮಿಸುವ ಕಾರಣ ಮಹಿಳೆಯರನ್ನು ಶಿಕ್ಷಣದ ಹಾಗೂ ಜ್ಞಾನದ ಚೌಕಟ್ಟಿನಿಂದ ಹೊರಗಿಡಲಾಗುತ್ತದೆ. ವಾಸ್ತವವಾಗಿ ಈ ರೀತಿಯ ನಿರ್ಮಿತಿ ಬರೇ ಶಿಕ್ಷಣಕ್ಕಾಗಿ ಮಾತ್ರ ಸೀಮಿತವಾಗಿಲ್ಲ. ಅದು ಸಿನೆಮಾದ ವೀಕ್ಷಣೆ ಕುರಿತು, ಹಾಡುಗಳ ಬಗ್ಗೆ ಧಿರಿಸುಗಳ

ಬಗ್ಗೆ, ರಾಜಕಾರಣದಲ್ಲಿ ಮಹಿಳೆ ಇತ್ಯಾದಿಗಳಲ್ಲಿ ನೋಡಬಹುದು. ಟೆನಿಸ್ ತಾರೆ ಸಾನಿಯಾ ಮಿರ್ಜ ಧರಿಸುತ್ತಿದ್ದ ಮಿನಿ ಸ್ಕರ್ಟ್ ವಿರುದ್ಧ ಹೊರಡಿಸಿದ ಫತ್ವ ಇಲ್ಲಿ ಉಲ್ಲೇಖಿಸಬೇಕು. ಇದೇ ರೀತಿ ರಾಜಕಾರಣದಲ್ಲೂ ಮಹಿಳೆಯರು ಸ್ವರ್ಧಿಸಬಾರದೆಂಬ ಫತ್ವದ ಉಲ್ಲೇಖ ಇಲ್ಲಿ ಅವಶ್ಯಕ.

2005ರಲ್ಲಿ ಖ್ಯಾತ ಸೆಮಿನಾರಿ ದಾರುಲ್ ಉಲುಮ್ ಚುನಾವಣೆಯಲ್ಲಿ ಮಹಿಳೆಯರು ಸ್ವರ್ಧಿಸಬಾರದೆಂದು ಫತ್ವ ಹೊರಡಿಸಿತ್ತು. ಒಂದು ವೇಳೆ ಸ್ಪರ್ಧಿಸಿದರೂ ಮಹಿಳೆಯರು ಬುರ್ಕಾ ಧರಿಸಿ ಸ್ಪರ್ಧಿಸಬೇಕೆಂಬ ತಾಕಿತ್ತು ನೀಡಿತ್ತು. ಇದಕ್ಕೆ ಬಹಳಷ್ಟು ವಿರೋಧಗಳು ಬಂದವು. ಇದೇ ಸೆಮಿನಾರಿ ಇಮ್ರಾನನ ಬಲತ್ಕಾರದ ಸಂದರ್ಭದಲ್ಲಿ ತೀರಾ ಮಹಿಳಾ ವಿರೋಧಿಯಾಗಿ ಕಂಡುಬಂತು. ಇಮ್ರಾನಳನ್ನು ಅವಳ ಮಾವನೇ ಬಲತ್ಕಾರ ಮಾಡಿದ ಸಂದರ್ಭದಲ್ಲಿ ಗಂಡನನ್ನೇ ತನ್ನ ಮಗನಾಗಿ ಸ್ವೀಕರಿಸಬೇಕೆಂಬ ನೀಡಿದ ತೀರ್ಪು ಮಹಿಳಾ ವಿರೋಧಿಯಾಗಿತ್ತು. ಈ ರೀತಿಯ ಫತ್ವಗಳು ಇಡೀ ಸಮುದಾಯದ ಕುರಿತು ಹೊಸಹೊಸ ಪಡಿಯಚ್ಚುಗಳನ್ನು ನಿರ್ಮಿಸುವುದು ವಾಸ್ತವ. ಅಲ್ಲದೇ ಅಂತಹ ಪಡಿಯಚ್ಚುಗಳು ಅಲ್ಪಸಂಖ್ಯಾಕರನ್ನು ಮಹಿಳಾ ವಿರೋಧಿ ರೂಪದಲ್ಲಿಯೇ ಚಿತ್ರಿಸುತ್ತದೆ.

2005ರಲ್ಲಿ ಖ್ಯಾತ ಸೆಮಿನಾರಿ ದಾರುಲ್ ಉಲುಮ್ ಚುನಾವಣೆಯಲ್ಲಿ ಮಹಿಳೆಯರು ಸ್ವರ್ಧಿಸಬಾರದೆಂದು ಫತ್ವ ಹೊರಡಿಸಿತ್ತು. ಒಂದು ವೇಳೆ ಸ್ವರ್ಧಿಸಿದರೂ ಮಹಿಳೆಯರು ಬುರ್ಕಾ ಧರಿಸಿ ಸ್ವರ್ಧಿಸಬೇಕೆಂಬ ತಾಕಿತ್ತು ನೀಡಿತ್ತು. ಇದಕ್ಕೆ ಬಹಳಷ್ಟು ವಿರೋಧಗಳು ಬಂದವು. ಇದೇ ಸೆಮಿನಾರಿ ಇಮ್ರಾನನ ಬಲತ್ಕಾರದ ಸಂದರ್ಭದಲ್ಲಿ ತೀರಾ ಮಹಿಳಾ ವಿರೋಧಿಯಾಗಿ ಕಂಡುಬಂತು. ಇಮ್ರಾನಳನ್ನು ಅವಳ ಮಾವನೇ ಬಲತ್ಕಾರ ಮಾಡಿದ ಸಂದರ್ಭದಲ್ಲಿ ಗಂಡನನ್ನೇ ತನ್ನ ಮಗನಾಗಿ ಸ್ವೀಕರಿಸಬೇಕೆಂಬ ನೀಡಿದ ತೀರ್ಪು ಮಹಿಳಾ ವಿರೋಧಿಯಾಗಿತ್ತು.

ಈ ಸಂದರ್ಭದಲ್ಲಿ ರಾಜಕೀಯ ಪತ್ವಗಳನ್ನು ಮರೆಯಬಾರದು. ರಾಜಕೀಯ ಫತ್ವಗಳು ಹತ್ತು ಹಲವು. ಕಳೆದ ವರುಷ ರಾಜಕೀಯ ಪಕ್ಷಗಳು ರಂಜಾನಿನ ಇಫ್ತಿಯಾರ್ ಪಾರ್ಟಿಗಳಿಗೆ ಬರಬಾರದು ಹಾಗೂ ರಾಜಕಾರಣಿಗಳನ್ನು ಆಹ್ವಾನಿಸಬಾರದೆಂಬ ಫತ್ವ ಬಹಳ ಚರ್ಚೆಗೊಳಗಾಯಿತು. ಈ ಫತ್ವವನ್ನು ತಿರಸ್ಕರಿಸಿದವರ ಸಂಖ್ಯೆ ಹೆಚ್ಚು. ಇತ್ತೀಚಿನ ಫತ್ವಗಳಲ್ಲಿ ಎರಡು ಫತ್ವಗಳು ಬಹಳ ಮಹತ್ವವನ್ನು ಪಡೆಯುತ್ತದೆ, ಮೊದಲನೇದಾಗಿ ಭಯೋತ್ಪಾದನೆಯನ್ನು ವಿರೋಧಿಸಿ ಬಂದಿರುವ ಫತ್ವ ಎರಡನೇದಾಗಿ ವಂದೇ ಮಾತರಂನ ವಿರುದ್ಧ ಬಂದಿರುವ ಫತ್ವ. ಕಳೆದ ವರುಷ ದಾರೂಲ್ ಉಲುಮ್ ದಿಯೋಬಂದ್ ಭಯೋತ್ಪಾದನೆ ವಿರುದ್ಧ ಫತ್ವವನ್ನು ಹೊರಡಿಸಿತ್ತು. ಅದರ ಪ್ರಕಾರ ಭಯೋತ್ಪಾದನೆ ಹಾಗೂ ಆತ್ಮಾಹುತಿ ದಳ, ನಿರಪರಾಧಿಗಳ ಮೇಲಿನ "ಬಾಂಬ್" ಪ್ರಯೋಗ ಇಸ್ಲಾಮನಲ್ಲಿ 'ಹರಾಮ್", ಹಾಗೂ "ಇಸ್ಲಾಂ ವಿರೋಧಿ".ಇದಕ್ಕೆ ಸ್ವಲ್ಪ ವಿಭಿನ್ನವಾದ ವಾದವನ್ನು ವಂದೇ ಮಾತರಂನ ಸಂದರ್ಭದಲ್ಲಿ ಮಾಡಲಾಯಿತು.

"ನಾವು ದೇಶವನ್ನು ಆಳವಾಗಿ ಪ್ರೀತಿಸುತ್ತೇವೆ. ಆದರೆ ದೇಶವನ್ನು ಅಲ್ಲಾನ ಸ್ಥಾನಕ್ಕೇರಿಸಿ ಪೂಜಿಸುವುದನ್ನು ವಿರೋಧಿಸುತೇವೆ, ಅಲ್ಲಾಹ್‌ನನ್ನು ಹೊರತು ಪಡಿಸಿ ಉಳಿದವರನ್ನು ದೇವರ ಸ್ಥಾನಕ್ಕೇರಿಸುವುದು ಇಸ್ಲಾಂನಲ್ಲಿ "ಶಿರ್ಕ್". ಇದೇ ರೀತಿಯವಾದ "ಜೈ ಭೀಮ್"ನ ಕುರಿತು ಫತ್ವವನ್ನು ಹೊರಡಿಸುವ ಸಂದರ್ಭದಲ್ಲಿ ಬಂದಿರುವುದನ್ನು ನಾವಿಲ್ಲಿ ಗಮನಿಸಬೇಕು. ಮೀಸಲಾತಿಯನ್ನು ವಿರೋಧಿಸುವ ಸಂದರ್ಭದಲ್ಲಿ ಅಲ್ಪ ಸಂಖ್ಯಾಕರಲ್ಲಿ "ಜಾತಿ"ಯ ನೆಲೆಗಳಿಲ್ಲ ಎಂಬ ವಾದ ನಿಚ್ಚಳವಾಗಿತ್ತು. ವಾಸ್ತವವಾಗಿ ಫತ್ವಗಳು ದೇಶಿಯ ರಾಜಕಾರಣಕ್ಕೆ ಮಾತ್ರ ಸೀಮಿತವಾಗಿಲ್ಲ. ಕಳೆದ ವರುಷ ಗಾಜಾ ಪಟ್ಟಿ ಮೇಲೆ ನಡೆಯುತ್ತಿದ್ದ ಇಸ್ರೇಲಿ ಆಕ್ರಮಣದ ವಿರುದ್ಧ ಒಂದು ಫತ್ತವನ್ನು ಲಕ್ನೋದ ಕೆಲವು ಮುಫ್ತಿಗಳು ಹೊರಡಿಸಿದ್ದರು. ಅದರೊಂದಿಗೆ ಇಸ್ರೇಲಿ ದೇಶವನ್ನು ಬೆಂಬಲಿಸುವ ವಿವಿಧ ಬಹುರಾಷ್ಟ್ರೀಯ ಕಂಪೆನಿಗಳ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಫತ್ವ ಉಲ್ಲೇಖಿಸಿತ್ತು.

ಇವೆಲ್ಲಾ ಫತ್ವಗಳು ಒಂದ್ಮೆ ನಿರ್ಧಿಷ್ಟ ಸೆಮಿನಾರಿಯಿಂದ ಬರಲಿಲ್ಲ, ಬರುವುದೂ ಇಲ್ಲ.. ಇವತ್ತು ಬರೇ ದಾರುಲ್ ಉಲುಮ್ ಮಾತ್ರ ಫತ್ವಗಳ ಹೊರಡಿಸುವುದರ ಮಂಚೂಣಿಯಲ್ಲಿಲ್ಲ. ದುರಂತವೆಂದರೆ ಪ್ರತಿಯೊಬ್ಬ "ಮುಫ್ತಿ", "ಖಾಜಿ" ತಾನು ಫತ್ವವನ್ನು ಹೊರಡಿಸಲು ಅರ್ಹರೆಂದು ಭಾವಿಸುತ್ತಾರೆ. ವಾಸ್ತವವಾಗಿ ಧಾರ್ಮಿಕ ಶಕ್ತಿಯ ಮೂಲ ಕೇಂದ್ರ ಒಂದೆಡೆ ಕೇಂದ್ರೀಕೃತವಾಗಿರದೇ ಇರುವುದು ಇದಕ್ಕೆ ಮೂಲ ಕಾರಣ. ಇಸ್ಲಾಂನಲ್ಲಿ, ಕ್ರಿಶ್ಚಿನರಂತೆ, ಶ್ರೇಣೀಕೃತ ಧಾರ್ಮಿಕ ಚೌಕಟ್ಟು ಇಲ್ಲ. ಸಮುದಾಯದ ಶಕ್ತಿ ವಿವಿಧ ಮೊಹಲ್ಲಾಗಳಲ್ಲಿರುವ ಧಾರ್ಮಿಕ ಸಂಸ್ಥೆಗಳಲ್ಲಿ ಹರಡಿರುವುದನ್ನು ನಾವಿಲ್ಲಿ ಗಮನಿಸಬೇಕು. ಇಲ್ಲಿ ಸಮುದಾಯದ ಯಜಮಾನಿಕೆ ಫತ್ವಗಳ ಮೂಲಕ ನಿರ್ಮಾಣವಾಗುವುದನ್ನು ಹಾಗೂ ನಿರ್ಮಿಸುವುದನ್ನು ನಾವು ಗಮನಿಸಬೇಕು. ಇದರ ಪರಿಣಾಮವೇನೆಂದರೆ ವಿರೋಧಾಭಾಸದಿಂದ ಕೂಡಿದ ಹತ್ತು ಹಲವು ಫತ್ವಗಳು, ಹಾಗೂ ಸಮುದಾಯದ ಕುರಿತಾದ ಪಡಿಯಚ್ಚುಗಳು.

ಫತ್ವವನ್ನು ದೇಶದ ಕಾನೂನಿನ ವಿರುದ್ಧ ಹೊರಡಿಸಲು ಸಾಧ್ಯವೇ? ಎಂಬ ಪ್ರಶ್ನೆ ಬರುವುದು ಸಹಜ. ಅದು ಸಾಧ್ಯನೂ ಇಲ್ಲ–ಅಸಿಂಧುವೂ ಹೌದು. ಇದಕ್ಕೆ ಉತ್ತಮ ಉದಾಹರಣೆ 2005ರ ಮಧ್ಯಪ್ರದೇಶದ ವಿವಾದ. 2005ರಲ್ಲಿ ಮಧ್ಯಪ್ರದೇಶದ ಇಂದೋರ್‌ನ ಕೋರ್ಟ್ ನೀಡಿದ ವಿವಾಹವಿಚ್ಛೇಧನೆಯ ತೀರ್ಪು ಒಂದು ಫತ್ವಕ್ಕೆ ದಾರಿ ಮಾಡಿ ಕೊಟ್ಟಿತ್ತು. ಕೋರ್ಟ್ ವಿವಾಹ ವಿಚ್ಛೇಧನೆಯನ್ನು ನೀಡಿದಾಗ "ತೀರ್ಪನ್ನು ಮುಸ್ಲಿಂಮೇತರ ಅಧಿಕಾರಿಯು ನೀಡಿದಕಾರಣ ಅದು ಮುಸ್ಲಿಂಮರಿಗೆ ಅನ್ವಯವಾಗಲಾರದು" ಎಂದು ಫತ್ವವನ್ನು ಹೊರಡಿಸಲಾಯಿತು. ಇದರ ಅಂತಿಮ ಪರಿಣಾಮ: ಮುಫ್ತಿಯ ಬಂಧನ.

ಈ ಎಲ್ಲಾ ಫತ್ವಗಳಿಂದ ಅಲ್ಪಸಂಖ್ಯಾಕರ ಸ್ಥಿತಿಗತಿಗಳಲ್ಲಿ ಬದಲಾವಣೆಯಾಗಿಲ್ಲ. ವಾಸ್ತವವಾಗಿ ಫತ್ವಗಳು ಸಮುದಾಯದ ಮೂಲಭೂತ ಪ್ರಶ್ನೆಗಳಾದ ಬಡತನ, ಹಿಂದುಳಿದಿರುವಿಕೆ, ಇತ್ಯಾದಿಗಳನ್ನು ಪ್ರಶ್ನಿಸುವುದಿಲ್ಲ. ಜೈಲ್‌ಗಳಲ್ಲಿ ಅತ್ಯಧಿಕ ಜೈಲ್ ವಾಸಿಗಳು ಅಲ್ಪಸಂಖ್ಯಾಕ ಸಮುದಾಯದಿಂದ ಏಕೆ ಬರುತ್ತಾರೆ– ಇದಕ್ಕೆ ಸಮುದಾಯದ ಕುರಿತಾದ ಪಡಿಯಚ್ಚುಗಳು ಹೇಗೆ ಕಾರಣವಾಗುತ್ತದೆ? ಅಥವಾ ಅವರಲ್ಲಿ ಎಷ್ಟು ಶೇಕಡಾವಾರು ಜನ ನಿಜವಾದ ಅಪರಾಧಿಗಳು? ಅತ್ಯಂತ ವಿದ್ಯಾವಂತ ಅಲ್ಪಸಂಖ್ಯಾಕರೇಕೆ ಆತಂಕ ವಾದದೆಡೆಗೆ ವಾಲುತ್ತಾರೆ ಎಂಬಿತ್ಯಾದಿ ಪ್ರಶ್ನೆಗಳನ್ನು ಫತ್ವ ಗಮನಿಸುವುದಿಲ್ಲ. ಸಮುದಾಯದ ಕುರಿತಾಗಿರುವ ಪಡಿಯಚ್ಚಯಗಳನ್ನು ಅಧಿಕವಾಗಿ ಫತ್ವಗಳು ಬದಲಾಯಿಸಲು ಯತ್ನಿಸುವುದೇ ಇಲ್ಲ. ಒಂದೆರೆಡು ಫತ್ವಗಳು ಈ ನಿಟ್ಟಿನಲ್ಲಿದ್ದರೂ, ಅವುಗಳು ಮೂಲಭೂತ ಪಡಿಯಚ್ಚುಗಳನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ.

ಪ್ರತೀ ಫತ್ವ ಹೊಸ ಹೊಸ ಪಡಿಯಚ್ಚುಗಳನ್ನು ನಿರ್ಮಿಸುತ್ತಾ ಹೋಗುತ್ತದೆ. ಅಲ್ಲದೇ ಸಮುದಾಯವನ್ನು ಸಾಮಾಜಿಕವಾಗಿ ಹಾಗೂ ತಾತ್ವಿಕವಾಗಿ ಪುನ:ಹ ಪುನ:ಹ ಅಂಚಿಗೆ ತಳ್ಳುತ್ತಾ ಹೋಗುತ್ತದೆ. ಈ ನಿಟ್ಟಿನಲ್ಲಿ 'ಮೈ ನೇಮ್ ಈಸ್ ಖಾನ್" ಕುರಿತು ಬಂದಿರುವ ಫತ್ವವನ್ನು ಗಮನಿಸಬೇಕು. ಅದು ಸಮುದಾಯದ ಕುರಿತು ಅಂತರಾಷ್ಟ್ರೀಯ ಸಂಕಥನವನ್ನೂ, ಪಡಿಯಚ್ಚನ್ನು ಬದಲಾಯಿಸಲು ಯತ್ನಿಸಿದರೂ, ಟಿಪ್ಪು ಸುಲ್ತಾನ ಮಸೀದಿಯಲ್ಲಿರುವ ಮುಫ್ತಿಯ ಫತ್ವ ಇಡೀ ಅಲ್ಪಸಂಖ್ಯಾಕರ ಐಡೆಂಟಿಯನ್ನು ಮತ್ತೊಮ್ಮೆ ಅದೇ ಪಡಿಯಚ್ಚಿನ ಚೌಕಟ್ಟಿನಲ್ಲಿ ನಿರ್ಮಿಸುತ್ತದೆ ಹಾಗೂ ಗಟ್ಟಿಗೊಳಿಸುತ್ತದೆ. ಇದು ಅಲ್ಪಸಂಖ್ಯಾಕರ ದುರಂತವೂ ಹೌದು. □

ಲಕ್ಷ್ಮಕ್ಕನ ರೇಷನ್ ಕಾರ್ಡ್

(11ನೇ ಪುಟದಿಂದ)

ಮನೆಮಾಡಿತ್ತು.

ಬೆಳಗ್ಗೆ ಪತ್ರಿಕೆಯ ಕೆಲಸ, ಸಂಜೆಯಾಗುತ್ತಲೆ ಸಿಗುವ ಮನು, ಅವರ ಮಾತು ಚರ್ಚೆ, ಆಕಾಶನ ದಿನಚರಿ ನಿಗಧಿಯಾದಂತೆ ದಿನಗಳು ಉರುಳುತಿದ್ದವು. ಇದೆ ಸಂಧರ್ಭದಲ್ಲಿ ಮನು ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬರ ಕರ್ತವ್ಯಗಳ ಕುರಿತು ಮಾತನಾಡುತ್ತ, ಆಕಾಶನ ಜವಾಬ್ದಾರಿಯನ್ನು ನಿಗಧಿಪಡಿಸುವ ಪ್ರಯತ್ನದಲ್ಲಿರುವಂತಿತ್ತು. ಇದೇ ಮುಂದೆ ಅವರಿಬ್ಬರ ಸಂಬಂಧದಲ್ಲಿ ಸಣ್ಣ ಬಿರುಕು ಮೂಡಲು ಕಾರಣವೂ ಆಯಿತು. ಬಂದೂಕು ಹೊತ್ತು ಕಾಡಲ್ಲಿ ತಿರುಗುವ ಮಾತ್ರಕ್ಕೆ ಬದಲಾವಣೆ ತರುವ ಕುರಿತು ಆಕಾಶನಿಗಿದ್ದ ಸಂದೇಹ ಬಗೆಹರಿಯಲ್ಲೆ ಇಲ್ಲ. ಆದರೂ ಸಮಾಜದಲ್ಲಿ ತನ್ನ ಪಾತ್ರವೇನೆಂಬುದನ್ನು ನಿರ್ಧರಿಸುವ ಆಕಾಶನ ಮನಸ್ಥಿಯ ಹಿಂದೆ ಮನುವಿನ ಪಾತ್ರ ಎಷ್ಟಿರಬಹುದು ಎಂಬುದು ಇಬ್ಬರಿಗೂ ಗೊತ್ತಿತ್ತು.

ಒಮ್ಮೆ ಮನು ಪತ್ರಿಕಾಗೋಷ್ಟಿಗೆ ಬಂದವರು ಬೇಸರದಲ್ಲಿದ್ದರು. ಕೆಲಸ ಮುಗಿದೊಡನೆ ಹೊರಟು ಹೋದರು. ಪಕ್ಕದ ಹಿರಿಯ ಪತ್ರಿಕಾ ಮಿತ್ರರೊಬ್ಬರು ಬಂದು 'ಈ ಮನುಷ್ಯ ನಗುವುದೆ ಇಲ್ಲವಾ' ಎಂದರು. ಯಾಕೊ ಆಕಾಶನಿಗೂ ಅವತ್ತು ಹಾಗೆ ಅನ್ನಿಸಿತ್ತು. ಸಂಜೆ ಕೆಲಸ ಮುಗಿಸಿ ಮನು ಆಫೀಸಿಗೆ ಹೋದ ಆಕಾಶ ಅದೂ ಇದೂ ಮಾತನಾಡಿ ಕೊನೆಗೆ 'ಯಾಕೆ ಬೇಸರದಲ್ಲಿದ್ದೀರ' ಎಂದ. 'ಏನಿಲ್ಲ, ಈ ಪೊಲೀಸರಿಗೆ ನಾನು ಮತ್ತೆ ಕಾಡು ಸೇರದಿದ್ದರೆ ನೆಮ್ಮದಿ ಇಲ್ಲ ಅನ್ನಿಸುತ್ತಿದೆ' ಎಂದು ಸುಮ್ಮನಾದರು.

ಇದಾದ ಒಂದು ತಿಂಗಳ ನಂತರ ಮನು ಕಚೇರಿಗೆ ಬರುವುದು ನಿಂತು ಹೋಯಿತು. ಮೊಬೈಲು ಕೂಡ ನಿಂತುಹೋಗಿತ್ತು. ಆಕಾಶನಿಗೂ ತನ್ನ ದಿನಚರಿಯಲ್ಲಿ ಕೊಂಚ ಬದಲಾವಣೆ ಆದಂತೆ ಅನ್ನಿಸಿದರೂ ಬದುಕು ಸಾಗುತ್ತಲೆ ಇತ್ತು. ಆಗಾಗ ಊರ ಹೊರಗಿನ ರೈಲ್ವೇ ಟ್ರ್ಯಾಕ್ ಬಳಿ ಹೋಗಿ ಹಳೆಯ ಮನುವಿನ ನೆನಪುಗಳನ್ನು ಹೆಕ್ಕಿಕೊಂಡು ಬಂದ. ಒಂದಿಬ್ಬರು ಪತ್ರಿಕಾ ಮಿತ್ರರು ಮಾತನಾಡಿಕೊಳ್ಳುತಿದ್ದದ್ದು ಆಕಾಶನ ಕಿವಿಗೂ ಬಿದ್ದಿತು. 'ಅಂತು ಪೊಲೀಸರ ಕಾಟಕ್ಕೆ ಮನು ಕಾಡು ಸೇರಿದ್ದಾನೆ. ಅವನೊಬ್ಬ ಒಳ್ಳೆಯ ಪತ್ರಕರ್ತನಾಗಲಿದ್ದ. . . . ?

ಇದಾದ ಆರೇಳು ತಿಂಗಳಲ್ಲಿ ಪರಿಸ್ಥಿತಿ ಯಥಾಸ್ಥಿತಿಗೆ ಬಂದಿತು. ಆಕಾಶ ಕೆಲಸ, ಹೊಸ ಗುರಿಗಳೊಂದಿಗೆ ತನ್ನದೆ ಲೋಕದಲ್ಲಿ ಮುಳುಗಿ ಹೋಗಿದ್ದನು. ಹೀಗಿರುವಾಗಲೆ ಬೆಂಗಳೂರಿನ ಗೆಳೆಯನೊಬ್ಬ ಒಂದು ಬೆಳಗ್ಗೆಯೆ ಫೋನು ಮಾಡಿ 'ಮತ್ತೆ ಮಲೆನಾಡಿನಲ್ಲಿ ಎನ್‌ಕೌಂಟರ್ ನಡೆದಿದೆ. ಅದರಲ್ಲಿ ನಿಮ್ಮ ಮನು ಕೂಡ ಒಬ್ಬ' ಎಂದನು. ಅದರ ಬೆನ್ನಿಗೆ ಮೊಬೈಲ್ ಪರದೆಯ ಮೇಲೆ ನಾಲ್ಕಾರು ಮೆಸೇಜುಗಳು ಬಂದವು.

ಅಂದು ಪತ್ರಿಕೆಗಾಗಿ ಮನು ಸತ್ತ ಸುದ್ದಿಯನ್ನು ಯಾಂತ್ರಿಕವಾಗಿ ಬರೆದು ಆಕಾಶ ಸೈಕಲ್ಲು ಹತ್ತಿ ಊರ ಹೊರಗಿನ ರೈಲ್ವೇ ಟ್ರ್ಯಾಕ್ ದಾಟಿ ಲಕ್ಷ್ಮಕ್ಕನ ಮನೆ ಕಡೆ ಹೊರಟನು. ಏನೊ ಕಳೆದುಕೊಂಡ ಭಾವವೊಂದು ಗಾಢವಾಗಿ ಆವರಿಸಿತ್ತು. ಲಕ್ಷ್ಮಕ್ಕ ಕೆಲಸಕ್ಕೆ ಹೋಗಿದ್ದವರು ಆಗತಾನೆ ಮರಳಿ ಬಂದಿದ್ದರು. ಆಕಾಶನ ಪರಿಚಯ ಹಿಡಿದವರೆ 'ಮನು ಬರಲಿಲ್ಲವ ಮಗ. ಅವನು ಹೀಗೆನೆ ಬಂದಾಗಲೆ ಬಂದ ಅಂತ. ನನಗೊಂದು ರೇಷನ್ ಕಾರ್ಡು ಆಗಬೇಕಿತ್ತು. ಪೇಟೆಗೆ ಬನ್ನಿ ಲಕ್ಷ್ಮಕ್ಕ ಅಂದಿದ್ದ. ನನಗೆ ಬರಲು ಪುರುಸೊತ್ತು ಆಗಲಿಲ್ಲ ನೋಡು. ಅವನ ನಂಬರು ಇದ್ರೆ ಕೊಡು, ಮುಂದಿನ ವಾರ ಬರುತ್ತೇನೆ' ಎಂದರು. ಆಕಾಶನಿಗೆ ಏನು ಮಾತನಾಡಬೇಕೆಂದು ತೋಚಲಿಲ್ಲ. ಮನು ಸತ್ತ ಸುದ್ದಿ ಇನ್ನು ಲಕ್ಷ್ಮಕ್ಕರಿಗೆ ಗೊತ್ತಾಗಿಲ್ಲವೆಂದು ಕಾಣುತ್ತಿದೆ ಅವರ ಮಾತುಗಳಲ್ಲಿ. ಮಗ ಅಂತ ಕರೆಯುವ ತಾಯಿ ಹೃದಯಕ್ಕೆ ಮನು ಸತ್ತದ್ದು ಗೊತಾಗುವುದು ಬೇಡ ಅನ್ನಿಸಿತು ಆಕಾಶನಿಗೆ. ಸುಮ್ಮನೆ ಕುಳಿತಿದ್ದವನು ಒಂದು ಚೀಟಿಯಲ್ಲಿ ತನ್ನ ನಂಬರು ಬರೆದು ಕೊಟ್ಟು 'ಪೇಟೆಗೆ ಬಂದರೆ ಫೋನ್ ಮಾಡಿ, ನಿಮ್ಮ ರೇಷನ್‌ಕಾರ್ಡು ಮಾಡಿಸೋಣ' ಎಂದವನೆ ಶಿವಮೊಗ್ಗದ ಕಡೆ ಹೆಜ್ಜೆ ಹಾಕಿದನು. ಮುಳುಗುತ್ತಿರುವ ಸೂರ್ಯನ ಕೆಂಬಣ್ಣ ಆಕಾಶನ ಕಣ್ಣುಗಳಲ್ಲಿ ಪ್ರತಿಫಲವಾಗುತ್ತಿತ್ತು. □

ಬೆಳಗ್ಗೆ ಪತ್ರಿಕೆಯ ಕೆಲಸ, ಸಂಜೆಯಾಗುತ್ತಲೆ ಸಿಗುವ ಮನು, ಅವರ ಮಾತು ಚರ್ಚೆ, ಆಕಾಶನ ದಿನಚರಿ ನಿಗಧಿಯಾದಂತೆ ದಿನಗಳು ಉರುಳುತಿದ್ದವು. ಇದೆ ಸಂಧರ್ಭದಲ್ಲಿ ಮನು ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬರ ಕರ್ತವ್ಯಗಳ ಕುರಿತು ಮಾತನಾಡುತ್ತ, ಆಕಾಶನ ಜವಾಬ್ದಾರಿಯನ್ನು ನಿಗಧಿಪಡಿಸುವ ಪ್ರಯತ್ನದಲ್ಲಿರುವಂತಿತ್ತು. ಇದೇ ಮುಂದೆ ಅವರಿಬ್ಬರ ಸಂಬಂಧದಲ್ಲಿ ಸಣ್ಣ ಬಿರುಕು ಮೂಡಲು ಕಾರಣವೂ ಆಯಿತು. ಬಂದೂಕು ಹೊತ್ತು ಕಾಡಲ್ಲಿ ತಿರುಗುವ ಮಾತ್ರಕ್ಕೆ ಬದಲಾವಣೆ ತರುವ ಕುರಿತು ಆಕಾಶನಿಗಿದ್ದ ಸಂದೇಹ ಬಗೆಹರಿಯಲ್ಲೆ ಇಲ್ಲ.

ದಲಿತ ಸಂವೇದಿ ಬಜೆಟ್ಟು



ಡಾ. ಟಿ.ಆರ್. ಚಂದ್ರಶೇಖರ್

ನಮ್ಮ ಸಮಾಜದಲ್ಲಿ ಅಭಿವೃದ್ಧಿಯನ್ನು ಗರಿಷ್ಟೀಕರಿಸಿಕೊಳ್ಳಬೇಕೆಂದರೆ ಮತ್ತು ಅದು ಜನರನ್ನು ಒಳಗೊಳ್ಳುವಂತೆ ಮಾಡಬೇಕೆಂದರೆ ಅತ್ಯಂತ ದುಸ್ಥಿತಿಯನ್ನು ಅನುಭವಿಸುತ್ತಿರುವ ದಲಿತರ ಬದುಕನ್ನು ಉತ್ತಮ ಪಡಿಸಬೆಗೇಕಾಗುತ್ತದೆ. ಸಾಕ್ಷರತೆಯ ನಿದರ್ಶನವನ್ನೇ ನೀಡುವುದಾದರೆ ನಮ್ಮಲ್ಲಿ ಅನಕ್ಷರತೆಯು ಅಧಿಕವಾಗಿರುವುದು ದಲಿತರಲ್ಲಿ ಎಂಬುದು ಸ್ಪಷ್ಟ. ಅಂದಮೇಲೆ ಸಾಕ್ಷರತೆಯನ್ನು ಉತ್ತಮ ಪಡಿಸಬೇಕಾದರೆ ನಮ್ಮ ಗಮನವು ದಲಿತರ ಸಾಕ್ಷರತಾ ಕಾರ್ಯಕ್ರಮದ ಮೇಲಿರಬೇಕು. ಅದಕ್ಕೆ ನಮಗೆ ದಲಿತ ಬಜೆಟ್ಟು ಬೇಕು. ಸಾಮಾಜಿಕ ನ್ಯಾಯವೆನ್ನುವುದನ್ನು ನಾವು ಅತ್ಯಂತ ಸೀಮಿತ ಅರ್ಥದಲ್ಲಿ ಬಳಸಿಕೊಂಡು ಬರುತಿದ್ದೇವೆ. ನಮ್ಮ ಬಜೆಟ್ಟನ್ನು ದಲಿತ ಸಂವೇದಿಯನ್ನಾಗಿ ಮಾಡುವುದೂ ಕೂಡ ಒಂದು ರೀತಿಯಲ್ಲಿ ಸಾಮಾಜಿಕ ನ್ಯಾಯದ ಸಂಗತಿಯೇ ಅಗುತ್ತದೆ.

ನಮ್ಮ ಸರ್ಕಾರಗಳು ದಲಿತರ ಸಮಸ್ಯೆಗಳನ್ನು ಅತ್ಯಂತ ಯಾಂತ್ರಿಕವಾಗಿ ಮತ್ತು ಒಂದು ರೀತಿಯ ರಿಚುಯಲ್ಲಾಗಿ ನಿರ್ವಹಿಸಿಕೊಂಡು ಬರುತ್ತಿವೆ. ಅಲ್ಲಿ ಅದಕ್ಕೆ ಅಗತ್ಯವಾದ ಬದ್ಧತೆಯಾಗಲಿ ಅಥವಾ ಜವಾಬುದಾರಿಯಾಗಲಿ ಅಥವಾ ಗಿಲ್ಟ್ ಆಗಲಿ ಇದ್ದಂತೆ ಕಾಣುವುದಿಲ್ಲ. ದಲಿತರ ಅಭಿವೃದ್ಧಿಯೆಂಬುದು ಸರ್ಕಾರಗಳ ನೈತಿಕ ಜವಾಬುದಾರಿ ಎಂಬುದನ್ನು ಅವು ಮನಗಂಡಂತೆ ಕಾಣುವುದಿಲ್ಲ. ದಲಿತರು ದುಸ್ಥಿತಿ ಅನುಭವಿಸುತ್ತಿದ್ದರೆ ಅದು ಅವರ ಸಮಸ್ಯೆಯೆನ್ನುವಂತೆ ಸರ್ಕಾರಗಳು ನಡೆದುಕೊಳ್ಳುತ್ತಿವೆ. ಚಾರಿತ್ರಿಕ ಅನ್ಯಾಯವೊಂದನ್ನು ಸರಿಪಡಿಸುವ ಕರ್ತವ್ಯವನ್ನು ನಮ್ಮ ಸರ್ಕಾರಗಳು ಮತ್ತು ಆಳುವ ಪಕ್ಷಗಳು ಅರಿತುಕೊಂಡಂತೆ ಕಾಣುವುದಿಲ್ಲ.

ಬಜೆಟ್ಟು ಯಾಕೆ ದಲಿತ ಸಂವೇದಿಯಾಗಬೇಕು?

ದಲಿತ ಬಜೆಟ್ಟಿನ ಅಗತ್ಯವನ್ನು ಒತ್ತಿ ಹೇಳಬೇಕಾಗಿಲ್ಲ. ಈಗಾಗಲೇ ಲಿಂಗ ಸಂಬಂಧಿ ಬಜೆಟ್ಟಿನ ಬಗ್ಗೆ ಮಾತನಾಡಲಾಗುತ್ತಿದೆ. ದಲಿತ ಬಜೆಟ್ಟು ಯಾಕೆ ಬೇಕು ಎಂಬುದಕ್ಕೆ ಉತ್ತರ ಸರಳ. ನಮ್ಮ ಸಮಾಜದಲ್ಲಿ ಅತ್ಯಂತ ದುಸ್ಥಿತಿ ಅನುಭವಿಸುತ್ತಿರುವ ವರ್ಗವೆಂದರೆ ದಲಿತರು, ಅದರಲ್ಲೂ ದಲಿತ ಮಹಿಳೆಯರು. ಉದಾಹರಣೆಗೆ ಒಟ್ಟು ಜನಸಂಖ್ಯೆಯಲ್ಲಿ ಅಕ್ಷರಸ್ಥರ ಪ್ರಮಾಣ ಶೇ. 66.64. ಆದರೆ ಪ.ಜಾ.ಯಲ್ಲಿ ಅಕ್ಷರಸ್ಥರ ಪ್ರಮಾಣ ಶೇ. 50.76ರಷ್ಟಾದರೆ ಪ.ಪಂ.ದಲ್ಲಿ ಅದು ಶೇ48.24ರಷ್ಟಿದೆ. ಮಹಿಳೆಯರನ್ನು ತೆಗೆದುಕೊಂಡರೆ ಒಟ್ಟು ಮಹಿಳೆಯರಲ್ಲಿ ಅಕ್ಷರಸ್ಥರ ಪ್ರಮಾಣ ಶೇ. 56.87ರಷ್ಟಿದ್ದರೆ ಪ.ಜಾ.ಯಲ್ಲಿ ಅಕ್ಷರಸ್ಥ ಮಹಿಳೆಯರ ಪ್ರಮಾಣ ಶೇ.41.7 ಮತ್ತು ಪ.ಪಂ.ದಲ್ಲಿ ಅದು ಶೇ.36.52ರಷ್ಟಿದೆ.

ಒಂದು ವೇಳೆ ಸಮಾಜದಲ್ಲಿ ಅವಕಾಶಗಳು ಎಲ್ಲ ಜನಸಮುದಾಯಕ್ಕೆ ಸಮಾನವಾಗಿ ದೊರೆತಿದ್ದರೆ ಈ ಬಗೆಯ ಅಸಮಾನತೆಯು ಸಾಕ್ಷರತೆಯಲ್ಲಿ ಇರುವ ಅಗತ್ಯವಿರಲಿಲ್ಲ. ಇದೊಂದು ಚಾರಿತ್ರಿಕ ಅನ್ಯಾಯ. ಇದನ್ನು ಸರಿಪಡಿಸಿಕೊಳ್ಳುವುದು ನಮ್ಮ ಜವಾಬುದಾರಿ. ಅದಕ್ಕಾಗಿ ನಾವು ದಲಿತ ಬಜೆಟ್ಟಿನ ಬಗ್ಗೆ ಮಾತನಾಡಬೇಕಾಗುತ್ತದೆ. ದುಸ್ಥಿತಿಯನ್ನು ಅನುಭವಿಸುತ್ತಿರುವವರ ನೆಲೆಯಿಂದ ಅಭಿವೃದ್ಧಿಯನ್ನು ನೋಡುವ ಪ್ರಣಾಳಿಕೆಯನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ. ಈ ಬಗೆಯ ಪ್ರಣಾಳಿಕೆಯು ಸಮಾಜದ ಎಲ್ಲರ ಹಿತವನ್ನು ಕಾಪಾಡುವ ರೀತಿಯಲ್ಲಿ ಕೆಲಸ ಮಾಡುತ್ತದೆ. ದಲಿತರ ಪದತಲದಿಂದ ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ನಮ್ಮ ಸಮಾಜದಲ್ಲಿ ಅಭಿವೃದ್ಧಿಯನ್ನು ಗರಿಷ್ಟೀಕರಿಸಿಕೊಳ್ಳಬೇಕೆಂದರೆ ಮತ್ತು ಅದು ಜನರನ್ನು ಒಳಗೊಳ್ಳುವಂತೆ ಮಾಡಬೇಕೆಂದರೆ ಅತ್ಯಂತ ದುಸ್ಥಿತಿಯನ್ನು ಅನುಭವಿಸುತ್ತಿರುವ ದಲಿತರ ಬದುಕನ್ನು ಉತ್ತಮ ಪಡಿಸಬೇಕಾಗುತ್ತದೆ. ಸಾಕ್ಷರತೆಯ ನಿದರ್ಶನವನ್ನೇ ನೀಡುವುದಾದರೆ ನಮ್ಮಲ್ಲಿ ಅನಕ್ಷರತೆಯು ಅಧಿಕವಾಗಿರುವುದು ದಲಿತರಲ್ಲಿ ಎಂಬುದು ಸ್ಪಷ್ಟ. ಅಂದಮೇಲೆ ಸಾಕ್ಷರತೆಯನ್ನು ಉತ್ತಮ ಪಡಿಸಬೇಕಾದರೆ ನಮ್ಮ ಗಮನವು ದಲಿತರ ಸಾಕ್ಷರತಾ ಕಾರ್ಯಕ್ರಮದ ಮೇಲಿರಬೇಕು. ಅದಕ್ಕೆ ನಮಗೆ ದಲಿತ ಬಜೆಟ್ಟು ಬೇಕು. ಸಾಮಾಜಿಕ ನ್ಯಾಯವೆನ್ನುವುದನ್ನು ನಾವು ಅತ್ಯಂತ ಸೀಮಿತ ಅರ್ಥದಲ್ಲಿ ಬಳಸಿಕೊಂಡು ಬರುತ್ತಿದ್ದೇವೆ.

ನಮ್ಮ ಬಜೆಟ್ಟನ್ನು ದಲಿತ ಸಂವೇದಿಯನ್ನಾಗಿ ಮಾಡುವುದೂ ಕೂಡ ಒಂದು ರೀತಿಯಲ್ಲಿ ಸಾಮಾಜಿಕ ನ್ಯಾಯದ ಸಂಗತಿಯೇ ಅಗುತ್ತದೆ. ದಲಿತ ಸಂವೇದನೆಯೆಂದರೆ ಕೇವಲ ಮೀಸಲಾತಿಯ ಪ್ರಶ್ನೆಯಲ್ಲ ಅಥವಾ ದಲಿತರಿಗೆ ಪ್ರಾತಿನಿಧ್ಯ ನೀಡುವ ಸಂಗತಿಯಲ್ಲ. ಮೀಸಲಾತಿ ನೀಡುವುದು ಅಥವಾ ಪ್ರಾತಿನಿಧ್ಯ ನೀಡುವುದು ಸುಲಭದ ಕೆಲಸ. ಮೀಸಲಾತಿ ನೀಡಿಬಿಟ್ಟರೆ ಅಥವಾ ಪ್ರಾತಿನಿಧ್ಯ ನೀಡಿಬಿಟ್ಟರೆ ನಮ್ಮ ಜವಾಬುದಾರಿ ಮುಗಿಯಿತೆಂದು ಸರ್ಕಾರ ಮತ್ತು ಸಮಾಜ ಭಾವಿಸಿರುವಂತೆ ಕಾಣುತ್ತದೆ. ದಲಿತರ ಅಭಿವೃದ್ಧಿಗೆ ಅವು ಅತ್ಯಂತ ಅಗತ್ಯ. ಆದರೆ ಅವುಗಳೇ ದಲಿತರ ಅಭಿವೃದ್ಧಿ ಅಲ್ಲ. ಅಭಿವೃದ್ಧಿಯೆಂಬುದು ಜನರನ್ನು ಸಂಪನ್ಮೂಲವನ್ನಾಗಿ ಮಾತ್ರ ನೋಡುವುದಲ್ಲ. ಅವರನ್ನು ಅಭಿವೃದ್ಧಿಯ ಧಾತು ಸದೃಶ ಕರ್ತೃಗಳನ್ನಾಗಿ ನೋಡುವ ಅಗತ್ಯವಿದೆ. ನಮ್ಮಲ್ಲಿ ಒಟ್ಟು ದುಡಿಮೆಗಾರರಲ್ಲಿ ಭೂರಹಿತ ದಿನಗೂಲಿಗಳ ಪ್ರಮಾಣ ಶೇ 26.45ರಷ್ಟಿದ್ದರೆ ಪ.ಜಾ.ಯಲ್ಲಿ ಅದು ಶೇ 43.75ರಷ್ಟಿದೆ. ಪ.ಪಂ.ದಲ್ಲಿ ಅದು ಶೇ 43.12ರಷ್ಟಿದೆ. ಅಕ್ಷರ ಸಂಸ್ಕೃತಿಯನ್ನು ತೆಗೆದುಕೊಂಡರೆ ಅಲ್ಲಿ ದಲಿತರ ಪ್ರಮಾಣ ಕಡಿಮೆ. ಆದರೆ ದಿನಗೂಲಿ ದುಡಿಮೆಗಾರರನ್ನು ತೆಗೆದುಕೊಂಡರೆ ಅಲ್ಲಿ ದಲಿತರ ಪ್ರಮಾಣ ಅಧಿಕ. ಈ ಕಾರಣಕ್ಕೆ ದಲಿತ ಬಜೆಟ್ಟು ಬೇಕು. ದಲಿತರನ್ನು ಸರಕುಗಳನ್ನಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಅಭಿವೃದ್ಧಿಯಲ್ಲಿ ಅವರನ್ನು ಅದರ ಮೂಲಧಾತುವನ್ನಾಗಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಅದನ್ನೇ ಇಲ್ಲಿ ದಲಿತ ಸಂವೇದನೆಯೆಂದು ಕರೆಯಲಾಗಿದೆ.

ದಲಿತರ ಅಭಿವೃದ್ಧಿಯನ್ನು ನಾವು ಹಕ್ಕುಗಳ ಪರಿಭಾಷೆಯಲ್ಲಿ ಪರಿಭಾವಿಸಿಕೊಳ್ಳುವ ಅವಶ್ಯಕತೆಯಿದೆ. ಏಕೆಂದರೆ ಇಲ್ಲಿ ಚಾರಿತ್ರಿಕವಾಗಿ ನಮ್ಮ ಸಮಾಜವು ದಲಿತರಿಗೆ ಸಂಬಂಧಿಸಿದಂತೆ ಮಾನವ ಹಕ್ಕುಗಳನ್ನು ಉಲ್ಲಂಘಿಸಿಕೊಂಡೇ ಬರುತ್ತಿದೆ. ನಮ್ಮ ಬಜೆಟ್ಟು ದಲಿತ ಸಂವೇದಿಯಾಗಿರಬೇಕು. ಏಕೆಂದರೆ ಅದು ಮಾನವ ಹಕ್ಕುಗಳ ಪ್ರಶ್ನೆ. ಅದು ಸಾಮಾಜಿಕ ನ್ಯಾಯದ ಪ್ರಶ್ನೆ. ನಮ್ಮ ರಾಜಕೀಯ ಪಕ್ಷಗಳಿಗೆ ದಲಿತರ ಅಭಿವೃದ್ಧಿಯೆಂಬುದು ಕೇವಲ ಮತಬ್ಯಾಂಕಿನ ಸಂಗತಿಯಾಗಿದೆ. ಅವುಗಳಿಗೆ ರಾಜಕೀಯ ಬದ್ಧತೆ ಇಲ್ಲ. ಅದನ್ನು ರಾಜಕೀಯ ಪಕ್ಷಗಳು ಒಂದು ರೀತಿಯಲ್ಲಿ 'ಅನುಕಂಪೆ'ಯ ಸಂಗತಿಯಾಗಿ ಪರಿಭಾವಿಸಿಕೊಳ್ಳುತ್ತಿವೆ. ದಲಿತರ ಅಭಿವೃದ್ಧಿಯೆಂಬುದು ಅಧಿಕಾರ ಸಂಬಂಧಗಳನ್ನು ತಲೆಕೆಳಗು ಮಾಡುವ ಸಂಗತಿಯಾಗಿದೆ. ದಲಿತರ ಬಜೆಟ್ಟೆಂಬುದು ನಾವು ಈಗ ಬಜೆಟ್ಟನ್ನು ರೂಪಿಸಿಕೊಂಡು ಬರುತ್ತಿರುವ ಪರಿಯನ್ನು ತಿರುವುಮುರುವು ಮಾಡುವ ಸಂಗತಿಯಾಗಿದೆ.

ದಲಿತ ಸಂವೇದನೆಯೆಂದರೆ ಕೇವಲ ಬಜೆಟ್ಟಿನಲ್ಲಿ ಹೊಸ ಕಾರ್ಯಕ್ರಮಗಳನ್ನು ಸೇರಿಸುವುದಲ್ಲ ಅಥವಾ ದಲಿತ ಕಾರ್ಯಕ್ರಮಗಳಿಗೆ ಹಣಕಾಸು ಮೊತ್ತವನ್ನು ಹೆಚ್ಚಿಸುವುದು ಮಾತ್ರವಲ್ಲ. ಬದುಕನ್ನು ದಲಿತರು ಘನತೆಯಿಂದ ಮತ್ತು ಗೌರವಪೂರ್ಣವಾಗಿ ಕಟ್ಟಿಕೊಳ್ಳಲು ಅಗತ್ಯವಾದ ಸನ್ನಿವೇಶವನ್ನು ನಿರ್ಮಿ

ಸುವುದು ದಲಿತ ಸಂವೇದನೆ. ಇಂದು ದಲಿತರ ಬದುಕನ್ನು ಒಂದು ರೀತಿಯಲ್ಲಿ ಹಂಗಿನ ಸಂಗತಿಯನ್ನಾಗಿ ಮಾಡುವ ಪ್ರಯತ್ನ ನಡೆಯುತ್ತಿದೆ. ಇದು ಅತ್ಯಂತ ಅಪಾಯಕಾರಿಯಾದ ಸಂಗತಿ. ಇದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅಭಿವೃದ್ಧಿ ಎನ್ನುವುದು ದತ್ತಿ-ದಾನದ ಸಂಗತಿಯಲ್ಲ. ಅದು ನಮ್ಮ ಹಕ್ಕು. ಬಜೆಟ್ಟು ದಲಿತ ಸಂವೇದಿಯಾಗಬೇಕೆಂದರೆ ಅದು ಹಕ್ಕಿನ ಪರಿಭಾಷೆಯಲ್ಲಿರಬೇಕೆಂದು ಅರ್ಥ.

ಸರ್ಕಾರಗಳು ಜನರಿಗೆ ನ್ಯಾಯವನ್ನು ತಮ್ಮಷ್ಟಕ್ಕೆ ತಾವು ಒದಗಿಸುವುದಿಲ್ಲ. ಅದರ ಕಾರ್ಯವೇ ಜನರಿಗೆ ಅನ್ಯಾಯ ಮಾಡುವುದು. ಅದರ ಸಹಜ ಗುಣವೆಂದರೆ ಉಳ್ಳವರ-ದಣಿಗಳ ಪರವಾಗಿ ಕೆಲಸ ಮಾಡುವುದು. ಸಾಮಾನ್ಯವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಅಥವಾ ಅಧಿಕಾರ ಅಂದರೆ ಅನ್ಯಾಯವೆಂದೇ ಅರ್ಥ. ಸರ್ಕಾರದಿಂದ ನ್ಯಾಯ ದೊರೆಯುವುದಿಲ್ಲ ಎಂಬುದೇ ವಸ್ತುಸ್ಥಿತಿಯೇ? ಹಾಗಾದರೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಬೇಡವೇ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಅಲ್ಲ. ಇದು ಪ್ರಜಾಪ್ರಭುತ್ವದ ಪ್ರಸ್ತುತತೆಯ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವದಲ್ಲಿ ಜನರು ಸಂಘಟಿತರಾಗಿ ಹೋರಾಟ ಮಾಡದಿದ್ದರೆ, ತಮ್ಮ ಹಕ್ಕುಗಳನ್ನು ಒತ್ತಾಯಿಸದಿದ್ದರೆ, ಹಕ್ಕುಗಳ ಬಗ್ಗೆ ಸದಾ ಜಾಗೃತರಾಗಿರದಿದ್ದರೆ ಸರ್ಕಾರಗಳು ತಮ್ಮ ಅನ್ಯಾಯದ ಕೆಲಸವನ್ನು ಮುಂದುವರಿಸುತ್ತಿರುತ್ತವೆ. ಪ್ರಜಾಪ್ರಭುತ್ವದಲ್ಲಿ ಜನರಿಗೆ ನ್ಯಾಯ ದೊರೆಯಬೇಕೆಂದರೆ ಅಲ್ಲಿ ಜನರು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಂಘಟಿತರಾಗಬೇಕು. ಜನರು ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ಒತ್ತಾಯಿಸ ತೊಡಗಿದರೆ ಸರ್ಕಾರಗಳು ತಮ್ಮ ಅನ್ಯಾಯದ ಕಾರ್ಯವನ್ನು ನಿಲ್ಲಿಸಬೇಕಾಗುತ್ತದೆ - ನ್ಯಾಯವನ್ನು ಒದಗಿಸಬೇಕಾಗುತ್ತದೆ.

ನಮ್ಮ ಬಜೆಟ್ಟಿನಲ್ಲಿ ದಲಿತರ ಅಭಿವೃದ್ಧಿ ಬಗ್ಗೆ ನಿರ್ದಿಷ್ಟವಾದ ದೃಷ್ಟಿಕೋನವಿಲ್ಲ. ಅಭಿವೃದ್ಧಿಯನ್ನು ಪ್ರಾಪಂಚಿಕ ಅಂದರೆ ಪದಾರ್ಥವಾದಿ ಮೌಲ್ಯಗಳ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವಿಲ್ಲ. ಅಭಿವೃದ್ಧಿಯೆಂಬುದು ಸದ್ಯ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳಲ್ಲಿ ಯಾವ ಬದಲಾವಣೆಗಳು ಇಲ್ಲದೆ ನಡೆಯಬೇಕೆಂದು ನಿರೀಕ್ಷಿಸಲಾಗಿದೆ. ಅದು ಅಸಾಧ್ಯ. ನಮ್ಮಲ್ಲಿರುವ ಅಧಿಕಾರ ಸಂಬಂಧಗಳಲ್ಲಿ ಬದಲಾವಣೆ ಉಂಟಾಗದೆ ದಲಿತರ ದುಸ್ಥಿತಿಯನ್ನು ನಿವಾರಿಸುವುದು ಕಷ್ಟ ಸಾಧ್ಯ. ದಲಿತರ ಅಭಿವೃದ್ಧಿಯೆನ್ನುವುದು ಕೇವಲ ಭೌತಿಕವಾದ ಸಂಗತಿಯಲ್ಲ ಅಥವಾ ಅದು ಕೇವಲ ಸಂಪನ್ಮೂಲದ ಸಂಗತಿಯಲ್ಲ. ಅದು ಪಾರಮಾರ್ಥಿಕವಾದಿ ಪ್ರಣಾಳಿಕೆಯ ಮೂಲಕ ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಅದು ಸೈದ್ಧಾಂತಿಕವಾದ ಮತ್ತು ದೃಷ್ಟಿಕೋನದ ಪ್ರಶ್ನೆಯಾಗಿದೆ.

ನಮ್ಮ ಬಜೆಟ್ಟಿನಲ್ಲಿ ದಲಿತರ ಅಭಿವೃದ್ಧಿ ಬಗ್ಗೆ ನಿರ್ದಿಷ್ಟವಾದ ದೃಷ್ಟಿಕೋನವಿಲ್ಲ. ಅಭಿವೃದ್ಧಿಯನ್ನು ಪ್ರಾಪಂಚಿಕ ಅಂದರೆ ಪದಾರ್ಥವಾದಿ ಮೌಲ್ಯಗಳ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವಿಲ್ಲ. ಅಭಿವೃದ್ಧಿಯೆಂಬುದು ಸದ್ಯ ಅಸ್ತಿತ್ವದಲ್ಲಿರುವ ಅಧಿಕಾರ ಸಂಬಂಧಗಳಲ್ಲಿ ಯಾವ ಬದಲಾವಣೆಗಳು ಇಲ್ಲದೆ ನಡೆಯಬೇಕೆಂದು ನಿರೀಕ್ಷಿಸಲಾಗಿದೆ.

ಇಂದು ನಮ್ಮ ರಾಜ್ಯದಲ್ಲಿ ಆಳುವ ಪಕ್ಷವು ಅನುಸರಿಸುತ್ತಿರುವ ಪಾರಮಾರ್ಥಿಕ ಅಭಿವೃದ್ಧಿ ಪ್ರಣಾಳಿಕೆಯನ್ನು ಪಲ್ಲಟಗೊಳಿಸದೆ ದಲಿತರ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ. ದಲಿತರ ಅಭಿವೃದ್ಧಿಯೆನ್ನುವುದು ಪದಾರ್ಥವಾದಿ ಪ್ರಶ್ನೆಯೂ ಹೌದು ಮತ್ತು ಪದಾರ್ಥವಾದಿ ಸಂಗತಿಯನ್ನು ಧಾರಣಾ ಸಾಮರ್ಥ್ಯವನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯೂ ಹೌದು. ಈ ಪರಿವರ್ತನೆಯಲ್ಲಿ ಬಜೆಟ್ಟಿನ ಪಾತ್ರವು ಮಹತ್ವದ್ದಾಗಿದೆ.

ಕರ್ನಾಟಕದ ಬಜೆಟ್ಟುಗಳನ್ನು ದಲಿತ ಸಂವೇದಿಯಾಗುವಂತೆ ಮಾಡಲು ನಿರ್ದಿಷ್ಟವಾಗಿ ಏನು ಮಾಡಬೇಕೆಂಬುದರ ಬಗ್ಗೆ ನಾವು ಚಿಂತಿಸಬೇಕಾಗಿದೆ. ಆದ್ದರಿಂದ ನಾವು ಬಜೆಟ್ಟಿನ ವಿಷಯದಲ್ಲಿ ಸಂಘಟಿತರಾಗಬೇಕು ಮತ್ತು ಬಜೆಟ್ಟಿನ ಸಂಗತಿಯನ್ನು ರಾಜಕೀಕರಣಗೊಳಿಸಬೇಕು. ರಾಜಕೀಕರಣ ಎಂಬುದನ್ನು ನಿರ್ದಿಷ್ಟ ಅರ್ಥದಲ್ಲಿ ಪರಿಭಾವಿಸಿಕೊಳ್ಳಬೇಕು. ರಾಜಕೀಕರಣವೆಂದರೆ ಜನರ ಸಮಸ್ಯೆಗಳನ್ನು, ಅದರಲ್ಲೂ ದಲಿತರು, ದಲಿತ ಮಹಿಳೆಯರು, ದಿನಗೂಲಿ ದುಡಿಮೆಗಾರರು, ಹಿಂದುಳಿದ ಪ್ರದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಶಿಸ್ತುಬದ್ಧವಾಗಿ ಮತ್ತು ಸೈದ್ಧಾಂತಿಕ ಚೌಕಟ್ಟಿನಲ್ಲಿ ಮಂಡಿಸುವುದು, ಸರ್ಕಾರದ ಜೊತೆಯಲ್ಲಿ ತಮ್ಮ ಗುರಿಗಳನ್ನು ಸಾಧಿಸಿಕೊಳ್ಳಲು ಬೇಕಾದ ಸಂಗತಿಗಳ ಬಗ್ಗೆ ಸಂಧಾನ ನಡೆಸುವುದು ಮತ್ತು ಅಭಿವೃದ್ಧಿಯ ಫಲಗಳಲ್ಲಿ ತಮ್ಮ ತಮ್ಮ ಪಾಲನ್ನು ಒತ್ತಾಯಿಸುವುದಾಗಿದೆ. ದಲಿತರು ರಾಜಕೀಯವಾಗಿ ಸಂಘಟಿತರಾಗಬೇಕೆಂದು ಇಲ್ಲಿ ಹೇಳುವಾಗ ಅದೇ ಅರ್ಥದಲ್ಲಿ ಹೇಳಲಾಗುತ್ತಿದೆ. ಇಲ್ಲಿ ಯಾವ ಅರ್ಥದಲ್ಲಿ ರಾಜಕಾರಣವೆನ್ನುವುದನ್ನು ಬಳಸಲಾಗಿದೆಯೋ ಆ ಅರ್ಥದಲ್ಲಿ ನಮ್ಮಲ್ಲಿ ಚಾಲ್ತಿಯಲ್ಲಿರುವ ರಾಜಕಾರಣವು ದಲಿತರ ನೆಲೆಯಿಂದಾಗಲಿ ಅಥವಾ ಸರ್ಕಾರದ ನೆಲೆಯಿಂದಾಗಲಿ ಕೆಲಸ ಮಾಡುತ್ತಿಲ್ಲ. ಅದು ದುರ್ಬಲವಾಗಿದೆ.

ಇದನ್ನೇ ಡಾ. ಎಂ. ಚಂದ್ರಾಪೂಜಾರಿ ಅವರು 'ರಾಜಕಾರಣದ ಬಡತನ'ವೆಂದು ಕರೆದಿದ್ದಾರೆ. ಇದು ಎರಡೂ ನೆಲೆಯಲ್ಲಿ ಬಡತನದಿಂದ ಕೂಡಿದೆ. ಇದನ್ನು ಸರಿಪಡಿಸುವ ಅಗತ್ಯವಿದೆ. ದಲಿತರ ಅಭಿವೃದ್ಧಿ ಬಗ್ಗೆ ಮಾತನಾಡುವ ನಾವು ನಿರ್ದಿಷ್ಟವಾಗಿ ಕಾರ್ಯತಂತ್ರವನ್ನೊಂದನ್ನು ಕರ್ನಾಟಕದಲ್ಲಿ ರೂಪಿಸುವ ಅಗತ್ಯವಿದೆ. ಇದು ತುಂಬಾ ಪ್ರಸ್ತುತವಾದ ಸಂಗತಿಯಾಗಿದೆ. ದಲಿತರ ಬಜೆಟ್ಟು ರಾಜ್ಯದಲ್ಲಿರುವ ಪ್ರಾದೇಶಿಕ ಅಸಮತೋಲನದ ತೀವ್ರತೆಯನ್ನು ಪರಿಗಣಿಸಬೇಕಾಗುತ್ತದೆ. ಅದು ಕೇವಲ ಬೆಂಗಳೂರಿನ ಬಜೆಟ್ಟಾಗಬಾರದು.

ಇಂದು ಕರ್ನಾಟಕದಲ್ಲಿ ದಲಿತರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಮೂಲೆಗುಂಪು ಮಾಡಲಾಗುತ್ತಿದೆ. ಅವರ ಬಡತನ, ಅವರ ಶೋಷಣೆ, ಅವರು ಅನುಭವಿಸುತ್ತಿರುವ ತಾರತಮ್ಯ, ಲಿಂಗ ಅಸಮಾನತೆ, ಸಾಮಾಜಿಕ ಅನ್ಯಾಯ, ಅವರಲ್ಲಿರುವ ಹಸಿವಿನ ಸಮಸ್ಯೆ, ಅನಕ್ಷರತೆ, ಅಪೌಷ್ಟಿಕತೆ ಮುಂತಾದವುಗಳ ಬಗ್ಗೆ ಈ ಸರ್ಕಾರವಾಗಲಿ ಅಥವಾ ಅದಕ್ಕೆ ಸಲಹೆ-ಮಾರ್ಗದರ್ಶನ ನೀಡುತ್ತಿರುವ ರಾಜರ್ಷಿ/ ರಾಜಗುರುಗಳಾಗಲಿ ಮಾತನಾಡುತ್ತಿಲ್ಲ. ಜನರು ಯಾವತ್ತೂ ಸಮಸ್ಯೆಯೆಂದು ಒತ್ತಾಯಿಸದ ಸಂಗತಿಗಳನ್ನು ಕುರಿತಂತೆ ಉಗ್ರ ರೀತಿಯಲ್ಲಿ ಶಾಸನ ರೂಪಿಸುವ ಅಗತ್ಯದ ಬಗ್ಗೆ ಮತ್ತು ಅವುಗಳೇ ಜನರ ಸಮಸ್ಯೆಯೆನ್ನುವಂತೆ ಸಮಾಜದಲ್ಲಿ ಭ್ರಮೆಯನ್ನು ಹುಟ್ಟುಹಾಕಲಾಗುತ್ತಿದೆ.

ಉದಾಹರಣೆಗೆ ನಮ್ಮ ರಾಜ್ಯದಲ್ಲಿ ರೈತ ಸಂಘಗಳಾಗಲಿ ಅಥವಾ ರೈತ ಸಮುದಾಯವಾಗಲಿ, ದಿನನಿತ್ಯ ಆಕಳಗಳ ಜೊತೆಯಲ್ಲಿ ಹೈರಾಣ ಪಡುವ ಜನರಾಗಲಿ ಗೋಹತ್ಯೆಯ ನಿಷೇದದ ಬಗ್ಗೆ ಒತ್ತಾಯ ಮಾಡುತ್ತಿಲ್ಲ. ಆಕಳ ನಿರ್ವಹಣೆಯ ಯಾವತ್ತೂ ಜಂಜಾಟ ರೈತರಿಗೆ ಗೊತ್ತು ತಾನೆ!. ಅವರು ಒತ್ತಾಯಿಸದಿರುವ ಸಂಗತಿಯನ್ನು ಕೇವಲ ನಾಲ್ಕಾರು ವೈದಿಕವಾದಿಗಳು ಹೇಳಿದರೆಂದು ಗೋಹತ್ಯೆಯ ಬಗ್ಗೆ ಮಾತನಾಡಲಾಗುತ್ತಿದೆ. ಹಾಲನ್ನು ಆಕಳು ಹಿಂದೆ ಕೊಡುತ್ತದೆಯೋ ಅಥವಾ ಮುಂದೆ ನೀಡುತ್ತದೋ ಎಂಬುದು ತಿಳಿಯದ ಜನರು, ಯಾವತ್ತೂ ಆಕಳ ಸಗಣಿ ಬಳಿಯದ ಜನರು ಇಂದು ಗೋವುಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದಾರೆ. ಲಾಗಾಯ್ತಿನಿಂದ ಮನುಷ್ಯರ ಬಗ್ಗೆ ಯಾವತ್ತೂ ಕಾಳಜಿ ವಹಿಸದ ಜನರ ದಂದುಗಗಳಿಗೆ ಸ್ಪಂದಿಸಬೇಕೆಂಬ ಸಾಮಾನ್ಯ ಜ್ಞಾನವಿಲ್ಲದ ಜನರು ಇಂದು ಅದೇ ತಮ್ಮ ಹಳೇ ಚಾಳಿಯಂತೆ ಮನುಷ್ಯರಿಗಿಂತ ಆಕಳಗಳು ಬಗ್ಗೆ ಉಗ್ರವಾದ ಕಾಳಜಿ ತೋರಿಸುತ್ತಿದ್ದಾರೆ.

ಆಕಳಗಳು ನಮ್ಮ ರೈತರಿಗೆ ಸಮಸ್ಯೆಯೇ ಅಲ್ಲ. ಅವುಗಳನ್ನು ಪೂಜಿಸುವ ಅಗತ್ಯವನ್ನು ಅಥವಾ ಅವು ಪವಿತ್ರವೆನ್ನುವ ಸಂಗತಿಯನ್ನು ವಿಪ್ರರು ಶೂದ್ರರಿಗೆ-ದಲಿತರಿಗೆ ಹೇಳಿಕೊಡುವ ಅಗತ್ಯವಿಲ್ಲ. ಜನರನ್ನು, ಅವರ ನೋವು-ನಲಿವುಗಳನ್ನು ಬಿಟ್ಟು ದೇವಾಲಯಗಳ ಮುಂದೆ ಚಪ್ಪಲಿಗಳನ್ನು ಹೇಗೆ ಬಿಡಬೇಕು ಎಂಬುದರ ಬಗ್ಗೆ ನಮ್ಮ ಖ್ಯಾತ ಸಂಶೋದಕರೊಬ್ಬರು ಇತ್ತೀಚಿಗೆ ಸಂಶೋಧನೆಯಲ್ಲಿ ತೊಡಗಿದ್ದಾರೆ. ಈ ರಾಜ್ಯದ ನಾಲ್ಕಾರು ಕೋಟಿ ಜನರಿಗೆ ಸಮಸ್ಯೆಯೇ ಆಗಿಲ್ಲದ ಸಂಗತಿಗಳನ್ನು ಉಗ್ರ ಸಮಸ್ಯೆಯೆನ್ನುವಂತೆ ಅವರು ಬಣ್ಣಿಸುತ್ತಿದ್ದಾರೆ. ಅವರ ಮಾತುಗಳಿಗೆ ತಕ್ಕಂತೆ ಸರ್ಕಾರವು ಕುಣಿಯುತ್ತಿದೆ.

ರಾಜ್ಯದ ರಾಜಕಾರಣಕ್ಕೆ ಕದ್ದುಮುಚ್ಚಿ ಸಲಹೆ-ಮಾರ್ಗದರ್ಶನ ನೀಡುತ್ತಿರುವ ಕೆಲವು ರಾಜರ್ಷಿಗಳು ರಾಜ್ಯದಲ್ಲಿ ಸಮಸ್ಯೆಯೆಂದು ಯಾರೂ ಒತ್ತಾಯಿಸದ ಮತಾಂತರ, ಗೋಹತ್ಯೆ ನಿಷೇಧ, ದೇವಾಲಯಗಳ ಖಾಸಗೀಕರಣ, ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕ, ಬಾಬಾಬುಡನ್‌ಗಿರಿ ಮುಂತಾದವುಗಳನ್ನು ಸಮಸ್ಯೆ ಎನ್ನುವಂತೆ - ಆದ್ಯತೆಯೆನ್ನುವಂತೆ ಮುಂದು ಮಾಡುತ್ತಿದ್ದಾರೆ. ಮತಾಂತರ ಮತ್ತು ಗೋಹತ್ಯೆ ಯಾರಿಗೆ ಸಮಸ್ಯೆ? ಗೋವುಗಳನ್ನು ತಮ್ಮ ಮನೆಯ ಮಕ್ಕಳಂತೆ ಸಾಕುತ್ತಿರುವ ರೈತರಾರು ಇದು ನಮ್ಮ ಸಮಸ್ಯೆಯೆಂದು ಕೇಳಿಲ್ಲ. ಬಡವರಿಗೆ, ದುಡಿಮೆಗಾರರಿಗೆ, ಮಹಿಳೆಯರಿಗೆ ಯಾವತ್ತೂ ಸಮಸ್ಯೆಯಾಗಿಲ್ಲದ ಸಂಗತಿಗಳನ್ನು ಸಮಸ್ಯೆಗಳೆಂದು ಬಿಂಬಿಸಲಾಗುತ್ತಿದೆ. ಅದಕ್ಕಾಗಿ ಕೆಲವು ಸಾಹಿತಿಗಳನ್ನು ಪಾರಮಾರ್ಥಿಕವಾದಿಗಳು ಸಾಕಿಕೊಂಡಿರುವಂತೆ-ಗುತ್ತಿಗೆ ಹಿಡಿದಿರುವಂತೆ ಕಾಣುತ್ತದೆ.

ದಲಿತರ ಅಭಿವೃದ್ಧಿಯನ್ನು ದತ್ತಿ-ದಾನ-ದಕ್ಷಿಣೆ ನೆಲೆಯಲ್ಲಿ ಪರಿಭಾವಿಸಿಕೊಂಡರೆ ಅದು ಪ್ರಜಾಪ್ರಭುತ್ವ ವಿರೋಧಿಯಾಗುತ್ತದೆ. ಅಂತಹ ಹಂಗಿನ ಪರಿಭಾಷೆಯು ದಲಿತರ ಪ್ರಶ್ನೆ ಕೇಳುವ, ಆಲೋಚನೆ ಮಾಡುವ, ಅರ್ಥ ಮಾಡಿಕೊಳ್ಳುವ, ಅನುಸಂಧಾನ ನಡೆಸುವ ಮೂಲಭೂತ ಗುಣವನ್ನೇ ನಾಶ ಮಾಡಿ ಬಿಡುತ್ತದೆ. ಇದಕ್ಕೆ ಉಚಿತ ಸಾಮೂಹಿಕ ವಿವಾಹ ಮಹೋತ್ಸವವು ಸೂಕ್ತ ಉದಾಹರಣೆಯಾಗಿದೆ. ಈ ಬಗೆಯ ಕಾರ್ಯಕ್ರಮಗಳು ಹೆಚ್ಚಾಗುವುದು ಪ್ರಗತಿಯ

ಸಂಗತಿಯೋ ಅಥವಾ ದುಸ್ಥಿತಿಯ ಸೂಚಿಯೋ? ಇಂತಹ ಕಾರ್ಯಕ್ರಮಗಳಿಗೆ ಹೆಚ್ಚು ಹೆಚ್ಚು ವಧೂವರರು ಬರುವುದು ಸಾಧನೆಯ ಸಂಗತಿಯೆನ್ನುವಂತೆ ಬಣ್ಣಿಸಲಾಗುತ್ತಿದೆ. ಕೆಲವು ನಿರುದ್ಯೋಗಿ ಸ್ವಾಮಿಗಳಿಗೆ ಮತ್ತು ಮಠಾಧೀಶರಿಗೆ ಇದು ಉದ್ಯೋಗ ನೀಡುತ್ತಿರುವಂತೆ ಕಾಣುತ್ತಿದೆ. ಈ ಬಗೆಯ ಸಂಗತಿಗಳನ್ನು ಬಡತನದ–ದುಸ್ಥಿತಿಯ ಸೂಚಿಯನ್ನಾಗಿ, ಹಂಗಿನ ಸಂಸ್ಕೃತಿ ಆಕರವಾಗಿ ನೋಡುವ ಅಗತ್ಯವಿದೆ.

ಉಚಿತ ಸಾಮೂಹಿಕ ವಿವಾಹಗಳಲ್ಲಿ ಭಾಗವಹಿಸುವುದನ್ನು ಬಡತನದ ಸೂಚಿಯನ್ನಾಗಿ–ಅದರಲ್ಲಿ ಭಾಗವಹಿಸುವುದಕ್ಕೆ ಪ್ರತಿಯಾಗಿ ತಮ್ಮ ಸಂಪನ್ಮೂಲದ ನೆರವಿನಿಂದ ತಮ್ಮ ಮಕ್ಕಳಿಗೆ ಮದುವೆ ಮಾಡಿಕೊಡುವ ಪಾಲಕರ ಸ್ವಸಾಮರ್ಥ್ಯವನ್ನು ಅಭಿವೃದ್ಧಿಯೆಂದು ಕರೆಯಬಹುದು. ನಮ್ಮ ಉದ್ದೇಶ ಉಚಿತ ಸಾಮೂಹಿಕ ವಿವಾಹವನ್ನು ಏರ್ಪಡಿಸುವ ಪ್ರಮೇಯವು ಬಾರದಂತೆ ಮಾಡುವುದಾಗಿರಬೇಕೇ ವಿನಾ ಅವುಗಳನ್ನು ವೈಭವೀಕರಿಸುವುದಲ್ಲ. ನಮ್ಮ ರಾಜಕಾರಣವು ದಲಿತರ ಇಂತಹ ಸಾಮರ್ಥ್ಯದ ವರ್ಧನೆಗೆ ಗಮನ ನೀಡಬೇಕಾಗಿದೆ. ಉಚಿತ ಸಾಮೂಹಿಕ ವಿವಾಹಗಳನ್ನು ಸಾಧನೆಯ ಸಂಗತಿಯನ್ನಾಗಿ ಪರಿಭಾವಿಸಿಕೊಳ್ಳಲಾಗುತ್ತಿದೆ. ವಾಸ್ತವವಾಗಿ ಅದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಹಂಗಿನ ಸಂಸ್ಕೃತಿಯ ಸಂಕೇತವಾಗಿದೆ.

ಇದು ಬದಲಾಗಬೇಕು. ದಲಿತರ ಸಂಗತಿಗಳು ಸರ್ಕಾರದ ಆದ್ಯತೆಯ ಸಂಗತಿಯಾಗಬೇಕು. ಸರ್ಕಾರವು ಈ ಬಜೆಟ್ಟಿನಲ್ಲಿ 'ದಲಿತರ ಅಭಿವೃದ್ಧಿ ನೀತಿ'ಯನ್ನು ಘೋಷಿಸುವಂತೆ ಒತ್ತಾಯ ಮಾಡಬೇಕಾಗಿದೆ. ಕೈಗಾರಿಕೆಗಳನ್ನು ಕಟ್ಟಿಸಿಬಿಟ್ಟರೆ ಅಥವಾ ವಿದೇಶಿ ಬಂಡವಾಳ ಕೋಟಿ ಕೋಟಿಗಟ್ಟಲೆ ಹರಿದು ಬಂದು ಬಿಟ್ಟರೆ ದಲಿತರ ಸಮಸ್ಯೆಗಳು ಪರಿಹಾರವಾಗಿ ಬಿಡುವುದಿಲ್ಲ. ಕೆಲವರ ತಿಜೋರಿ ತುಂಬಿ ಬಿಟ್ಟರೆ ದಲಿತರ ಹೊಟ್ಟೆ ತುಂಬುವುದಿಲ್ಲ. ಈ ಪಾಠವನ್ನು ಬಜೆಟ್ಟನ್ನು ಸಿದ್ದಪಡಿಸುತ್ತಿರುವ ಸರ್ಕಾರವು ಅರಿತುಕೊಳ್ಳಬೇಕು.

ದಲಿತ ಸಂವೇದನೆಯನ್ನು ಬಜೆಟ್ಟಿನಲ್ಲಿ ಹೇಗೆ ಅಂತರ್ಗತ ಮಾಡಬೇಕು ಎಂಬುದರ ಬಗ್ಗೆ ನಾವು ಚಿಂತಿಸಬೇಕಾಗಿದೆ. ನಾವು ಮಾಡಬಹುದಾದ ಒಂದೇ ಒಂದು ಕೆಲಸವೆಂದರೆ ನಮ್ಮ ಬಜೆಟ್ಟನ್ನು ಪದಾರ್ಥವಾದಿ ಪ್ರಣಾಳಿಕೆಯ ನಿರ್ದೇಶನದಲ್ಲಿ ಸಿದ್ದಪಡಿಸಲು ಅಗತ್ಯವಾದ ಒತ್ತಡವನ್ನು ಸೃಷ್ಟಿಸುವುದು ಮತ್ತು ಪಾರಮಾರ್ಥಿಕ ಪ್ರಣಾಳಿಕೆಯ ಅರ್ಥಹೀನತೆಯನ್ನು ಜನರಿಗೆ ಮತ್ತು ಸರ್ಕಾರಕ್ಕೆ ತೋರಿಸಿಕೊಡುವುದು.

ಈ ನೆಲೆಯಲ್ಲಿ ನಾವು ಚರ್ಚೆಯನ್ನು ನಡೆಸಬೇಕಾಗಿದೆ. ಈ ದಿಶೆಯಲ್ಲಿ ನಾವು ಬಜೆಟ್ಟಿಗೆ ಸಂಬಂಧಿಸಿದಂತೆ ಒಂದೋ ಅಥವಾ ಎರಡೋ ವಿಚಾರ ಸಂಕಿರಣ ನಡೆಸಿ ಸರ್ಕಾರದ ಮೇಲೆ ಒತ್ತಡ ತರಲು ಸಾಧ್ಯವಿಲ್ಲ. ಏಕೆಂದರೆ ಈ ಮೊದಲೇ ಹೇಳಿರುವಂತೆ ಸರ್ಕಾರವೆಂದರೆ ಅನ್ಯಾಯವನ್ನು ಮಾಡುವುದನ್ನೇ ಕರ್ತವ್ಯವನ್ನಾಗಿ ಮಾಡಿಕೊಂಡಿರುವ ಒಂದು ಸಂಸ್ಥೆ. ಆದ್ದರಿಂದ ಈ ಬಗ್ಗೆ ನಾವು ನಿರಂತರವಾಗಿ ಎಚ್ಚರವಹಿಸಬೇಕು, ಸಂಘಟನೆಯನ್ನು ಬಲಪಡಿಸುತ್ತಿರಬೇಕು, ಸೈದ್ಧಾಂತಿಕವಾಗಿ ನಮ್ಮ ಧೋರಣೆಗಳನ್ನು ಪುನಾರಚಿಸಿಕೊಳ್ಳುತ್ತಿರಬೇಕು ಮತ್ತು ನಮ್ಮ ಬದ್ಧತೆಯನ್ನು ಪುನರ್ ಶೋಧಿಸಿಕೊಳ್ಳುತ್ತಿರ ಬೇಕು. ಈ ದಿಶೆಯಲ್ಲಿ ಚಿಂತಿಸಲು ಇಲ್ಲಿನ ಚರ್ಚೆಯು ದಾರಿ ತೋರಿಸುತ್ತದೆ ಎಂದು ನಂಬಲಾಗಿದೆ. □

ಭಾರತ ಸಂವಿಧಾನಕ್ಕೆ ಭೂತ ಚೇಷ್ಟೆ!

(9ನೇ ಪುಟದಿಂದ)

ಯಾಗಿ, ವರ್ತಮಾನದ ಸಂವಿಧಾನದ ಆಶಯಗಳಿಗೆ ತಕ್ಕಂತೆ ಪ್ರಜೆಗಳನ್ನು ರೂಪಿಸಲು ಶಿಕ್ಷಣ ಕ್ಷೇತ್ರವನ್ನು ತೆಪ್ಪ ಮಾಡಿಕೊಳ್ಳಬಹುದಿತ್ತು. ಶಿಕ್ಷಣ ಪಡೆಯುವ ಎಳೆಯರು ಆ ವಿದ್ಯೆಯಲ್ಲೆ ನಾಗರೀಕರೂ ಆಗುವಂತೆ ಶಿಕ್ಷಣವನ್ನೂ ರೂಪಿಸಬಹುದಿತ್ತು. ಸಮಾಜದಲ್ಲಿ ಅಸ್ಪೃಶ್ಯತೆ ತಾರತಮ್ಯ ಆಚರಿಸುವವರ ಬಗ್ಗೆ ಆ ಪದ್ಧತಿಗಳ ಬಗ್ಗೆ ಇರುವ ಭಯ ಭಕ್ತಿಗಳಲ್ಲಿ– ಭಯ ಇರಲಿ, ಆದರೆ ಭಕ್ತಿಯನ್ನು ಇಲ್ಲದಂತೆ ಮಾಡಬೇಕಿತ್ತು. ಭಕ್ತಿಯು ಅಪಮೌಲ್ಯವನ್ನೇ ಮೌಲ್ಯವಾಗಿಸಿ ಬಿಡುತ್ತದೆ. ಈ ಅಪಾಯದ ಅರಿವು ನಮಗಿರಬೇಕಿತ್ತು. ಈ ಅರಿವು ನಮಗೆ ಇದ್ದಿದ್ದರೆ, ನಮ್ಮ ಶಿಕ್ಷಣದ ಪಠ್ಯ ನಾವು ನೋಡುವ ದೃಷ್ಟಿಕೋನ ಎಲ್ಲವೂ ಹೊಸತಾಗಿ ಬಿಡುತ್ತಿತ್ತು. ಆಗ ಕೇವಲ ಮನುಷ್ಯ ಪ್ರಜ್ಞೆ ಕೆಲಸ ಮಾಡುತ್ತದೆ.

ಆಗ ತಾರತಮ್ಯ ಮೌಲ್ಯವಾಗಿಸುವವರು ಪಳೆಯುಳಿಕೆಗಳಂತೆ ನಮ್ಮ ಸಮಾಜ ಶಾಸ್ತ್ರಜ್ಞರಿಗೆ ಕಾಣಬಹುದು. ಆಗ ಇಂಥವು ಸಾಮಾಜಿಕ ಸಾಂಸ್ಕೃತಿಕ ಅನಿಷ್ಟ ಪದ್ಧತಿಗಳು ಎಂದೋ ಅಥವಾ ಸಾಮಾಜಿಕ ಸಮಸ್ಯೆಗಳು ಎಂದೋ ಅಧ್ಯಯನದ ವಸ್ತುವಾಗುತ್ತಿತ್ತು. ರಾಜ್ಯ ಶಾಸ್ತ್ರದಲ್ಲಿ – ಸಂವಿಧಾನ ಅನುಷ್ಠಾನಕ್ಕೆ ಇರುವ ತೊಡಕುಗಳ ಪಟ್ಟಿಯಲ್ಲಿ ಇದೂ ಸೇರ್ಪಡೆಯಾಗುತ್ತಿತ್ತು. ಮನಃ ಶಾಸ್ತ್ರದ ಸಮ್ಮೋಹಿನಿ ತಜ್ಞರು ಈ ಸುಪ್ತಪ್ರಜ್ಞೆಯ ತಾರತಮ್ಯಗಳನ್ನು ತಮ್ಮ ಅಧ್ಯಯನ ವಿಷಯ ಎಂದು ಪರಿಗಣಿಸಿ ಭೂತೋಚ್ಚಾಟನೆಯ ವಿಧಿವಿಧಾನಗಳನ್ನು ಕಂಡು ಹಿಡಿಯುವ ಪ್ರಯತ್ನಗಳೂ ಆಗುತ್ತಿದ್ದವು. ಶಿಕ್ಷಣತಜ್ಞರಿಂದ ಸಂವಿಧಾನದ ಆಶಯಗಳಿಗೆ ಪಠ್ಯ ರಚನೆಯಾಗುತ್ತಿತ್ತು.– ಹೀಗೆ.

ಆದರೆ ಭಾರತದ ಶಿಕ್ಷಣ ಕ್ಷೇತ್ರಕ್ಕೆ ಬಂದರೆ ಇಲ್ಲೂ ಏನಾಗಿದೆ? ಹಿಂದೆ ದ್ವಿಜರಲ್ಲದವರಿಗೆ ವಿದ್ಯೆ ವಂಚಿಸಲ್ಪಟ್ಟಿತ್ತು. ಈಗ ವರ್ತಮಾನದ ಸಂವಿಧಾನದಲ್ಲಿ ವಿದ್ಯೆ ಎಲ್ಲರಿಗೂ ಮುಕ್ತವಾಗಿದೆ.

ನಿಜ, ಆದರೆ ಕೊಟ್ಟಂತೆ ಕಾಣಿಸುತ್ತ ಸಹಜವಾಗೇ ಹೊರಗಿಡುವುದೂ ಜೊತೆಗೇ ಜರುಗುತ್ತಿದೆ. ಏಕರೂಪದ ಶಿಕ್ಷಣ ಪದ್ಧತಿ ಇಲ್ಲದೆ, ಮಾತೃಭಾಷೆ ಶಿಕ್ಷಣ ಮಾಧ್ಯಮವಾಗದೆ, ಕಡ್ಡಾಯ ಶಿಕ್ಷಣದಲ್ಲಿ ಕಡ್ಡಾಯ ಇಲ್ಲದೆ –ಮುಖ್ಯವಾಗಿ ಗ್ರಾಮೀಣಭಾರತವು ಸಹಜವೂ ಎಂಬಂತೆ ಹೊರ ಹಾಕಲ್ಪಡುತ್ತಿದೆ.

ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಆಧುನಿಕ ಪ್ರಜ್ಞೆಯನ್ನು ಶಿಕ್ಷಣ ಕೊಡಬಾರದೆನ್ನುವ ಸನಾತನ ಸುಪ್ತಪ್ರಜ್ಞೆಯೂ ನಿಯಂತ್ರಿಸುತ್ತಿರುವುದರ ಪರಿಣಾಮದಿಂದ ಇದಾಗುತ್ತಿರಬಹುದೇನೊ. ಇಲ್ಲೂ ತಾರತಮ್ಯವೇ. ಇದಕ್ಕೆ ನಾವು ಬೆಚ್ಚುತ್ತಿಲ್ಲ, ಬೆದರುತ್ತಿಲ್ಲ. ಮೊದಲು ಶಿಕ್ಷಣ ಕ್ಷೇತ್ರದಲ್ಲಿ ನಾವು ಎಚ್ಚೆತ್ತುಕೊಂಡು ಮನುಷ್ಯರಾದರೆ ಉಳಿದುದೆಲ್ಲಾ ತಂತಾನೆ ಕಾಣಬಹುದೇನೋ.

ಭಾರತದ ಇಂದಿನ ಸ್ಥಿತಿಗೆ ಒಂದು ಚಿತ್ರಣ ಕೊಟ್ಟು ಮುಗಿಸುತ್ತೇನೆ. ತುಂಬಾ ಹಿಂದೆ – ಹಳ್ಳಿಯೊಂದರಲ್ಲಿ ದಲಿತರಿಗೆ ಪ್ರವೇಶವಿಲ್ಲದ ಕಾರಣಕ್ಕೆ ಗಲಾಟೆಯಾಗಿ ಅಲ್ಲಿಗೆ ಹೋಗಿದ್ದೆವು. ಹೋಗಿ ನೋಡಿದರೆ – ಆ ಹೊಟೇಲ್ ಅಂದರೆ ಅದು ಜಗಲಿ ಮೇಲೆ ತೆಂಗಿನ ಗರಿ ಕಟ್ಟಿದ ಒಂದು ಕತ್ತಲು ತುಂಬಿದ ನೆರಕೆಯಾಗಿತ್ತು. ಅಲ್ಲಿ ನೊಣಗಳ ಸಾಮ್ರಾಜ್ಯವಿತ್ತು. ಬಚ್ಚಲು ಪಕ್ಕದಲ್ಲೆ ಹರಿಯುತ್ತ ಮೂಗು ಮುಚ್ಚಿಕೊಂಡು ಏನಾರು ತಿನ್ನಬೇಕಿತ್ತು. ಈ ಹೊಟೇಲ್ ಪ್ರವೇಶಕ್ಕೆ ದಲಿತರು ಹಾತೊರೆಯುತ್ತಿದ್ದರು. ಆ ದೃಶ್ಯ ನೋಡಿದ ನನ್ನ ಜೊತೆಗಿದ್ದ ಶ್ರೀಕೃಷ್ಣಆಲನಹಳ್ಳಿ "ಅಯ್ಯೋ ಮಾದೇವ, ಇಲ್ಲಿ ದಲಿತರು ಏನನ್ನೂ ತಿನ್ನದಿದ್ದರೇನೇ ಆರೋಗ್ಯವಲ್ಲವೆ?" ಎಂದಿದ್ದರು. ಅದಕ್ಕೆ ನಾನು "ಪ್ರವೇಶ ಕೇಳುತ್ತಿರುವುದು ಮನಸ್ಸಿನ ಒಳಕ್ಕೆ" ಎಂದಿದ್ದೆ.

ಭಾರತದ ಸ್ಥಿತಿಯೂ ಹೆಚ್ಚುಕಮ್ಮಿ ಆ ಹೊಟೇಲ್‌ನ ಕತೆಯಂತೆಯೇ ಇದೆ. ಇಲ್ಲಿ ಕೊಳಕುತನವಿದೆ, ಅನಾರೋಗ್ಯವಿದೆ, ಬಡತನವಿದೆ, ಅಜ್ಞಾನವು ತುಂಬಿದೆ. ಜೊತೆಗೆ ಸಾಲದೆಂಬಂತೆ, ಭಾರತದ ಮೇಲೆ ದಾಳಿ ಮಾಡಿ ಸಂಪತ್ತು ದೋಚಿಕೊಂಡು ಹೋಗುತ್ತಿದ್ದ ಆ ದಾಳಿಕೋರರು ಆ ಕಾಲಮಾನದಲ್ಲಿ ಏನಾರು ಹೆಚ್ಚೂಕಮ್ಮಿಮಾಡಿ ಹುಟ್ಟಿದ ಸಂತಾನವೇನೊ ಎಂಬಂತೆ ಸೆಜ್, ರಿಯಲ್ ಎಸ್ಟೇಟ್ ಹೆಸರಲ್ಲಿ ಭೂಮಿಯ ಹೊರ ಮೈಯನ್ನೂ ಮತ್ತು ಗಣಿಗಾರಿಕೆ ಹೆಸರಲ್ಲಿ ಭೂಮಿಯ ಒಳಮೈಯನ್ನೂ ದೋಚುತ್ತಿದ್ದಾರೆ.

ಈ ನವದಾಳಿಕೋರರು ಮತದಾರರನ್ನೂ ಶಾಸಕರನ್ನೂ ಕೊಂಡುಕೊಳ್ಳಬಹುದಾದ ವಸ್ತುವಾಗಿಸಿಬಿಟ್ಟಿದ್ದಾರೆ. ಈಗ ಗಣತಂತ್ರ ವ್ಯವಸ್ಥೆಗೇ ಗಂಡಾಂತರ ಎದುರಾಗಿದೆ. ಇಂಥ ಭೀಕರ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಇಷ್ಟಿದ್ದೂ ಹೀಗಿದ್ದೂ ಭಾರತವು ಸ್ವಾತಂತ್ರ್ಯ ಪಡೆದ ನಂತರ ರಾಜರ ಆಳ್ವಿಕೆ ಕೊನೆಗೊಳಿಸಿದ್ದೂ, ವಯಸ್ಕರ ಮತದಾನ ಪದ್ಧತಿ ತಂದಿದ್ದೂ, ತನ್ನ ಮಿತಿಗಳೊಡನೆ ಶಿಕ್ಷಣವನ್ನು ಸರ್ವರಿಗೂ ಮುಕ್ತಗೊಳಿಸಿದ್ದೂ, ಭೂಸುಧಾರಣೆ, ಮಾಸಲಾತಿ ಇತ್ಯಾದಿ ಈ ನೆಲದಲ್ಲಿ ಸಂಭವಿಸಿರುವುದು ಸಾಮಾನ್ಯ ಸಂಗತಿಗಳೇನೂ ಅಲ್ಲ. ಇದಕ್ಕೆ ಕಾರಣ– ಭಾರತದಲ್ಲಿ ಬುದ್ಧ ವಚನಕಾರರಂಥವರ ಮಹೋನ್ನತ ಪರಂಪರೆಯ ಬೆಳಕು ಇರುವುದೂ ಅವರು ಉಸಿರಾಡಿದ ಗಾಳಿ ಅವರಿಟ್ಟ ಹೆಜ್ಜೆ ಗುರುತುಗಳು ಇರುವುದೂ ಈ ಮಹೋನ್ನತ ಪರಂಪರೆಯು ಭಾರತ ಉನ್ನತ ಮನಸ್ಸುಗಳನ್ನು ಸೆಳೆದು ಕೈಹಿಡಿದು ನಡೆಸುತ್ತಿರುವುದು ಕಾರಣವಾಗಿದೆ. ಈ ಉನ್ನತ ಪರಂಪರೆಯ ಹೆಜ್ಜೆಗಳನ್ನು ಗುರುತಿಸಿ ನಾವು ಹೆಜ್ಜೆ ಇಟ್ಟರೆ ಆ ಹವಾದಲ್ಲಿ ಆಗ ಸಂವಿಧಾನದ ಆಸೆಗಳು ಕೈಗೂಡಲೂಬಹುದು.

(ಸಾಮಾಜಿಕ ಪ್ರತ್ಯೇಕತೆ ಮತ್ತು ಒಳಗೊಳ್ಳುವಿಕೆ ನೀತಿಯ ಅಧ್ಯಯನ ಕೇಂದ್ರ, ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು ಇವರು ಆಯೋಜಿಸಿದ್ದ 'ಭಾರತೀಯ ಸಂವಿಧಾನಕ್ಕೆ 60 ವರ್ಷ – ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯ ನಡೆದು ಬಂದ ದಾರಿ: ನೆನ್ನೆ, ಇಂದು ಮತ್ತು ನಾಳೆ'–ವಿಚಾರ ಸಂಕಿರಣದ 'ಸಾಮಾಜಿಕ ಪ್ರತ್ಯೇಕತೆ'ಗೆ ಸಂಬಂಧಿಸಿದ ಭಾಷಣ). □

ಸಮಯ ಸಂದರ್ಭ ಬಂದಾಗ ನಾನೇ ಹೇಳುತ್ತೇನೆ.

ಸಮಯ ಸಂದರ್ಭ ಬಂದಾಗ
ನಾನೇ ಹೇಳುತ್ತೇನೆ
ಅಲ್ಲಿಯವರೆಗೆ
ಕಣ್ಣುಗಳನ್ನು ತೆಗೆದು ನಿನ್ನ ಟೇಬಲ್ ಮೇಲಿಡುತ್ತೇನೆ
ಕನ್ನಡಿಯಂತೆ ಬಳಸಿಕೊ,
ನೀನಿಗ ಏನೇ ಕೇಳಿದರೂ
ನಾನು ಉತ್ತರ ಹೇಳಲಾರೆ
ನೋಡುತ್ತ ನಿಂತಿರುವುದು ತಪ್ಪು, ಕೇಳುತ್ತಾ ಇರುವುದೂ ತಪ್ಪು

ಒಂದೊಂದು ಸಮಯದಲ್ಲಿ
ಕೆಲವು ಸಾವಿರ ಕುದುರೆಗಳು ಹುಚ್ಚೆದ್ದು ಓಡುತ್ತಿರುತ್ತವೆ
ಒಂದೊಂದು ಖಂಡ
ಬೆಟ್ಟದ ಶಿಖರದಂತೆ ಮುರಿದು ಬೀಳುತ್ತಿರುತ್ತದೆ
ಬೀಳುತ್ತಿರುವ ಹುಲ್ಲು ಮೆದೆಯನ್ನು ಸ್ತಂಭವೊಂದು ಕೈಹಿಡಿದು
ನಿಲ್ಲಿಸಿದಂತೆ ನಿಲ್ಲಿಸಲಾರೆವು
ಮುರಿದು ಬೀಳುವುದೆ ಅದರ ಸ್ವಭಾವವಾಗಿರುವಾಗ
ವಿಕೃತಾಂಗಿಕ ಅಭಿನಯಗಳೆ ಅದರ ಸಹಜತೆಗಳಾಗಿರುವಾಗ;

ಅವನ್ಯಾರೊ ಬೆಟ್ಟವೊಂದನ್ನು ಛತ್ರಿಯಾಗಿಸಿಕೊಂಡು
ಬೆರಳ ತುದಿಯಲ್ಲಿ ನಿಲ್ಲಿಸಿದನಂತೆ
ಯಾವ ಛತ್ರಿಯೂ ಇಲ್ಲದೆ ಬಿಸಿಲನ್ನ, ಮಳೆಯನ್ನ
ಎದುರಿಸುವ ದಡ್ಡ ಮನುಷ್ಯರಿಗಿದು ಕಾಲವಲ್ಲ.

ಸಮಯ ಬಂದಾಗ ನಾನೇ ಹೇಳುತ್ತೇನೆ
ಅಲ್ಲಿಯವರೆಗೂ ಮಗುಚಿರುವ ನನ್ನ ಕೈಗಳ ಮೇಲೆ
ಮುನ್ನುಗುತ್ತಿರುವ ಅಶ್ವ ಸಮೂಹವನ್ನ ನೋಡು

ಆಲದ ಮರದಲ್ಲಿನ ಉಡದಂತೆ
.ನನ್ನ ಜುಟ್ಟನಿಡಿದು ಉಯ್ಯಾಲೆಯಾಡುತ್ತಿರುವ
ಸಣ್ಣ ಮಗುವಿನ ಕನಸನ್ನು ನೋಡು
ಇದಕ್ಕೂ ಮೊದಲು ಸುರುಳಿಯಾಕಾರದಲ್ಲಿ ತಿರುಗಾಡುತ್ತ
ಪೊಲೀಸಿನವರು ಹೊರಟುಹೋದರು
ಮೂಸಿ ನದಿಯಿಂದ ಶ್ರೇಷ್ಟವಾದಂತಹ ಒಂದು ದುರ್ಗಂಧದ ಅಲೆ
ದಟ್ಟವಾಗಿ ಎಲ್ಲಾ ಕಡೆಗೂ ಹಬ್ಬಿ, ಹೊದಿಕೆ ಹಾಸಿ ಹೋಗಿದೆ

ಮರಳು ದಿಬ್ಬಗಳ ಮೇಲೆ
ಬೆರಳಿಂದ ಹುಚ್ಚು ಬರಹಗಳನ್ನು ಗೀಚುತ್ತ
ಪದ್ಯವೊಂದು ಉಳಿದು ಹೋಗಿದೆ.

ತೆಲುಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ, ಮಾಲೂರು

ಹಣದುಬ್ಬರ– ದಲಿತರಿಗೆ ತೊಂದರೆಯಿಲ್ಲ

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

೧೯೯೦ರ ಆರ್ಥಿಕ ಸುಧಾರಣೆಯ ನಂತರ ದೇಶದಲ್ಲಿ ಹಲವಾರು ಹೊಸ ಬೆಳವಣಿಗೆಗಳಾದವು. ಕೈಗಾರಿಕೀಕರಣ ಪ್ರಕ್ರಿಯೆಗೆ ಅನಕ್ಷರಸ್ಥ ಕೆಲಸಗಾರರ ಅವಶ್ಯಕತೆ ಕೂಡ ಇದ್ದುದರಿಂದ ಲಕ್ಷಾಂತರ ಮಂದಿ ದಲಿತ ಯುವಕರು ನಗರಗಳಿಗೆ ವಲಸೆ ಬಂದು ಹಣ ಗಳಿಸಲಾರಂಭಿಸಿದರು. ನಗರಗಳಲ್ಲಿ ದುಡಿಯುತ್ತಿರುವ ದಲಿತ ಯುವಕರು ಕಳುಹಿಸುತ್ತಿದ್ದ ಹಣದಿಂದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಸೇವಾ ವಲಯದ ಕೆಲಸಗಳು ವಿಸ್ತರಣೆಯಾದುದರಿಂದ ಉತ್ತೇಜಿತರಾದ ದಲಿತರು ಹಳ್ಳಿಗಳಲ್ಲಿಯೇ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಇದರಿಂದಾಗಿ ದಿಢೀರನೆ ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿ, ಕೃಷಿ ಕಾರ್ಮಿಕರು ಆಹಾರಧಾನ್ಯಗಳನ್ನು ಕೂಲಿಯಾಗಿ ಸ್ವೀಕರಿಸಲು ನಿರಾಕರಿಸಲಾರಂಭಿಸಿದರು. ಹೀಗಾಗಿ ಮೊಟ್ಟಮೊದಲ ಬಾರಿಗೆ ದಲಿತ ಕೃಷಿ ಕಾರ್ಮಿಕರು ಕೂಡ ಹಣ ನೋಡುವಂತಾಗಿ ಮಾರುಕಟ್ಟೆಗಳಿಗೆ ಅಡಿಯಿಡಲಾರಂಭಿಸಿದರು.

"ಭೂಮಿ ಚಲಿಸುತ್ತದೆ" ಎಂದು ಗೆಲಿಲಿಯೋ 377 ವರ್ಷಗಳ ಹಿಂದೆ ಹೇಳಿದಾಗ ಅಂದಿನ ಸಾಂಪ್ರದಾಯಿಕ ಮತ್ತು ಅಧಿಕಾರಯುತ ಚರ್ಚ್‌ನ ಮುಂದೆ ಎದೆಗುಂದಲಿಲ್ಲ. ಅಂದಿನ ರೋಮನ್ ಚರ್ಚ್‌ನಷ್ಟೇ ಬಲಿಷ್ಠವಾಗಿರುವ ಇಂದಿನ ಭಾರತೀಯ ರಿಸರ್ವ್ ಬ್ಯಾಂಕ್‌ನ ಬಗ್ಗೆ ನಾನೂ ಕೂಡ ಭಯಪಡುವುದಿಲ್ಲ. ಜಾತಿ ಆಧಾರಿತ ಭಾರತೀಯ ಸಮಾಜದಲ್ಲಿ ಹಣದುಬ್ಬರ ಬಡವರಿಗೆ (ವಿಶೇಷವಾಗಿ ದಲಿತರು) ವರವಾಗಿ ಪರಿಣಮಿಸಿದೆ ಎಂದು ನಾನು ಈ ಸಂದರ್ಭದಲ್ಲಿ ನಿರ್ಭಯವಾಗಿ ಘೋಷಿಸುತ್ತೇನೆ.

1970ರಲ್ಲಿ ಭಾರತೀಯ ಆಹಾರ ನಿಗಮ(ಎಫ್‌ಸಿಐ) ಕ್ವಿಂಟಾಲ್‌ಗೆ 50ರಿಂದ 60 ರೂ. ಕೊಟ್ಟು ಗೋಧಿಯನ್ನು ರೈತರಿಂದ ಖರೀದಿಸಿತ್ತು. 2009ರಲ್ಲಿ ಎಫ್‌ಸಿಐ ಕ್ವಿಂಟಾಲ್ ಗೋಧಿಯನ್ನು 1080 ರೂ.ಗೆ ಖರೀದಿಸಿದೆ. 1970ರಲ್ಲಿ ಗೋಧಿ ಅಗ್ಗದ ಬೆಲೆಗೆ ದೊರಕುತ್ತಿದ್ದರೂ ದಲಿತರ ಕೈಗೆಟುಕುತ್ತಿರಲಿಲ್ಲ. ದಲಿತರು ಮದುವೆ, ಹಬ್ಬಹರಿದಿನಗಳಂದು ಮಾತ್ರ ಗೋಧಿ ಚಪಾತಿಯನ್ನು ತಿನ್ನುತ್ತಿದ್ದರು. ಆದರೆ ಈಗ ಹಣದುಬ್ಬರದ ಹೊರತಾಗಿಯೂ ದಲಿತರು ಇತರ ಭೂಮಾಲೀಕರಂತೆ ಗೋಧಿಯನ್ನು ಸೇವಿಸುತ್ತಿದ್ದಾರೆ.

1975ರಲ್ಲಿ 10 ಗ್ರಾಂ ಚಿನ್ನದ ಬೆಲೆ 500 ರೂ. ಇದ್ದರೂ ಮದುವೆಯ ಸಂದರ್ಭದಲ್ಲಿ ದಲಿತ ವಧುಗಳು ಬೆಳ್ಳಿಯ ಆಭರಣಗಳನ್ನು ಮಾತ್ರ ಧರಿಸುತ್ತಿದ್ದರು. ಒಂದು ವೇಳೆ ದಲಿತ ಮಹಿಳೆ ಚಿನ್ನದ ಸರ ಧರಿಸಿದ್ದರೆ ಅಥವಾ ದಲಿತ ಪುರುಷ ಚಿನ್ನದ ಉಂಗುರ ತೊಟ್ಟಿದ್ದರೆ ಅದು 'ಬ್ರೇಕಿಂಗ್ ನ್ಯೂಸ್' ಆಗಿರುತ್ತಿತ್ತೇನೋ? ಆದರೆ ಈಗ 10 ಗ್ರಾಂ ಚಿನ್ನಕ್ಕೆ 16,000 ಬೆಲೆ ಇದ್ದರೂ ಬಡತನ ರೇಖೆಗಿಂತ ಕೆಳಗಿರುವ ದಲಿತರೂ ಕೂಡ ಮದುವೆ ಸಂದರ್ಭದಲ್ಲಿ ವಧು-ವರರಿಗೆ ಚಿನ್ನದ ಆಭರಣಗಳನ್ನು ಉಡುಗೊರೆಯಾಗಿ ನೀಡುತ್ತಾರೆ.

ನನ್ನ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳುವುದಾದರೆ, ಆಗ ಕೇವಲ ಹತ್ತು ರೂ.ಗೆ ಬೂಟುಗಳು ದೊರಕುತ್ತಿದ್ದರೂ, ದಲಿತ ಗಂಡುಗಳು ಮದುವೆಯ ಸಂದರ್ಭದಲ್ಲಿ ಪ್ಲಾಸ್ಟಿಕ್ ಚಪ್ಪಲಿಗಳನ್ನೇ ಧರಿಸುತ್ತಿದ್ದರು. ಇನ್ನು ಪ್ಲಾಸ್ಟಿಕ್ ಚಪ್ಪಲಿಗಳು ಒಂದು ರೂ.ಗೆ ಸಿಗುತ್ತಿದ್ದ ಸಂದರ್ಭದಲ್ಲಿ ದಲಿತ ವಧುಗಳು ಬರಿಗಾಲಿನಲ್ಲಿ ನಡೆದು ಬರುತ್ತಿದ್ದರು. ದಿನವೊಂದಕ್ಕೆ 50 ರೂ. ಬಾಡಿಗೆಗೆ ಜೀಪುಗಳು ದೊರಕುತ್ತಿದ್ದ ಆ ಸಂದರ್ಭದಲ್ಲಿ ದಲಿತ ವಧು-ವರರು ಎತ್ತಿನಗಾಡಿಗಳು ಮತ್ತು ಸೈಕಲ್ ರಿಕ್ಷಾಗಳಲ್ಲಿ ಪ್ರಯಾಣಿಸುತ್ತಿದ್ದರು. ಆದರೆ ಈಗ ನಾಲ್ಕು ಚಕ್ರದ ವಾಹನಗಳ ದಿನವೊಂದರ ಬಾಡಿಗೆ 800 ರೂ. ಇದ್ದರೂ ಕೂಡ ದಲಿತರು ಇವುಗಳನ್ನೇ ಬಳಸುತ್ತಿದ್ದಾರೆ.

1990ರಲ್ಲಿ ಹತ್ತು ರೂ.ಗೆ ಐದು ಕಿಲೋ ಗ್ರಾಂನಷ್ಟು ತರಕಾರಿಗಳನ್ನು ಖರೀದಿಸಬಹುದಿತ್ತು. ಆದರೆ ಬಹುತೇಕ ದಲಿತರು ತರಕಾರಿಯ ಬದಲಿಗೆ ಚಟ್ನಿಯನ್ನು ಸೇವಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ದಲಿತರು ಕೂಡ ಈಗ ಪೌಷ್ಟಿಕವಾದ ಹಸಿರು ತರಕಾರಿಗಳನ್ನು ಖರೀದಿಸಿ ಸೇವಿಸುತ್ತಾರೆ.

ಹಿಂದೆ ಕರೆನ್ಸಿ ನೋಟುಗಳ ಚಲಾವಣೆ ಬಹಳ ಕಡಿಮೆ ಇತ್ತು. ಬಹಳಷ್ಟು ದಲಿತರು ನೂರು ರೂ. ನೋಟನ್ನು ತಮ್ಮ ಜೀವಮಾನದಲ್ಲಿ ಒಮ್ಮೆ ಕೂಡ ಸ್ಪರ್ಷಿಸದೇ ನಿಧನರಾಗಿದ್ದಾರೆ. ಆಗ ಹಣಕಾಸಿಗೆ ಎಷ್ಟು ತೊಂದರೆಯಿತ್ತೆಂದರೆ, ಮದುವೆಯಾದ ಕೆಲವೇ ದಿನಗಳಲ್ಲಿ ವಧುವಿನ ಎಲ್ಲ ಚಿನ್ನದ ಆಭರಣಗಳನ್ನು ಗಿರವಿಗೆ ಇಡಲಾಗುತ್ತಿತ್ತು ಅಥವಾ ಮಾರಾಟ ಮಾಡಲಾಗುತ್ತಿತ್ತು. ಆಗ ಕೃಷಿ ಕೆಲಸಕ್ಕೆ ಕಳಪೆ ಗುಣಮಟ್ಟದ ಆಹಾರ ಧಾನ್ಯಗಳನ್ನು ಕೂಲಿಯಾಗಿ ನೀಡುತ್ತಿದ್ದರು.

ಈ ಆಹಾರಧಾನ್ಯಗಳನ್ನು ಹಣದ ನೋಟುಗಳಾಗಿ ಪರಿವರ್ತಿಸಲು ಕೂಡ ಆಗುತ್ತಿರಲಿಲ್ಲ. ಆದರೆ ದಲಿತರಿಗೆ ತಮ್ಮ ದೈನಂದಿನ ಆಗುಹೋಗುಗಳಿಗೆ, ಮದುವೆ, ವಸ್ತ್ರ, ಶಿಕ್ಷಣ, ಔಷಧೋಪಚಾರಗಳಿಗೆ ಹಣದ ಅವಶ್ಯಕತೆ ಇತ್ತು. ಹೀಗಾಗಿ ಬಹುತೇಕ ದಲಿತರು ಮೇಕೆ, ಕೋಳಿ, ಹಂದಿಗಳ ಸಾಕಾಣಿಕೆಯಿಂದ ತಮ್ಮ ಆಹಾರೇತರ ಅವಶ್ಯಕತೆಗಳಿಗೆ ಹಣ ಗಳಿಸುತ್ತಿದ್ದರು. ಆದರೆ ಜಾನುವಾರುಗಳ ಸಾಕಾಣಿಕೆಯಿಂದಾಗಿ ದಲಿತ ಮಕ್ಕಳ ಶಿಕ್ಷಣಕ್ಕೆ ಭಾರೀ ಹಿನ್ನಡೆ ಉಂಟಾಗಿತ್ತು.

1990ರ ಆರ್ಥಿಕ ಸುಧಾರಣೆಯ ನಂತರ ದೇಶದಲ್ಲಿ ಹಲವಾರು ಹೊಸ ಬೆಳವಣಿಗೆಗಳಾದವು. ಕೈಗಾರಿಕೀಕರಣ ಪ್ರಕ್ರಿಯೆಗೆ ಅನಕ್ಷರಸ್ಥ ಕೆಲಸಗಾರರ ಅವಶ್ಯಕತೆ ಕೂಡ ಇದ್ದುದರಿಂದ ಲಕ್ಷಾಂತರ ಮಂದಿ ದಲಿತ ಯುವಕರು ನಗರಗಳಿಗೆ ವಲಸೆ ಬಂದು ಹಣ ಗಳಿಸಲಾರಂಭಿಸಿದರು. ನಗರಗಳಲ್ಲಿ ದುಡಿಯುತ್ತಿರುವ ದಲಿತ ಯುವಕರು ಕಳುಹಿಸುತ್ತಿದ್ದ ಹಣದಿಂದ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಸೇವಾ ವಲಯದ ಕೆಲಸಗಳು ವಿಸ್ತರಣೆಯಾದುದರಿಂದ ಉತ್ತೇಜಿತರಾದ ದಲಿತರು ಹಳ್ಳಿಗಳಲ್ಲಿಯೇ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಇದರಿಂದಾಗಿ ದಿಢೀರನೆ ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿ, ಕೃಷಿ ಕಾರ್ಮಿಕರು ಆಹಾರಧಾನ್ಯಗಳನ್ನು ಕೂಲಿಯಾಗಿ ಸ್ವೀಕರಿಸಲು ನಿರಾಕರಿಸಲಾರಂಭಿಸಿದರು. ಹೀಗಾಗಿ ಮೊಟ್ಟಮೊದಲ ಬಾರಿಗೆ ದಲಿತ ಕೃಷಿ ಕಾರ್ಮಿಕರು ಕೂಡ ಹಣ ನೋಡುವಂತಾಗಿ ಮಾರುಕಟ್ಟೆಗಳಿಗೆ ಅಡಿಯಿಡಲಾರಂಭಿಸಿದರು.

ಪ್ರಸಕ್ತ ಹಣದುಬ್ಬರದ ಹೊರತಾಗಿಯೂ ಯುಪಿಎ ಒಕ್ಕೂಟ ಎರಡನೆಯ ಬಾರಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. ಕಳೆದ ಐದಾರು ವರ್ಷಗಳಿಂದ ಪಶ್ಚಿಮ ಬಂಗಾಳ ರಾಜ್ಯವನ್ನು ಹೊರತು ಪಡಿಸಿ, ಉಳಿದ ಯಾವ ರಾಜ್ಯಗಳಲ್ಲಿಯೂ ಕೂಡ ಆಹಾರ ಕೇಂದ್ರಿತ ಪ್ರತಿಭಟನೆಗಳು ನಡೆದಿಲ್ಲ. ಹಣದುಬ್ಬರದ ವಿಚಾರವಾಗಿ ದಲಿತರಿಂದ ಯಾವುದೇ ರೀತಿಯ ಪ್ರತಿಭಟನೆಗಳು ಕೂಡ ನಡೆದಿಲ್ಲ. ಹಣದುಬ್ಬರದ ಹೊಡೆತ ಬೀಳುತ್ತಿರುವುದು ಮಧ್ಯಮವರ್ಗದವರಿಗೆ. ಈ ಹಿಂದೆ 1ರೂ.ಗೆ ಒಂದು ಕೆಜಿ ಟೊಮ್ಯಾಟೋ ಖರೀದಿಸುತ್ತಿದ್ದ ಮಧ್ಯಮವರ್ಗದವರು, ಹೊಸದಾಗಿ ತರಕಾರಿ ಮಾರುಕಟ್ಟೆಗೆ ಬರುತ್ತಿರುವ ದಲಿತರಿಗಿಂತ ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ.

ಹಣಕಾಸಿನ ವಿಪರೀತ ಚಲಾವಣೆ, ಆಹಾರದ ಕೊರತೆ ಮತ್ತು ದಲ್ಲಾಳಿಗಳಿಂದಾಗಿ ದೇಶದಲ್ಲಿ ಹಣದುಬ್ಬರ ಕಂಡುಬರುತ್ತಿದೆ. ಹಣಕಾಸು ಹೆಚ್ಚಾಗಿ ಚಲಾವಣೆಯಾದಾಗ ಸ್ವಲ್ಪ ಹಣ ಕೆಳವರ್ಗದವರ ಕೈಗೆ ಕೂಡ ಸಿಗುತ್ತದೆ. ಯಾವಾಗ ಕೆಳವರ್ಗದವರು ವಸ್ತುಗಳನ್ನು ಖರೀದಿಸಲು ಮಾರುಕಟ್ಟೆ ಪ್ರವೇಶಿಸುತ್ತಾರೋ, ವಸ್ತುಗಳ ಬೇಡಿಕೆ ಹೆಚ್ಚಾಗಿ ಹಣದುಬ್ಬರ ಕಂಡುಬರುತ್ತದೆ. ಜನ ಹೆಚ್ಚು ಹಣ ಖರ್ಚು ಮಾಡಿದಷ್ಟು ಕೈಗಾರಿಕಾ ಚಟುವಟಿಕೆಗಳು ಕೂಡ

ಹೆಚ್ಚಾಗುತ್ತವೆ. ಹೆಚ್ಚು ಜನರಿಗೆ ಉದ್ಯೋಗ ದೊರಕುತ್ತದೆ, ನಿಧಾನವಾಗಿ ಹಣದುಬ್ಬರ ಹತೋಟಿಗೆ ಬರುತ್ತದೆ.

ಹಣದುಬ್ಬರವನ್ನು ಹತೋಟಿಗೆ ತರಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಕ್ಯಾಷ್ ರಿಸರ್ವ್ ರೇಷಿಯೋವನ್ನು ಆರ್‌ಬಿಐ ಸು.75 ಪಾಯಿಂಟ್‌ನಷ್ಟು ಏರಿಸಿದೆ; ಅಂದರೆ ಸು.32,000 ಕೋಟಿ ರೂ. ಹಣ ಮಾರುಕಟ್ಟೆಯನ್ನು ಪ್ರವೇಶಿಸುವುದೇ ಇಲ್ಲ. ಇದರಿಂದಾಗಿ ಕೆಳವರ್ಗದವರಿಗೆ ಹೊಡೆತಬೀಳಲಿದೆ.

ಭಾರತ ಸ್ವತಂತ್ರವಾಗುವುದಕ್ಕೆ ಮೊದಲಿನಿಂದಲೂ ಹಣ ನೋಡುತ್ತಿರುವ ಶ್ರೀಮಂತ ವರ್ಗವನ್ನು ಓಲೈಸುವಂತಹ ಕ್ರಮವನ್ನು ಆರ್‌ಬಿಐ ತೆಗೆದುಕೊಂಡಿದೆ. ಆದರೆ ರೂಪಾಯಿ ಈಗ ಅಪಮೌಲ್ಯಗೊಂಡಿರುವುದರಿಂದ ಈ ಶ್ರೀಮಂತ ವರ್ಗಗಳು ನಿಶ್ಚಿಂತರಾಗಿರಲು ಸಾಧ್ಯವಿಲ್ಲ.

ಹಣದುಬ್ಬರವನ್ನು ಹತೋಟಿಗೆ ತರಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಕ್ಯಾಷ್ ರಿಸರ್ವ್ ರೇಷಿಯೋವನ್ನು ಆರ್‌ಬಿಐ ಸು.75 ಪಾಯಿಂಟ್‌ನಷ್ಟು ಏರಿಸಿದೆ; ಅಂದರೆ ಸು. 32,000 ಕೋಟಿ ರೂ. ಹಣ ಮಾರುಕಟ್ಟೆಯನ್ನು ಪ್ರವೇಶಿಸುವುದೇ ಇಲ್ಲ. ಇದರಿಂದಾಗಿ ಕೆಳವರ್ಗದವರಿಗೆ ಹೊಡೆತ ಬೀಳಲಿದೆ. ಭಾರತ ಸ್ವತಂತ್ರವಾಗುವುದಕ್ಕೆ ಮೊದಲಿನಿಂದಲೂ ಹಣ ನೋಡುತ್ತಿರುವ ಶ್ರೀಮಂತ ವರ್ಗವನ್ನು ಓಲೈಸುವಂತಹ ಕ್ರಮವನ್ನು ಆರ್‌ಬಿಐ ತೆಗೆದುಕೊಂಡಿದೆ.

ಅಧಿಕ ಕೃಷಿಯ ಅಪಾಯ

ಭಾರತದಲ್ಲಿ ಅಗತ್ಯಕ್ಕಿಂತ ಹೆಚ್ಚು ಕೃಷಿ ಚಟುವಟಿಕೆ ನಡೆಯುತ್ತಿದೆ ಎಂದು ಸರ್ ಹೆನ್ರಿ ಕಾಟನ್ ಶತಮಾನದ ಹಿಂದೆಯೇ ಹೇಳಿದ್ದರು. ಭಾರತದ ನಾಗರಿಕ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸರ್ ಕಾಟನ್ ಭಾರತೀಯ ಪ್ರೇಮಿಯಾಗಿದ್ದರು. ಅವರ ತಂದೆ-ತಾತ ಕೂಡ ಭಾರತದಲ್ಲಿ ಕೆಲಸ ಮಾಡಿದ್ದರು. ಇವರು ಭಾರತೀಯರಿಂದ ಎಷ್ಟು ಮೆಚ್ಚುಗೆಗೆ ಪಾತ್ರರಾಗಿದ್ದರೆಂದರೆ 1904ರಲ್ಲಿ ಮುಂಬೈನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 20ನೇ ಅಧಿವೇಶನದ ಅಧ್ಯಕ್ಷತೆ ವಹಿಸಲು ಸರ್ ಕಾಟನ್ ಅವರನ್ನು ಆಹ್ವಾನಿಸಲಾಗಿತ್ತು. ಸರ್ ಕಾಟನ್ ಅವರು "ನ್ಯೂ ಇಂಡಿಯಾ" ಮತ್ತು "ಇಂಡಿಯಾ ಅಂಡ್ ಹೋಮ್ ಮೆಮೊರೀಸ್" ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಕೃತಿಯಲ್ಲಿ ಅವರು ಈ ಮೇಲಿನ ಸಾಲುಗಳನ್ನು ಬರೆದಿದ್ದಾರೆ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು "ಭಾರತದಲ್ಲಿ ಸಣ್ಣ ಹಿಡುವಳಿಗಳು ಮತ್ತು ಅವುಗಳ ಚಿಕಿತ್ಸೆ" ಎಂಬ ಜನಪ್ರಿಯ ಲೇಖನದ ಕೊನೆಯಲ್ಲಿ ಸರ್ ಕಾಟನ್ ಅವರ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ. ತಮ್ಮ ಪಿಎಚ್‌ಡಿ ಪದವಿಗಾಗಿ ಬರೆದ ಈ ಪ್ರಬಂಧವನ್ನು ಡಾ. ಅಂಬೇಡ್ಕರ್ 1918ರಲ್ಲಿ ಇಂಡಿಯನ್ ಎಕನಾಮಿಕ್ ಸೊಸೈಟಿ ನಿಯತಕಾಲಿಕೆಯಲ್ಲಿ ಪ್ರಕಟಿಸಿದ್ದಾರೆ. 26ನೇ ವಯಸ್ಸಿನಲ್ಲಿ ಅಂಬೇಡ್ಕರ್ ಅವರಿಗಿದ್ದ ವಿದ್ವತ್ತನ್ನು ಈ ಪ್ರಬಂಧ ಪರಿಚಯಿಸುತ್ತದೆ.

ಅಂಬೇಡ್ಕರ್ ಸಣ್ಣ ಹಿಡುವಳಿಗಳ ಬಗ್ಗೆ ಒಂದು ಸೀಮಿತ ಚೌಕಟ್ಟಿನಲ್ಲಿ ಬರೆಯುತ್ತಾರೆ. ಆ ಸಂದರ್ಭದಲ್ಲಿ ಭಾರತ ಸರ್ಕಾರ ಕೃಷಿ ಭೂ ಹಿಡುವಳಿಗಳ ಗಾತ್ರ ಮತ್ತು ಕೃಷಿ ಇಳುವರಿಯ ಬಗ್ಗೆ ವಿಚಾರ ಮಾಡುತ್ತಿತ್ತು. ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತದ ಆರ್ಥಿಕ ಸ್ಥಿತಿಗತಿಯ ಬಗ್ಗೆ ಚಿಂತನೆ ನಡೆಸುತ್ತಿದ್ದ ಸರ್ಕಾರ ಬ್ರಿಟನ್‌ನಂತೆ ಭಾರತದಲ್ಲಿ ಕೂಡ ಕೃಷಿಯನ್ನು ಬಂಡವಾಳಶಾಹಿ ವ್ಯವಸ್ಥೆಯ ಆಧಾರದಲ್ಲಿ ರೂಪಿಸುವ ಆಲೋಚನೆಯಲ್ಲಿತ್ತು.

ಭಾರತದಲ್ಲಿದ್ದ ಭೂಹಿಡುವಳಿಗಳು ಸಣ್ಣವಾಗಿದ್ದವು ಮತ್ತು ಹಂಚಿಹೋಗಿದ್ದವು. ಓರ್ವ ರೈತನ ಮಾಲೀಕತ್ವದ ಒಂದು ಎಕರೆ ಜಮೀನು ಏಳು-ಎಂಟು ಭಾಗಗಳಾಗಿ ಬೇರೆ ಬೇರೆ ಸ್ಥಳಗಳಲ್ಲಿ ಹಂಚಿಹೋಗಿರುತ್ತಿತ್ತು. ಈ ರೀತಿ ಹರಿದು ಹಂಚಿಹೋಗಿರುವ ಸಣ್ಣ ಭೂ ಹಿಡುವಳಿಗಳನ್ನು ಕ್ರೋಢೀಕರಿಸುವ ನಿಟ್ಟಿನಲ್ಲಿ ಸರ್ಕಾರ ಒಂದು ಸಮಿತಿಯನ್ನು ನೇಮಿಸಿತು. ಜೊತೆಗೆ ಒಟ್ಟಾರೆ ಭಾರತೀಯ ಕೃಷಿಯ ಲಕ್ಷಣಗಳ ಬಗ್ಗೆ ಕೂಡ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯಲಾರಂಭಿಸಿದವು.

1915ರಲ್ಲಿ ಮುಂಬೈನಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ "ಕ್ಯಾಪಿಟಲಿಸ್ಟ್ ಡೆವಲಪ್‌ಮೆಂಟ್ ಆಫ್ ಅಗ್ರಿಕಲ್ಚರ್" (ಕೃಷಿಯ ಬಂಡವಾಳಶಾಹಿ ಮಾದರಿ ಬೆಳವಣಿಗೆ) ಎಂಬ ಪ್ರಬಂಧ ಮಂಡಿಸಿದ ಪ್ರೊ।ಎಂ.ಎಸ್.ಜೀವೋಸ್ ಕೃಷಿಯ ಕೈಗಾರಿಕೀಕರಣವನ್ನು ವಿರೋಧಿಸಿ ವಾದ ಮಂಡಿಸಿದರು. ಜೀವೋಸ್ ಅವರ ವಾದವನ್ನು ವಿರೋಧಿಸಿದ ಅಂಬೇಡ್ಕರ್, "ಕೇವಲ ಕೈಗಾರಿಕೀಕರಣದಿಂದ ಮಾತ್ರ ಕೃಷಿಯನ್ನು ಬಂಡವಾಳಶಾಹಿ ಮಾದರಿಗೆ ಒಳಪಡಿಸಬಹುದು" ಎಂದು ವಾದಿಸಿದರು. ತಮ್ಮ ಪಿಎಚ್‌ಡಿ ಪ್ರಬಂಧದಲ್ಲಿ ಸಣ್ಣ ಹಿಡುವಳಿಗಳನ್ನು ವಿರೋಧಿಸುವ ಅಂಬೇಡ್ಕರ್, ಭೂ ಹಿಡುವಳಿಗಳ ಕ್ರೋಢೀಕರಣ, ಕೈಗಾರಿಕೀಕರಣ, ನಗರೀಕರಣ ಪ್ರಕ್ರಿಯೆಗೆ ಬೆಂಬಲ ವ್ಯಕ್ತಪಡಿಸುತ್ತಾರೆ. "ಭಾರತೀಯ ಕೃಷಿಯ ಸಮಸ್ಯೆಗಳಿಗೆ ತ್ವರಿತಗತಿಯ ನಗರೀಕರಣವೊಂದೇ ಪರಿಹಾರ" ಎಂದು ವಿಚಾರ ಮಂಡಿಸುತ್ತಾರೆ. ಕೃಷಿ ಆರ್ಥಿಕವಾಗಿ ಸಶಕ್ತವಾಗುವ ನಿಟ್ಟಿನಲ್ಲಿ ಬಂಡವಾಳ ಮತ್ತು ಬಂಡವಾಳಶಾಹಿ ಉತ್ಪನ್ನಗಳ ಪಾತ್ರವನ್ನು ಉಲ್ಲೇಖಿಸುತ್ತಾರೆ. ಕೃಷಿಯಲ್ಲಿ ತೊಡಗಿಸಿಕೊಂಡಿರುವ ಬೃಹತ್ ಕೃಷಿ ಕಾರ್ಮಿಕ ವರ್ಗ ವರ್ಷದ ಬಹಳಷ್ಟು ದಿನಗಳ ಕಾಲ ಯಾವುದೇ ಕೆಲಸ ಮಾಡದೆ ಸುಮ್ಮನೆ ಕುಳಿತು ಕೃಷಿ ಇಳುವರಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಾರೆ. ಸುಮಾರು ಒಂದು ಶತಮಾನದ ಹಿಂದೆಯೇ ಬರೆದ ಪ್ರಬಂಧದಲ್ಲಿ ಕೃಷಿ ಕಾರ್ಮಿಕರು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ವಾತಾವರಣ ನಿರ್ಮಿಸುವ ಅಗತ್ಯತೆಯ ಬಗ್ಗೆ ಅಂಬೇಡ್ಕರ್ ವಾದ ಮಂಡಿಸಿದ್ದರು.

ಕಮ್ಯುನಿಸ್ಟರು ಮತ್ತು ಸೋಷಲಿಸ್ಟರನ್ನು ಬಿಡಿ, ಬಂಡವಾಳಶಾಹಿವ್ಯವಸ್ಥೆಯ ಪರವಾಗಿರುವ ಆರ್ಥಿಕ ತಜ್ಞರು ಕೂಡ ಇನ್ನೂ ಭಾರತೀಯ ಕೃಷಿಯ ಲಕ್ಷಣದ ಬಗ್ಗೆ ಖಚಿತವಾದ ಬ್ಲ್ಯೂಪ್ರಿಂಟ್ ಹೊಂದಿಲ್ಲ. ಅಂಬೇಡ್ಕರ್ 92 ವರ್ಷಗಳ ಹಿಂದೆಯೇ ಕೃಷಿಯನ್ನು 'ಉದ್ಯಮ' (ಎಂಟರ್‌ಪ್ರೈಸ್) ಎಂದು ಕರೆದಿದ್ದರು. ಆದರೆ ಈಗ ಹಲವಾರು ಆರ್ಥಿಕ ತಜ್ಞರು ಮತ್ತು ಯೋಜನಾ ಆಯೋಗ ನಮ್ಮೊಡನಿದ್ದರೂ, ಯಾರೂ ಕೃಷಿಯನ್ನು 'ಉದ್ಯಮ'ವಾಗಿ ನೋಡುತ್ತಿಲ್ಲ. ಎಲ್ಲ ಮಾದರಿಯ ಆರ್ಥಿಕ ತಜ್ಞರು ಆರ್ಥಿಕ ಚಟುವಟಿಕೆಗಳನ್ನು 'ಉದ್ಯಮ ವ್ಯವಹಾರ' ಎಂದು ಕರೆಯುತ್ತಾರೆ. ಆದರೆ ಕೃಷಿ ಕೂಡ ಒಂದು ಆರ್ಥಿಕ ಚಟುವಟಿಕೆಯೇ ಎಂಬ ಪ್ರಶ್ನೆಯನ್ನು ನಾವ್ಯಾರೂ ಇದುವರೆಗೂ ಕೇಳಿಕೊಂಡೇ ಇಲ್ಲ.

ಪರಿಣಾಮ ಭಾರತೀಯ ಕೃಷಿ ವಲಯ ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಸೊರಗುತ್ತಿದೆ. ಸುಮಾರು 52% ಮಂದಿ ಭಾರತೀಯರು ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಂಡರೂ ಒಟ್ಟಾರೆ ದೇಶದ ಆಂತರಿಕ ಉತ್ಪನ್ನದಲ್ಲಿ ಕೃಷಿಯ ಕೊಡುಗೆ 17.5% ಮಾತ್ರ. ಇದರರ್ಥ ಏನು? ಕೃಷಿಕರು ದೇಶದ ಆರ್ಥಿಕ ವ್ಯವಸ್ಥೆಗೆ ದೊಡ್ಡ ಹೊರೆಯಾಗಿ ಪರಿಣಮಿಸಿದ್ದಾರೆ. ಕೃಷಿಯನ್ನು ಕೈಗಾರಿಕೆಯ ಮಾದರಿಯಲ್ಲಿ ನಡೆಸಿದರೆ, ಗ್ರಾಮೀಣ ಪ್ರದೇಶಗಳಲ್ಲಿ ಭಾರೀ ಮಟ್ಟದಲ್ಲಿ ನಿರುದ್ಯೋಗ ಸಮಸ್ಯೆ ಉಂಟಾಗುತ್ತದೆ ಎಂದು ಕೆಲವು ಆರ್ಥಿಕ ತಜ್ಞರು ನಂಬಿದ್ದಾರೆ. ಆದರೆ ಕೃಷಿಯ ಕೈಗಾರಿಕೀಕರಣ ನಿಜಕ್ಕೂ ನಿರುದ್ಯೋಗವನ್ನು ಸೃಷ್ಟಿಸುವುದೇ?

1600ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಯಾಯಿತು. ಆ ವರ್ಷ ಬ್ರಿಟನ್‌ನ 70%ರಷ್ಟು ಮಂದಿ ಕೃಷಿಯಲ್ಲಿ ತೊಡಗಿಕೊಂಡಿದ್ದರು. ಬ್ರಿಟನ್ 1600ರಲ್ಲಿ ಇದ್ದ ಹಾಗೆ ಭಾರತದ ಈಗಿನ ಸ್ಥಿತಿಯಿದೆ. 1800ರಲ್ಲಿ ಕೂಡ ಬ್ರಿಟನ್‌ನಲ್ಲಿ ಆಹಾರದ ಕೊರತೆ ಇದ್ದು ಲಕ್ಷಾಂತರ ಮಂದಿ ಹಸಿವಿನಿಂದ ತತ್ತರಿಸಿದ್ದರು. 1800ರಲ್ಲಿ ಬ್ರಿಟನ್‌ನಲ್ಲಿ ಹೆಕ್ಟೇರಿಗೆ 1,200 ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದರು. ಆದರೆ ಇಂದು ಇಂಗ್ಲೆಂಡ್‌ನಲ್ಲಿ ಕೇವಲ 1.4% ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ರಾಷ್ಟ್ರೀಯ ಸಮಗ್ರ ಉತ್ಪನ್ನದಲ್ಲಿ 1.2% ಕೊಡುಗೆ ನೀಡುತ್ತಿದ್ದಾರೆ. ಕೃಷಿ ಚಟುವಟಿಕೆಗಳು ಕೈಗಾರಿಕೀಕರಣಗೊಂಡ ನಂತರ ಬ್ರಿಟನ್‌ನಲ್ಲಿ ಈಗ ಹೆಕ್ಟೇರಿಗೆ 7,900 ಕ್ವಿಂಟಾಲ್ ಗೋಧಿ ಬೆಳೆಯುತ್ತಿದ್ದಾರೆ.

ಆದರೆ ಭಾರತದಲ್ಲಿ ಹೆಕ್ಟೇರ್ ಒಂದರಲ್ಲಿ ಕೇವಲ 2800 ಕ್ವಿಂಟಾಲ್ ಗೋಧಿ ಬೆಳೆಯುತ್ತಾರೆ. ಇದರ ಬಗ್ಗೆ ಭಾರತದ ಯೋಜನಾಕರ್ತರು ಏನು ಹೇಳುತ್ತಾರೆ?

* * * * *

ಪ್ರಕೃತಿದತ್ತವಾಗಿ ಬೆಳೆಯುವ ಆಹಾರಧಾನ್ಯಗಳು, ತರಕಾರಿ ಮತ್ತು ಮಾಂಸ ರುಚಿ ಮತ್ತು ಆರೋಗ್ಯದ ದೃಷ್ಟಿಯಿಂದ ಅತ್ಯುತ್ತಮವಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ತಳಿಗಳ ಅನುವಂಶೀಯತೆಯಲ್ಲಿ ನೇರವಾದ ಬದಲಾವಣೆ ತರಲು ಪ್ರಯತ್ನಿಸಿದರೆ ಖಂಡಿತ ರುಚಿ ಕೆಡುತ್ತದೆ. ಆಧುನಿಕ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳಿಲ್ಲದೆ ಮಳೆನೀರಿನಲ್ಲಿ ಬೆಳೆಯಲಾಗುತ್ತಿದ್ದ ಗೋಧಿ ಎಷ್ಟು ರುಚಿಕರವಾಗಿತ್ತು ಯೋಚಿಸಿ ನೋಡಿ. ಇವತ್ತಿಗೂ ಕೂಡ ನೈಸರ್ಗಿಕವಾಗಿ ಬೆಳೆಯಲಾಗುವ ಮಧ್ಯಪ್ರದೇಶದ "ಎಂಪಿಗೋಧಿ"ಯ ಹಿಟ್ಟು ಕೆ.ಜಿ.ಗೆ 32 ರೂ. ತಗುಲುತ್ತದೆ. ಸಾಧಾರಣ ಗೋಧಿಹಿಟ್ಟು ಮಾರುಕಟ್ಟೆಯಲ್ಲಿ 18ರೂ.ಗೆ ಸಿಗುತ್ತದೆ. ಬಹಳಷ್ಟು ಭಾರತೀಯರು ಆಹಾರಧಾನ್ಯಗಳನ್ನು ನೈಸರ್ಗಿಕವಾಗಿ ಬೆಳೆಯುವ ನಿಟ್ಟಿನಲ್ಲಿ ಕೃಷಿ ಭೂಮಿಯನ್ನು ಖರೀದಿಸುತ್ತಿದ್ದಾರೆ.

ಅದೇ ರೀತಿ ದೇಸಿ ಟೊಮ್ಯಾಟೋವನ್ನು ಗಮನಿಸಿ. ಹಣ್ಣಾದಾಗ ಕೆಂಪು ಬಣ್ಣಕ್ಕೆ ತಿರುಗುವ ಟೊಮ್ಯಾಟೋ, ಸ್ವಲ್ಪ ಹಸಿರು ಬಣ್ಣವನ್ನು ಹಾಗೆ ಉಳಿಸಿಕೊಂಡಿರುತ್ತದೆ. ಇದು ತಿನ್ನಲು ಕೂಡ ರುಚಿಕರ. ದೇಶದ ಎಲ್ಲ ಜನ ನಿಸರ್ಗದತ್ತವಾದ ಆಹಾರ, ಹಣ್ಣು-ತರಕಾರಿಗಳನ್ನು ಸೇವಿಸುವುದು ಒಳ್ಳೆಯದೇ. ಹೀಗಾಗಿ ಬಿಟಿ ಬದನೆಕಾಯಿಯನ್ನು ವಿರೋಧಿಸಿದ ಲಾಬಿಯನ್ನು ನಾವು ಪ್ರಶಂಸಿಸಲೇಬೇಕು. ಎಲ್ಲರೂ ನೈಸರ್ಗಿಕ ಆಹಾರ ಸೇವಿಸಲಿ ಎಂಬ ಉದಾತ್ತ

ಮತ್ತೊಂದು ಹಸಿರು ಕ್ರಾಂತಿ

ಚಿಂತನೆಯನ್ನು ಕೂಡ ಪ್ರಶಂಸಿಸಲೇಬೇಕು. ಆದರೆ, ಭಾರತದ ಜನರೆಲ್ಲರೂ ನಿಸರ್ಗದತ್ತವಾದ ಆಹಾರವನ್ನು ಸೇವಿಸುವಂತಾಗಬೇಕಾದರೆ, ಬಹುಶಃ ಭಾರತದ ಸುಮಾರು ಅರ್ಧದಷ್ಟು ಜನ ಈ ಭೂಮಿಯನ್ನೇ ಬಿಟ್ಟು ಹೋಗಬೇಕಾಗಬಹುದು!

1967-68ರಲ್ಲಿ ಭಾರತದಲ್ಲಿ ಹಸಿರು ಕ್ರಾಂತಿ ಆರಂಭವಾಯಿತು. 1970ರವರೆಗೆ ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗವನ್ನು ಹೊರತುಪಡಿಸಿದರೆ ಉತ್ತರ ಭಾರತದ ಬಹುತೇಕ ಭಾಗದಲ್ಲಿ ನೈಸರ್ಗಿಕ ಮಾದರಿಯಲ್ಲಿ ಕೃಷಿ ಮಾಡುತ್ತಿದ್ದರು. ಆದರೆ ಇಳುವರಿ ಎಷ್ಟು ಕಡಿಮೆ ಇತ್ತೆಂದರೆ 1970ರಲ್ಲಿ ಓರ್ವ ವ್ಯಕ್ತಿಗೆ ಕೇವಲ 42ಗ್ರಾಂ ಗೋಧಿ ಲಭ್ಯವಿತ್ತು. ಆದರೆ 2000ದಲ್ಲಿ ಇದು 168 ಗ್ರಾಂವರೆಗೆ ಹೆಚ್ಚಾಗಿದೆ. 1970ರಲ್ಲಿ ಭಾರತದ ಕೆಳವರ್ಗದವರು ಆಹಾರ ಕಾಳುಗಳನ್ನು ಸೇವಿಸುತ್ತಿದ್ದರು. ಈಗ ಇದನ್ನು ದನ ಜಾನುವಾರುಗಳಿಗೆ ಮೇವಾಗಿ ಬಳಸಲಾಗುತ್ತದೆ. ಆದರೆ ಶ್ರೀಮಂತ ವರ್ಗದವರಿಗೆ ನೈಸರ್ಗಿಕವಾದ, ರುಚಿಕರವಾದ ಗೋಧಿ ಯಾವಾಗಲೂ ಸಿಗುತ್ತಿತ್ತು.

ನೋರ್ಮನ್ ಬೋರ್ಲಾಗ್ ಅವರ ಗೋಧಿ ತಳಿ ಕೂಡ ಪರೋಕ್ಷವಾಗಿ ಬದಲಾವಣೆಗೆ ಒಳಪಟ್ಟ ತಳಿಯಾಗಿತ್ತು. ಭತ್ತ, ಕಾಳುಗಳು, ಹಣ್ಣು-ತರಕಾರಿಗಳಿಗೂ ಕೂಡ ಈ ಮಾತು ಅನ್ವಯಿಸುತ್ತದೆ. ಅದೇ ರೀತಿ ಮಿಶ್ರತಳಿಯ ಹಸುಗಳಿಂದ ಪಡೆಯಲಾಗುತ್ತಿದ್ದ ಹಾಲು ತಮ್ಮ ಮೂಲ ಸ್ವಾದವನ್ನು ಕಳೆದುಕೊಂಡರೂ ಹೆಚ್ಚು ಇಳುವರಿ ನೀಡುತ್ತಿತ್ತು. ಈಗ, ಕೆಲವು ಸಮುದಾಯಗಳನ್ನು ಹೊರತುಪಡಿಸಿದರೆ ದೇಶದಲ್ಲಿ ಹಸಿವು, ಆಹಾರದ ಕೊರತೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗಿದೆ. ಆದರೆ ಆಹಾರದ ಪೌಷ್ಠಿಕಾಂಶ ಮತ್ತು ಸಮಗ್ರವಾದ ಆಹಾರಪದ್ಧತಿಯ ವಿಚಾರದಲ್ಲಿ ಇನ್ನೂ ಬಹಳಷ್ಟು ಕೆಲಸಗಳು ಆಗಬೇಕಿವೆ.

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರೋಗ್ಯ ಮತ್ತು ಆಹಾರ ಸಂಬಂಧಿತ ವಿಚಾರಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡುತ್ತದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್- 3)2005-06ರಲ್ಲಿ ಭಾರತೀಯರ ಆಹಾರ ಸೇವನೆ ಬಗ್ಗೆ ಮಾಹಿತಿ ಇದೆ. ಇದರ ಪ್ರಕಾರ ದೇಶದ 64.2% ಮಹಿಳೆಯರು ಮಾತ್ರ ಪ್ರತಿದಿನ ಹಸಿರು ತರಕಾರಿಗಳನ್ನು ತಿನ್ನಲು ಶಕ್ತರಾಗಿದ್ದಾರೆ. ಉಳಿದ 37.8% ಮಹಿಳೆಯರು ಆರೋಗ್ಯದ ಸಮಸ್ಯೆ ಎದುರಿಸುತ್ತಿದ್ದಾರೆ. ಜೊತೆಗೆ ಕೇವಲ 39.8% ಮಹಿಳೆಯರು ಪ್ರತಿದಿನ ಹಾಲು ಮೊಸರು ಸೇವಿಸುತ್ತಾರೆ. ಕೇವಲ 12.7% ಮಹಿಳೆಯರು ಮಾತ್ರ ಪ್ರತಿದಿನ ಹಣ್ಣು ಹಂಪಲುಗಳನ್ನು ತಿನ್ನುತ್ತಾರೆ. ಕೇವಲ 3.5% ಮಹಿಳೆಯರು ಮಾತ್ರ ಪ್ರತಿದಿನ ಮೊಟ್ಟೆ ತಿನ್ನುತ್ತಾರೆ ಮತ್ತು ಕೇವಲ 6.8% ಮಹಿಳೆಯರು ಮಾತ್ರ ಪ್ರತಿದಿನ ಮೀನು/ ಕೋಳಿ/ ಮೇಕೆ ಮಾಂಸವನ್ನು ಸೇವಿಸುತ್ತಾರೆ. ಮಾಂಸಾಹಾರ ಸೇವಿಸದಿರುವುದು ಜಾತಿ ಕಾರಣದಿಂದಲೂ ಇರಬಹುದು.

ಆಹಾರ ಧಾನ್ಯಗಳನ್ನು ಹೊರತುಪಡಿಸಿ ತರಕಾರಿ, ಹಣ್ಣು-ಹಂಪಲು, ಮೊಟ್ಟೆ-ಮಾಂಸ, ಹಾಲು-ಮೊಸರು ಇವುಗಳನ್ನು ಸೇವಿಸದೆ ಆಹಾರದ ಪೌಷ್ಠಿಕಾಂಶದ ಕೊರತೆಯನ್ನು ಸರಿದೂಗಿಸಲು ಸಾಧ್ಯವಿಲ್ಲ. ವಿಜ್ಞಾನದ ಸಹಾಯವಿಲ್ಲದೆ ಸಮಗ್ರವಾದ ಆಹಾರ ಭಾರತೀಯರಿಗೆ ಕನಸಾಗಿಯೇ ಉಳಿಯಲಿದೆ. ಈ ಹಿನ್ನೆಲೆಯಲ್ಲಿ ಬಿಟಿ ಬದನೆಕಾಯಿ ವ್ಯಾಪಕವಾಗಿ ಚಾಲ್ತಿಗೆ ಬರಬೇಕಿತ್ತು.

ಗೋಧಿ, ಭತ್ತದ ನಂತರ ವೈಜ್ಞಾನಿಕವಾಗಿ ಕೈಗೊಂಡಿರುವ ಕೃಷಿ ಸಂಬಂಧಿತ ಕಾರ್ಯವೆಂದರೆ ಕೋಳಿ ಸಾಕಾಣಿಕೆ. ಇದರಿಂದಾಗಿ ಸಾಮಾನ್ಯ ಜನರು ಕೂಡ ಬ್ರಾಯ್ಲರ್ ತಳಿಯ ಕೋಳಿ, ಮೊಟ್ಟೆಗಳನ್ನು ಸುಲಭ ಬೆಲೆಯಲ್ಲಿ ಸೇವಿಸುತ್ತಿದ್ದಾರೆ. ಬ್ರಾಯ್ಲರ್ ಕೋಳಿ ಎಫ್2 ಹೈಬ್ರಿಡ್ ತಳಿ ಎಂದು ಎಲ್ಲರಿಗೂ ಗೊತ್ತಿರುವ ವಿಚಾರ.

ಹಣ್ಣು ಮತ್ತು ತರಕಾರಿ ವಲಯದಲ್ಲಿ ಮತ್ತೊಂದು ಹಸಿರು ಕ್ರಾಂತಿಯಾಗಬೇಕಿದೆ. ನೈಸರ್ಗಿಕ ವಿಧಾನದಲ್ಲಿ ಬೆಳೆದ ಹಣ್ಣು-ತರಕಾರಿಗಳು ರುಚಿಕರವಾಗಿದ್ದರೂ, ಹೆಚ್ಚು ಇಳುವರಿ ಕೊಡುವುದಿಲ್ಲ. ಆದರೆ ಕೃತಕವಾಗಿ ಬೆಳೆಯಲಾಗುವ ಹೈಬ್ರಿಡ್ ತಳಿಗಳು ಹೆಚ್ಚು ಇಳುವರಿ ಕೊಡುತ್ತವೆ. ರುಚಿಗೂ ಮೋಸ ಮಾಡುವುದಿಲ್ಲ. ದುರದೃಷ್ಟವಶಾತ್ ಯುಪಿಎ ಸರ್ಕಾರ ಬಿಟಿ ಬದನೆಕಾಯಿಯ ವಿಷಯದಲ್ಲಿ ತನಗೆ ಲಭಿಸಿದ್ದ ಅತ್ಯುತ್ತಮವಾದ ಅವಕಾಶವನ್ನು ಒಂದು ಚಿಕ್ಕ ಗುಂಪನ್ನು ಸಮಾಧಾನ ಪಡಿಸುವ ಭರದಲ್ಲಿ ಕಳೆದುಕೊಂಡಿದೆ.

ರುಚಿಕರವಾದ ಆಹಾರ ತಳಿಗಳ ವಿಚಾರವೇ ಮೊದಲಿಗೆ ಸರಿಯಿಲ್ಲ. ತಳಿಯ ವಿಚಾರದಲ್ಲಿ ಯಾವುದೇ ಹಸ್ತಕ್ಷೇಪವನ್ನು ಸಹಿಸದವರು ಮೂಲತಃ ಆಹಾರದ ಕೊರತೆಯನ್ನು ಎಂದೂ ಅನುಭವಿಸದವರಾಗಿದ್ದಾರೆ. ಸುಮಾರು ಐದು ಪೀಳಿಗೆಯ ಹಿಂದೆ ಭಾರತದ ಬಹುತೇಕ ಮಂದಿ ಕಾಡಿನ ಹಣ್ಣು ಕಾಯಿಗಳನ್ನು ತಿನ್ನುತ್ತಿದ್ದ ಸಂದರ್ಭದಲ್ಲಿ ಕೂಡ ಈ ವರ್ಗ ಅತ್ಯುತ್ತಮವಾದ ಆಹಾರವನ್ನು ಸೇವಿಸುತ್ತಿದ್ದಂತಹವರು.

ಭಾರತದ ಮಧ್ಯಮವರ್ಗ ಸೇವಿಸುವ ಗೋಧಿ ಮತ್ತು ಅಕ್ಕಿಯ ತಳಿಗಳನ್ನೇ ಕೆಳವರ್ಗದ ಬಹುತೇಕ ಮಂದಿ ಈಗ ತಿನ್ನಲಾರಂಭಿಸಿದ್ದಾರೆ. ಇದೇ ತರ್ಕವನ್ನು ಹಣ್ಣು-ತರಕಾರಿಗಳಿಗೂ ಯಾಕೆ ಅನ್ವಯಿಸಬಾರದು? ಆಹಾರದಲ್ಲಿ ವೈಜ್ಞಾನಿಕ ಹಸ್ತಕ್ಷೇಪದಿಂದ ಎರಡು ಬದಲಾವಣೆಗಳನ್ನು ಕಾಣಬಹುದು; ಆಹಾರದ ಮೂಲಗಳ 'ಎಕ್ಸ್‌ಕ್ಲೂಸಿವ್' ಹಣೆಪಟ್ಟಿ ಹೋಗಲಾಡಿಸುವುದು. ಜೊತೆಗೆ ಆಹಾರ ಪದಾರ್ಥಗಳು ಎಲ್ಲರಿಗೂ ದೊರಕುವುದು.

ನೋರ್ಮನ್ ಬೋರ್ಲಾಗ್ ಅವರ ಗೋಧಿ ತಳಿ ಕೂಡ ಪರೋಕ್ಷವಾಗಿ ಬದಲಾವಣೆಗೆ ಒಳಪಟ್ಟ ತಳಿಯಾಗಿತ್ತು. ಭತ್ತ, ಕಾಳುಗಳು, ಹಣ್ಣು-ತರಕಾರಿಗಳಿಗೂ ಕೂಡ ಈ ಮಾತು ಅನ್ವಯಿಸುತ್ತದೆ.

ಕೃಷಿ ಸುಧಾರಣೆ

ನಿಮಗೆ ಒಂದು ಕಥೆ ಹೇಳುತ್ತೇನೆ. ಕೇಳಿ. ಶತಮಾನಗಳ ಹಿಂದೆ ಓರ್ವ ರಾಜ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ. ತನ್ನ ಪ್ರಜೆಗಳ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದ ಉದಾರವಾದಿ ರಾಜ, ಒಮ್ಮೆ ಉತ್ತರ ಭಾರತದಲ್ಲಿ ಅತಿಯಾದ ಚಳಿಯಿಂದಾಗಿ ಸಾವಿರಾರು ಮಂದಿ ಸಾವನ್ನಪ್ಪುತ್ತಿದ್ದುದನ್ನು ಗಮನಿಸಿ ದೇಶದ ಎಲ್ಲ ಪ್ರಜೆಗಳಿಗೆ ಬೆಚ್ಚಗಿನ ಹೊದಿಕೆ ನೀಡಲು ಆದೇಶ ಹೊರಡಿಸಿದ. ಪರಿಣಾಮವಾಗಿ ಸರ್ಕಾರದ ಬೊಕ್ಕಸ ಸಂಪೂರ್ಣ ಖಾಲಿಯಾಯಿತು. ಉತ್ತಮ ಆಲೋಚನೆಗಳಿದ್ದರೆ ಸಾಲದು, ಬುದ್ಧಿವಂತಿಕೆ ಕೂಡ ಇರಬೇಕು ಎಂಬುದು ಈ ಕಥೆಯ ಪಾಠ.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ರೈತರು ಬೆಳೆಹಾನಿಯ ಪರಿಣಾಮವಾಗಿ ಆತ್ಮಹತ್ಯೆ ಮಾಡಿಕೊಳ್ಳಲಾರಂಭಿಸಿದಾಗ ಯುಪಿಎ ಸರ್ಕಾರ ದೇಶದೆಲ್ಲೆಡೆಯ ರೈತರ ಸಾಲಮನ್ನಾ ಮಾಡುವುದಾಗಿ ಘೋಷಿಸಿತು. ಇದು ಕೂಡ ಮೇಲಿನ ರಾಜನ ಕಥೆಯಂತೆಯೇ ಇದೆ.

ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಅವರು ಮಂಡಿಸಿದ ಬಜೆಟ್‌ನ ಎ ವಿಭಾಗದ 44, 45 ಮತ್ತು 46ನೇ ಪ್ಯಾರಾ ನನ್ನ ಗಮನ ಸೆಳೆಯಿತು. ಭಾರತದ ಪೂರ್ವ ಭಾಗದ ರಾಜ್ಯಗಳಾದ ಬಿಹಾರ, ಛತ್ತೀಸ್‌ಗಢ, ಜಾರ್ಖಂಡ್, ಉತ್ತರ ಪ್ರದೇಶದ ಪೂರ್ವ ಭಾಗ, ಪಶ್ಚಿಮ ಬಂಗಾಳ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಹಸಿರು ಕ್ರಾಂತಿಯನ್ನು ತರುವುದಾಗಿ ಹಣಕಾಸು ಸಚಿವರು ಭರವಸೆ ನೀಡಿದ್ದಾರೆ. ಆದರೆ ಈ ಹಸಿರುಕ್ರಾಂತಿಯ ಲಕ್ಷಣಗಳೇನು? ಅದಾಗಲೇ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಸಾಧಿಸಿರುವ ಹಸಿರು ಕ್ರಾಂತಿಯ ಮಾದರಿಯನ್ನು ಇಲ್ಲಿ ಅನುಷ್ಠಾನಗೊಳಿಸಲಾಗುವುದೇ?

ಪಂಜಾಬ್‌ನ ಯಶೋಗಾಥೆಯನ್ನು ನೋಡಿ. ಇಲ್ಲಿ ಒಂದು ಹೆಕ್ಟೇರಿಗೆ 4.2 ಟನ್ ಗೋಧಿ ಬೆಳೆಯಲಾಗುತ್ತದೆ. ಚೀನಾದ ಇಳುವರಿ ಕೂಡ ಇಷ್ಟೇ. ಇಂಗ್ಲೆಂಡ್‌ನಲ್ಲಿ ಹೆಕ್ಟೇರಿಗೆ 7.9 ಟನ್ ಗೋಧಿಯನ್ನು ಬೆಳೆಯಲಾಗುತ್ತದೆ. ಇಂಗ್ಲೆಂಡ್‌ನಲ್ಲಿ 1800ರಲ್ಲಿ ಹೆಕ್ಟೇರಿಗೆ ಕೇವಲ 1.2 ಟನ್ ಗೋಧಿ ಬೆಳೆಯಲಾಗುತ್ತಿತ್ತು. ಪಂಜಾಬ್‌ನಲ್ಲಿ 1965-66ರಲ್ಲಿ ಹೆಕ್ಟೇರಿಗೆ 1.1 ಟನ್ ಗೋಧಿ ಬೆಳೆಯಲಾಗುತ್ತಿತ್ತು. ಗೋಧಿ ಇಳುವರಿ ಇಂಗ್ಲೆಂಡ್‌ನಲ್ಲಿ 1.2 ಟನ್‌ಗಳಿಂದ 7.9 ಟನ್‌ಗಳಿಗೆ ಏರಿಕೆಯಾಗಲು ಸಾಧ್ಯವಾದರೆ, ಪಂಜಾಬ್‌ನಲ್ಲಿ 1.1 ಟನ್‌ನಿಂದ 4.2 ಟನ್‌ಗಳಿಗೆ ಏರಿಕೆಯಾಗಲು ಸಾಧ್ಯವಾದರೆ, ಪಂಜಾಬ್‌ನ ಗೋಧಿ ಇಳುವರಿ ಇಂಗ್ಲೆಂಡ್‌ನ ಇಳುವರಿಯನ್ನು ಮೀರಿಸಲು ಯಾಕೆ ಸಾಧ್ಯವಿಲ್ಲ?

ಭಾರತದಂತೆಯೇ ಚೀನಾದಲ್ಲಿ ಕೂಡ ರೈತರು ಹಿಂದುಳಿದಿರುವ ಕೃಷಿಯನ್ನು ಬಳುವಳಿಯಾಗಿ ಪಡೆದಿದ್ದಾರೆ. ಚೀನಾ, ದೇಶದ ಆಹಾರ ಉತ್ಪಾದನೆಯನ್ನು ಹೆಚ್ಚಿಸುವುದರತ್ತ ಗಮನ ಹರಿಸಿದೆ. ಚೀನಾದ ಅಧಿಕೃತ ವೆಬ್‌ಸೈಟ್‌ನ ಪ್ರಕಾರ ಚೀನಾ ಈಗಾಗಲೇ "ಲುಂಕ್ಸುವಾನ್ 987" ಎಂಬ ಹೈಬ್ರಿಡ್ ಗೋಧಿ ತಳಿಯನ್ನು ಅಭಿವೃದ್ಧಿಪಡಿಸಿದ್ದು ಯಶಸ್ವಿಯಾಗಿ ಪ್ರಯೋಗ ಮಾಡಲಾಗಿದೆ.

ಇದರ ಹೆಕ್ಟೇರೊಂದರ ಇಳುವರಿ ಬರೋಬ್ಬರಿ 10.7 ಟನ್‌ಗಳು. ಅಂದರೆ ಒಮ್ಮೆಲೆ ಪ್ರಸ್ತುತ ಇಳುವರಿಯ ಮೂರು ಪಟ್ಟು ಹೆಚ್ಚಳ.

ಚೀನಾದ ವಿವಿಧ ವಾತಾವರಣ, ಮಣ್ಣುಗಳಲ್ಲಿ ಪ್ರಯೋಗಕ್ಕೆ ಒಳಗಾಗಿರುವ "ಲುಂಕ್ಸುವಾನ್ 987" ಎಲ್ಲೆಡೆ ಒಂದೇ ರೀತಿಯ ಫಲಿತಾಂಶವನ್ನು ನೀಡಿದೆ. ವೆಬ್‌ಸೈಟ್‌ನ ಪ್ರಕಾರ "ಜಿಯಾಂಗ್ಸು ಪ್ರದೇಶದಲ್ಲಿ ಒಂದು ಹೆಕ್ಟೇರಿಗೆ 10.7 ಟನ್ ಇಳುವರಿ ಬಂದಿರುವುದೇ ಈಗ ಅಧಿಕ. ಉಳಿದಂತೆ ಬೀಜಿಂಗ್‌ನ ಚಾಂಗ್‌ಪಿಂಗ್ ಪ್ರಯೋಗ ಪ್ರದೇಶಗಳಲ್ಲಿ ಹೆಕ್ಟೇರಿಗೆ 9.1 ಟನ್ ಇಳುವರಿ ಬಂದಿದೆ. ಇನ್ನು ಮಧ್ಯಚೀನಾದ ಹೆನಾನ್ ಪ್ರಾಂತ್ಯದ ಕ್ಸಿಂಕ್ಸಿಯಾಂಗ್‌ನಲ್ಲಿ ಹೆಕ್ಟೇರ್‌ಗೆ 10 ಟನ್ ಇಳುವರಿಯಾಗಿದೆ."

ಇದರರ್ಥ ಏನು? ಹೆಕ್ಟೇರ್‌ಗೆ 7.9 ಟನ್ ಗೋಧಿ ಬೆಳೆಯುವ ಇಂಗ್ಲೆಂಡ್‌ನ ಸಾಧನೆಯನ್ನು ಹಿಂದಿಕ್ಕಲು ಖಂಡಿತ ಸಾಧ್ಯವಿದೆ. ಇಂಗ್ಲೆಂಡ್‌ನ ನಿದರ್ಶನವನ್ನು ಮುಂದಿಟ್ಟುಕೊಂಡು ಚೀನಾದ ವಿಜ್ಞಾನಿಗಳು ಹೆಕ್ಟೇರ್‌ಗೆ 10 ಟನ್‌ಗಳಿಗಿಂತ ಹೆಚ್ಚು ಇಳುವರಿಯ ಗುರಿ ಇರಿಸಿಕೊಂಡಿರುವುದು ಸ್ಪಷ್ಟ. ಭಾರತದಲ್ಲಿ ಯಾಕೆ ದೊಡ್ಡ ಮಟ್ಟದ ಚಿಂತನೆಗಳು ನಡೆಯುವುದಿಲ್ಲ. ಭಾರತೀಯರು ಯಾಕೆ ಚೀನಾವನ್ನು ಹಿಂದಿಕ್ಕುವಂತೆ ಹೆಕ್ಟೇರ್‌ಗೆ 11ಟನ್‌ಗಳನ್ನು ಇಳುವರಿ ಕೊಡುವ ಗೋಧಿ ತಳಿಯನ್ನು ಅಭಿವೃದ್ಧಿಪಡಿಸಬಾರದು?

ಪ್ರಸ್ತುತ ಭಾರತದ ಸರಾಸರಿ ಗೋಧಿ ಇಳುವರಿ ಹೆಕ್ಟೇರ್‌ಗೆ 2.8 ಟನ್‌ಗಳು. ಇದರ ಪ್ರಮಾಣ ಒಂದು ವೇಳೆ ಮೂರು ಪಟ್ಟು ಅಂದರೆ ಹೆಕ್ಟೇರ್‌ಗೆ 8.4 ಟನ್‌ಗಳವರೆಗೆ ಹೆಚ್ಚಾದರೆ, ಭಾರತ ವಾರ್ಷಿಕ 21ಕೋಟಿ ಟನ್‌ಗಳಷ್ಟು ಗೋಧಿಯನ್ನು ಬೆಳೆಯಬಹುದು. ವಿಶ್ವದ ಮೂರನೆಯ ಒಂದು ಭಾಗಕ್ಕೆ ಆಹಾರವನ್ನು ಒದಗಿಸಬಹುದು. ಅದೇ ರೀತಿ ಅಕ್ಕಿ, ಕಾಳುಗಳು, ಹಣ್ಣು-ತರಕಾರಿಗಳು, ಮೀನು, ಮಾಂಸ ಪದಾರ್ಥಗಳಲ್ಲಿಯೂ ಇದೇ ರೀತಿಯ ಕ್ರಾಂತಿ ಉಂಟಾದರೆ, ಇಡೀ ವಿಶ್ವಕ್ಕೆ ಭಾರತ ಮತ್ತು ಚೀನಾ ದೇಶಗಳು ಆಹಾರ ಒದಗಿಸಬಹುದು. ಭಾರತ ಆಹಾರದ ಸೂಪರ್‌ಶಕ್ತಿಯಾಗಿ ಹೊರಹೊಮ್ಮಬಹುದು.

ಪ್ರಕೃತಿ ಮಾತೆ ಭಾರತದಲ್ಲಿ ಕೃಷಿಗೆ ಅತ್ಯುತ್ತಮವಾದ ವಾತಾವರಣ, ಹವಾಮಾನ ಮತ್ತು ಮಣ್ಣನ್ನು ದಯಪಾಲಿಸಿದ್ದಾಳೆ. ಆದರೆ ಇದುವರೆಗೆ ಈ ಸಂಪನ್ಮೂಲಗಳನ್ನು ಸೂಕ್ತವಾಗಿ ಬಳಸಿಕೊಳ್ಳಲಾಗಿಲ್ಲ. ಪರಿಣಾಮವಾಗಿ ಭಾರತದಲ್ಲಿ ಈಗಲೂ ಕೂಡ ಖಾದ್ಯತೈಲ, ಸಕ್ಕರೆ, ಕಾಳುಗಳು ಮತ್ತು ಕೆಲವೊಮ್ಮೆ ಗೋಧಿ ಮತ್ತು ಅಕ್ಕಿಯ ಕೊರತೆ ಕೂಡ ಕಂಡುಬರುತ್ತದೆ.

ಈ ಹಿಂದೆ ಪಂಜಾಬ್, ಹರಿಯಾಣ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಹಸಿರು ಕ್ರಾಂತಿ ನಡೆದಿದೆ. ಇದನ್ನು ಭಾರತದ ಇತರೆಡೆಗಳಲ್ಲಿಯೂ ಪುನರಾವರ್ತಿಸಬೇಕೆಂದು ಭಾರತೀಯ ಚಿಂತಕರು ನಂಬಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿಯೂ ಈ ವಿಚಾರವನ್ನು ಪ್ರಸ್ತಾಪಿಸಲಾಗಿದೆ.

ಆದರೆ ಈ ಆಲೋಚನೆಗಳು ಕಾಗದದ ಮೇಲೆ ಉಳಿದರೆ ಸಾಲದು. ಭಾರತದ ಕೃಷಿ ವಲಯ 1950ರಲ್ಲಿ ಹೇಗಿತ್ತೋ ಈಗಲೂ ಬಹುತೇಕ ಹಾಗೆಯೇ ಇದೆ. ಕೃಷಿ ಕ್ಷೇತ್ರದಲ್ಲಿ ಮತ್ತೊಂದು ಹಸಿರು ಕ್ರಾಂತಿಯ ಅವಶ್ಯಕತೆ ಖಂಡಿತ ಇದೆ. ಆದರೆ ಇದುವರೆಗೆ ದೇಶದ ಯಾವುದೇ ಸರ್ಕಾರ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಗೋಜಿಗೆ ಹೋಗಿಲ್ಲ. ಈ ಬಜೆಟ್ ಕೂಡ ಈ ಕೆಟ್ಟ ಸಂಪ್ರದಾಯವನ್ನು ಮುಂದುವರೆಸದಿರಲಿ ಎಂಬುದೇ ನಮ್ಮ ಆಶಯ. □

STATEMENT ABOUT OWNERSHIP AND OTHER PARTICULARS ABOUT NEWSPAPER

FORM IV

1. Place of Publication	:	Bangalore
2. Periodicity of its publication	:	Monthly
3. Printer's Name Nationality Address	:	**S.R. Govindu** Indian 63, Anjananagar, Vishwaneedam Post, Bangalore-560 091
4. Publisher's Name Nationality Address	:	**S.R. Govindu** Indian 63, Anjananagar, Vishwaneedam Post, Bangalore-560 091
5. Editor's Name Nationality Address	:	**Indudhara Honnapura** Indian 402,1st main,2nd Block, HBR Layout, Bangalore-560 043
6. Name and address of individuals who own the newspaper and partners and share holders holding more than one percent of the total capital	:	Spoorthidhama, 63, Anjananagar, Vishwaneedam Post, Bangalore-560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Sd/-
S.R. Govindu
Publisher

Date: 28-02-2010

ಬೆಕ್ಕು ಮತ್ತು ಬೋನು

ತಾನೇ ತಾನು
ಹುಲಿ ರಾಯ ಅಂತ ತಿಳಿದು
ಖಾಲಿ ಬೋನಿನೊಳಗೆ
ಬಿಜಯಂಗೈದು
ಕಳ ಮೂಸಿ
ನೆಲ ಕೆರೆದು
ಬಾಲ ಬಿಟ್ಟು ಕುಂತ
ಪರಾಕ್ರಮಿ



ಸುತ್ತ ಸುಳಿವ ಪ್ರಜೆಗಳಿಗಾಗಿ
ಮೀಸೆ ನಿಮಿರಿ
ಕಣ್ಣುರಿಸಿ
ಗುರುಗುಟ್ಟಿ ಘರ್ಜಿಸಿ
ಕೋರೆ ತೋರುವ
ಧರ್ಮದ ಪ್ರತಾಪ



ತನ್ನಿಂದಾಗ ಬಾರದ ಅವಗಡಕ್ಕಾಗಿ
ಬೋನ ಹೊಕ್ಕು
ಮಹೋಪಕಾರ ಮಾಡಿದ
ಬೆಕ್ಕು
ಹಾಗಂತ
ಹುಲಿಯ ಮರಿಯಂತೂ ಅಲ್ಲ.

○ ದಯಾನಂದ

ಪ್ರತಾಪ ತೋರಿಸು...!

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಜೇತವನದಲ್ಲಿ ತನ್ನ ಅಪಾರ ಭೀಕ್ಷುಗಳೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ಬೋಧಿಸತ್ವರು ಹಿಮಾಲಯದ ದುರ್ಗಮ ಕಾಡಿನಲ್ಲಿ ಸಿಂಹನಾಗಿ ಜನಿಸಿದ್ದರು. ಬೆಳೆದು ದೊಡ್ಡವರಾದ ಬಳಿಕ ಪ್ರತಾಪಶಾಲಿಯಾಗಿ ಕಂಚನ ಎಂಬ ಗುಹೆಯಲ್ಲಿ ವಾಸವಾಗಿದ್ದರು. ಆ ಗುಹೆಯು ಹಿಮಾಲಯದ ತಪ್ಪಲಿನ ಬಹು ಎತ್ತರವಾದ ಪ್ರದೇಶದಲ್ಲಿ ಇತ್ತು.

ಒಂದು ದಿನ ಮುಂಜಾನೆ ಗುಹೆಯಿಂದ ಹೊರ ಬಂದ ಸಿಂಹವು ಗುಹೆಯ ಎದುರಿಗಿದ್ದ ಎತ್ತರವಾದ ಬಂಡೆ ಕಲ್ಲಿನ ಮೇಲೆ ನಿಂತು ದೀರ್ಘವಾಗಿ ಆಕಳಿಸಿ ಮೈಕೊಡವಿ ಎಚ್ಚೆತಿತು. ಅತ್ತಿತ್ತ ತನ್ನ ಕುತ್ತಿಗೆಯನ್ನು ತಿರುಗಿಸುತ್ತಾ ಮೂರು ಬಾರಿ ಘರ್ಜಿಸಿತು. ಬಳಿಕ ತನ್ನ ಕೆಳಗಿನ ಕಾಡ ಹಾದಿಯನ್ನು ಸೂಕ್ಷ್ಮವಾಗಿ ವೀಕ್ಷಿಸಿತು. ಅದರ ಕಣ್ಣಿಗೆ ಒಂದು ದಷ್ಟ ಪುಷ್ಟವಾಗಿ ಬೆಳೆದು ನಿಂತ ಕಾಡು ಕೋಣವು ಗೋಚರಿಸಿತು. ಇಂದಿನ ನನ್ನ ಆಹಾರವು ದೊರೆಯಿತೆಂದು ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾ ಬಂಡೆಕಲ್ಲಿನಿಂದ ಜಿಗಿದು ಕೆಳಗಿಳಿದು ಶರವೇಗದಲ್ಲಿ ಓಡಾತೊಡಗಿತು. ಕೋಣಕ್ಕೆ ಎದುರಾಗಿ ನಿಂತು ಕಾಲು ಕೆರೆದು ಕಿವಿ ಆಗಲಿಸಿ ತನ್ನ ಹುರಿಗಣ್ಣನ್ನು ಬೀರುತ್ತಾ ನಿಂತಿತು. ತನ್ನ ವಿಶಾಲವಾದ ಬಾಯನ್ನು ತೆರೆದು ನಾಲಿಗೆಯಲ್ಲಿ ಜೊಲ್ಲು ಸುರಿಸುತ್ತಾ ಬಲಗಾಲಿನಿಂದ ನೆಲವನ್ನು ಗೀರಿ ದೂಳ್ಳೆಬ್ಬಿಸುತ್ತಾ ನಿಂತಿತು. ಈ ಸಿಂಹ ಕೇಸರಿಯನ್ನು ಕಂಡ ಕಾಡು ಕೋಣವು ಪ್ರಾಣ ಬೀತಿಯಿಂದ ಅದುರುತ್ತಾ ನಿಂತಿತು. ಅತ್ತಿತ್ತ ಕಣ್ಣಾಡಿಸಿತು. ಎತ್ತಲೂ ತಪ್ಪಿಸಿಕೊಳ್ಳುವ ಸಾಧ್ಯತೆ ಕಡಿಮೆ ಇತ್ತು. ಆದುದರಿಂದ ಚಂಗನೆ ಹಿಂದಕ್ಕೆ ತಿರುಗಿ ಓಡತೊಡಗಿತು. ಸಿಂಹವು ಅದನ್ನು ಹಿಂಬಾಲಿಸಿಕೊಂಡು ಹೋಗಿ ಅದರ ಮೇಲೆ ಜಿಗಿಯಿತು. ಅದರ ಕುತ್ತಿಗೆಯ ನಾಳಕ್ಕೆ ಬಾಯಾಕಿ ರಕ್ತವನ್ನು ಹೀರಲು ಅದು ವೇದನೆಯಿಂದ ಕೂಗುತ್ತಾ ವಿಲವಿಲನೆ ಒದ್ದಾಡುತ್ತಾ ನೆಲಕ್ಕೆ ಕುಸಿದು ತನ್ನ ಕೊನೆಯುಸಿರನ್ನು ಬಿಟ್ಟಿತು.

ಆ ಸಿಂಹವು ತನ್ನಿಚ್ಛೆಯಂತೆ ಕಿತ್ತು ಕಿತ್ತು ಅದರ ಮಾಂಸವನ್ನು ತೃಪ್ತಿಯಾಗುವ ತನಕ ತಿಂದು ಮಿಕ್ಕದ್ದನ್ನು ಅಲ್ಲಿಯೇ ಬಿಟ್ಟು ಹೊರಟಿತು. ಬಳಿಕ ಸಮೀಪವೆ ಇದ್ದ ಸರೋವರದಲ್ಲಿ ಸ್ಪಟಿಕ ಶುದ್ಧವಾದ ನೀರನ್ನು ಕುಡಿದು ತನ್ನ ಗುಹೆಯನ್ನು ಸೇರಿತು. ಅದೇ ಕಾಡಿನಲ್ಲಿ ಅದೇ ಸಮಯದಲ್ಲಿ ಒಂದು ನರಿ ಇತ್ತು. ಅದರ ಹೆಸರು "ಜಂಬಕ" ಎಂಬುದಾಗಿತು. ಅದು ತನ್ನ ಹೆಸರಿಗೆ ತಕ್ಕಂತೆ ಜಂಬವನ್ನು ತನ್ನ ಕುಲದ ಇತರರೊಂದಿಗೆ ಪ್ರದರ್ಶಿಸುತ್ತಿತ್ತು. ಕುತಂತ್ರ, ಸಮಯ ಸಾಧಕತೆ ಮತ್ತು ಸೋಮಾರಿತನದಲ್ಲಿ ಅದು ನಿತ್ಯ ಜೀವನವನ್ನು ಕಳೆಯುತ್ತಿತ್ತು. ದೈಹಿಕವಾಗಿ ಆ ನರಿಯು ಬಲು ಬಲಹೀನವಾಗಿತ್ತು. ಆದರೂ ಅದಕ್ಕೆ ವಿಧ ವಿಧವಾದ ಜಾತಿಯ ಪ್ರಾಣಿಗಳ ಮಾಂಸವನ್ನು ಭಕ್ಷಿಸಬೇಕೆಂಬ ಬಯಕೆ ಅತಿಯಾಗಿತ್ತು. ಹೀಗಿರಲು ಅಂದು ಸಿಂಹದ ಪ್ರತಾಪವನ್ನು ಕಂಡು ನಾನೇಕೆ ಈ ಸಿಂಹದ ಗೆಳೆತನವನ್ನು ಸಂಪಾದಿಸಿ ಅದು ಬೇಟೆಯಾಡಿ ಬಿಟ್ಟ ಮಾಂಸವನ್ನು ತಿಂದು ಸುಖವಾಗಿ ಜೀವಿಸಬಾರದು ಎಂಬ ಉಪಾಯವು ಹೊಳೆಯಿತು. ಹಾಗಾಗಿ ಅದು ತಕ್ಷಣವೇ ಆ ಸಿಂಹವನ್ನು ಪೊದೆಗಳ ಮರೆಯಲ್ಲಿ ಹಿಂಬಾಲಿಸಿತು. ಅದರ ವಾಸ ಸ್ಥಾನವನ್ನು ಕಂಡು ಕೊಂಡಿತು.

ಮರು ದಿನ ಮುಂಜಾನೆ ಆ ನರಿಯು ಸಿಂಹವು ವಾಸವಾಗಿದ್ದ ಕಂಚನ ಗುಹೆಯ ಬಾಗಿಲಲ್ಲಿ ಸಿಂಹದ ದರ್ಶನಕ್ಕಾಗಿ ಕಾಯ್ದು ನಿಂತಿತು. ಸಿಂಹವು ಎಂದಿನಂತೆ ನಿದ್ರೆಯಿಂದ ಎಚ್ಚರಗೊಂಡು ಗುಹೆ

ಒಂದು ದಿನ ಮುಂಜಾನೆ ಗುಹೆಯಿಂದ ಹೊರ ಬಂದ ಸಿಂಹವು ಗುಹೆಯ ಎದುರಿಗಿದ್ದ ಎತ್ತರವಾದ ಬಂಡೆ ಕಲ್ಲಿನ ಮೇಲೆ ನಿಂತು ದೀರ್ಘವಾಗಿ ಆಕಳಿಸಿ ಮೈಕೊಡವಿ ಎಚ್ಚೇತಿತು. ಅತ್ತಿತ್ತ ತನ್ನ ಕುತ್ತಿಗೆಯನ್ನು ತಿರುಗಿಸುತ್ತಾ ಮೂರು ಬಾರಿ ಘರ್ಜಿಸಿತು. ಬಳಿಕ ತನ್ನ ಕೆಳಗಿನ ಕಾಡ ಹಾದಿಯನ್ನು ಸೂಕ್ಷ್ಮವಾಗಿ ವೀಕ್ಷಿಸಿತು. ಅದರ ಕಣ್ಣಿಗೆ ಒಂದು ದಷ್ಟ ಪುಷ್ಟವಾಗಿ ಬೆಳೆದು ನಿಂತ ಕಾಡು ಕೋಣವು ಗೋಚರಿಸಿತು. ಇಂದಿನ ನನ್ನ ಆಹಾರವು ದೊರೆಯಿತೆಂದು ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾ ಬಂಡೆ ಕಲ್ಲಿನಿಂದ ಜಿಗಿದು ಕೆಳಗಿಳಿದು ಶರವೇಗದಲ್ಲಿ ಓಡಾತೊಡಗಿತು.



ಯಿಂದ ಹೊರಬಂದಿತು. ಬಳ್ಳು ವಿಧಯತೆಯನ್ನು ತೋರಿದ ನರಿಯು ಸಿಂಹದ ಪಾದದ ಮೇಲೆ ಬಿದ್ದಿತು. ಆ ನರಿಯನ್ನು ಮೇಲಿನಿಂದ ಕೆಳಗಿನ ತನಕ ಕೆಕ್ಕರಿಸಿ ನೋಡಿದ ಸಿಂಹವು;

“ಎಲೈ, ನೀನು ಯಾರು? ಇಲ್ಲಿಗೇಕೆ ಬಂದೆ? ವಿಷಯವೇನು?”

“ಸ್ವಾಮಿ, ನನ್ನ ಹೆಸರು ಜಂಬಕ ಎಂದು. ನಾನು ನಿಮ್ಮ ಪರಮ ಅಭಿಮಾನಿ. ತಮ್ಮ ಅಪಾರ ಶೌರ್ಯ, ಸಾಹಸ ಮತ್ತು ಧೈರ್ಯವನ್ನು ಕಂಡು ಮೆಚ್ಚಿಕೊಂಡವನು. ತಾವೇ ನನ್ನ ಪಾಲಿನ ದೊರೆ. ನಿಮ್ಮ ಪಾದ ಸೇವೆಯ ಭಾಗ್ಯವನ್ನು ಕರುಣಿಸಬೇಕು!” ಎನ್ನಲು ದಡ್ಡನಾದ ಸಿಂಹವು ಅದರ ಹೊಗಳಿಕೆಗೆ ಉಬ್ಬಿಹೋಗಿ;

“ಹಾಗೋ, ಸರಿ ಹಾಗಾದರೆ ನನ್ನ ಪಾದ ಸೇವೆ ಮಾಡಿಕೊಂಡು ನಾನು ಬೇಟೆಯಾಡಿ ತಿಂದು ಬಿಟ್ಟ ಮಾಂಸವನ್ನು ತಿಂದುಕೊಂಡು ಸಂತೋಷವಾಗಿರು!” ಎನ್ನಲು ಆ ನರಿಯು ತಾನು ಇಚ್ಚಿಸಿ ಬಂದ ಬಯಕೆಯು ಈಡೇರಿತು ಎಂದು ಒಳಗೊಳಗೆ ಹಿರಿಹಿರಿ ಹಿಗ್ಗಿ :

“ಸ್ವಾಮಿ, ಹಾಗೆಯೇ ಹಾಗಲಿ!” ಎಂದು ಶಿರಬಾಗಿ ವಂದಿಸಿತು.

ಅಂದಿನಿಂದ ನರಿಯು ಸಿಂಹದ ಗುಹೆಯಲ್ಲಿ ಅದರ ಸೇವಕನಾಗಿ ವಾಸಿಸತೊಡಗಿತು. ಸಿಂಹವು ಮಲಗುವ ಸ್ಥಳವನ್ನು ಸ್ವಚ್ಚಗೊಳಿಸುತ್ತಿತ್ತು. ಅದರ ಕೈಕಾಲುಗಳನ್ನು ಒತ್ತುತ್ತಿತ್ತು. ಅದು ಮಲಗಿದ ನಂತರ ಮಲಗುತ್ತಿತ್ತು. ಅದು ಎಳುವ ಮುನ್ನವೇ ಎಳುತ್ತಿತ್ತು. ಗುಹೆಯಿಂದ ಸಿಂಹವು ಹೊರಹೊರಟರೆ ಈ ನರಿಯು ಅದನ್ನು ಹಿಂಬಾಲಿಸುತ್ತಿತ್ತು. ಸಿಂಹದ ಹಿಂದೆ ಸದಾ ಈ ನರಿಯು ತಿರುಗುವುದನ್ನು ಕಂಡ ಇತರೆ ಪ್ರಾಣಿಗಳು ಹೊಟ್ಟೆಕಿಚ್ಚು ಪಡುವಷ್ಟ ಅದು ಸಿಂಹದೊಂದಿಗೆ ಸ್ನೇಹವನ್ನು ಸಂಪಾದಿಸಿತು. ಅದು ಬೇಟೆಗೆ ಹೋಗುವಾಗ ತಾನೂ ಹೋಗುತ್ತಿತ್ತು. ಅದು ಪ್ರಾಣಿಯನ್ನು ಬೇಟೆಯಾಡಿ ಕೊಲ್ಲುವ ತನಕ ಪೊದೆಯ ಮರೆಯಲ್ಲಿ ಅಡಗಿ ಕೂರುತ್ತಿತ್ತು.

ಅದು ಪ್ರಾಣಿಗಳ ರಕ್ತವನ್ನು ಹೀರಿ ಮಾಂಸವನ್ನು ಕಿತ್ತು ಕಿತ್ತು ತಿನ್ನುವ ತನಕ ಜೊಲ್ಲು ಸುರಿಸುತ್ತಾ ನಿಲ್ಲುತ್ತಿತ್ತು. ಅದು ತಿಂದು ತೃಪ್ತಿಯಾದ ನಂತರ ನರಿಯು ತನಗೆ ಬೇಕಾಗುವಷ್ಟು ತಿಂದು ಬಳಿಕ ಗುಹೆಯನ್ನು ಸೇರಿಕೊಳ್ಳುತ್ತಿತ್ತು. ಹೀಗೆ ಅದರ ದಿನಚರಿಯು ಮುಂದುವರೆಯಲು ದಿನದಿಂದ ದಿನಕ್ಕೆ ಅದರ ಆಕಾರ ಬದಲಾಯಿತು. ಅದು ದೈಹಿಕವಾಗಿ ದಷ್ಟಪುಷ್ಟವಾಗಿ ಬೆಳೆದು ಸಿಂಹದಷ್ಟೇ ಗಾತ್ರವಾಯಿತು.

ಒಂದು ದಿನ ಮುಂಜಾನೆ ಸಿಂಹವು ನರಿಯನ್ನು ಉದ್ದೇಶಿಸಿ;

‘ಎಲೈ ಸೇವಕನಾದ ಜಂಬಕನೇ, ಹೋಗು ಗುಹೆಯ ಮುಂದಿರುವ ಬಂಡೆ ಕಲ್ಲಿನ ಮೇಲೆ ಹತ್ತಿ ಕೆಳಗೆ ಓಡಾಡುವ ಜಿಂಕೆ, ಕಾಡುಕುರಿ, ಕಾಡೆಮ್ಮೆ, ಕುದುರೆ ಮತ್ತು ಆನೆ ಯಾವುದೆ ಆಗಲ್ಲಿ ನಿನಗೆ ಯಾವ ಪ್ರಾಣಿಯ ಮಾಂಸವನ್ನು ತಿನ್ನಬೇಕೆನಿಸುತ್ತದೋ ಅಂಥಹ ಪ್ರಾಣಿಯು ಕಂಡ ಬಳಿಕ ನನ್ನಲ್ಲಿಗೆ ಬಂದು, ಸ್ವಾಮಿ ನನಗೆ ಇಂತಹ ಪ್ರಾಣಿಯ ಮಾಂಸ ಇಷ್ಟ ಎಂದು ಹೇಳು. ನಂತರ ನನಗೆ ವಂದಿಸುತ್ತಾ; ಎಲೈ ಸ್ವಾಮಿಯೇ, ಈಗ ನಿಮ್ಮ ಪರಾಕ್ರಮವನ್ನು ತೋರಿಸಿ ಎಂದು ಹೊಗಳು. ಆಗ ನಾನು ಆ ಪ್ರಾಣಿಯ ಮೇಲೆ ಆಕ್ರಮಣ ಮಾಡಿ ಅದನ್ನು ಕೊಂದು ನಾನೂ ತಿಂದು ಅದರ ಮಾಂಸವನ್ನು ನಿನಗೂ ಕೊಡುವೆನು” ಎಂದಿತು.

ನರಿಗೂ ಅದೇ ಬೇಕಾಗಿತ್ತು. ಅದು ತಕ್ಷಣ ಹೋರಬಂದು ಬಂಡೆ ಏರಿ ಕೆಳಗಿನ ಕಾಡು ಹಾದಿಯತ್ತ ತನ್ನ ದೃಷ್ಟಿಯನ್ನು ಬೀರಿತು. ಅಲ್ಲಿ ಹತ್ತಾರು ಪ್ರಾಣಿಗಳು ಅದರ ಕಣ್ಣಿಗೆ ಬಿದ್ದವು. ಆದರೆ ಅದರಲ್ಲೊಂದು ಮಧಿಸಿದ ಆನೆಯನ್ನು ಕಂಡು ಅದರ ಮಾಂಸವನ್ನು ತಿನ್ನಬೇಕೆನಿಸಿತು. ಅದು ಗುಹೆಯ ಒಳಗೆ ಓಡಿಬಂದು ಸಿಂಹಕ್ಕೆ ವಂದಿಸುತ್ತಾ; “ಸ್ವಾಮಿ, ನನಗಿಂದು ಮಧಿಸಿದ ಆನೆಯ ಮಾಂಸವನ್ನು ತಿನ್ನಬೇಕೆಂಬ ಆಸೆಯಾಗಿದೆ. ಅಂಥಹ ಆನೆಯೊಂದು ಇಂಥಹ ಸ್ಥಳದಲ್ಲಿ ಅಲೆಯುತ್ತಿದೆ. ಎಲೈ ಸ್ವಾಮಿಯೇ, ಈಗ ನಿಮ್ಮ ಪರಾಕ್ರಮವನ್ನು ತೋರಿಸು!” ಎಂದಿತು. ಆ ಹೊಗಳಿಕೆಯಿಂದ ಉಬ್ಬಿಹೋದ ಸಿಂಹವು ಮಲಗಿದ್ದಲ್ಲಿಂದ ಮೇಲೆದ್ದು ಶರವೇಗದಲ್ಲಿ ಓಡುತ್ತಾ ಆನೆಯ ಬಳಿ ಬಂದು ಅದನ್ನು ಅಡ್ಡಗಟ್ಟಿತು. ವೀರಾವೇಶದಿಂದ ಅದರ ಮೇಲೆ ಕಾದಾಡಿ ಅದನ್ನು ಕೊಂದು ನೆಲಕ್ಕೆ ಉರುಳಿಸಿತು. ಸಿಂಹವು ಮೊದಲು ಅದರ ಮಾಂಸವನ್ನು ತಿಂದ ಬಳಿಕ ನರಿಗೆ

“ಎಲೈ ಸೇವಕ, ನಿನ್ನ ಇಚ್ಚೆಯನ್ನು ಪೂರೈಸಿಕೊ!” ಎಂದಿತು. ಅದು ಹಾಗೆಯೇ ಮಾಡಿತು.

ಹೀಗೆಯೇ ಇರಲು ಒಂದು ದಿನ ಜಂಬಕ ನರಿಯ ಮನದಲ್ಲಿ ಒಮ್ಮೆ ದುರ್ಬುದ್ಧಿಯು ಮೂಡಿತು. ಅದು ನಾನೂ ಕೂಡ ಸಿಂಹದಷ್ಟೇ ದಪ್ಪ ಇದ್ದೇನೆ. ಎತ್ತರ ಇದ್ದೇನೆ. ಸಿಂಹದ ಗುಹೆಯಲ್ಲಿಯೆ ವಾಸಿಸುತ್ತೇನೆ. ಹಾಗಿರಲು ನಾನೇಕೆ ಸಿಂಹದ ಗುಲಾಮನಾಗಿರಬೇಕು? ನಾನೇಕೆ ನನ್ನ ಸ್ವತಃ ಶಕ್ತಿ ಸಾಮರ್ಥ್ಯದ ಮೇಲೆ ನಿಂತು ಸಿಂಹದಂತೆಯೇ ಬೇಟೆಯಾಡಿ ನನ್ನ ಪ್ರತಾಪವನ್ನು ತೋರಿಸಬಾರದು? ಕಾಡಿನ ಪ್ರಾಣಿಗಳ ಕಣ್ಣಿಗೆ ಪ್ರಭಾವಶಾಲಿಯಾಗಿ ವಿಜೃಂಬಿಸುತ್ತಿದ್ದೇನೆ. ನಾನು ಸಿಂಹವನ್ನು ಉದ್ದೇಶಿಸಿ ಎಲೈ ಸ್ವಾಮಿ, ಈಗ ನಿಮ್ಮ ಪರಾಕ್ರಮವನ್ನು ತೋರಿಸಿ ಎಂದು ಹೊಗಳಿದ ಮೇಲೆಯೇ ಆ ಸಿಂಹವು ಪ್ರಾಣಿಗಳನ್ನು ಕೊಲ್ಲುವುದು ತಾನೆ? ಅದು ನಾನು ಹೊಗಳದೆ ಹೋದರೆ ಹೇಗೆ ಬೇಟೆಯಾಡುತ್ತದೆ? ಹಾಗಿರಲು ಅದು ನನ್ನನ್ನು ಹೊಗಳಿದ್ದೇ ಆದರೆ ನಾನೇಕೆ ಬೇಟೆಯಾಡಬಾರದು ಎಂಬ ತೀರ್ಮಾನಕ್ಕೆ ಬಂದಿತು.

ಮರುದಿನ ಸಿಂಹ ಕೇಸರಿಗೆ ವಂದಿಸಿ: “ಸ್ವಾಮಿ ತಾವು ನನ್ನ ಮೇಲೆ ಕೋಪಿಸಿಕೊಳುವುದಿಲ್ಲ ಎಂದು ಭಾಷೆಯನ್ನು ಕೊಟ್ಟರೆ ಒಂದು ವಿನಂತಿಯನ್ನು ಮಾಡಿಕೊಳ್ಳುತೇನೆ!”

“ಸರಿ ಹೇಳು ಏನು ನಿನ್ನ ವಿನಂತಿ?”

“ಸ್ವಾಮಿ, ನಾನು ಬಹಳ ಕಾಲದಿಂದ ತಾವು ಬೇಟೆಯಾಡಿ ತಿಂದು ಬಿಟ್ಟ ಮಾಂಸವನ್ನು ತಿಂದು ಜೀವಿಸುತ್ತಿದ್ದೇನೆ. ನಿಮ್ಮ ಸಂಗ ಮಾಡಿ ನಾನೂ ಕೂಡ ಪರಾಕ್ರಮಿಯಾಗಿದ್ದೇನೆ. ನೀವು ಬೇಟೆಯಾಡುವ ಎಲ್ಲಾ ತಂತ್ರವನ್ನು ನೋಡಿ ಅರಿತ್ತಿದ್ದೇನೆ. ಹಾಗಿರಲು ನಾನೇ ಏಕೆ ಸ್ವಾತಂತ್ರ್ಯವಾಗಿ ಬೇಟೆಯಾಡಬಾರದು ಎಂದು ನಿರ್ಧರಿಸಿದ್ದೇನೆ. ನಿಮ್ಮ ವೀರತ್ವವನ್ನು ನಾನು ಪಡೆಯಬೇಕಾದರೆ ಒಂದು ರಾತ್ರಿ ನೀವು ಮಲಗುವ ಸ್ಥಳದಲ್ಲಿ ನಾನು ಮಲಗಲು ಅನುಮತಿ ಕೊಡಿ. ಮುಂಜಾನೆ ಎದ್ದು ಗುಹೆಯ ಮುಂದಲ ಬಂಡೆಯ ಮೇಲೆ ನಿಂತು ಕೆಳಗಿನ ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳನ್ನು ಗಮನಿಸಿ ನಿಮಗೆ ಯಾವ ಪ್ರಾಣಿಯ ಮಾಂಸವನ್ನು ತಿನ್ನಬೇಕೆಂಬ ಬಯಕೆಯಾಗುತ್ತದೋ ಆ ಪ್ರಾಣಿಯನ್ನು ಗುರುತಿಸಿ ನನ್ನ ಬಳಿ ಬಂದು; ಸ್ವಾಮಿ, ಇಂದು ನನಗೆ ಇಂತಹ ಪ್ರಾಣಿಯ ಮಾಂಸವನ್ನು ತಿನ್ನಲು ಆಸೆಯಾಗಿದೆ. ಇಂದು ತಮ್ಮ ಪರಾಕ್ರಮವನ್ನು ತೋರಿಸಿ ಎಂದು ನನಗೆ ಹೇಳಿರಿ. ನಾನು ವೀರಾವೇಶದಿಂದ ಗುಹೆಯಿಂದ ಹೊರಗೆ ಹೋಗಿ ನೀವು ತೋರಿದ ಪ್ರಾಣಿಯ ಮೇಲೆ ಆಕ್ರಮಣಮಾಡಿ ಆ ಪ್ರಾಣಿಯನ್ನು ಕೊಂದು ನಾನು ಮೊದಲು ತಿಂದು ತೃಪ್ತಿಯಾದ ನಂತರ ಉಳಿದ ಮಾಂಸವನ್ನು ತಾವು ತಿಂದರೆ ನನ್ನ ಬದುಕು ಸಾರ್ಥಕವಾಗುತ್ತದೆ!”

“ಎಲೈ ಜಂಬಕ, ನಿನ್ನದು ಇದೆಂತಹ ಹುಚ್ಚು ಭ್ರಮೆ? ನರಿಯಾಗಿ ಹುಟ್ಟಿ ಸಿಂಹದಂತಾಗಲು ಎಲ್ಲಾದರೂ ಉಂಟೆ? ಪ್ರತಿಯೊಂದು ಪಶು, ಪಕ್ಷಿ ಮತ್ತು ಪ್ರಾಣಿಗಳಿಗೂ ತನ್ನದೆ ಆದ ಮಿತಿ ಇರುತ್ತದೆ. ನೀನು ಪ್ರಕೃತಿ ಸಹಜ ಧರ್ಮದ ವಿರುದ್ಧ ಹೋಗುತ್ತಿರುವೆ ಮತ್ತೊಮ್ಮೆ ಯೋಚಿಸಿ ನೋಡು . ಇಲ್ಲವೆಂದರೆ ಸರ್ವ ನಾಶ ಕಟ್ಟಿಟ್ಟ ಬುತ್ತಿ!”

“ಸ್ವಾಮಿ, ನಾನು ಒಂದು ಬಾರಿಯಲ್ಲ ಹತ್ತಾರು ಬಾರಿ ಯೋಚಿಸಿ ಈ ನಿರ್ಧಾರಕ್ಕೆ ಬಂದಿದ್ದೇನೆ. ದಯವಿಟ್ಟು ಕೃಪೆ ತೋರಿ ನನ್ನ ಈ ಅಂತಿಮ ಆಸೆಯನ್ನು ಈಡೇರಿಸಿ!” ಎಂದು ಬಾರಿ ಬಾರಿ ಕೇಳಿಕೊಳ್ಳಲು ಸಿಂಹವು ನರಿಯ ಕೋರಿಕೆಯನ್ನು ಒಪ್ಪಿಕೊಂಡಿತು. ಅದು ಕೋರಿದಂತೆಯೇ ಅಂದು ರಾತ್ರಿ ತನ್ನ ಜಾಗದಲ್ಲಿ ನರಿಯು ಮಲಗಲು ಅವಕಾಶ ಮಾಡಿಕೊಟ್ಟಿತು. ಮುಂಜಾನೆ ಎದ್ದು ಗುಹೆಯಿಂದ ಹೊರಬಂದು ಎತ್ತರವಾದ ಬಂಡೆ ಕಲ್ಲಿನ ಮೇಲೆ ನಿಂತು ಕೆಳಗಿನ ಕಾಡಿನ ಕಡೆಗೆ ನೋಡಿತು. ತನ್ನ ಕಣ್ಣಿಗೆ ಹತ್ತಾರು ಪ್ರಾಣಿಗಳು ಕಂಡವು. ಆಗ ಅದು ಹೀಗೆ ಯೋಚಿಸಿತು: ಈ ನರಿಗೆ ಬುದ್ಧಿ ಕಲಿಸಬೇಕಾದರೆ ನಾನು ಮಧಿಸಿದ ಆನೆಯನ್ನೇ ಆಯ್ಕೆ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದಿತು. ಅಂತಹ ಸಮಯದಲ್ಲಿ ಒಂದು ಮಧಿಸಿದ ಆನೆಯು ಅದರ ಕಣ್ಣಿಗೆ ಬಿತ್ತು. ನರಿಗೆ ಸರಿಯಾದ ಪಾಠ ಕಲಿಸುವೆ ಎಂದು ಎನ್ನುತ್ತಾ ನರಿಯ ಬಳಿ ಬಂದು :

“ಸ್ವಾಮೀ, ನನಗಿಂದು ಮಧಿಸಿದ ಆನೆಯ ಮಾಂಸವನ್ನು ತಿನ್ನಬೇಕು ಎಂದು ಬಯಕೆಯಾಗಿದೆ. ತಾವೀಗ ತಮ್ಮ ಪ್ರತಾಪವನ್ನು ತೋರಿಸಿ!” ಎನ್ನಲು ಸಿಂಹದಂತೆ ಠೀವಿಯನ್ನು ನಟಿಸುತ್ತಾ ಮಲಗಿದ್ದ ನರಿಯು:

“ಹಾಗೇನು ಹಾಗಾದರೆ ನನ್ನನು ಹಿಂಬಾಲಿಸು!” ಎಂದು ಹೊರ ಬಂದ ಅದು ಬಂಡೆಯ ಮೇಲೆ ಹತ್ತಿ ನಿಂತು ಮೈಮುರಿದು ಆಕಳಿಸಿತು. ಸುತ್ತಲೂ ಮೂರು ಬಾರಿ ನೋಡಿ ಸಿಂಹದಂತೆ ಘರ್ಜಿಸಿತು. ಬಳಿಕ ಶರವೇಗದಲ್ಲಿ ಕಾಡಿಗೆ ನುಗ್ಗಿ ಮಧಿಸಿದ ಆನೆಯ ಎದುರು ಬಂದು ನಿಂತಿತು. ಅದು ತನ್ನ ಕೆಂಗಣ್ಣನ್ನು ಬಿಟ್ಟು ಒಮ್ಮೆ ನರಿಯನ್ನು ನೋಡಲು ಅದು ಗಡಗಡ ನಡುಗುತ್ತಾ ಹುಚ್ಚೇ ಉಯ್ಯತೊಡಗಿತು. ಅತ್ತಿತ್ತ ಕಣ್ಣಾಡಿಸಿತು ಓಡಿಹೋಗಲು ಅದನ್ನು ಅರಿತ ಸಿಂಹವು;

“ಸ್ವಾಮೀ, ಈಗ ತಮ್ಮ ಪರಾಕ್ರಮವನ್ನು ತೋರಿಸಿ!” ಎನ್ನುವಷ್ಟರಲ್ಲಿ ಆ ಮಧಿಸಿದ ಆನೆಯು ನರಿಯ ತಲೆಯ ಮೇಲೆ ತನ್ನ ಬಲಗಾಲನ್ನು ಇಟ್ಟಿತು. ತಲೆಬುರುಡೆ ಚೂರು ಚೂರು ಆಗುವ ಮುನ್ನ ಸಿಂಹವನ್ನು ಉದ್ದೇಶಿಸಿದ ನರಿಯು;

“ಹೌದು ಸ್ವಾಮಿ, ನಾನು ವಾಸ್ತವವನ್ನು ಅರಿಯಲಾರದೆ ಅವಿವೇಕಿಯಾದೆ. ನನ್ನ ಭ್ರಮೆಗೆ ನಾನೇ ಮರುಳಾಗಿ ನಾಶವಾದೆ. ನಾನು ನೀನಾಗಲು, ನೀನು ನಾನಾಗಲು ಹೇಗೆ ಸಾಧ್ಯ? ನನ್ನ ನೆಲೆ ನನ್ನ ಬೆಲೆ ಅರಿಯದ ನನ್ನ ಕ್ಷಮಿಸು...!” ಎನ್ನುತ್ತಾ ಅಸುನೀಗಿತು. □

ಬೆಂಗಳೂರಿನ 'ಸ್ಫೂರ್ತಿಧಾಮ'ದಲ್ಲಿ

ಅಂಬೇಡ್ಕರ್ ಹಬ್ಬ

ಏಪ್ರಿಲ್ 13 ಮತ್ತು 14, 2010

ಕಾರ್ಯಕ್ರಮಗಳು

- ಬುದ್ಧ ವಂದನೆ
- ಅಂಬೇಡ್ಕರ್ ಸ್ಮಾರಕ ರಾಷ್ಟ್ರೀಯ ಉಪನ್ಯಾಸ
- ತಳ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮಹನೀಯರಿಗೆ ಪ್ರಶಸ್ತಿ
- ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು

ಜ್ಞಾನ ಮತ್ತು ಮನರಂಜನೆಯ ಸುಗ್ಗಿ!